ಪ್ರಬುದ್ಧ ಕರ್ಣಾಟಕ

ಸಂಪುಟ ೪೨—ಸಂಚಿಕೆ ೩

೧೬೫

ಶಾರ್ವರಿ ಸಂವತ್ಸರ

ಆಶ್ವಯುಜ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೬೦

...ಕರಾದ ಪುಟ

ಪ್ರಬುದ್ಧ ಕರ್ಣಾಟಕ

ಶಾರ್ವರಿ ಸಂವತ್ಸರ ೧೬೪ ಆಶ್ವಯುಜ ಸಂಚಿಕೆ

ನಾಗಮಂಗಲದ

ನಾಟ್ಯ ಸರಸ್ವತಿಗೆ*

ನರ್ತಿಸು, ತಾಯೆ,
ಅಜ ಜಾಯೆ,
ಮಮ ಮಸ್ತಕ ನೀರೇಜದಲಿ !

ಮಾನಸ ಅಧಿಮಾನಸಕೇರೆ
ಅತಿಮಾನಸ ಮೈದೋರೆ
ಆನಂದಾಮೃತ ರಸ ಸೋರೆ
ನರ್ತಿಸು, ತಾಯೆ,
ಅಜ ಜಾಯೆ,
ಮಮ ಮಸ್ತಕ ನೀರೇಜದಲಿ !

*[ನಾಗಮಂಗಲದ ಮಹಾಜನರು ಅರ್ಪಿಸಿರುವ ನಾಟ್ಯಸರಸ್ವತಿಯ ದಿವ್ಯ ಸುಂದರವಾದ ಪಂಚಲೋಹ ವಿಗ್ರಹವನ್ನು ನಿರ್ದೇಶಿಸಿ; ದೇವೀಮೂರ್ತಿಯನ್ನು ನಿರ್ಮಿಸಿದ ಅಜ್ಞಾತಶಿಲ್ಪಿಗೆ ಕವಿಯ ಅನಂತ ಕೃತಜ್ಞತೆಯ ಫಲರೂಪವಾಗಿ; ಆಕಾಶವಾಣಿಯಿಂದ ಪ್ರಸಾರವಾಗುತ್ತಿದ್ದ ವೀಣಾವಾದನವನ್ನು ಆಲಿಸುತ್ತಾ !]

ಅಡಿ ಸೋಂಕಿಗೆ ಮುಡಿ ಅರಳೆ
ಅಜ್ಞಾನದ ಗಡಿ ಉರುಳೆ
ವಿಜ್ಞಾನದ ಕಾಂತಿ
ಅವತರಿಸುತ ಬರೆ ಶಾಂತಿ
ನರ್ತಿಸು, ತಾಯೆ,
ಅಜ ಜಾಯೆ,
ಮಮ ಮಸ್ತಕ ನೀರೇಜದಲಿ !

೧-೮-೬೦ —ಕುವೆಂಪು

ಧ್ಯಾನದಲ್ಲಿ

ಅಲ್ಪ ನಾನು ಎಂದು ಕುಗ್ಗಿ
   ಮುದುಗ ಬೇಡವೊ :
ಓ ಅಲ್ಪವೆ,
   ಅನಂತದಿಂದ ಗುಣಿಸಿಕೊ ;
   ನೀನ್ ಅನಂತವಾಗುವೆ !

೨೩-೩-೧೯೫೮ —ಕುವೆಂಪು

ರಸಾನುಭವದ ಅಲೌಕಿಕತೆ

ಸೌಂದರ್ಯಾನುಭವ ಅಥವಾ ರಸಾನುಭವವನ್ನು ಅಲೌಕಿಕ ಎಂದು ವರ್ಣಿಸುವುದರಲ್ಲಿ ಏನು ಔಚಿತ್ಯವಿದೆ? ಅಲೌಕಿಕ ಎನ್ನುವುದಕ್ಕೆ ಆ ಸಂದರ್ಭದಲ್ಲಿ ಅರ್ಥವೇನು ? ಆ ಅರ್ಥದ ಪರಿಮಿತಿ ಏನು ? ವ್ಯಾಪ್ತಿ ಏನು ? ಆ ರಸಾನುಭವಕ್ಕೂ ಲೋಕಾನುಭವಕ್ಕೂ ಏನಾದರೂ ಸಂಬಂಧವಿದೆಯೆ? ರಸಾನುಭವ ಸಂಪೂರ್ಣವಾಗಿ ಲೋಕದೂರವಾದುದೆ? ಲೋಕಾನುಭವದ ಮೇಲೆ ಅದರ ಪ್ರಭಾವದ ಪರಿಣಾಮವೇನಾದರೂ ಆಗುತ್ತದೆಯೆ ಇಲ್ಲವೆ? ಈ ಪ್ರಶ್ನೆಗಳಿಗೆಲ್ಲ ನಾವು ಕೊಡುವ ಉತ್ತರಗಳು ರಸಸ್ವರೂಪದ ನಿರ್ಣಯದ ಮೇಲೆ ಬಹುಮಟ್ಟಿಗೆ ನಿಲ್ಲುತ್ತವೆ.

ಯಾವ ಅನುಭವವನ್ನು ಪ್ರಾಚೀನ ಕಾವ್ಯಮೀಮಾಂಸಕರು ಸೌಂದರ್ಯ ಎಂಬ ಹೆಸರಿನಿಂದ ಗುರುತಿಸಿದರೊ ಅದನ್ನೆ ನವೀನರು ರಸ ಎಂಬ ಸಂಕೇತದಿಂದ ಕರೆದಿದ್ದಾರೆ. ಸೌಂದರ್ಯಾನುಭವ ಎಂದು ಸಹೃದಯರು ಗುರುತಿಸುವ ಪ್ರಜ್ಞಾವಸ್ಥೆಯನ್ನು ಶಾಸ್ತ್ರೀಯವಾಗಿ ಪರ್ಯಾಲೋಚಿಸಲು ಹೊರಟ ಕಾವ್ಯಮಿಮಾಂಸಕರು ಶಾಸ್ತ್ರಭಾಷೆಯ ಪ್ರಕ್ರಿಯಾ ಸೌಕರ್ಯಕ್ಕಾಗಿ 'ಅಲಂಕಾರ' ಎಂದು ಕರೆದರು. ಸೌಂದರ್ಯವೆ ಅಲಂಕಾರ; ಅನುಭವದ ಮತ್ತು ಅದನ್ನು ಅಭಿವ್ಯಕ್ತಗೊಳಿಸುವ ಉಕ್ತಿಯ ಸೌಂದರ್ಯಾಂಶದಿಂದಲೆ ಕಾವ್ಯತ್ವ ಉಂಟಾಗುತ್ತದೆ ಎಂದರು.೧ ಆ ಸೌಂದರ್ಯಾಂಶವನ್ನು ಚಾರುತ್ವ, ರಮಣೀಯತೆ, ವಕ್ರತೆ, ಆಹ್ಲಾದ ಎಂದು ನಾನಾ ಪದಗಳಿಂದ ನಿರ್ದೇಶಿಸಿದ್ದಾರೆ.

ಪ್ರಾಚೀನರಲ್ಲಿ ಸೌಂದರ್ಯ ಎಂಬ ಪದದ ಅರ್ಥವ್ಯಾಪ್ತಿ ವಿಶಾಲವಾಗಿತ್ತು; ಚಾರುತ್ವ, ರಮಣೀಯತೆ, ವಕ್ರತೆ, ಆಹ್ಲಾದ, ಆನಂದ ಮೊದಲಾದ ಪದಗಳಿಂದ ಸೂಚಿತವಾಗುವ ಅನುಭವ ವಿಶೇಷಗಳೆಲ್ಲವನ್ನೂ ಅದು ಒಳಕೊಳ್ಳುವಂತಿತ್ತು. ಆ ಅರ್ಥದಲ್ಲಿಯೆ ಸೌಂದರ್ಯಾನುಭವವಿಲ್ಲದೆ ಕಾವ್ಯವಿಲ್ಲ ಎಂದದ್ದು. ಕವಿಯ ಸೌಂದರ್ಯಾನುಭೂತಿಯೆ ಕಾವ್ಯಸಾಮಗ್ರಿ; ಆದ್ದರಿಂದ ಕಾವ್ಯವೆಲ್ಲ ಸೌಂದರ್ಯಾನುಭವ ಎಂದರು. ಸೌಂದರ್ಯ ಎಂಬ ಪದಕ್ಕೆ ಶಾಸ್ತ್ರದ ಪರಿಭಾಷೆ 'ಅಲಂಕಾರ' ಎಂದಿದ್ದುದರಿಂದ ಅಲಂಕಾರವಿಲ್ಲದೆ ಕಾವ್ಯವಿಲ್ಲ ಎಂದರು; ಕಾವ್ಯವೆಲ್ಲ ಅಲಂಕಾರದಿಂದಲೆ ಗ್ರಾಹ್ಯವಾಗುತ್ತದೆ ಎಂದರು. ಅಂದರೆ ಯಾವುದು ಲೋಕವಾರ್ತೆ ಮಾತ್ರವಾಗಿ ಉಳಿಯುತ್ತಿತ್ತೊ ಆ ಅನುಭವ ಕವಿಪ್ರತಿಭಾವಶವಾಗಿ ಸೌಂದರ್ಯಾನುಭೂತಿಯಾಗಿ ಕಾವ್ಯಾರ್ಹ ಸಾಮಗ್ರಿಯಾಗಿ ಅಭಿವ್ಯಕ್ತಿ ಪಡೆಯುತ್ತದೆ. ಆ ಸೌಂದರ್ಯಾನುಭೂತಿಯೆ ಕಾವ್ಯದ ಮೂಲಾಲಂಕಾರ; ಕಾವ್ಯಮೂಲಾಲಂಕಾರ.

---

೧. ಸೌಂದರ್ಯಮಲಂಕಾರಃ— ಕಾವ್ಯಂ ಗ್ರಾಹ್ಯಮಲಂಕಾರಾತ್.

ಅದು ಕೃತಿಯಾಗಿ ಅಭಿವ್ಯಕ್ತಿಗೊಳ್ಳುವಾಗ ಆ ಮೂಲಾಲಂಕಾರವೆ ನಾನಾತ್ವವನ್ನು ಪಡೆದು, ನಾನಾಲಂಕಾರಗಳಾಗುತ್ತವೆ. ಆ ಮೂಲಾಲಂಕಾರವು (ಎಂದರೆ ಸೌಂದರ್ಯಾನುಭೂತಿ) ಭಾವಾಂಶದಲ್ಲಿ ಪ್ರವಹಿಸಿ ಸಹೃದಯನ ರಸಾನುಭವಕ್ಕೆ ಕಾರಣವಾಗುತ್ತದೆ; ಚಿಂತನಾಂಶದಲ್ಲಿ ಪ್ರವಹಿಸಿ ದರ್ಶನಾಂಶವಾದ ವಸ್ತುಧ್ವನಿಗೆ ಮಾರ್ಗವಾಗುತ್ತದೆ; ಕಥನಕಲೆ, ಪ್ರತಿಮಾಸೃಷ್ಟಿ, ಸನ್ನಿವೇಶ ರಚನೆ ಇತ್ಯಾದಿ ಕಲ್ಪನಾಂಶದಲ್ಲಿ ಪ್ರವಹಿಸಿ ಚಾರುತ್ವದಾಯಿಯಾದ ಕಾರಯಿತ್ರೀ ಪ್ರತಿಭೆಯ ಅಂಗವಾಗುತ್ತದೆ; ಭಾಷಾ ರೂಪಾಂಶದಲ್ಲಿ ಪ್ರವಹಿಸಿ* ರೀತಿಯ, ಮಾರ್ಗದ, ಶೈಲಿಯ ಮನೋಹರತೆಯಲ್ಲಿ ಪರಿಣಾಮಗೊಳ್ಳುತ್ತದೆ.

ಅನುಭವದ ಸೌಂದರ್ಯಾಂಶವನ್ನು ನಿರ್ದೇಶಿಸುವುದಕ್ಕೆ ಶಾಸ್ತ್ರೀಯ ಪರಿಭಾಷೆಯಾಗಿ ಮೊದಮೊದಲು ಉಪಯುಕ್ತವಾದ 'ಅಲಂಕಾರ' ಎಂಬ ಪದವು ಬರಬರುತ್ತಾ ಮೂಲಾರ್ಥದ ಸಂಪತ್ತನ್ನು ಸಂಕುಚಿತವನ್ನಾಗಿ ಮಾಡಿಕೊಂಡು, ಕಡೆಕಡೆಗೆ ಅದನ್ನು ಕಳೆದುಕೊಳ್ಳುವವರೆಗೂ ಹೋಗಿ ಪತಿತವಾಗಿ ಬಿಟ್ಟಿತು. ಕವಿಯ ಅನುಭವದ ಆ ಮೂಲಾಲಂಕಾರದಿಂದ ನಾನಾಲಂಕಾರಗಳು ಹೊಮ್ಮುತ್ತವೆ. ಆ ಮೂಲಾಲಂಕಾರದ ಮೈದೋರಿಕೆಗೆ ನಾನಾಲಂಕಾರಗಳು ಪ್ರಣಾಳಿಕೆಗಳಾಗುತ್ತವೆ: ಹುಲಿಗೆ ಬಣ್ಣಗಳಂತೆ, ನವಿಲಿಗೆ ಗರಿಯ ಕಣ್ಣುಗಳಂತೆ; ಸಹಜವಾಗಿ, ಅಕೃತಕವಾಗಿ, ಬಾಹ್ಯ ಪ್ರಯತ್ನ ರಹಿತವಾಗಿ, ಅಂತಶ್ಶಕ್ತಿಯ ಆವಿರ್ಭಾವರೂಪಕವಾಗಿ: ಎಂಬುದನ್ನು ಮರೆತು ಕಡೆಗಣಿಸಿ ಯಾವಾಗ ಅಲಂಕಾರವನ್ನು ಒಡವೆಗೆ ಹೋಲಿಸಿದರೊ ಅಲ್ಲಿಂದ ಮೊದಲಾಯಿತು ಅದರ ಪತನಕ್ಕೆ. ಕಾವ್ಯಕ್ಕೆ ಆತ್ಮಪ್ರಾಯವಾಗಿರಬೇಕಾಗಿದ್ದ ಅಲಂಕಾರವನ್ನು ಶರೀರಪ್ರಾಯವನ್ನಾಗಿ ಮಾಡುವುದಂತಿರಲಿ, ಬೇಕಾದಾಗ ತೊಟ್ಟುಕೊಳ್ಳುವ ಬೇಡವಾದಾಗ ಕಳಚಿಡುವ ಆಭರಣ ಪ್ರಾಯವನ್ನಾಗಿ ಮಾಡಿದರು. ಆಗ ತರುವಾಯ ಬಂದ ಕಾವ್ಯ ಮೀಮಾಂಸಕರು ಕಾವ್ಯದ ಆತ್ಮವನ್ನು ಅನಿವಾರ್ಯವಾಗಿ ಅವಶ್ಯವಾಗಿ ಬೇರೆಯದರಲ್ಲಿ ಹುಡುಕಲು ತೊಡಗಲೆಬೇಕಾಯಿತು. ರೀತಿಯೆ ಕಾವ್ಯದ ಆತ್ಮ; ರಸವೆ ಕಾವ್ಯದ ಆತ್ಮ; ಧ್ವನಿಯೆ ಕಾವ್ಯದ ಆತ್ಮ ಎಂದೆಲ್ಲ ಸಿದ್ಧಾಂತಗಳು ಒಂದಾದ ಮೇಲೊಂದು ಪ್ರತಿಪಾದಿತವಾದುವು. ಅಲಂಕಾರ ಸಿದ್ಧಾಂತಕ್ಕೆ ಒದಗಿತು ಅತ್ಯಂತವಾದ ಅಪಖ್ಯಾತಿ.

ರಸಕ್ಕೂ ಅಲಂಕಾರಗಳಲ್ಲಿಯೆ ಒಂದು ಸ್ಥಾನವನ್ನು ಕಲ್ಪಿಸಿಕೊಟ್ಟಿದ್ದ ಪ್ರಾಚೀನರಿಗೆ ರಸಾನುಭವವಿಲ್ಲದ ಅಥವಾ ಅದರ ಅನರ್ಘ್ಯ ಸ್ಥಾನವನ್ನೂ ಬೆಲೆಯನ್ನೂ ಅರಿಯದ ಅರಸಿಕರ ಪಟ್ಟವೂ ಲಭಿಸಿತು! ಅಲಂಕಾರಗಳ ಆಸ್ಥಾನದ ಒಂದು ಅಜ್ಞಾತಮೂಲೆಯಲ್ಲಿ ಮಣೆಹಾಕುವುದೇ ರಸಕ್ಕೆ!

---

*ಇದು ಸಾಹಿತ್ಯಕ್ಕೆ ಮಾತ್ರ ಅನ್ವಯವಾಗುತ್ತದೆ; ಇತರ ಕಲೆಗಳಲ್ಲಾದರೆ ಅಭಿವ್ಯಕ್ತಿಯ ರೂಪಾಂಶವು ನಾದ, ವರ್ಣ, ಚಲನಾದಿಗಳಲ್ಲಿ ವ್ಯವಹರಿಸುತ್ತದೆ.

ಪ್ರಾಚೀನರ ದೃಷ್ಟಿಯಲ್ಲಿ ಸೌಂದರ್ಯಾನುಭವವೆ ಸರ್ವಗ್ರಾಸಿಯಾಗಿತ್ತು. ಆ ದೃಷ್ಟಿ ರಸಾನುಭವವನ್ನು ತಿರಸ್ಕರಿಸಿರಲಿಲ್ಲ. ಅದನ್ನು ಒಳಕೊಂಡಿತ್ತು. ಆಗ, ಭರತನ ಪ್ರಕಾರ, 'ರಸ' ಎಂಬ ಪದಕ್ಕೆ ಎಷ್ಟು ಅರ್ಥವ್ಯಾಪ್ತಿಯಿತ್ತೊ ಅಷ್ಟನ್ನೆ ಗ್ರಹಿಸಿ, ಅದಕ್ಕೆ ತಕ್ಕ ಸ್ಥಾನವನ್ನೆ ಕೊಟ್ಟಿದ್ದರು. ಅಂದರೆ ಮೂಲಾಲಂಕಾರದ ಪ್ರವಾಹಕ್ಕೆ ಪ್ರಣಾಳಿಕಾಸದೃಶಗಳಾದ ಅಲಂಕಾರಗಳಲ್ಲಿ ರಸವೂ ಒಂದಾಗಿತ್ತು.

ಮನುಷ್ಯನ ಚಿತ್ತವೃತ್ತಿಗಳಾದ ಸ್ಥಾಯಿಭಾವಗಳು ನಾಟಕರಂಗದಲ್ಲಿ ವಿಭಾವ ಅನುಭಾವಾದಿಗಳಿಂದ ಪ್ರದರ್ಶಿತವಾದಾಗ ಪ್ರೇಕ್ಷಕರಲ್ಲಿ ರಸನಿಷ್ಪತ್ತಿಯಾಗುತ್ತದೆ ಎಂದು ಒಪ್ಪಿಕೊಂಡ ದೃಷ್ಟಿಗೆ ಸ್ಥಾಯಿಭಾವಗಳು ಕಾರಣಸ್ಥಾನದಲ್ಲಿಯೂ ಅವುಗಳಿಂದ ನಿಷ್ಪತ್ತಿಯಾಗುವ ರಸಗಳು ಕಾರ್ಯಸ್ಥಾನದಲ್ಲಿಯೂ ನಿಲ್ಲುತ್ತವೆ. ಆದರೆ ಕಾವ್ಯಲೋಕದಲ್ಲಿ ಮನುಷ್ಯತ್ವದ ಸ್ಥಾಯಿಭಾವ ವ್ಯಾಪಾರಗಳು ಮಾತ್ರವೆ ವರ್ಣಿತವಾಗಿರುವುದಿಲ್ಲ. ನಿಸರ್ಗದ ಇತರ ದೃಶ್ಯಗಳೂ ವ್ಯಾಪಾರಗಳೂ ವರ್ಣಿತವಾಗಿರುತ್ತವೆ. ಅವುಗಳಿಂದ ಉಂಟಾಗುವ ಆಹ್ಲಾದವನ್ನು ಯಾವ ಪದದಿಂದ ಸೂಚಿಸಬೇಕು? ಅದನ್ನು ಅಂದಿನ ಅರ್ಥದಲ್ಲಿ ರಸಾನುಭವವೆಂದು ಕರೆಯುವುದು ತಪ್ಪಾಗುತ್ತದೆ. ಏಕೆಂದರೆ 'ರಸ' ಸ್ಥಾಯಿಭಾವದಿಂದಲೆ ನಿಷ್ಪನ್ನ. ನಿಸರ್ಗದ ಇತರ ಅನೇಕ ವ್ಯಾಪಾರ ವರ್ಣನೆಗಳಿಂದ ಉಂಟಾಗುವುದು ಸೌಂದರ್ಯಾನುಭವವಾದೀತೆ ಹೊರತು ರಸಾನುಭವವಾಗಲಾರದು. ಸ್ಥಾಯಿಭಾವದಿಂದ ನಿಷ್ಪನ್ನವಾಗುವ ರಸಾನುಭವವೂ ಆಹ್ಲಾದಕಾರಿಯೆ, ಅರಣ್ಯ ಪರ್ವತ ಪಕ್ಷಿ ಜಲಪಾತಾದಿ ವರ್ಣನೆಗಳಿಂದುಂಟಾಗುವ ಆಹ್ಲಾದದಂತೆಯೆ. ಮನುಷ್ಯನ ಸ್ಥಾಯಿಭಾವ ವ್ಯಾಪಾರ ಮತ್ತು ನಿಸರ್ಗದ ರಮಣೀಯ ವ್ಯಾಘಾರ ಎರಡರ ಆಹ್ಲಾದವನ್ನೂ ಸೌಂದರ್ಯಾನುಭವ ಎಂಬ ಶಬ್ದ ಒಳಕೊಳ್ಳುತ್ತದೆ. ಆದ್ದರಿಂದಲೆ ಸೌಂದರ್ಯಾನುಭವವು ರಸಾನುಭವವನ್ನು ತನ್ನೊಂದು ಅಂಗವಾಗಿ ಸ್ವೀಕರಿಸುತ್ತದೆ. ಸೌಂದರ್ಯವನ್ನೆ ಅಲಂಕಾರ ಎಂಬ ಪರಿಭಾಷೆಯಿಂದ ಕರೆದ ಕಾವ್ಯಮೀಮಾಂಸಕರು ರಸಾನುಭವವನ್ನು ಆ ಅಲಂಕಾರದ ಒಂದಂಗವನ್ನಾಗಿ ಪರಿಗಣಿಸಿದುದು ಅತ್ಯಂತ ತರ್ಕಬದ್ಧವಾಗಿದೆ. ಆದ್ದರಿಂದಲೆ ರಸಾನುಭವವು ರಸವದಲಂಕಾರ ಎಂಬ ಹೆಸರಿನಿಂದ ಅಲಂಕಾರಗಳಲ್ಲಿ ಮಧ್ಯೆ ಪ್ರವೇಶ ಪಡೆದಿತ್ತು.

ಆದರೆ ಎಂದು ಅಲಂಕಾರ ಮೂಲತತ್ತ್ವವು ಕಾವ್ಯದಲ್ಲಿ ತನಗಿದ್ದ ಅತ್ಯಂತ ಅಂತರಂಗಿಕವಾದ ಆತ್ಮಸ್ಥಾನವನ್ನು ಕಳೆದುಕೊಂಡು ಆಭರಣರೂಪಮಾತ್ರವಾದ ಬಹಿರಂಗದ ಕೃತಕಸ್ಥಾನಕ್ಕಿಳಿಯಿತೊ ಆಗ ಇತರ ಸಿದ್ಧಾಂತಗಳಿಗೆ ಆ ಆತ್ಮಸ್ಥಾನವನ್ನು ಆಕ್ರಮಿಸಲು ಅವಕಾಶ ದೊರೆಯಿತು. ಅಲಂಕಾರಗಳಲ್ಲಿ ಒಂದೆಂದು ಪರಿಗಣಿತವಾಗಿದ್ದ ರಸ ಶಬ್ದಕ್ಕೆ ಅರ್ಥವ್ಯಾಪ್ತಿ ವಿಸ್ತಾರವಾಗುತ್ತಾ ಹೋಗಿ, ಸರ್ವ ರಮಣೀಯತೆಯ ಸರ್ವ ಆಹ್ಲಾದದ ಗಂತವ್ಯಸ್ಥಾನವೂ ಪ್ರಭವಸ್ಥಾನವೂ

ಆಗಿ ಸೌಂದರ್ಯಾನುಭವದ ಸರ್ವೋಚ್ಚ ಮಾತೃಸ್ಥಾನದಲ್ಲಿರುವ ಬ್ರಹ್ಮಾನಂದಕ್ಕೂ ಸೋದರ ಸ್ಥಾನದಲ್ಲಿ ನಿಲ್ಲುವವರೆಗೂ ಹೋಯಿತು.

೨

ರಸಾನುಭವದ ಸ್ವರೂಪ ಲಕ್ಷಣಾದಿಗಳನ್ನು ಜಿಜ್ಞಾಸಿಸುವಾಗ 'ಲೋಕೋತ್ತರ' 'ಲೋಕಾತಿಶಯ' 'ಲೋಕಾತಿಕ್ರಾಂತ' ಮೊದಲಾದ ಪದಗಳನ್ನು ಎದುರುಗೊಳ್ಳುತ್ತೇವೆ. ಅದು ಲೌಕಿಕವಾದ ಸುಖದುಃಖಾದಿ ಅನುಭವಗಳಿಂದ ವಿಲಕ್ಷಣವಾದ 'ಅನುಭವ' ಎಂದು ಅದನ್ನು 'ಅಲೌಕಿಕ' ಎಂದೂ ಕರೆದಿದ್ದಾರೆ.

ರಸ ಏಕೆ ಅಲೌಕಿಕ? ಅಲೌಕಿಕ ಎಂದರೆ ಏನರ್ಥ? ಲೋಕಾನುಭವದಿಂದ ಬೇರೆ ಎಂದು ಭಾವಿತವಾಗಿರುವ ಅದರ ವಿಲಕ್ಷಣತೆ ಎಂಥಾದ್ದು? ಎಷ್ಟರ ಮಟ್ಟಿನದು?

ಲೋಕಜೀವನದಲ್ಲಿ ನಾವು ಭಾವಗಳನ್ನು ಅನುಭವಿಸುತ್ತೇವೆ, ರತಿ ಕ್ರೋಧ ಶೋಕ ಇತ್ಯಾದಿ. ಈ ಒಂದೊಂದೂ ತನ್ನ ಪ್ರತಿಕ್ರಿಯೆಗೆ ಕಾರಣವಾಗುತ್ತದೆ. ಅಂದರೆ ಆ ಪ್ರತಿಕ್ರಿಯೆ ಸಂಪೂರ್ಣವಾಗಿ ಲೋಕೋಪಯೋಗಿಯಾಗಿರುತ್ತದೆ. ಕೋಪ ಬಂದಾಗ ಅದರ ಪ್ರತಿಕ್ರಿಯೆ ಆಯಾ ವ್ಯಕ್ತಿಯ ಸಂಸ್ಕಾರಕ್ಕನುಗುಣವಾಗಿ ಆಯಾ ಸನ್ನಿವೇಶ ಸಂದರ್ಭೋಚಿತವಾಗಿ ಬಯ್ಯುವುದರಲ್ಲಿಯೊ ಹೊಡೆಯುವುದರಲ್ಲಿಯೊ ಕೊಲ್ಲುವುದರಲ್ಲಿಯೊ ಪ್ರಕಟವಾಗುತ್ತದೆ. ಅದನ್ನು ನೋಡುವ ವ್ಯಕ್ತಿಗಳೂ ಅದರಲ್ಲಿ ಲೌಕಿಕವಾಗಿಯೆ ಭಾವ ಮತ್ತು ಕ್ರಿಯಾದಿಗಳಲ್ಲಿ ಪಾಲುಗೊಳ್ಳುತ್ತಾರೆ. ಆದರೆ ಕಾವ್ಯ ನಾಟಕಾದಿ ಕಲಾ ಭೂಮಿಗಳಲ್ಲಿ ಆ ಲೋಕಜೀವನದ ಭಾವಗಳು ವರ್ಣನೆಯ ಮೂಲಕವಾಗಲಿ ಅಭಿನಯದ ರೂಪದಲ್ಲಾಗಲಿ ಪ್ರದರ್ಶಿತವಾದಾಗ ಸಹೃದಯ ಪ್ರೇಕ್ಷಕರಿಗೆ ಉಂಟಾಗುವ ಅನುಭವ ಲೋಕಾನುಭವದಂತಿರುವುದಿಲ್ಲ; ಲೋಕೋಪಯೋಗಿಯಾಗಿಯೂ ಇರುವುದಿಲ್ಲ. ಅಷ್ಟೇ ಅಲ್ಲ. ಜಗಳವಾಡುವಂತೆ ರಂಗಭೂಮಿಯ ಮೇಲೆ ಕಾಣುವವರಲ್ಲಿಯೂ ಕೋಪವಿರುವುದಿಲ್ಲ. ಕೋಪ ಭಾವದ ಕಲಾರೂಪ ಮಾತ್ರ ಕಾಣಿಸುತ್ತದೆ. ಅಂದರೆ ಕ್ರೋಧ ಎಂಬ ಲೌಕಿಕವಾದ ಸ್ಥಾಯಿಭಾವದ 'ವಿಭಾವ' ಮಾತ್ರ 'ಅನುಭಾವ' ದಿಂದ ಪ್ರದರ್ಶಿತವಾಗುತ್ತದೆ. ಲೌಕಿಕವಲ್ಲದ ಕೋಪ ಪ್ರೇಕ್ಷಕರಿಂದ ಲೌಕಿಕವಾದ ಯಾವ ಪ್ರತಿಕ್ರಿಯೆಯನ್ನೂ ನಿರೀಕ್ಷಿಸುವುದಿಲ್ಲ. ಅದು ಲೋಕೋಪಯೋಗಿಯಾದುದಲ್ಲ; ಭಾವೋಪಯೋಗಿಯಾದದ್ದು. ಅಂದರೆ ರಂಗಭೂಮಿಯ ಮೇಲೆ ತೋರುವ ಕೋಪದ ಭಾವಕ್ಕೆ ಪ್ರೇಕ್ಷಕವರ್ಗದ ಪ್ರತಿಕ್ರಿಯೆ ಕ್ರಿಯಾರೂಪದ್ದಾಗಿರದೆ ಭಾವರೂಪದ್ದು ಮಾತ್ರ ಆಗಿರುತ್ತದೆ. ಆದರೆ ಆ ಭಾವವೂ ಲೋಕಜೀವನದ ಭಾವದಂತಿರಲು ಸಾಧ್ಯವಿಲ್ಲ. ಅಂದರೆ ಪ್ರೇಕ್ಷಕನ ಭಾವರೂಪ ಪ್ರತಿಕ್ರಿಯೆಯ ಸ್ವರೂಪವೂ ಲೋಕಜೀವನದ ಭಾವಸ್ವರೂಪಕ್ಕಿಂತ ಬೇರೆಯ ತರಹದ್ದಾಗಿರುತ್ತದೆ. ಸಹೃದಯನ ಸಾಕ್ಷೀಪ್ರಜ್ಞೆ

ಯಲ್ಲಿ ಅದು ತನ್ನ ಲೌಕಿಕ ಕಟುತ್ವವನ್ನೆಲ್ಲ ಕಳೆದುಕೊಂಡಂತಿರುತ್ತದೆ. ಸಂಪೂರ್ಣ ನಿಸ್ಸಂಗವಾಗಿರದಿದ್ದರೂ ಸಂಗದೂರವಾಗಿರುತ್ತದೆ. ಲೋಕಜೀವನದ ಭಾವ ವ್ಯಾಪಾರಗಳಿಂದ ಹೊಮ್ಮುವ ಸುಖದುಃಖ ರೂಪದ ಉದ್ರೇಕ ತೀಕ್ಷ್ಣತೆ ಹೊರೆಹೊಣೆಗಳಿಂದ ಬಿಡುಗಡೆ ಹೊಂದಿರುತ್ತದೆ. ಧ್ಯಾನಜಿಹ್ವೆಯಲ್ಲಿ ಚರ್ವಿತವಾಗಿ ಶಮತ್ವವನ್ನು ಪಡೆದು ಪ್ರಶಾಂತವಾಗಿರುತ್ತದೆ. ಲೋಕಾನುಭವದಲ್ಲಿ ಉದ್ವೇಗಕ್ಕೂ ಉದ್ವಿಗ್ನ ಕ್ರಿಯೆಗೂ ಎಡೆಗೊಡುವ ಭಾವಾನುಭವವು ಇಲ್ಲಿ ಸಾಕ್ಷೀಪ್ರಜ್ಞಾರಸನೆಯ ಮೇಲೆ ಅನುದ್ವಿಗ್ನಪ್ರಾಯವಾಗಿ, ಕ್ರಿಯಾನಿರಪೇಕ್ಷವಾಗಿ, ಆಸ್ವಾದನೆಯ ಸವಿ ಸ್ಥಿತಿಯಲ್ಲಿ ಮಾತ್ರ ಇರುವಂತೆ ಭಾಸವಾಗುತ್ತದೆ. ಒಟ್ಟಿನಲ್ಲಿ ಲೌಕಿಕವಾದ ಕ್ರೋಧಭಾವಕ್ಕೂ ಸಹೃದಯನ ಈ ಅನುಭವಕ್ಕೂ ಬಹು ದೂರಾಂತರವಿರುತ್ತದೆ. ಆ ಅಂತರ ಬರಿಯ ರೂಪದ್ದಾಗಿರದೆ ಸ್ವರೂಪದಲ್ಲಿಯೆ ಭಿನ್ನವಾದಂತೆ ತೋರುತ್ತದೆ. ಅಂತಹ ವಿಚಿತ್ರವಾದ ಕಲಾನುಭವಕ್ಕೆ ರಸಾನುಭವ ಎಂದು ಹೆಸರಿಟ್ಟಿದ್ದಾರೆ. ಆದಕಾರಣವೆ ಆ ಅನುಭವವನ್ನು ಅಲೌಕಿಕ ಎಂದು ವರ್ಣಿಸಿದ್ದಾರೆ. 'ರಸ' ಈ ಅರ್ಥದಲ್ಲಿ ಅಲೌಕಿಕ.

'ಲೋಕೋತ್ತರ' 'ಲೋಕಾತಿಶಯ' 'ಲೋಕಾತಿಕ್ರಾಂತ' ಮೊದಲಾದ ಮಾತುಗಳೂ ಈ ಅನುಭವವನ್ನೆ ಅದರ ವಿಶೇಷಸ್ತರಗಳನ್ನು ಗಮನಿಸಿ ನಿರ್ದೇಶಿಸುತ್ತವೆ. ಲೋಕಕ್ಕೆ ಎಂದರೆ ಲೋಕಾನುಭವಕ್ಕೆ, ಉತ್ತರವಾದದ್ದು ಎಂದರೆ ಅದರ ತರುವಾಯ ಬಂದದ್ದು, ಅಥವಾ ಅದಕ್ಕೆ ಮೇಲೆ ಏರಿ ನಿಂತಿರುವುದು ಎಂದರ್ಥ. ಅತಿಶಯ ಮತ್ತು ಅತಿಕ್ರಾಂತ ಎಂಬ ಪದಗಳೂ ಅಂತಹ ವಿಲಕ್ಷಣಾನುಭವದ ತರ-ತಮ ಭಾವಗಳನ್ನು ಸೂಚಿಸುತ್ತವೆ. ವರ್ಡ್ಸ್‌ವರ್ತ್ ಹೇಳಿರುವ 'Emotion recollected in tranquility' 'ಶಾಂತಮನಸ್ಸು ಜ್ಞಾಪಿಸಿಕೊಳ್ಳುವ ಭಾವ' ಎಂಬ ಕಾವ್ಯಾನುಭವದ ವಿವರಣೆಯೂ ಮೇಲೆ ಹೇಳಿದ ಲೋಕಾನುಭವದ ಅನಂತರ ಅದರ ಪರಿಭಾವನೆಯಿಂದ ಒದಗುವ ಧ್ಯಾನಾನುಭವದ ಸ್ವರೂಪವನ್ನೆ ತಿಳಿಸುತ್ತದೆ. ಅಂತೂ ರಸಾನುಭವವು ಲೋಕಾನುಭವದ ಅನಂತರದ್ದು; ಅದಕ್ಕಿಂತಲೂ ಅತಿಶಯವಾದದ್ದು; ಅದಕ್ಕಿಂತಲೂ ಮೇಲುಮಟ್ಟದ್ದು; ಆದರ್ಶದಲ್ಲಿ ಅದಕ್ಕಿಂತಲೂ ಉನ್ನತವಾಗಿ ಅತಿಕ್ರಾಂತವಾದದ್ದು; ಅದು ಅಲೌಕಿಕ.

ಒಂದು ಅರ್ಥದಲ್ಲಿ ಒಂದು ಉದ್ದೇಶಕ್ಕಾಗಿ ಸೃಷ್ಟವಾದ ಪರಿಭಾಷೆ ಪ್ರಯೋಗದಲ್ಲಿ ಬರಬರುತ್ತಾ ಅತಿ ಸಂಕುಚಿತವಾಗಿಯೊ ಅತಿ ವಿಶಾಲವಾಗಿಯೊ ಆ ಅರ್ಥ ಉದ್ದೇಶಗಳನ್ನು ವಿಕಾರಗೊಳಿಸುವುದೂ ಉಂಟು, 'ಅಲಂಕಾರ' ಎಂಬ ಪದಕ್ಕೆ ಭಾರತೀಯ ಕಾವ್ಯಮೀಮಾಂಸೆಯಲ್ಲಿ ಅಂತಹ ಅಪಗತಿ ಒದಗಿದುದನ್ನು ಈ ಪ್ರಬಂಧದ ಪ್ರಾರಂಭದಲ್ಲಿ ಪ್ರಾಸಂಗಿಕವಾಗಿ ಪ್ರಸ್ತಾವಿಸಿದ್ದೇವೆ. ಅದರಂತೆಯೆ, ಆದರೆ ಇನ್ನೊಂದು ರೀತಿಯಲ್ಲಿ, ರಸಸ್ವರೂಪವನ್ನು ಕುರಿತ 'ಅಲೌಕಿಕ' ಎಂಬ ಪದಕ್ಕೂ ಒಂದು ಅತಿಉದ್ಧಾರದ ಅವನತಿ ಒದಗಿದಂತಿದೆ.

ಕಲೆಯ ಅಂತರಿಕ್ಷಕ್ಕೆ ಚಿಮ್ಮಿ ಹಾರುವ ಮುನ್ನ ಲೋಕಾನುಭವದಲ್ಲಿ ಅವಶ್ಯವಾಗಿ ಕಾಲೂರಿದ್ದರೂ ರೆಕ್ಕೆಗೆದರಿ ಹಾರಾಡತೊಡಗಿದ ಮೇಲೆ ಅದು ಲೋಕೋತ್ತರವಾಗುವುದರಿಂದ ರಸಾನುಭವವನ್ನು 'ಅಲೌಕಿಕ' ಎಂದು ಕರೆದರಷ್ಟೆ. ಅದಕ್ಕೂ ನೆಲಕ್ಕೂ ಸಂಬಂಧ ತಪ್ಪಿದಂತಾದುದನ್ನು ಕಂಡು ಸರ್ವಕಾಲಕ್ಕೂ ಸಂಬಂಧ ತಪ್ಪಿಹೋಯಿತೆಂದೆ ಅರ್ಥಬರುವಂತೆ ಆ ಪದವನ್ನು ಬಳಸತೊಡಗಿದರು. ಸಾಮಾನ್ಯ ಪಕ್ಷಿಯ ಮಾತಿರಲಿ, ಎಂತಹ ವೈನತೇಯನೆ ಆಗಲಿ ಎಷ್ಟು ಮಹೋನ್ನತಿಯ ವ್ಯೋಮಾಂತರವನ್ನು ಸಂಚರಿಸಿದರೂ ಮತ್ತೆ ಭೂಮಿಸ್ಪರ್ಶ ಮಾಡಿದಲ್ಲದೆ ಅದರ ಬದುಕು ಸಾಗುವುದಿಲ್ಲ. ಹಾಗೆಯೆ ಅಲೌಕಿಕ ಎನ್ನಿಸಿಕೊಳ್ಳುವ ರಸಾನುಭವವೂ ಮಳೆಯ ಮೇಘದಂತೆ ಲೋಕಜೀವನದಿಂದಲೆ ಮೇಲೇರಿ ಮುಗಿಲಾಗಿ ಗಗನದಲ್ಲಿ ಸಂಚರಿಸಿ ಮತ್ತೆ ಮತ್ತೆ ಮಳೆಯ ರೂಪದಲ್ಲಿ ಲೋಕಸ್ಪರ್ಶ ಮಾಡಿ ಜೀವನವನ್ನು ಆರ್ದ್ರಗೊಳಿಸುತ್ತದೆ. ಹಾಗೆ ಮಾಡದೆ ಅದು ಆಕಾಶಕ್ಕೇರಿ ಅತ್ತಲೆ ಅಗೋಚರವಾಗುವ ಪಕ್ಷದಲ್ಲಿ ಮರ್ತ್ಯಜೀವನ ದೃಷ್ಟಿಯಿಂದ ಅದು ಅಸಾರ್ಥಕ ಮತ್ತು ಅಪ್ರಯೋಜಕವಾಗುತ್ತದೆ. ಪಾಶ್ಚಾತ್ಯರಲ್ಲಿ ಕೆಲವರಂತೂ ಅದನ್ನೂ ಒಪ್ಪಿಕೊಂಡು 'All art is useless' 'ಎಲ್ಲ ಕಲೆಯೂ ಅಪ್ರಯೋಜಕ' ಎನ್ನುವವರೆಗೂ ಹೋಗಿದ್ದಾರೆ, ಆಂಶಿಕ ಸತ್ಯದ ಸಿದ್ಧಾಂತಮೂಢವಾತಕ್ಕೆ ಸಿಕ್ಕಿ ದಿಕ್ಕುಗೆಟ್ಟಂತೆ!

ಭಾವೋಪಯೋಗವೆ ಪ್ರಪ್ರಧಾನವಾಗಿರುವ ಕಲೆಯಿಂದ ಯಾವ ನೇರವಾದ ಲೋಕೋಪಯೋಗವನ್ನೂ ನಾವು ನಿರೀಕ್ಷಿಸಬಾರದು; ಏಕೆಂದರೆ ಅನ್ಯ ಪ್ರಯೋಜನವನ್ನು ಪೂರ್ವಭಾವಿಯಾಗಿಯೆ ಮನಸ್ಸಿನಲ್ಲಿಟ್ಟುಕೊಂಡರೆ, ಆ ನಿರೀಕ್ಷಿತ ಪ್ರಯೋಜನ ಕೈಗೂಡದಿದ್ದರೆ ಆ ಕಲೆಯ ಆಸ್ವಾದನೆಗೆ ಸಂಪೂರ್ಣ ಭಂಗಬರುವ ಸಂಭವವುಂಟು. ಹಾಗೆಯೆ ಆ ನಿರೀಕ್ಷಿತ ಪ್ರಯೋಜನ ಸಿದ್ಧಿಯಾಯಿತೆಂದು ಕಲೆಯಲ್ಲದ, ಅಥವಾ ಅತಿ ಸಾಧಾರಣ ಮಟ್ಟದ ಕೃತಿಯನ್ನೂ ಸ್ವಾರ್ಥ ತೃಪ್ತಿಯಾದ ಸಂತೋಷದಲ್ಲಿ ಅತ್ಯುತ್ತಮ ಕಾವ್ಯವೆಂದು ಪ್ರಶಂಸಿಸುವ ಸಂಭವವೂ ಉಂಟು. ಆದ್ದರಿಂದ ಸಹೃದಯನಾದವನು ಯಾವ ವಿಧವಾದ ಲೌಕಿಕವಾದ ಅನ್ಯ ಪ್ರಯೋಜನಗಳನ್ನೂ ಅಪೇಕ್ಷಿಸದೆ ಕಲೆಯನ್ನು ಆಸ್ವಾದಿಸಬೇಕು ಎಂಬ ಆಂಶಿಕ ಸತ್ಯವನ್ನು ಸೂಚಿಸಲೆಂದೆ 'ಎಲ್ಲ ಕಲೆಯೂ ಅಪ್ರಯೋಜಕ!' ಎಂಬ ಸೂತ್ರವನ್ನು, ಬಹುಶಃ ಉಕ್ತಿಗೆ ಉಗ್ರರೂಪ ಕೊಡುವುದರಿಂದೊದಗುವ ಪ್ರಕಟಣಾ ಪ್ರಯೋಜನವನ್ನು ಗಮನಿಸಿ, ಸ್ವಲ್ಪ ಕಟುವಾಗಿಯೆ ಪ್ರತಿಪಾದಿಸಿದರೆಂದು ತೋರುತ್ತದೆ. ಉದ್ದೇಶ ಏನೆ ಆಗಿರಲಿ ಪರಿಣಾಮವಂತೂ ಅನರ್ಥಕಾರಿಯಾದ 'ಕಲೆಗಾಗಿ ಕಲೆ' ಯಲ್ಲಿ ಕೊನೆಗೊಂಡಿತು.

೩

ಭಾರತೀಯ ಕಾವ್ಯಮೀಮಾಂಸೆಯೂ ಕವಿಕರ್ಮದ ಗುರಿ ಸಹೃದಯ

ರಸಾನುಭವ ಎಂದು ಸಾರಿದೆ. ಸಹೃದಯ ರಸಾನುಭವದಲ್ಲಿ ಕಾವ್ಯ ತನ್ನ ಸಾರ್ಥಕತೆಯನ್ನು ಪಡೆಯುತ್ತದೆ. ಪಾಶ್ಚಾತ್ಯರು 'ಈಸ್ತೆಟಿಕ್ ಎಕ್ಸ್‌ಪೀರಿಯನ್ಸ್' ಎಂದು ಕರೆಯುವುದನ್ನೆ ನಮ್ಮವರು ಸೌಂದರ್ಯಾನುಭವ ಅಥವಾ ರಸಾನುಭವ ಎಂದು ಕರೆದಿದ್ದಾರೆ. ಕಾವ್ಯದ ವಲಯದಲ್ಲಿ ರಸಾನುಭವಕ್ಕೆ ಪರಮಗಣ್ಯಸ್ಥಾನವನ್ನೂ ಕೊಟ್ಟಿದ್ದಾರೆ. ಅದನ್ನು ಸಕಲ ಪ್ರಯೋಜನಗಳಿಗೂ ಮೌಲಿಭೂತವಾದ ಪ್ರಯೋಜನ[೧] ಎಂದಿದ್ದಾರೆ. ಆದರೆ ಅನ್ಯ ಪ್ರಯೋಜನಗಳ ಅನಪೇಕ್ಷತೆಯನ್ನಾಗಲಿ ತಿರಸ್ಕಾರವನ್ನಾಗಲಿ ಸಿದ್ಧಾಂತರೂಪಕ್ಕೆ ತಿರುಗಿಸಿದಂತೆ ಕಾಣುವುದಿಲ್ಲ. ಧರ್ಮ ಅರ್ಥ ಕಾಮ ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳೂ ಕಾವ್ಯದಿಂದ ಸಾಧಿತವಾಗುತ್ತವೆ. ಕಾವ್ಯಪ್ರಯೋಜನಗಳನ್ನು ಹೇಳುವಾಗಲೂ ಕಾವ್ಯಮೌಲ್ಯಕ್ಕೆ ಅಷ್ಟೇನೂ ಸಂಬಂಧಿಸಿಲ್ಲದ ಕೀರ್ತಿ, ಸಂಪತ್ತು, ವ್ಯವಹಾರಜ್ಞಾನಗಳೊಡನೆ ಕಾವ್ಯ ಮೌಲ್ಯನಿರ್ಣಯಕ್ಕೆ ಆವಶ್ಯಕವೆನಿಸುವ ಶಿವೇತರಕ್ಷತಿ, ಸದ್ಯಃಪರವಾದ ನಿರ್ವೃತಿ, ಕಾಂತಾಸಂಮಿತವಾದ ಉಪದೇಶ ಇವುಗಳನ್ನೂ ಸೇರಿಸಿದ್ದಾರೆ.[೨] ರಸಾನುಭವವನ್ನು ಕಿರೀಟಪ್ರಾಯವೆಂದು ಕರೆದಿದ್ದರೂ ಅದರಿಂದೊದಗುವ ಆನಂದವನ್ನು ವಿಗಲಿತ ವೇದ್ಯಾಂತರ ಎಂದು ವರ್ಣಿಸಿದ್ದರೂ ಆ ಕಾವ್ಯಮೀಮಾಂಸಕರ ಉದ್ದೇಶ ಆ ಅನುಭವದ ಮನಃಶಾಸ್ತ್ರೀಯವಾದ ವಿವರಣೆಯ ಒಳಗೆ ಚಲಿಸುವಂತಿದೆಯೆ ಹೊರತು ಆ ಅನುಭವದ ಆಧ್ಯಾತ್ಮಿಕವಾದ ಸತ್ಯಾಸತ್ಯ ನಿರ್ಣಯದ ಗೋಜಿಗೆ ಹೋದಂತಿಲ್ಲ. ಬಹುಶಃ ಅಧ್ಯಾತ್ಮದಲ್ಲಿಯೂ ಯೋಗದಲ್ಲಿಯೂ ಮುಂದುವರಿದಿದ್ದ ಅಥವಾ ಮುಂದುವರಿದಿದ್ದವರ ಸಾನ್ನಿಧ್ಯಲಾಭ ಪಡೆದಿದ್ದ ಅವರಿಗೆ ಆ ಅನುಭವದ ಅಸತ್ಯತೆಯ ಪ್ರಶ್ನೆ ಉದ್ಭವಿಸುವ ಸಂಭವವೆ ಇರಲಿಲ್ಲವೇನೊ!

ಆದರೆ ಆಧುನಿಕವಾದ ನಮ್ಮ ಸಾಹಿತ್ಯಸೃಷ್ಟಿಗೆ ಪಾಶ್ಚಾತ್ಯ ಸಾಹಿತ್ಯದ ಪ್ರಭಾವವೆಂತೊ ಅಂತೆ ಆಧುನಿಕವಾದ ನಮ್ಮ ಕಾವ್ಯಮೀಮಾಂಸೆಗೂ ಸಾಹಿತ್ಯ ವಿಮರ್ಶೆಗೂ ಪಾಶ್ಚಾತ್ಯ ಸಾಹಿತ್ಯವಿಮರ್ಶೆಯ ಮತ್ತು ಕಾವ್ಯಮೀಮಾಂಸೆಯ ಪ್ರಭಾವ ಅನಿವಾರ್ಯವಾಗಿ ಒದಗಿ, ಹಿಂದೆ ಅಸಂಶಯಾತ್ಮಕವಾಗಿದ್ದ ನಮ್ಮ ಶ್ರದ್ಧೆಗಳನ್ನೆಲ್ಲ ಅಲುಗಿಸುತ್ತಿವೆಯಾದ್ದರಿಂದ, ಹೆಡೆಯೆತ್ತಿರುವ ಹೊಸ ಪ್ರಶ್ನೆಗಳಿಗೆ ಧೀರವಾಗಿ ಸ್ವಾಗತ ನೀಡಬೇಕಾಗಿದೆ. ಹಾಗೆ ಮಾಡದೆ ಉಷ್ಟ್ರಪಕ್ಷಿಯ ಕುರುಡು ನೀತಿಯನ್ನನುಸರಿಸಿದರೆ ಪ್ರಾಚೀನತೆಯ ಪರವಾದ ಅಂಧಶ್ರದ್ಧೆಯಲ್ಲಿ, ತಪ್ಪಿದರೆ,

---

೧. "ಸಕಲ ಪ್ರಯೋಜನ ಮೌಲಿಭೂತಂ ಸಮನಂತರಮೇವ ರಸಾಸ್ವಾದನ ಸಮುದ್ಭೂತಂ ವಿಗಲಿತ ವೇದ್ಯಾಂತರಂ ಆನಂದಂ."

೨. ಕಾವ್ಯಂ ಯಶಸೇ ಅರ್ಥಕೃತೇ ವ್ಯವಹಾರವಿದೇ ಶಿವೇತರಕ್ಷತಯೇ |
ಸದ್ಯಃಪರ ನಿರ್ವೃತಯೇ ಕಾಂತಾಸಂಮಿತತಯೋಪದೇಶಯುಜೇ ||

ವಿನಾಶಕರವಾದ ಸಂಶಯಾತ್ಮಕತೆಯಲ್ಲಿ, ಉಳಿಯಬೇಕಾಗುತ್ತದೆ. ಎರಡೂ ಅನಾವಶ್ಯಕವಾಗುವಂತೆ ನಮ್ಮ ಸಹೃದಯ ವರ್ಗಕ್ಕೆ ಬುದ್ಧಿಪೂರ್ವಕವೂ ಹೃದಯ ತೃಪ್ತಿಕರವೂ ವಿಚಾರಸಮ್ಮತವೂ ಆಗಿರುವ ರಸಾನುಭವದ ಸತ್ಯಸ್ವರೂಪ ಮೀಮಾಂಸೆಯನ್ನೊದಗಿಸಿದರೆ ನಮ್ಮ ಪ್ರಾಚೀನ ಸಾಹಿತ್ಯದ ಕಲ್ಯಾಣಕರವೂ ಆಹ್ಲಾದಕರವೂ ಆಗಿರುವ ಶಕ್ತಿ ನಮ್ಮ ಜನತೆಯ ಆತ್ಮಶ್ರೀಗೆ ಅಮೃತವಾಗಿ ಒದಗುತ್ತದೆ; ಮತ್ತು ಮುಂಬರುವ ಸಾಹಿತ್ಯಸೃಷ್ಟಿ ಅಜೀರ್ಣ ಅಥವಾ ಅರ್ಧ ಜೀರ್ಣವಾದ ಅಪೂರ್ಣದೃಷ್ಟಿಯ ಪಂಗುತತ್ತ್ವಗಳ ಮೇಲೆ ಒಲೆಯುವ ಸಿದ್ಧಾಂತ ಗಳನ್ನಾಶ್ರಯಿಸಿ ನಿಸ್ಸತ್ವವಾಗುವುದೂ ತಪ್ಪುತ್ತದೆ.

'ಕಲೆಗಾಗಿ ಕಲೆ' 'ಕವಿತೆಗಾಗಿ ಕವಿತೆ' 'ರಸಕ್ಕಾಗಿ ರಸ' ಎಂಬ ಸಿದ್ಧಾಂತಗಳಿಂದ ಮಾನವ ಸಂಸ್ಕೃತಿಗೂ ಸಾಮಾಜಿಕ ಜೀವನಕ್ಕೂ ಎಂತಹ ಹಾನಿ ತಟ್ಟಬಲ್ಲುದು ಎಂಬುದನ್ನು ಆ ಹಾನಿಗೆ ತುತ್ತಾದವರನ್ನು ಕಂಡಲ್ಲದೆ ನಮಗೆ ತಿಳಿಯುವುದಿಲ್ಲ. ರಸಾನುಭವವನ್ನು ಅನ್ಯಪ್ರಯೋಜನಗಳ ಸೋಂಕಿನಿಂದ ಪಾರುಮಾಡಿ ರಸಶುದ್ಧಿಯನ್ನು ಕಾಪಾಡಲು ಹೊರಟವರು ಅದನ್ನು 'ಅಪ್ರಯೋಜಕ' ವನ್ನಾಗಿ ಮಾಡಿ, ಅದರಲ್ಲಿ ಇದುವರೆಗೂ ನಮಗಿದ್ದ ಗುರುತರವಾದ ಶ್ರದ್ಧಾಶಕ್ತಿ ಯನ್ನು ಒಂದು ಮಧುರ ಮಿಥ್ಯೆಯ ಲಘುತರಸ್ವಾರಸ್ಯಮಾತ್ರವನ್ನಾಗಿ ಪರಿವರ್ತಿಸಿ, ಅದರ ಸತ್ಯತೆಯನ್ನೂ ಆಧ್ಯಾತ್ಮಿಕತೆಯನ್ನೂ ಚೇತನೆಯನ್ನು ಊರ್ಧ್ವಮುಖ ವಾಗಿಸುವ ಅದರ ದರ್ಶನಜ್ಯೋತಿಯನ್ನೂ ತಿರಸ್ಕರಿಸಿ, ಬುದ್ಧಿಯಿರುವ ಸಹೃದಯ ರನ್ನೆಲ್ಲ ಕಾವ್ಯವಿಮುಖರನ್ನಾಗಿ ಮಾಡುವ ಕಾರ್ಯದಲ್ಲಿ ಯಶಸ್ವಿಗಳಾಗುತ್ತಿದ್ದಾರೆ.

ಕಾವ್ಯಾನುಭವದಿಂದ ವಂಚಿತವಾದರೆ ಜನಜೀವನ ಶುಷ್ಕವಾಗಿ ಮೃತಪ್ರಾಯ ವಾಗುತ್ತದೆ[೪] ಎಂದು ಕಂಡುಕೊಂಡವರು ಕಾವ್ಯಾನುಭವದಲ್ಲಿರುವ ಜೀವನ ಪೋಷಕಾಂಶವನ್ನೆ ತೆಗೆದುಹಾಕುವ ಪ್ರಯತ್ನಕ್ಕೆ ಕೈಹಾಕಿದ್ದಾರೆ. ಅವರ ವೈಜ್ಞಾನಿಕ ವಿಚಾರದ ಸೋಸಣಿಗೆ ತಾನು ಶುದ್ಧಿಗೊಳಿಸಲೆಳಸುತ್ತಿರುವ ಸೋಮ ರಸದ ಜೀವಶಕ್ತಿಸತ್ವವನ್ನೆ ಹೀರಿಕೊಂಡು ಬರಿಯ ಸಿಹಿಸಿಹಿ ನೀರನ್ನೆ ನಮಗೆ ದಯಪಾಲಿಸಲು ಹಂಚಿಕೆ ಹೂಡಿದಂತಿದೆ. ನಂಬಿ ಕುಡಿಯುವವರ ಗತಿ? ಹಿಂದಿ ನಂತೆಯೆ ಸಿಹಿದ್ರವವನ್ನೇನೊ ಕುಡಿಯುತ್ತಿರುತ್ತಾರೆ; ಆದರೆ ನಾಲಗೆಯ ರುಚಿ ತೃಪ್ತವಾದರೂ ಪುಷ್ಟಿಕರ ಸತ್ವಾಂಶದ ಅಭಾವದಿಂದಲೊ ಅಥವಾ ಪುಷ್ಟಿವಿನಾಶಕರ

---

೪. Nor is Art a thing which had its function in the youth of the world, but with the development of Science becomes obsolete. It may very possibly decline and even disappear, but if it does a biological calamity of the first order will have occured.

—I. A. Richards.

ವಾದರೂ ರುಚಿವರ್ಧನಕ್ಕಾಗಿ ತುಂಬುವ ಅಶ್ರೇಯಸ್ಕರಾಂಶದ ಪ್ರಭಾವದಿಂದಲೊ ಶರೀರವೆಲ್ಲ ಕೃಶವಾಗಿ ರೋಗರುಜಿನಗಳಿಗೆ ಸುಲಭವಶವಾಗಿ ವಿನಾಶದತ್ತ ಸಾಗುತ್ತದೆ.

ರಸಾನುಭವಕ್ಕೆ ರಸಾನುಭವವೆ ಗುರಿ; ಅದಕ್ಕದೇ ಪರಮಪ್ರಯೋಜನ; ಅದರಿಂದ ನೀತಿಬೋಧೆಯನ್ನಾಗಲಿ ಧಾರ್ಮಿಕೋನ್ನತಿಯನ್ನಾಗಲಿ ಆಧ್ಯಾತ್ಮಿಕ ವಿಕಾಸವನ್ನಾಗಲಿ ಸಾಮಾಜಿಕ ಕ್ಷೇಮವನ್ನಾಗಲಿ ರಾಜಕೀಯೋತ್ಕರ್ಷವನ್ನಾಗಲಿ ಅಪೇಕ್ಷಿಸುವುದು ಕಾವ್ಯಮೌಲ್ಯಕ್ಕೆ 'ಅನ್ಯ'; ಮತ್ತು ಅನ್ಯಾಯ. ಈ ಅನ್ಯೋದ್ದೇಶಗಳಿಂದ ಸೃಷ್ಟವಾದ ಕೃತಿ ಶುದ್ಧಸಾಹಿತ್ಯವಲ್ಲ; ಸಾಹಿತ್ಯದ ರೂಪ ವನ್ನು ಉಪಯೋಗಿಸಿಕೊಂಡು ಅನ್ಯೋದ್ದೇಶಗಳನ್ನು ಸಾಧಿಸುವ ಉಪಾಯ ಯಂತ್ರ. ಶುದ್ಧಸಾಹಿತ್ಯಕ್ಕೆ ರಸಾನುಭವವಲ್ಲದ ಬೇರೆ ಉದ್ದೇಶಗಳಿರಬಾರದು. ಕಾವ್ಯಕ್ಕಾಗಿಯೆ ಕಾವ್ಯ. ಕಲೆಗಾಗಿಯೆ ಕಲೆ.

ಕಾವ್ಯದ ವಲಯದಲ್ಲಿ ಸಹೃದಯ ರಸಾನುಭವವೆ ಮುಖ್ಯ ಲಕ್ಷ್ಯ; ಆ ಭೂಮಿಕೆಯಷ್ಟರಲ್ಲಿ ರಸವೆ ಸಕಲ ಪ್ರಯೋಜನ ಮೌಲಿಭೂತವಾದದ್ದು: ಎಂಬ ವಾದದಲ್ಲಿ ಸತ್ಯಾಂಶವಿಲ್ಲದಿಲ್ಲ. ನಾಟಕವನ್ನು ನೋಡುತ್ತಿರುವ ಸಹೃದಯ ಪ್ರೇಕ್ಷಕನಿಗೆ ರಸಾನುಭೂತಿಯೆ ಪರಮ ಪ್ರಯೋಜನವಾದರೂ ಅದನ್ನು ನೋಡಿ ಕೊಂಡು ಹೊರಗೆ ಬರುವ ಅವನು ಲೋಕಸಂಸಾರದ ಒಬ್ಬ ವ್ಯಕ್ತಿ. ಆ ವ್ಯಕ್ತಿ ನಾಟಕಕ್ಕೆ ಬರುವ ಪೂರ್ವದಲ್ಲಿಯೂ ಇರುತ್ತಾನೆ; ನಾಟಕ ಮುಗಿದಮೇಲಿಯೂ ಇರುತ್ತಾನೆ. ರಸಾನುಭವ ಪಡೆದಮೇಲೆ ಅವನು ಅಂತರ್ಧಾನವಾಗುವ ಪಕ್ಷದಲ್ಲಿ ರಸಾನುಭವದ ಪರಮಪ್ರಯೋಜನ ಸಿದ್ಧಾಂತದ ವಿಷಯದಲ್ಲಿ ಲೋಕವ್ಯಕ್ತಿಗಳಾ ಗಿರುವ ನಾವು ಪ್ರವೇಶಿಸುವ ಕಾರಣವಿರುತ್ತಿರಲಿಲ್ಲ. ಆದರೆ ಆ ಸಹೃದಯ ಪ್ರೇಕ್ಷಕವ್ಯಕ್ತಿ ನಾಟಕದಿಂದೊದಗುವ ರಸಾನುಭವದಿಂದ ಪ್ರಭಾವಿತನಾಗಿ ಲೋಕ ಜೀವನದಲ್ಲಿ ಕ್ರಿಯೆಗೆ ತೊಡಗುತ್ತಾನೆ. ಆ ರಸಾನುಭವದ ಸಂಸ್ಕಾರದ ಪರಿಣಾಮ ಲೋಕದ ಇತರ ವ್ಯಕ್ತಿಗಳ ಸಂತೋಷಕ್ಕೊ ದುಃಖಕ್ಕೊ, ಏಳಿಗೆಗೊ ಅವನತಿಗೊ, ಪಾಪಕ್ಕೊ ಪುಣ್ಯಕ್ಕೊ, ಘರ್ಷಣೆಗೊ ಸಾಂತ್ವನಕ್ಕೊ ಕಾರಣವಾಗಿಯೆ ಆಗುತ್ತದೆ. ಆದ್ದರಿಂದಲೆ ಕಾವ್ಯ ಅಥವಾ ಕಲೆ ಏನನ್ನಾದರೂ ಮಾಡಲಿ ಬಿಡಲಿ ಎಂದು ಲೋಕ ತಟಸ್ಥವಾಗಿರಲು ಸಾಧ್ಯವಾಗುವುದಿಲ್ಲ. ತನ್ನ ಶ್ರೇಯಸ್ಸಿಗಾಗಿ ಅದು ಆ ರಸಾನುಭವ ಪ್ರಯೋಜನವನ್ನು ಬದುಕಿನ ಶಾಶ್ವತ ಪುರುಷಾರ್ಥಗಳ ಮಹತ್ತರ ಪ್ರಯೋಜನಕ್ಕೆ ಅಧೀನಗೊಳಿಸಬೇಕಾಗುತ್ತದೆ. ತನ್ನ ಕ್ಷೇತ್ರದಲ್ಲಿ ಪರಮಪ್ರಯೋಜನವೆಂದು ಮಾನ್ಯವಾಗಿದ್ದರೂ ಪೂರ್ಣಜೀವನದ ವಿಶಾಲತರ ಕ್ಷೇತ್ರದ ಪರಮಗಂತವ್ಯಸ್ಥಾನ ವಾದ ಪೂರ್ಣತಾಧ್ಯೇಯದ ಒರೆಗಲ್ಲಿನಲ್ಲಿ ಅದು ಪರೀಕ್ಷೆಗೆ ಒಳಗಾಗಬೇಕಾಗುತ್ತದೆ. ರಸದ ಮೌಲ್ಯನಿರ್ಣಯದಲ್ಲಿ ಪುರುಷಾರ್ಥಗಳೆಲ್ಲ ಅವಯವಗಳಾಗಿವೆ, ಅಂತರ್ಗತ

ವಾಗಿವೆ. ಆ ಪುರುಷಾರ್ಥಗಳನ್ನು ಬಿದು ಅದನ್ನು ಪರಿಭಾವಿಸಿದರೆ ಅದು ಶೂನ್ಯವಾಗಿ ಬಿಡುತ್ತದೆ; ಪರಿಭಾವಿಸುವುದಕ್ಕೂ ಅಲ್ಲೇನೂ ಇರುವುದಿಲ್ಲ.

ರಸಾನುಭವ ಅಲೌಕಿಕ ಎಂದರೆ ಲೋಕದ ಸಂಬಂಧವನ್ನೆಲ್ಲ ಕಡಿದುಕೊಂಡು ಬಿಟ್ಟದ್ದು ಎಂದರ್ಥವಲ್ಲ. ಲೋಕೋತ್ತರವಾದದ್ದು ಎಂದಷ್ಟೆ ಅರ್ಥ. ಸಂಪೂರ್ಣವಾಗಿ ಲೋಕದಿಂದ ಬೇರೆಯಾಗಿದ್ದಾಗಿರಲು ಸಾಧ್ಯವೆ ಇಲ್ಲ. ಕವಿ ಮನುಷ್ಯನಾಗಿ ಲೋಕದ ಮತ್ತು ಸಮಾಜದ ಒಂದು ಅಂಶವಾಗಿದ್ದಾನೆ; ಅವನ ಕೃತಿಯೂ, ಅದೆಷ್ಟೆ ನಿಯತಿಕೃತ ನಿಯಮರಹಿತದಂತೆ ತೋರಲಿ, ಲೋಕದ ಒಂದಂಶವೆ. ಈ ಮಾತು ಸಹೃದಯನಿಗೂ ಸಂಪೂರ್ಣವಾಗಿ ಅನ್ವಿತ. ಮಾನವ ವ್ಯಾಪಾರಗಳೆಲ್ಲ, ಕಲೆಯದ್ದಾಗಲಿ ಕಾವ್ಯದ್ದಾಗಲಿ ಲೋಕದ್ದಾಗಲಿ, ಪರಸ್ಪರೋಪ ಜೀವಿಗಳೆ; ಒಂದರ ಪ್ರಭಾವ ಮತ್ತೊಂದರ ಮೇಲೆ ಬಿದ್ದೆ ತೀರುತ್ತದೆ; ಒಂದರ ಪರಿಣಾಮ ಮತ್ತೊಂದರ ಪರಿಣಾಮವನ್ನು ನಿರ್ಣಯಿಸುತ್ತದೆ. ನಮ್ಮ ಆಲೋಚನೆಯ ಸೌಕರ್ಯಕ್ಕಾಗಿ ಮಾಡಿಕೊಳ್ಳುವ ವಿಭಜನೆಯನ್ನು ವಸ್ತುವಿಗೂ ವರ್ಗಾಯಿಸಿದರೆ ಅಸತ್ಯವಾಗುವುದರ ಜೊತೆಗೆ ಅನಾಹುತವೂ ಆಗುತ್ತದೆ.

೪

ಸಕಲಪ್ರಯೋಜನ ಮೌಲಿಭೂತವೆಂದು ವರ್ಣಿಸಿ ರಸದ ಸ್ಥಾನವನ್ನು ನಿರ್ಣಯಿಸಿದ ಭಾರತೀಯ ಕಾವ್ಯಮೀಮಾಂಸೆ ಅದರ ಸ್ವರೂಪವನ್ನು ವಿಗಲಿತ ವೇದ್ಯಾಂತರವಾದ ಆನಂದವೆಂದು ನಿರೂಪಿಸಿದೆ. ಎಂದರೆ, ರಸವನ್ನು ಅನುಭವಿಸುವ ಆ ಚರ್ವಣ ಮುಹೂರ್ತದಲ್ಲಿ ಆ ಆಸ್ವಾದನೆಯ ಆನಂದವೊಂದನ್ನಲ್ಲದೆ ಅದಕ್ಕೆ ಕಾರಕ ಸಾಧಕ ವಾಹಕಾದಿಗಳಾದ ಬೇರಾವುದನ್ನೂ ಗಮನಿಸುವುದಿಲ್ಲ ಎಂಬುದು ತಾತ್ಪರ್ಯ. ಇದು ಆದರ್ಶ ಸಹೃದಯನ ಆದರ್ಶಪ್ರಾಯವಾದ ರಸಾನುಭೂತಿಯ ಆದರ್ಶ ಲಕ್ಷಣ ನಿರೂಪಣೆ. ಇದು ಕಬ್ಬೊ ಬೆಲ್ಲವೊ ಜೇನೊ ಸಕ್ಕರೆಯೊ ಮಾವೊ ಹಲಸೊ ಯಾವುದನ್ನು ತಿಂದರೂ ನಮ್ಮ ಪ್ರಜ್ಞೆ ಆ ಸವಿಯೊಂದನ್ನೆ ತನ್ಮಯವಾಗಿ ಅನುಭವಿಸಿ, ಆ ಸವಿ ಯಾವುದರಿಂದ ಬಂದಿತು ಎಂಬುದನ್ನು ಸಂಪೂರ್ಣವಾಗಿ ವಿಸರ್ಜಿಸುವ ಒಂದು ರೀತಿಯ ಸಮಾಧಿಸ್ಥಿತಿ! ಇಂತಹ ಆದರ್ಶ ಸಮಾಧಿ ಸ್ಥಿತಿಯನ್ನು ಬ್ರಹ್ಮಾಸ್ವಾದ ಸೋದರ ಎಂದು ಕರೆದರೆ ಆಕ್ಷೇಪಿಸಬಾರದೆಂದು ತೋರುತ್ತದೆ. ಆದರೆ ನೂರಾರು ವಿವಿಧ ಸಂಸ್ಕಾರದ ಸಹೃದಯರ ನೂರಾರು ತರಹದ ಕಲೆ ಕಾವ್ಯ ನಾಟಕಗಳ ತರತಮದ ರಸಾನುಭವಗಳನ್ನೆಲ್ಲ ಒಂದೇ ರಸಾನುಭವವೆಂದು ಹೇಳಲಾದೀತೆ? ಎಲ್ಲ ಕವಿಕೃತಿಗಳೂ ಒಂದೆ ಮಟ್ಟದವೆ? ಎಲ್ಲ ರಸಾನುಭವ ಒಂದೆ ರೀತಿಯದೆ? ಕಾರ್ಖಾನೆಯ ಅವಿವಾಹಿತ ಕೂಲಿ, ಅಥವಾ ವಿಶ್ವವಿದ್ಯಾನಿಲಯದಲ್ಲಿದ್ದರೂ ಲೈಂಗಿಕಾತೃಪ್ತನಾದ ವಿದ್ಯಾರ್ಥಿ ಅಥವಾ ಅಧ್ಯಾಪಕ, ಇವರು ಸಿನಿಮಾ ನೋಡುವಾಗ ಅನುಭವಿಸುವುದು ಶೃಂಗಾರರಸವನ್ನೊ ಹಚ್ಚ

ಹಸಿಯ ರತಿಭಾವವನ್ನೊ ? ಅದಕ್ಕಿಂತಲೂ ಸ್ವಲ್ಪ ಮೇಲುಮಟ್ಟದ ಉತ್ತಮರಾದ ಪ್ರೇಕ್ಷಕರಲ್ಲಿಯೂ, ರಸವನ್ನಲ್ಲದೆ ಬರಿಯ ಸ್ಥಾಯಿಭಾವವನ್ನೆ ಸವಿಯುವವರಂತೆ, ಶೇಕಡ ತೊಂಬತ್ತರಷ್ಟು ಸ್ಥಾಯಿಭಾವ ಮಿಶ್ರಿತ ರಸವನ್ನು ಸವಿಯುವರೆಷ್ಟು ಮಂದಿ ! ಶೇಕಡ ಐವತ್ತು ನಾಲ್ವತ್ತು ಮೂವತ್ತು ಇಪ್ಪತ್ತು ಹತ್ತು ಐದರಷ್ಟು ಸ್ಥಾಯಿಭಾವ ಮಿಶ್ರಿತವಾದ ರಸಾನುಭವ ಪಡೆಯುವವರೆಷ್ಟು ಮಂದಿ ! ಆದ್ದರಿಂದ ಕವಿಗಳನ್ನಾಗಲಿ ರಸವನ್ನಾಗಲಿ ಕಾವ್ಯ ಕಲಾಕೃತಿಗಳನ್ನಾಗಲಿ ಸಹೃದಯ ಪ್ರೇಕ್ಷಕ ವಾಚಕರನ್ನಾಗಲಿ ಒಂದೆ ಎನ್ನುವ ರೀತಿಯಲ್ಲಿ ಮೀಮಾಂಸೆಗೆ ಹೊರಡುವುದರಿಂದ ಸತ್ಯದರ್ಶನವಾಗುವುದಿಲ್ಲ.

ಭಾರತೀಯ ಕಾವ್ಯ ಮೀಮಾಂಸಕರು ರಸವನ್ನು ನಾನಾ ಪದಾರ್ಥಗಳ ಮಿಶ್ರಣದಿಂದ ಮಾಡಿದ ಪಾನಕದ ರುಚಿಗೆ ಹೋಲಿಸಿದ್ದಾರೆ. ಅವರ ಅಭಿಪ್ರಾಯದಲ್ಲಿ ಅದೊಂದು ಜನ್ಯ.[೫] ಅನೇಕ ಸಾಮಗ್ರಿಗಳು ಸೇರಿ ಆ ರುಚಿಯನ್ನು ಹುಟ್ಟಿಸುತ್ತವೆ. ಆ ರುಚಿಯಲ್ಲಿ ಆ ಭಿನ್ನ ಸಾಮಗ್ರಿಗಳ ರುಚಿಗಳೆಲ್ಲ ಸಂಯೋಗವಾಗಿ ಆ ಯಾವೊಂದು ಸಾಮಗ್ರಿಯ ರುಚಿಯೂ ಅಲ್ಲದ ಒಂದು ವಿಶಿಷ್ಟವಾದ ಐಕ್ಯತಾರುಚಿ ಉದ್ಭವಿಸುತ್ತದೆ. ಆದರೆ ಸ್ವಾದದ ಅಥವಾ ರುಚಿಯ ಪ್ರಯೋಜನವನ್ನು ಉಂತಿಟ್ಟು ಪುಷ್ಟಿಪ್ರಯೋಜನವನ್ನು ಮಾತ್ರ ಗಮನಿಸಿದರೆ ಆರೋಗ್ಯಾಕಾಂಕ್ಷಿಗಳಾದ ನಾವು ಆ ವಿವಿಧ ಸಾಮಗ್ರಿಗಳ ಗುಣಾವಗುಣಗಳನ್ನು ನಿರ್ಲಕ್ಷಿಸಲಾಗುವುದಿಲ್ಲ.

ಸೌಂದರ್ಯಾನುಭವ ಅಥವಾ ರಸಾನುಭವವು ಕಾವ್ಯ ಕಲಾಭೂಮಿಕೆಗೆ ಮಾತ್ರ ಪರಿಮಿತವಾಗಿದ್ದಿದ್ದರೆ, ಅದರ ಪ್ರಭಾವ ಪರಿಣಾಮಗಳು ಲೋಕದ ವಿಶಾಲ ಜೀವನಕ್ಕೆ ವ್ಯಾಪಿಸದಿದ್ದಿದ್ದರೆ ಅದರ ರುಚಿಪ್ರಯೋಜನವಷ್ಟರಿಂದಲೆ ತೃಪ್ತರಾಗಿ ಸುಮ್ಮನಿರಬಹುದಾಗಿತ್ತು. ಆದರೆ ಸಾಮಾಜಿಕನ ಯಾವ ಅನುಭವವೂ ತನ್ನ ಪರಿಧಿಯಲ್ಲಿಯೆ ಪರ್ಯವಸಾನವಾಗುವುದಿಲ್ಲ. ಅದು ಸಮಾಜವನ್ನೆಲ್ಲ ವ್ಯಾಪಿಸುತ್ತದೆ; ಬದುಕನ್ನು ರೂಪಿಸುತ್ತದೆ. ಆದ್ದರಿಂದ ರಸಾನುಭವಕ್ಕೆ ಕಾರಣವಾಗುವ ಬೇರೆ ಬೇರೆ ಸಾಮಗ್ರಿಗಳ ಕ್ಷೇಮಂಕರ ಅಥವಾ ಅಕ್ಷೇಮಂಕರ ಗುಣಾವಗುಣಗಳನ್ನು ನಾವು ಪರಿಶೀಲಿಸಿ ಮಂಡನ ಖಂಡನಗಳಲ್ಲಿ ತೊಡಗಬೇಕಾಗುತ್ತದೆ. 'ಕಲೆಗಾಗಿ ಕಲೆ' ಯನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕಾಗುತ್ತದೆ. ರಸ ಅಲೌಕಿಕ ಎಂದ ಮಾತ್ರಕ್ಕೆ

೫. ಸಾಂಖ್ಯ ಮತ್ತು ವೇದಾಂತ ದರ್ಶನ ಪಕ್ಷಪಾತಿಗಳಾದ ಕಾವ್ಯ ಮೀಮಾಂಸಕರು ರಸಾನಂದವು ಯಾವುದರ ಕಾರ್ಯವಲ್ಲವೆಂದೂ ತನಗೆ ತಾನೆ ಇರುವುದನ್ನು ಮುಚ್ಚಿರುವ ಆವರಣವನ್ನು ತೆಗೆದು ಹಾಕುವುದರಿಂದ ಅನುಭವ ಗೋಚರವಾಗುವ ಮೂಲತತ್ತ್ವವೆಂದೂ "ರಸೋ ವೈ ಸಃ" ಎಂದೂ ವಾದಿಸಿದ್ದಾರೆ: 'ವೀತವಿಘ್ನಪ್ರತೀತಿ', 'ಭಗ್ನಾವರಣಚಿತ್', ಎಂಬಂತಹ ಮಾತುಗಳಲ್ಲಿ ಧ್ವನಿತವಾಗುವ ಆ ತತ್ತ್ವದ ಜಿಜ್ಞಾಸೆ ಸದ್ಯದ ಈ ಪ್ರಬಂಧದ ಉದ್ದೇಶಕ್ಕೆ ಅಪ್ರಕೃತ.

ಅದರ ಲೋಕೋತ್ತರತ್ವ ಅದರ ಲೋಕವ್ಯಾಪಾರತ್ವವನ್ನು ತಿರಸ್ಕರಿಸುವುದಿಲ್ಲ. ತನಗೊದಗಿದ ವಿಶೇಷಣದ ಆಧಾರದ ಮೇಲೆ ತನ್ನ ಲೌಕಿಕವಾದ ಜವಾಬುದಾರಿಯಿಂದ ತಪ್ಪಿಸಿಕೊಳ್ಳಲು ಅದಕ್ಕೆ ಅಧಿಕಾರವಿಲ್ಲ.

ಅಲ್ಲದೆ ರಸಾನುಭವ ನೇರವಾಗಿ ಲೋಕವ್ಯಾಪಾರವೂ ಆಗಬಲ್ಲುದು. ಸೌಂದರ್ಯಾನುಭವ ಕಲಾಕಾವ್ಯಾದಿಗಳಿಗೆ ಮಾತ್ರ ಸೀಮಾಬದ್ಧವಾಗಿಲ್ಲ ಎಂಬುದೂ ಅನುಭವವೇದ್ಯ. ಚೇತೋಹಾರಿಯಾದ ಪರ್ವತಾರಣ್ಯ ನಿಸರ್ಗ ದೃಶ್ಯವನ್ನೊ ಸೂರ್ಯಾಸ್ತವನ್ನೊ ಚಂದ್ರೋದಯವನ್ನೊ ಸಮುದ್ರವನ್ನೊ ಆಕಾಶದ ಮೇಘ ಪಂಕ್ತಿಗಳನ್ನೊ ಯಾವ ಲೌಕಿಕ ಪ್ರಯೋಜನದ ಆಶೆ ಭಯ ಆಶಂಕೆಗಳ ಗೊಂದಲವೂ ಇಲ್ಲದೆ ಸಂಗದೂರವೆಂಬಂತಿರುವ ಧ್ಯಾನಮಯ ಪ್ರಜ್ಞೆಯಿಂದ ಕವಿಹೃದಯವುಳ್ಳವರು ಯಾರೆ ಆಗಲಿ ಭಾವಿಸಿ ವೀಕ್ಷಿಸುತ್ತಿರುವಾಗ ದೊರೆಕೊಳ್ಳುವ ಸೌಂದರ್ಯಾನುಭವದ ಆನಂದವು ರಸಾನುಭವಕ್ಕಿಂತ ಯಾವ ವಿಧದಲ್ಲಿಯೂ ಭಿನ್ನವಾದುದಲ್ಲ. ಇನ್ನೂ ಸ್ವಲ್ಪ ಮೇಲೇರಿ ಹೇಳುವುದಾದರೆ, ಅಹಂಕಾರದ ಸಂಪೂರ್ಣ ನಿರಸನದಿಂದ ಸಹಜ ಸಾಕ್ಷೀಪ್ರಜ್ಞೆಯಲ್ಲಿ ಆರೂಢನಾಗುವ ಯೋಗಿಗೆ ಸಮಸ್ತಲೋಕವ್ಯಾಪಾರವೂ, ನಿಸರ್ಗದ್ದಾಗಲಿ ಮನುಷ್ಯನದ್ದಾಗಲಿ, ಸುಖದುಃಖ ಕಷ್ಟಕ್ಲೇಶ ಜಯಾಪಜಯ ಶೋಕಸಂಕಟಾದಿಯಾಗಿ ಸರ್ವಾನುಭವವೂ ರಸಾನುಭವವೆ ಆಗಿರುತ್ತದೆ. ಅಂತಹ ಆನಂದ ಸಾಕ್ಷಾತ್ಕಾರದ ಅನುಭವಕ್ಕೆ "ರಸೋ ವೈ ಸಃ" ಎಂಬ ಉಪನಿಷತ್ತಿನ ಋಷಿಯ ಸಚ್ಚಿದಾನಂದ ಬ್ರಹ್ಮಸ್ವರೂಪದ ವ್ಯಾಖ್ಯೆ ಸರ್ವಥಾ ಸರ್ವಭಾವೇನ ಒಪ್ಪುತ್ತದಲ್ಲವೆ?*

—ಕುವೆಂಪು

೩—೯—೬೦

---

*ಮುಂಬರಲಿರುವ 'ರಸೋ ವೈ ಸಃ' ಎಂಬ ಕಾವ್ಯಮೀಮಾಂಸೆಯ ಪ್ರಬಂಧದಲ್ಲಿ ಇದರ ವಿಸ್ತೃತ ವಿವೇಚನೆ ದೊರೆಯುತ್ತದೆ.

ಸೊಫೊಕ್ಲೇಸ್ ಮಹಾಕವಿಯ
ಟ್ರಾಕಿಯ ಪೆಣ್ಗಳ್

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಮೇಳಂ

೧

ಕಲ್ಲಱೆ ತಾಣಗಳಿಂದುಗುತರ್ಪಾರ್,
ಬಿಸಿನೀರೂಟಿಗಳೆಡೆ ಬದಿಯಿರ್ಪಾರ್,
ಎಲ್ಲ ಜನಂಗಳೆ ಕೇಳಿಮಿದನ್.

ಮಾಲಿಸ್ ಕೊಲ್ಲಿಯ ಮೇಲೋಯಿೞಿದ
ನಡುಗಡಿಕಡಲಾ ಎಡೆಬದಿಯಿರ್ಪಾರ್,
ಎಲ್ಲ ಜನಂಗಳೆ ಕೇಳಿಮಿದನ್.

ಪೊನ್ನಂಬಿಗಳಾ ಆರ್ತೇಮಿಸಳಾ
ಕಟ್ಟೊಲ್ಮೆಯ ನಾಡೆಡೆಬದಿಯಿರ್ಪಾರ್
ಎಲ್ಲ ಜನಂಗಳೆ ಕೇಳಿಮಿದನ್.

ಹೆಲ್ಲಾಸ್ ನಡೆಯಿಪ ಧರ್ಮೋಪಲದಾ
ಧರ್ಮಗೋಷ್ಠಿಯಾ ಮೀಸಲ್ ಕರೆಯನ್
ಎಲ್ಲ ಜನಂಗಳೆ ಕೇಳಿಮಿದನ್.

೨

ಆಲ್ಕಿಮೆನಾ ಸ್ಯೂಸಿನೊಗೆದ ಮಗನ ಮನೆಗೆ ಕರೆತರಲ್,
ಎಲ್ಲ ಗೆಲ್ಲಗಳಿಂದುರ್ವಿ ಕೊಳ್ಳೆಗಳನ್ ತರುತಿರಲ್,
ನಿಮಗೆ ಎಂದೆ ಪಾಡಿದಪವು ಇನಿದು ಕೊೞಲ ಪಾಟಗಳ್.
ಅಲ್ತು ಅೞಲ ಬಸಿಱಿನಿಂದೆ ಒಗೆದ ಅೞಲ ರಾಗಗಳ್;
ಪಿರಿದು ಸಗ್ಗ ಸೊಗದಿನೆಬ್ಬ್ದ ಲಲಿತ ಮಧುರ ಭಾವಗಳ್.

ಬರ್ಪುದರ್ಕೆ ಮನೆಗೆಯವನ್ ಕಾದಿರ್ದೆವು ನಾಂಗಳುಂ;
ಪನ್ನೆರಡುಂ ತಿಂಗಳಿಂದೆ ಕಾದಿರ್ದೆವು ನಾಂಗಳುಂ.
ಸುದ್ದಿಯೇನುಮಿರದಿರಲ್ಕೆ ಪೋದನೆಂದೆ ಬಗೆದೆವಾಂ;
ಕಡಲ ಒಡಲೆ ನುಂಗಿತೇನೊ ಪೋದನೆಂದೆ ಬಗೆದೆವಾಂ.
ಮಚ್ಚಿನಾಕೆಯವನ ನಲ್ಲೆ ಬಾೞ್ತೆಲ್ಲಂ ಅೞಲಿದಳ್.
ತನ್ನೆರ್ದೆಯೇ ಬಿರಿಯುತಿರಲ್ ಬಾೞ್ತೆಲ್ಲಂ ಅೞಲಿದಳ್.

ಈಗಳೋವೊ ಯುದ್ಧದೇವನೆೞ್ದು ತಾನ್ ಸಿದ್ಧನಯ್.
ಅವಳ ಅೞಲ ಮರ್ವುಪಗಲ ಬಿಗಿದ ಎಲ್ಲ ಗಂಟುಗಳನ್
ಉರ್ಚಿದೊಱೆಯ ಕಯ್ದುವಿಂದೆ ಕಡಿಯೆ ತಾನ್ ಸಿದ್ಧನಯ್.

ಓವೊ ತನ್ನಿ ಮವನನೀಂ, ಓವೊ ತನ್ನಿ ಮವನ ನೀಂ,
ಗಟ್ಟಿಯೋಡೆ ಚುರುಕುಪುಟ್ಟಿ, ತಳ್ವದಿರಿಂ, ತಳ್ವದಿರಿಂ.
ಈಗಳವನ್ ಪೊಱೆಯಿಡುತುಮಿರ್ಪ ದಿವ್ಯದೀವಿಯಿಂ
ಮನೆಗೆಯವನ ತನ್ನಿ ನೀಂ, ತಳ್ವದೆಯೇ ತನ್ನಿ ನೀಂ.
ತನ್ನ ಪಯಣ ತುದಿಯನೆಯ್ದುವನ್ನೆವರಂ ತಳ್ವದಿರಿಂ.
ಬಯಕೆಗವನ ಕರಣ ಗಿಡಿದು ನೆಸ್ಸ ಮೋಡಿಗೊಂಡನನ್,
ಮಾಯೆ ಮರ್ದಿನಿಂದಮರ್ದ ದೊರೆಯನೋವೊ ತನ್ನಿ ನೀಂ.

(ಡಯೊನೀರಿಯ ಮನೆಯತ್ತಣಿಂ ಬರ್ಪಳ್.)

ಡಯೋನಿರಿಯ

ಓ ಎನ್ನ ಕೆಳೆಯರಿರ, ಈಗಳೆಸಕದೊಳ್ ಮೀಱು ಮುಂಬರಿದಿರಲ್,
ಎನ್ನಗೆಯ್ದೆಸಕಕ್ಕೆ ಬಿಗುರ್ತಪೆನ್.

ಮೇಳಂ

ಆದುದೇನೊಡತಿ ?

ಡಯೊನೀರಿಯ

ತಿಳಿದಂತೆ ಏನಿಲ್ಲ. ಎನ್ನ ಬಯ್ಕೆಯಾ ಗೆಲ್ಲಮದು ಕೇಡಿಂಗೆ
ಒಯ್ಯನೆಯೆ ಒಲಿವುದೇನೋ ಎಂಬುವಾರಯ್ಕೆಗೆರ್ದೆಗೆಟ್ಟಿರ್ಪೆನೀಗಳ್.

ಮೇಳಂ

ಹೆರಾಕ್ಲೆಸ್ಗೆ ನೀನಟ್ಟಿದಾ ಮೆಚ್ಚ ಕುಱಿತೇನ್ ?

ಡಯೊನೀರಿಯ

ಅಪ್ಪುದು. ಆ ಕುಡುತೆಯನ್ ಕುಱಿತೆ ಬಂದಿರ್ಪುದೀ ವೆತೆ.
ಆರ್ಗಾದೊಡಂ, ಗೆಯ್ಮೆಯೇನಾದೊಡಂ, ಮುಂದಱಿಯದೆಯೆ
ಕುರುಡು ನುರ್ಗುವುದು ತರಮಲ್ತು. ಎನ್ನ ನಡೆಯಿಂದೆ
ಇದುವೆ ಎಚ್ಚರಿಕೆಯಾಗಲಿನ್ ಮುಂದೆ.

ಮೇಳಂ

ನಿನ್ನಳ್ಕಿಗಡಿಯೇನ್ ? ಪೇೞುವೊಡೆ ಪೇೞೌ.

ಡಯೊನೀರಿಯ

ಏನೊ ನಡೆದಿರಲ್ವೇೞ್ಕುಂ. ಕೇಳ್ದಿಂ ಬೞಿಕ್ಕಂ
ನಂಬುಗೆಗೆ ಮೀರ್ದೊಂದದ್ಭುತಮೆ ಎಂದಾಡುವಿರಿ ನೀಂ.

ಇದೆ ತಾನ್ ಕುಡುತೆಗೊತ್ತಿ ಸುತ್ತಿರ್ದ ಕುಱಿಯ ತುಪ್ಪುಟದ
ನೂಲ ಗಂಟು ಅಱೆತು ಕಾಣದಿರ್ದಪುದು ಕಣ್ಗೆ.
ಆರಿಂದಮೇನ್ ಪಾೞಾದುದಲ್ತು. ತಾನಿರ್ದಱೆಯ ಮೇಲೆ
ತನಗೆ ತಾನ್ ಕರಗಿ ಪುಡಿವುಡಿಯಾಗಿ ಕೆದಱಿರ್ದುದು.
ಅದಱ ಬಗೆ ಪೇೞ್ವೆನಾನ್ ಬಗೆವುಗಲ್ ನಿಮಗೆ. ಬೞಿಕೆ
ನೀಮಱಿವಿರೆಲ್ಲಮಂ. ಕಿಂಪುರುಷನಾ ನೆಸಸ್
ಬರಿನಟ್ಟ ಕೂರಂಬಿನಿಂದಿಱಿವಟ್ಟು ಕೆಡೆದಿರಲ್,
ಅವನಿತ್ತಂದಿನಾ ತಿಳಿವಳಿಕೆಗಳ್ ಚಿತ್ತಭಿತ್ತಿಯ ಮೇಲೆ
ಕೆತ್ತಿದೋಲಿರ್ದಪುವು ಎನಗೆ,—ಮುಱಿಯದಾ ಕಂಚುಪೊನ್
ಮೇಲ್ ಕೊಱೆದ ಕೊಱೆಪದೋಲ್. ನುಡಿನುಡಿಯೆ ನಡೆದೆನೆಂದಂತೆ.

ಮಱೆದಾಣದೊಳ್ ಮುದ್ದೆ ನೆತ್ತರೞ್ದಾ ಮೀಸಲುಡೆಯನ್
ಬಯ್ತಿರಿಸಲುಂ, ಬೆಂಕೆ ಸೋಂಕದಂತುಂ, ನೇಸರ್ವೆಳಗಿಗಂ
ಬಿಸುಪಿಗಂ ತೆಱೆಯದಂತುಂ ಮಡಗಿರ್ದು, ಪೊೞ್ತು ಬರ್ಪನ್ನೆಗಂ
ಕಡೆಗೆ ಕಿಟ್ಟದಂತುಂ ಕಾದೆನ್. ಗೆಯ್ದೆನೀಯೆಲ್ಲಮನ್.
ಬೞಿಕಂ ಪೊೞ್ತು ಪಣ್ತು, ಒರ್ಕಯ್ ಪಿಡಿಯುಣ್ಣೆದುಪ್ಪುಟಮನ್
ಎಮ್ಮದೇ ಕುಱಿಮಂದೆಯಿಂ ಸಮಱಿ ಆರುಮಱಿಯದೊಲ್
ಮನೆಯಗಂ ಕೊಂಡುವೋದೆನ್. ತಳ್ಕಿಱಿದೆನದಱಿಂದೆ ಆ ನೀಳ್ದುಡಿಗೆಯನ್.
ನೇಸರ್ಗೆಡೆವುಗದವೊಲ್ ನೀಂ ಕಂಡ ಪುಡಿಕೆಯೊಳಗಿಟ್ಟು
ಬೞಿಯಮೆಟ್ಕಿರದೆ ಮುಚ್ಚಿದೆನದನ್. ಮಗುೞ್ದು ಮನೆಯಗಂ
ಪೋಗೆ, ಪೇೞಲ್ ಪೆಳರ್ವ ಈ ಕಾಣ್ಕೆಯನ್ ಕಂಡೆನ್.
ಆ ನೀಳ್ದುಡೆಯ ತೊಡೆದಾ ದಾರಗ್ರಂಥಿಯನ್
ಪೆಱವುೞಿವಿಸುಡಿರಲ್ವೇೞ್ಕುಂ. ಉರಿನೇಸಱ ಬಿಸಿಲ ಕಾಯ್ಪಿಂಗೆ
ಎೞೆಗೊಂಡು ಪುಡಿಯಾಗಿ ಉದಿರಿರ್ಪುದಱೆಯ ಮೇಲ್.
ಮರಕುಟಿಗನೆಡೆಯುದಿರ್ದ ಮರವುಡಿಯವೊಲ್ ಮಣ್ಣಮೇಲ್
ಚೆದರಿರ್ದುದು.

ನೆಲದುೞಿತವಾಗಿರ್ದ ಬಣ್ಣಂಪಣ್ತ ದ್ರಾಕ್ಷಿಗಳೊಸರ್ವ ರಸದಂತೆ
ಕೆೞಗೆ ಬಿೞ್ದೊಡನೆ ನೊರೆ ನೊರೆಯ ಗುಳ್ಳೆಗಳ್ ಉಣ್ಮಿದತ್ತು.
ಇದಱಿಂದೆ ತಳವೆಳಗಾದೆನೀಗಳ್. ಎನ್ನೆಸಕದೊಳ್
ದುರಂತಮೇನೋ ಇರ್ಪಂತೆ ಬಗೆವೆನ್. ತನ್ನೞಿವಿಗಡಿಯಾದ
ಎನಗೆ ಎಂತೊಳ್ಪಿತ್ತನೆಸಗಿದಪನಾ ಕಿರಾತನ್ ? ಏಕೆಂತು ಬಗೆವೆನ್ ?
ತನಗೆ ಮೇಲ್ವಿೞ್ದನನ್ ಅೞಿಯೆ ಬಂಚಿಸುತ್ತಿರ್ದನಿನ್ನೆಗಂ ಎಮ್ಮನ್.
ಬೆಳಕಾಯ್ತು ನನ್ನಿ, ಮಿಂಚಿತು ಪದನ್. ಎನ್ನದೆಯೆ ಗೆಯ್ಮೆಯಿಂ

ಅೞಿವೊ ಮೇಣ್ ಉೞಿವೊ ಆತಂಗೆ? ಎನ್ನೊಣರ್ ದಿಟಮೆನಲ್
ಕೂರ್ಗಣೆಗೆ ಬಲ್ಗಾಯಗೊಂಡಿರ್ದನಾ ಕೂಟನ್, ಆೞಿಕಾಱನ್.
ಮುಟ್ಟೆ ಕೊಲ್ವುದಾ ಕಣೆ, ಮಿಗವೊ ಮಾನಿಸನೊ ಏನಾದೊಡೇನ್ ?
ಕಟ್ಟೇಱಿಂದೊಱೆದ ನೆಸ್ಸ ನೆತ್ತರ ನಂಜೆ ಕೊಲ್ವುದೀಗಳ್
ಹೆರಾಕ್ಲೇಸನನ್. ಕೊಲ್ವುದದು—ಬಿಡದೆ ಕೊಲ್ವುದದು—
ಬಲ್ಲೆನ್, ತಪ್ಪದೆಯೆ ಕೊಲ್ಗುಂ! ಏವೆನಾನ್ ? ಇನ್ನುೞಿದಿರ್ಪ
ಬೞಿಯೊಂದೆ.
ತಪ್ಪದಿರೆ ಅವನ ಸಾವು ಅದೆ ಗೞಿಗೆಯೊಳೆ ತಪ್ಪದೆನತುಂ.
ಬಲ್ನಚ್ಚು ಒಳ್ವೆಸರ ನಲ್ನಡೆಯ ಕಳೆದುಕೊಂಡುಂ
ನಾಣ್ಗೆ ಪೆಸರಾಗಿ ಬೞ್ವಳೇನಾವ ಪೆಣ್ಣಾದೊಡಂ ?

ಮೇಳಂ

ನೀನಳರ್ವ ಪಾಡು ತಾನ್ ಎನಿತು ಅರಿಯದಾದೊಡೇನ್ ?
ಘಟನೆ ನಡೆವ ಮೊದಲೆ ನೀನ್ ಎಲ್ಲ ನೆಚ್ಚನುೞಿವುದುಂ
ತಕ್ಕುದಲ್ತು ಎಂಬೆನಾನ್. ಎಂತುವೋವೊ ಒಡತಿ ನೀನ್.

ಡಯೊನೀರಿಯ

ಆವ ಬಗ್ಗೆಯ ನಚ್ಚು ಇನ್ ಆವ ಸೊಗಂ ತರ್ಪುದೌ ?
ನಲ್ಲಱಿಮೆಯ ತಲೆಯ ಚಿಮ್ಮಿ ಸಂಚು ಮಿಂಚಿ ಪೊಂಚಿರಲ್.

ಮೇಳಂ

ತಿಳಿಯದೆಸಪ ತಪ್ಪಿನಿದಿರ್ ಕರಗಿ ಪೋಪುದೆಲ್ಲ ಕೆಳರ್.
ನಿನಗುಮಂತೆ ಅಪ್ಪುದೆನಲ್ ಅೞಲಿ ಬೞಲಿ ನವೆಯದಿರ್.

ಡಯೊನೀರಿಯ

ಅಂತು ಅದನ್ ಬಗೆಯುವರೆ ಅಱಿಯದವರ್ ಬಗೆಯಲಿನ್,
ಪಾಪವಿಡಿದ ಎರ್ದೆಯೆ ತಾನ್ ಬೇಱೆ ಬಗೆಯೆ ತಿಳಿವುದನ್.

ಮೇಳಂ

ನಿನ್ನ ಒಡಲ ಕಂದಗಿದನ್ ಪೇೞದೆಯೇ ಉಸಿಕನಿರಲ್,
ಮೌನಮೆ ತಾನ್ ನಲ್ಲಱಿವಿನ ನಡೆಯೆನಿಪ್ಪುದೀಗಳಿಗೋ.
ಅಯ್ಯಗೆಂದೆ ಅಱಸಿ ಪೋದ ಹಿಲ್ಲಸನೇ ಬಂದನಗೋ.—
(ಹಿಲ್ಲಸ್ ಬರ್ಪನ್.)

ಹಿಲ್ಲಸ್

ಓ ಎನ್ನ ತಾಯೆ! ನೀನ್ ಸಾವುದನ್ ನಾನ್ ಬಯಸಿರ್ದೊಡಕ್ಕುಂ.
ನೀನೆನ್ನ ತಾಯ್ ಆಗದೆಯೆ ಇನ್ನಾರೊ ಪೆಱಳಾಗಿರ್ದೊಡಕ್ಕುಂ.
ಈ ಪಲವಱೊಳ್ ಒಂದು ದಿಟವಾಗಲ್ಕೆರೆದಿರ್ದೊಡಕ್ಕುಂ.

ಡಯೊನೀರಿಯ

ಅಂತೆನ್ನ ತೆಗಟಿಲೇತರ್ಕೆ ಮಗುವೆ ?

ಹಿಲ್ಲಸ್

ಅಱಿತಪೆಯೊ, ಈ ಪಗಲ್ ನೀನ್ ನಿನ್ನ ಪತಿಯನ್, ಎನ್ನಯ್ಯನನ್
ಕೊಂದಿರ್ಪೆಯೆಂಬುದನ್ ! ?

ಡಯೊನೀರಿಯ

ಹಿಲ್ಲಸ್, ಏನುಸಿರುತಿರ್ಪೆ ?

ಹಿಲ್ಲಸ್

ನನ್ನಿಯುಱಿದೇನುಮಲ್ತು. ಅಪ್ಪುದನ್ ಕಂಡಱಿತಿರಲ್
ತಪ್ಪಿಸಲ್ ಅಳವಲ್ತು ಆರ್ಗಾದೊಡಂ.

ಡಯೊನೀರಿಯ

ಅಂತೆಂದೊಡೇನ್ ? ಅಂತೆನ್ನ ಮೇಲ್ ತಪ್ಪುವೊಱಿಪೊಱಿಸಲ್
ನಿನಗದರ ಸಕ್ಕಿಯಾರ್ ?

ಹಿಲ್ಲಸ್

ಎನ್ನ ಕಣ್ಗಳೆ ಸಾಕ್ಷಿ; ಬೇಱಾವ ಸಾಕ್ಷಿಯುಂ ಅಲ್ತು.
ಎನ್ನಯ್ಯನೞಿಯುತಿರ್ಪ ಬೆಂಕೆನೋವನ್ ಕಂಡೆನೀ ಕಣ್ಗಳಿಂ.

ಡಯೊನೀರಿಯ

ಕಂಡನೆಂದೆಯ ಮಗುವೆ ಅವನನ್ ? ಅವನ ಬಱಿಯೊಳೇ
ಆ ಪೊಟ್ತು ಇರ್ದೆಯೇನ್ ? ನಡೆದುದೆಲ್ಲಮಂ ನುಡಿಯ !

ಹಿಲ್ಲಸ್

ಅದನಱಿಯಲಾಟಿಪೆಯೊ ? ಅಂತಿರಲ್ ಕೇಳೆನ್ನ ಪೇೞ್ವುದನ್ :
ಪೆಸರ ಪೊಟಿಲಾ ಯುರಿಥೊಸ್ ಕೊಳ್ವೋಗಿ ಕೊಳ್ಳೆವೋದತ್ತು.
ಅಯೋಬದ ಕಡಲ್ಚಾಚು ಕರೆಯಾ ಸಿನೊವಮ್ಗೆ ಬರ್ಪನ್ನೆಗಂ
ಗೆಲ್ಲದಿಂ, ಕೊಳ್ವೋದ ಕೊಳ್ಳೆಯಿಂ, ಕಾಣ್ಕೆಯಿಂ ಇಡಿಕಿಱಿದು
ನಡೆದನೆನ್ನಯ್ಯನ್. ಇತ್ತಣೊಂದಡವಿವಯಲೊಳ್ ತನ್ನಯ್ಯನಾ
ಸ್ಯೂಸ್‌ಗೆಂದು ಬೇಳ್ಕಟ್ಟೆಯನ್ ವಿೞಸಲ್ ಮಾಡುತಿರ್ಪನ್.
ಇಲ್ಲೆ ಎನ್ನೆಟ್ಟರವ ನಲಿವಿಂಗೆ ಕಣ್ಣಾರೆ ಕಂಡೆನವನನ್ ಮೊದಲ್.
ವಿೞಸಲ್‌ಪೆಂಪಿಂದೆ ಒಂದು ಬಲಿಗಾಣ್ಕೆ ಪರ್ವಮನ್ ನೋನಲ್ಕೆ
ಅನುವುಗೊಂಡಿರ್ದನ್. ಅನಿತಱೊಳೆ ಬೀಡಿಂದೆ ಬಂದನಾ ಲೈಚಾಸ್-೭೦೦
ತನ್ನೆಕ್ಕಟಿಯ ಅರಸಾಳ್, ತನಗೆ ಕಯ್ಯೆಡೆಯಾದ
ಅಸುಗೊಱಿವ ಕೊಡುಗೆಯುಡುಗೊಱಿಯ ಕೊಂಡು, ನಿನ್ನ ಬಯ್ಕೆಗಾ

ಕುಡುತೆಯಂ ತೊಟ್ಟು ಬಲಿಗಾಣ್ಕೆಯೊಳ್ ತೊಡರ್ದು ಮುಂಬರಿದನ್.
ಕಱೆ ಕೊಱೆಗಳೇನುಮಿರದಗ್ಗದೀರಾರೆಟ್ಟುಗಳ್
ಮೊದಲ ಬಲಿಯಿನಲ್ ಕೊಱೆಗೊಂಡುವಯ್. ಬಗೆಬಗೆಯ ಪಲವಿತರ
ಬಲಿಗಾಣ್ಕೆಗಳ್ ಮೊತ್ತಂ ನೂಱಿನಲ್ ಬಲಿಯಾದುವಾ ಬೞಿಕ್ಕಂ.
ಆ ಕೆಂಗುಡಿತೆಯಿಟ್ಟು ಪೇರರಮೆ ಪೆರ್ನಲಿವನಾಂತು
ಅಯ್ಯನುಸಿರಿದನ್ ಬೇಡಿಕೆಗಳನ್. ಹೋಮಾಗ್ನಿ ಜ್ವಾಲೆಗಳ್
ಚರುನೆತ್ತರನ್ ಪೀರುತುಂ, ಪೈನ್‌ಮರದ ರಸಮನ್
ಪಿೞಿಯುತುಂ ಅೞ್ವಿ, ಅವನ ಮೆಯ್ದೊವಲ್ ತೊರೆದತ್ತು ಬೆಮರನ್.
ಅಚ್ಚುಗಾಱನ ಕಯ್ಮೆ ಮೆಯ್ಗಚ್ಚಿಟ್ಟು ಕರುವಿಟ್ಟಂತೆ,
ಆಯವುತೆ ಅವನ ಒಡಲೊಂದೊಂದು ಪಾಳಿಗಂ ಪಗಿಲ್ತು ಪತ್ತಿ,
ಬಲ್ವಿಡಿದಮರ್ಚಿದತ್ತು. ನಂಜೊರೆದ ಕಾೞ್ಪಾವಿನೊಗೆದೊಂದು
ನಂಜಿನಲ್ ನುಂಗಿ ನೊಣೆಯಲ್ ಪರಿದತ್ತು ಒಡಲೊಳ್,
ಅದಱೊಳೊಱೆದೊಂದು ನಂಜು. ಆ ಬೇನೆಗಾಱದೆಯೆ
ಲೈಚಾಸಿಗಾರ್ದೞಚಿದನ್—ನಿನ್ನ ಬೞಿಗೆಯ್ಮೆಗಾ ಬಡವು
ತಾನೇನೊ ಬಯ್ಗುಳ್ ಕೇಳ್ವಾತನೆಂದು. ಆ ಪೞಿಯ ತಂದುದರ್ಕೆ
ಅವನ ಮೇಲ್ ಕಿತವ ಸಂಚನ್ ಪೊಱಿಸಿದನ್. ಒಳಗನಱಿಯದೆಯೆ,
ತನ್ನ ಬಾವನಱಿಯದೆಯೆ ಮಾರ್ನುಡಿದನಾತನ್: ನಿನ್ನ ಕಯ್ಯದೆ ಕಾಣ್ಕೆ;
ನಿನ್ನಿಂದೆಂತೊ ಪಡೆದನದನಂತೆ ಆತಂಗಿತ್ತುದನ್ ಪೇೞ್ದನ್.
ಕೇಳ್ದುದೆ ತಡಂ ಎನ್ನಯ್ಯನದನ್—ಇಬ್ಬದಿಯ ಬರಿಗಳ್
ನುಲಿನುಲಿದು ಬಿಬ್ಬಿರಿಬಿರಿಯುವೊಲ್, ಮೇಲೊತ್ತಿ ಬಂದುದು
ಅತಿ ಸಂಕಟದ ಒಂದು ಉರಿವೊನಲ್. ಕಾಲ್ಪರಡನೊತ್ತಿ
ಬಲ್ವಿಡಿದು ಲೈಚಾಸನನ್, ಕಡಲ ನೊರೆತೆರೆಯ ಮೇಲೆೞ್ದು
ಒಂದು ಕಲ್ಲಱೆಗೆ ಎತ್ತಿ ಜಡಿದನ್, ನುರ್ಗುನುಱಿಯೊಡೆದು
ಸಿಡಿದು ಚೆಲ್ಲಿದುದು ತಲೆಯ ಬುಱುಡೆ. ಮಿದುಳ್ನೆಣವಸೆ
ನೆತ್ತರೊಳಗಾೞ್ದು ಜಿಗಿಲ್ತುದು ತಲೆನವಿರ್. ಅಯ್ಯನಾ ಪುರ್ಚುಬೆಮೆ
ಮೇಣ್ ಲೈಚಸಿನ ದುರ್ವಿಧಿಯಿನಾ ನೆರೆದ ಆಳ್ನೆರವಿ
ಗೋೞ್ಗಱೆದುದತಿವೇಥೆಯಿಂ ಮೇಣ್ ನಿಬ್ಬೆಱಗು ಭಯದಿಂ.
ಆದೊಡೇನ್ ಆರ್ಗಂ ಇದಿರ್ನಿಲ್ವ ಎರ್ದೆಯಾದುದಿಲ್ಲ.
ನೆಲನ ಮೇಲ್ ತುಯ್ದಿಸೆವಟ್ಟು, ಬಾನುದ್ದಮೆೞ್ದು ನೆಗೆದೊಗೆದು
ಲೊಕ್ರೀಸ ಮೇಣ್ ಅಯೋಬದಾ ಭೂಶಿರಂ, ಪ್ರಪಾತ ಪ್ರತ್ಯಂತದಾ
ದಿಕ್‌ದಿಗಂತಗಳನ್, ಚೀರ್ದನಿಯ ಬಲ್ಲುಲಿಗಳಾ ಮಾರ್ದನಿಗಳಿಂ
ಗಿಡಿದು ಆರ್ದನ್. ಇತಿಂತು ಬಲ್ಮೆಯೊಳಸೋರ್ವನ್ನೆಗಂ

ಫಡೆವಿಡದೆ ನೆಗೆದಾರ್ದು, ಅಱಿವೆಂಡಿರೊಡನೆ ಅಸುಗೊಳ್ವ
ಪತ್ತುಗೆಯೊದವಿದರ್ಕಂ, ಒಯಿನಸನ ಮನೆತನದ
ನಣ್ಪೊದವಿದರ್ಕಂ, ಪಲಮೊಗದೆ ಪೞಿದು ಪಾಟ್ಗಱೆದನ್.
ತುತ್ತತುದಿಗೆ ತನಗೆ ಮುತ್ತಿ ಮೊಗಸಿರ್ದ ಕರ್ಬೊಗೆಯ ಗಬ್ಬದಿನ್
ಪೇರೊಗ್ಗಿನೊಳ್ ನಿಲ್ತು ಅೞುತಿರ್ದ ಎನ್ನತ್ತಣ್ಗೆ
ಒಯ್ಯನೆಯೆ ಪೊರಳ್ಚಿದನ್ ತನ್ನ ಪುಡುಕುಂಗಣ್ಗಳನ್.
ಕಂಡೊಡನೆ ಗೆಂಟಂಗೆ ಕರೆದೆನ್ನೊಳುಸಿರ್ದನ್ :
ಎನ್ನ ಕಂದಯ್ಯ, ಬೞಿಗೆ ಬಾರಯ್ಯ. ಎನ್ನದೀ ತೊೞಲ್ಗೆ
ತಲೆಗರೆಯದಿರ್. ಎನ್ನಿಂದೆ ಬಿಡದೆ ಬರ್ದಪ್ಪೊಡಂ ನಿನಗೆ,
ಬಾರಯ್ಯ ಬೞಿಗೆ! ಪೊರಗೆ ಉಯ್ ಎನ್ನನ್. ಇನ್ನಿಲ್ಲಮಾಗುವೆಡೆ
ಉಯ್ದಿರಿಸು ಎನ್ನನ್. ಅದುವೆನ್ನ ಬಯ್ತ ಬಯ್ಕೆಯಿಂದೆನಗೆ.
ನಿನಗೆ ಇನಿತರ್ಕೆ ಎರ್ದೆ ಕರಗದೊಡೆ ಬೇಱೆಡೆಗೆ ಬೇಗಮುಯ್ ಎನ್ನನ್.
ನಾನಿಲ್ಲಿ ಸಾಯೆನ್. ಆತನಾಣತಿಗೆ ತಲೆಯಾಂತು ಪಡಗಿನಟ್ಟದ
ಕಿಟ್ಕುೞಿಯ ಎಡೆಯಿಟ್ಟು ಪುಟ್ಟು ನಡೆಸುತ್ತುಮಾತನನ್
ಕರೆತಂದೆವಿತ್ತಣ ಕರೆಗೆ. ಬೆಂಕೆನೋವಿನಾ ಯಮಯಾತನೆಯನ್
ಅನುಭವಿಸುತ್ತುಂ, ಬಾಯೞಿದು ಪೞಿಯಿಸುತುಮಲ್ಲಿ ಕೆಡೆದಿರಲ್,
ಆತನನ್ ತೆಱೆಗರೆಗೆ ತರ್ಪುದದು ಕರುಣೆ ಕಡಲ್ವರಿವ
ಕಜ್ಜಮಾದತ್ತು. ಇನ್ನುಮೇನ್ ಬರ್ದುಕಿರ್ಪನೋ ಎಂತೊ ನಾನಱಿಯೆನ್.
ಇನಿತಱೊಳೆ ಕಾಣ್ಬೆ ನೀನ್ ಆತನನ್ ತಾಯೆ. ಎನ್ನಯ್ಯಂಗೆ
ನೀನ್ ಗೆಯ್ದುದಿದುವೆ. ಅಱಿತಱಿತೆ ನೆಗೞ್ದಿ ನೀನಿದನ್.
ಅಱಿಕೆಯಾಗಿರ್ಪುದಾ ಅಪರಾಧಮುಂ. ಸೇಡೆರೆವ
ನ್ಯಾಯಮೂರ್ತಿಯುಂ ರುದ್ರಕನ್ನಿಕೆಯರುಂ ಶಿಕ್ಷಿಸುಗೆ ನಿನ್ನನ್!
ಮನ್ನಿಸುಗೆ ದೇವರೆನ್ನನ್! ಇದೆನ್ನ ಎರ್ದೆಯಾೞದಾ ಬೇಟ್ಕೆ.
ಈಯೆಲ್ಲ ಲೋಕದೊಳಗೆಲ್ಲರಿಂ ಮಿಗಿಲ್ ಪೆಂಪಿನಾಳನ್,
ಆರ್ಗೆ ಸರಿದೊರೆಯನೆಲ್ಲಿಯುಂ ಕಾಣೆಯೋ ಅಂತಪ್ಪನನ್,
ಕೊಂದಿರ್ಪೆ ನೀನ್.

(ಡಯೊನೀರಿಯ ಮಾತಿಲ್ಲದೆ ಮನೆಯತ್ತಣ್ಗೆ ತಳರ್ವಳ್.)

ಮೇಳಂ

ಮನೆಗೆ ಪೋಪ ಮೊದಲ್ ನಿನಗೆ ಪೇೞಲೇನುಮಿಲ್ಲಮೇನ್?
ನಿನಗೆ ತಪ್ಪುವೊಱಿಸುತಿರ್ಪ ಆತನದೇ ನೇರಮೆಂದು
ಮಾತಿನಂತೆ ಮಾರ್ನುಡಿಯುತೆ ನಿನ್ನ ಮೌನಮಾಡದೇನ್?

ಹಿಲ್ಲಸ್

ಇನ್ನವಳ್ ಪೋಕೆ. ಎನ್ನ ಕಣ್ ಕಡೆವರಿವನ್ನಮೆಲ್ಲಿ ಪೋದೊಡಂ
ತನಗದೃಷ್ಟಮೊಡನಿರ್ಕೆ. ಎನ್ನ ತಾಯ್—ಆ ಪೆರ್ಮೆಯ
ಪೊನ್‌ಬಿರುದಿಗೇನ್ ತಕ್ಕಳೇ, ತಾಯ್ತನಕೆ ತಗದ ಪೊಲೆಗೆಯ್ಮೆಗಳ
ಗೆಯ್ದ ತಾನ್? ಪೊಡಮಡುವೆನವಳ್ಗೆ! ಎಂತು ಸೊಗಮಿರಿಸಿದಳೊ
ಎನ್ನಯ್ಯನನ್, ಅಂತೆ ಸೊಗಮಿರ್ಕೆ ತಾನುಮಿನ್!

(ಡಯೊನೀರಿಯ ಒಳಗೆಯ್ದುವಳ್, ಹಿಲ್ಲಸ್ ಬೇಱೆದಾರಿಯಿಂ ರಂಗಮಂ ಬಿಡುವನ್.)

ಮೇಳಂ

೧

ಇದುವೆ ಇದುವೆ ತಂಗೆಯರೇ ಅದುವೆ ಪೊೞ್ತು ಬಂದುದಗೋ.
ಅಂದು ಎಂದೊ ಅಂದ ಮಾತು ಇಂದು ಇದಿರ್ ಇರ್ಪುದಿಗೋ.
ನಭದ ವಾಣಿ ನುಡಿದುದಂತು;
ಸ್ಯೂಸದೇವಜಾತಗಂತು:
ಪನ್ನೆರಡಱ ವತ್ಸರದಾ ಪನ್ನೆರಡಱ ತಿಂಗಳೊಳ್,
ತನತು ಎಲ್ಲ ಕಯ್ಮೆಗಳುಂ ತವಿಗುಮೆಂದೆ ತಿಳಿಸಿರಲ್,
ಅದುವೆ ನನ್ನಿ ನೆಱೆದುದಿಂತು;
ಪಡಗು ದಡವನಡರುವಂತು.
ಆಳಱುವ ದಿನದಂದೆ ದಿಟಮವನ ತೊೞ್ತುವೆಸಮಱುಗುಂ.
ನಾಮೆಂತು ನಚ್ಚುವುದೊ ನಮ್ಮೆಱೆಯ ಮಱುಪಗಲ ಕಾಂಬುದನ್?
ನಂಜೊರೆದ ಸಾವು ಮಂಜಾಗಳೇ ಕವಿದು ಬಿಗಿದಿರ್ಪುದು.
ಕಾಳಾಹಿಗರ್ಭದಿಂ ಸಾವುಮಱಿ ಚಿಗಿದು ಒಗೆದಿರ್ಪುದು.
ಕಾಂಟರಿನ ಕಾಟ್ಗಿಯ್ತುವೊಡಲಂಟೆ ಅಗಿದು ತಿನುತಿರ್ಪುದು.
ಪುಸಿಗನಾ ಕರಿಗುರುಳ ರಕ್ಕಸನ ಕೂರ್ಗಣೆಗಳೆಲ್ಲಮುಂ
ಒಡಲಿಡಿದು ಚುರ್ಚುವುರಿವುರಿಗಿರ್ಚು ಸುಡುತಿರ್ಪುದಾತನಂ.

೨

ಓವೋ ಬಡವಳ್ ಒಡತಿಯೆ ತಾನ್
ಮುನ್ನಱಿತಳೆ ತಾನೀ ರೌದ್ರಮನೇನ್?
ಮಡದಿಯ ಬರಿಸಲ್ ಮನೆಗಿನ್ನೊರುವಳ್,
ಕೇಡಡಸುವುದೆಂದನಿತನೆ ಅಱಿತಳ್.
ತಾನೇಂ ಗೆಯ್ದಳೊ ದುಡುಕುತೆ ಗೆಯ್ದಳ್.
ಮುನ್ನಡೆದೆಲ್ಲಂ ತಾನೇಂ ಗೆಯ್ದಳ್?

ಎಂತೋ ಆದೊಂದಸಿರೀಕ್ಷಿತದೊಳ್
ಪೊಂಚಿತು ಮಾರಣ ಮಾಸಂಚಾಗಳ್.
ಇದರ್ಕೆ ಅವಳಾ ಎರ್ದೆಯೇ ಬಿರಿಯದೆ ?
ಇದರ್ಕೆ ಅವಳಾ ಕಂಬನಿ ಸುರಿಯದೆ ?

ಕಣ್ಣೀರ್ ಪೊನಲಿನ ಪೊನಲೇ ಪರಿಗುಂ.
ಮುನ್ನೆ ಮಗೇನನೊ ಕಾಣಲ್ ನೆರೆಗುಂ.
ಆಸುರ ದೌಷ್ಟ್ಯಂ ಅದಱೊಳ್ ತೋರ್ಪುದು.
ಆಗುವುದಿನ್ನುಂ ಕಾಣಲ್ ಬರ್ಪುದು.

ಕಂಬನಿವೊನಲೇ ದಡಗಡಿದುರ್ಕಲ್
ಮಱುಗುವೆವೋ ಎಮ್ಮಿನಿದೊರೆಗೀಗಳ್.
ಪಗೆಯಿಂದೆಂದುಂ ಪಡದಾ ಪಾಡನ್
ಉಣುತಿರ್ಪನೊ ಉರಿನೋವಿನ ನೋವನ್.

ಓವೋ ಗೆಲ್‌ಸಿರಿ ಕಯ್ದುವದೆಲ್ಲಿ ?
ಒಖಿಲೆಯ ಚೆಲ್ವೆಯ ಗೆಲಿದುಂ ಮತ್ತಂ
ಒಲಿದುಂ ತಂದಾ ಪೊಳೆವುರ್ಕೆಲ್ಲಿ ?
ಕಾಣೆವೆ ನಾಮಿಲ್ಲಾರದೊ ಕಯ್ಯಂ ?

ಕಾಣೆವೆ ನಾಮ್ ಇಲ್ಲಾರದೊ ಕಯ್ಯಂ
ಮೋನದೆ ಘಟಿಸಲ್ ಘಟನೆಯಿವೆಲ್ಲಂ ?
ಸಿಪ್ರಿಯ ದೇವತೆ ತಾನೇ ಅಡಿಯಳ್.
ತಾನಾ ದೇವತೆ ಪಿನ್ನೆಲೆಗಿರ್ಪಳ್.

(ಮೇಳದವರ್ ಮುರಿಯೊಡೆವರ್. ಮನೆಯುಗಮೆೞ್ದಿ ದನಿಗಳಿಂದೆ ಮನಂ ಸೆಳೆವಡುವರ್. ಮೇಲೆ ಕಾತರಂಗೊಂಡು ನುಡಿವರ್.)

ಮೇಳಂ

ಎನಗೇನ್ ಬೆಮೆಯೋ; ಮನೆಯೊಳಗೆೞ್ದುಂ,
ಅದೆ ತಾನ್ ಕೇಳ್ದುದು ಗೋೞ್ದನಿಯಹುದೇನ್ ?

(ದಾದಿ ಒಳಗೆ ಅೞ್ವುದು ಪೊಱಗೆ ಕೇಳ್ವುದು)

ಇದೆ ತಾನ್ ಕೇಳ್ದುದು ಮೇಣ್ ಅದೆ ದನಿ ತಾನ್.
ತಪ್ಪಿಲ್ಲದಱೊಳ್ ದಿಟಮದೆ ದನಿ ತಾನ್.

ಒರ್ವರದಾರೋ ಬನ್ನದೊಳಿರ್ಪರ್.
ನಡೆದಿರಲಾರ್ಪುದು ಇನ್ನೇನೀಗಳ್ ?

ಓವೋ ನೋಡಿಂ ದಾದಿಯೆ ಬರ್ಪಳ್.
ಏನನೊ ಪೇಟಲ್ ತಾನೇ ಬರ್ಪಳ್.
ನಲುಗುತೆ ನೋವಿಂ ಆ ಬಡ ಮುದಿಯಳ್
ಒಯ್ಯನೆ ಬರುತಿಹಳೇನನೊ ಪೇಟಲ್.

(ದಾದಿ ಒಳವುಗುವಳ್)

ದಾದಿ

ಹೆರಾಕ್ಲೇಸಿಗಟ್ಟಿದಾ ಪಾಟ್ಗುಡುತೆಯಿಂದಂ ಬಱಿಯ ಕುತ್ತಗಳ
ಮೊತ್ತಮಲ್ತಲ್ಲದೆಯೆ ಮತ್ತೇನುಮಪ್ಪುದಲ್ತೆಂದೆ ಅಱಿತಿರ್ದೆ ನಾನ್.

ಮೇಳಂ

ಓ ಪೆಣ್ ಪೇಟೌ ನಡೆದುದು ಏನ್ ?

ದಾದಿ

ಎಮ್ಮನಿಯೊಡತಿಯೆ ನಡೆದಳ್ ತಾನ್ !
ಪೊಸತಿಲ ಪೊಱಗನೆ ಪಜ್ಜೆಯನೂಱದೆ
ಪೋದಳ್ ತನ್ನಾ ತುದಿವಯಣಂ ತಾನ್ !

ಮೇಳಂ

ಅಹ ಪೇಟ್ ಬಾಟ್ ಮುಗಿದುದೆ ಅವಳಾ ?

ದಾದಿ

ಅಯೊ ಕೇಳ್ ಅದೆ ಕತೆಯನಿತವಳಾ !

ಮೇಳಂ

ಅಹ ಪೇಟ್ ಪೊಂದಿದಳೇ ಎಮ್ಮನಿಯಳ್ ತಾನ್ ?

ದಾದಿ

ಅಯೊ ಕೇಳ್ ಪೊಂದಿದಳಾ ಡಯೊನೀರಿಯ ತಾನ್ !

ಮೇಳಂ

ಓವೋ ವಂಚಿತ ದುರ್ವಿಧಿಯಾತ್ಮಂ !
ಪೊಂದಿದಳೆಂತಾ ಡಾಯೋನಿರಿಯಳ್ ?

ದಾದಿ

ಅಪ್ಪುದು ಇಂತಿದು ಆಸುರ ಕೃತ್ಯಂ.

ಮೇಳಂ

ಚೆಚ್ಚರಮೆಸಗಿದುದೆಂತಾ ಎಸಕಂ ?

ದಾದಿ

ತನ್ನಯೆ ಕಯ್ಯಿನೆ ಉಱಿದಳೊ ಉಸಿರನ್ !

ಮೇಳಂ

ಉಮ್ಮಳದಿಂದಮೊ ಪುರ್ಚಿಂದಮೊ ಮೇಣ್?
ಕೂರ್ಬಗೆಯಾವುದು ಕಯ್ದುವ ಮಸೆಯಿತು?
ಕೂರ್ಗೆಲಸಮನಿದನೆರಡನೆ ಸಾವನ್
ತಾನವಳೊರ್ವಳೆ ಎಸಗಿದಳೆಂತೋ?

ದಾದಿ

ಕಯ್ದುವದೊಂದು, ಪೊಯ್ ತಾನೊಂದು!

ಮೇಳಂ

ಓವೊ ಪೆಣ್ಣೆ ಇರ್ದೆಯಲ್ತೆ ಅಲ್ಲೆ ನೀನ್?
ಪೇೞ ಪೆಣ್ಣೆ ಕಂಡೆಯಲ್ತೆ ರೌದ್ರಮನ್?

ದಾದಿ

ಓವೊ ಅದನ್ ಕಂಡೆನಾನ್; ಬೞಿಯೊಳಿರ್ದೆ ಆಗಳಾನ್.

ಮೇಳಂ

ಅದೇನದೇನ್ ಪೇೞ ನೀನ್ ಗೆಯ್ದಳೆಂತು ತಾನದನ್?

ದಾದಿ

ಬೇಱೆ ಕಯ್ಯದಲ್ಲದೆಯೆ, ಎಲ್ಲ ಎಸಕಮವಳದೆಯೆ.

ಮೇಳಂ

ಎಂತು ಸಾಧ್ಯಮಪ್ಪುದು?

ದಾದಿ

ಇಂತು ನನ್ನಿಯೊರೆವುದು!

ಮೇಳಂ

ಪುದುಮುದವರ್ಕಳ ಪುಟ್ಟಿದ ಕುಡಿಯುಳ್.
ಮುಯ್ಯೞಿವೆರಡುಂ ಪುಟ್ಟಿದೆ ಮನೆಯೊಳ್.

ದಾದಿ

ತಪ್ಪದು ದಿಟಮದು ಸೇಡೇ ಅಪ್ಪುದು.
  ಕಾಣಲ್ಕವಳಾ ಕಯ್ಮೆಗಳನಿತಂ,
ಪೋಗಿರ್ದೊಡೆ ತಾನತ್ತಲ್ ನೀಮುಂ,
  ಗೋೞಿಡುತಿರ್ದಿರ್ ಮಿಗಿಲೆನೆ ಇನ್ನುಂ.

ಮೇಳಂ

ಇಂತಿದು ಕೀೞ್ಮೆಯ ಎಸಕದ ಮಸಕಂ
ಎಂತಾದುದೊ ಪೆಣ್ಣೊರ್ವಳ ಕಯ್ಯಿಂ?

ದಾದಿ

ಅಂತದು ನಡೆಯಲ್ಕಿರ್ದತ್ತನುವುಂ.
ಎಂತದು ನಡೆದುದೊ ಪೇೞ್ವೆನ್ ನಿಮಗಿನ್.
ಬೞಿಕ್ಕೆಯಾಡಿರಿ ಸಟೆದಿಟವುದಱಿನ್.

೨

ನೀಂಗಳೇ ಕಂಡವೊಲ್ ಡಯೊನೀರಿಯ ಒರ್ವಳೇ
ಮನೆಯಗಂ ಬಂದಳ್, ಅಂಗಳದೆ ಕಂಡಳ್;
ಬಿದಿರ್ವಾಸನನುಗೆಯ್ದು, ಪೆತ್ತಯ್ಯನೆಡೆವೋಪ,
ಸಡಗರದ ಕುಡಿಮಗನ ಅಂಗಳದೆ ಕಂಡಳ್.

ತನ್ಮಗನ ಕಂಡುದೇ ಮೆಯ್ಗರೆದುಕೊಂಡಳ್;
ತನ್ನ ತಾನ್ ಎಲ್ಲರಿಂ ಮೆಯ್ಗರೆದುಕೊಂಡಳ್.
ಮನೆವೞಿಯ ಬೇಳ್ಕಟ್ಟೆಯೆಡೆ ನಿಲ್ತು ಮಣಿದುಂ,
ಇಂತು ತಾನ್ ಚೀರ್ದಳ್ ಪೇರುಲಿಯೊಳಾರ್ದಳ್.

ಇನ್ನವರ್ಗೆ ಪೂಜೆಯಿಡೆ ಬೞಿಬಾರರಾರುಂ,
ಎಂದು ತಾನ್ ಚೀರ್ದಳ್; ಬಲ್ಲುಲಿಯ ಚೀರ್ದಳ್.
ಮನೆಯೊಳಗೆ ಕೆೞಗೆ ಮೇಲ್ ಮನೆಯೆಲ್ಲ ತೊೞಲ್ದಳ್.
ಅೞುತೞುತೆ ಬಡವು ಪೆಣ್ ಮನೆಯೆಲ್ಲ ತೊೞಲ್ದಳ್.

ತೊೞಲುತ್ತೆ ಅೞುತೞುತೆ ತನ್ನೊಲ್ಮೆಯೆಲ್ಲಮನ್
ತನ್ಕಯ್ಯೆ ಮುಟ್ಟಿದಳ್, ತನ್ನೊಲ್ಮೆಯೆಲ್ಲಮನ್.
ತನ್ನೊಲ್ದ ಆಳ್ಗಳೊಳ್ ಸೇವೆಯಾಳ್ ಒರ್ವಳನ್
ನೋಡಿದಳ್ ಮೇಲೆ ಮೇಲ್ ಅೞಲುರ್ಕೆ ಮೇಲೆ ಮೇಲ್.

ತನ್ನ ಣುಗರಾಟಿಸಿದ ಪಾೞ್ವೋದ ಮನೆದೆಸೆಗೆ,
ಒಳಗುದಿಗೆ ಪಲುಬುತುಂ, ಪಲತೆಱದೆ ಪಲುಬುತುಂ,
ಬೞಿಕಮಾ ಕಾದಲನ ಗೆಡೆಗೊಂಬ ಒಳಮನೆಗೆ
ವಹಿಲದಿಂ ತೆರಳಿದಳ್; ಮಾತಿಲಿಯೆ ತೆರಳಿದಳ್.

ಮಱಿದಾಣದೆಡೆ ನಿಲ್ತು ಬೇಹಿನಿಂದಱಿತೆ ನಾನ್;
ಅವಳೆಲ್ಲ ಚರಿಯೆಯನ್ ಬೇಹಿನಿಂದಱಿತೆ ನಾನ್.
ಮಲಗುವುಡೆಯೆಲ್ಲಮನ್ ಪೊಱದೆಗೆದು ಪರಪಿದಳ್;
ತನ್ನ ಪತಿ ಪವಡಿಸುವ ಪೞ್ಕೆಮೇಲ್ ಪರಪಿದಳ್.

ತನಗೆ ತಾನ್ ಮೇಲ್ವಿಟ್ಟು ಪೊರಳುತ್ತುಮಱಲಿದಳ್;
 ಉರುಳಿಯೊಲ್ ಮೇಲ್ವಿಟ್ಟು ಪೊರಳುತ್ತುಮಱಲಿದಳ್.
ನಲ್ವಾಸಿನೆಡೆವಿಟ್ಟು ಎರ್ದೆಯೊಡೆದು ಅಟ್ಟಳ್;
 ಬಿಸುಗಂಬನಿ ಪೊನಲೇ ಮಿಡಿಮಿಡಿದು ಉರ್ಕಲ್.

೨

ವಂದನೆ ನಿಮಗೆಂದೊಱಲಿದಳಾ ಪೆಣ್;
ಆಱಿದ ಅಱಲಿಂದೊಱಲಿದಳಾ ಪೆಣ್.

ಎನ್ನಯ ಸೊಗದಾ ಓ ಮದುವಾಸೇ,
ದಿವ್ಯಾನಂದದ ನಿದ್ರೆಯ ಪಾಸೇ!

ಮುಗಿದುವವೆಲ್ಲಂ, ವಂದನೆಯವರ್ಗೆ;
ಇದಿಗೋ ಅಂತಿಮ ವಂದನೆಯವರ್ಗೆ.

ತನ್ನೆರ್ದೆ ಮೇಲಣ ಮಿಸುನಿಯ ಪಿಡಿಪನ್,
ನಡುಗುವ ಕಯ್ಯಿಂ ಮಿಸುನಿಯ ಪಿಡಿಪನ್,

ಮಾತಿಲಿಯಾಗುತೆ ಆ ಮೇಲಾ ಪೆಣ್,
ಪಿಡಿದಳ್ ತೆಗೆದಳ್ ಆ ಮೇಲಾ ಪೆಣ್.

ಎಡಗಯ್ದಾಣವ ಬತ್ತಲೆಗೆಯ್ದಳ್;
ತನ್ನೆರ್ದೆದಾಣವ ಬತ್ತಲೆಗೆಯ್ದಳ್.

ಆ ಪೆಣ್ ಬಗೆಯಾ ಒಣರ್ಕೆಯಱಿಪಲ್,
ಬಡವಳ್ ಅವಳಾ ಅಱಿಪಾಡೊರೆಯಲ್,

ಆ ಪೆಣ್ ಮಗನೆಡೆಗಲ್ಲಿಂದೋಡಿದೆ;
ವಹಿಲದಿನೋಡಿದೆನಲ್ಲಿಂದೋಡಿದೆ.

ಕಾಣುವ ಕಾಲಕೆ ಮೊದಲೇ ಮಗನನ್,
ಕತೆಯೇ ಮುಗಿದುದು; ಮುಗಿದುದು ಎಲ್ಲಂ.

ಕಂಡೆವೊ ಅವಳನ್ ಕಣ್ಣೆರ್ದೆ ಒಡೆಯಲ್;
ಸೆಡೆವಾ ನೋಟಕೆ ಕಣ್ಣೆರ್ದೆ ಒಡೆಯಲ್.

ಒಡಲೊಳ್ ಪೊಕ್ಕುಂ, ಎರ್ದೆಯೊಳಗಟ್ಟುಂ,
ಒಡಲಂ ಸೀಳ್ದುಂ, ಎರ್ದೆಯಂ ಪೋಟ್ಟುಂ,

ಅಸು ಪಿಱಿದಿರ್ದುದೊ ಇರ್ಬಾಯ್ ಖಡ್ಗಂ;
ನೆತ್ತರ್ ಪೊನಲಿಡೆ ಇರ್ಬಾಯ್ ಖಡ್ಗಂ.

೩

ಏನ್ ಪೇೞಲೇನ್ ಪೇೞಲೇನ್ಪೇೞಲಿನ್ ನಾನ್ ?
ಈ ಘೋರಮನ್ ಕಂಡು ಆ ಬಾಲನೞ್ತನ್ ;
ಬಾಯೞಿದು ಅೞ್ತನ್, ಆ ಬಾಲೆಯಣುಗನ್.

ಅಱಿತನಾ ಹಿಲ್ಲಸನ್ ತನ್ತಪ್ಪುಗೆಯ್ತುಮನ್ ;
ತನ್ಕೆಳರೆ ತಾಯಿಯನ್ ಕೊಂದ ಆ ಘೋರಮನ್.
ಅಱಿತನಾ ಹಿಲ್ಲಸನ್ ತನ್ಕೆಳರೆ ಕೊಂದುದನ್.

ಅಱಿತನಾ ಹಿಲ್ಲಸನ್, ತಡಮಾಗಿ ಅಱಿತನ್ ;
ತನ್ನಬ್ಬೆ ಗೆಯ್ದುದನ್, ಅಱಿಯದೆಯೆ ಗೆಯ್ದುದನ್,
ಪೆಱವರಿಂದಱಿತನ್, ಬಱಿತಪ್ಪುಗೆಯ್ತುಮನ್.

ಇನಿತೊಂದು ಪಾಟ್ಪಾಡು ಸಮನಿಸಲ್ಕಡಿಯನ್,
ಕಾಂಟರಿನ ಕಾಟ್ಗೆಯ್ತುದಾ ಮಂತ್ರದಡಿಯನ್,
ಅಱಿತನಾ ಹಿಲ್ಲಸನ್ ಆ ಘೋರದಡಿಯನ್,

ಸೊಗಯಿಲ್ಲದಣುಗನ್ ಎಡೆವಿಡದೆ ಅೞ್ತನ್ ;
ಎರ್ದೆಯೞಿದೞ್ತನ್, ತಾಯಗತಿಗೞ್ತನ್ ;
ಸೊಗಮಿಲ್ಲದಣುಗನ್ ತಾಯಗತಿಗೞ್ತನ್.

ಬಾಯ್ದೆಱಿಗೆ ಜೋಲ್ದುಂ, ಉರದೆಡೆಗೆ ಬಿೞ್ದುಂ,
ಇಂತೆಂದು ಅಱುಚಿದನ್ ಅವಳೆಡೆಯೆ ಕೆಡೆದುಂ ;
ಅೞಲವೊಱೆಗುರುಳುತುಂ ಇಂತೆಂದು ಅಱುಚಿದನ್ :

ಕೊಂದಿತೆನ್ನೞಿನಿಂದೆ ನಿನ್ನನೀ ತೆಱದಿಂದೆ.
ಕೞಿದರೀ ತಾಯ್ತಂದೆ ಇದೆ ಗೞಿಗೆ ಕಣ್ಮುಂದೆ.
ಎಂದುಮಿನ್ ಕಾಣೆನ್ ಇನ್ನವರ ಕಾಣೆನ್.

ಬೆಳ್ಪತಾನ್ ಒರ್ವನೇ ನಂಬುಗೆಯನಿಡುವನ್ ;
ಮುಂದಾಗುವಾಗಿನೊಳ್ ನಂಬುಗೆಯನಿಡುವನ್.
ಮಱುಪಗಲ್ ಎಂಬರಾ ಮಱುಪಗಲ್ ಎಂದರೇನ್ ?
ಈ ಪಗಲ್ ಸೊಗಂಗಳೆಯುವನ್ನೆವರಮನಿತುಂ,
ಬಱಿಬಱಿದು ತೆಱತೆಱವು—ಎಂದಱಿಗೆ ಅನಿಬರುಂ.

ಮೇಳಂ

೪

ಈಗಳ್—

ಇರ್ಕಡೆಯಱಿವುಂ, ಇರ್ಬಗೆಯೞಲುಂ,
ಎಲ್ಲಿಂದೞುವಂ ? ಏತರ್ಕೞುವಂ ?

ಇದರೊಳ್—

ಇದುವೋ ಅದುವೋ, ಆವುದು ಭಾರಂ?
ಎಂತಿದನಱಿವಂ? ಏನೆಂದಱಿವಂ?

ಇತ್ತಲ್—

ಕಣ್ಣಿದಿರಿಂತಿದು; ಬರ್ಪುದು ಅಂತದು;
ಮುನ್ ಇನ್ ಎಂತೋ? ಇನ್ ಏನ್ ಎಂತೋ?

ಇನ್ನುಂ—

ಕಾಣಲ್ ಅಪ್ಪುದು, ತಳುವಲ್ ಬಪ್ಪುದು,
ಇಬ್ಬಣಮಲ್ತೇ? ಇಕ್ಕುಟಮಲ್ತೆ?

೫

ಓವೋ ಗಾಳಿಯೆ ಬೀಸಯ್ ಬಿಱುಬಿನ್..
ತೊಳೆ ನೀನೆಮ್ಮನ್, ನೇರ್ಪಡಿಸೆಮ್ಮನ್.
ಈ ಮನೆ ಪೊಲೆಯನ್ ಸ್ವಚ್ಛಂದೊಳೆಯಯ್;
ಶುದ್ಧ ಶ್ವಾಸದೆ ಸ್ವಚ್ಛಂದೊಳೆಯಯ್.

ಓವೋ ಗಾಳಿಯೆ ಬೀಸಯ್ ಬಿಱುಬಿನ್.
ಬೇಱಿಯೆ ನಾಡಿಗೆ ಉಯ್ ನೀನ್ ಎಮ್ಮನ್;
ಇಲ್ಲಮೊ ನಾಮಿನ್ ಸಾವುದೆ ದಿಟಮಯ್;
ಭಯಗರ ಬಡಿಯಲ್ ಸಾವುದೆ ದಿಟಮಯ್.

ಹೆರಾಕ್ಲೆಸ್ ಶೂರನ ಬಾನ್ದೊರೆಮಗನಾ,
ಈಯೆಡೆ ಬರಿಸಲ್ ಇದಿರೊಳ್ ಅವನಾ,
ಬರ್ದುಕಲ್ ನೆರೆಯದ ನೋವುರಿ ಪಾಸೊಳ್,
ಕೆಡೆದಱಿಪಾಡಿನ ಅರಸನ ಕಾಣಲ್,

ಆಱಿದೆ ನಾಮಿನ್ ಸಾವುದೆ ದಿಟಮಿನ್.
ಆಡಲ್ ನೆರೆಯದ ದುರಂತದೃಶ್ಯಂ!
ಮಾನುಷಮಲ್ಲದ ಮಾರಣದೃಶ್ಯಂ!
ಓವೋ ಗಾಳಿಯೆ ಬೀಸಯ್ ಬಿಱುಬಿನ್.

ಗೆಂಟಂಗಿದೊ ಇದೊ ನೋಟದ ಘೋರಂ!
ದುಕ್ಕದ ಪಕ್ಕಿಗಳೆನೆ ನಾಂ ಅೞುವಂ.
ಪೊಱಬಿಗರಾರೋ ಎಡೆಯೊಳ್ ಬರ್ಪೊಲ್
ಪಜ್ಜೆಯ ಸೊಪ್ಪುಳ್ ಕಿವಿಯೆಡೆ ತಾಂಗಲ್,

ಅದೊ ಅದೊ ಬರ್ಪರ್, ದೊರೆಯನ್ ತರ್ಪರ್;
  ಒಯ್ಯನೆ ಉಡುಗಿತು ನುಡಿಯುವ ನುಡಿ ತಾನ್.
ಅೞ್ಕಱ ಪೊಱೆಯನ್ ಮೋನದೆ ಪೊಱುವರ್.
  ಒಯ್ಯನ್ ಉಡುಗಿತು ನಡೆಯುವ ನಡೆ ತಾನ್.
ನಡೆವರಿದೇಕಿಂತೀ ತೆಱನೀಗಳ್?
  ಬರ್ದುಕಿರ್ಪನೊ ಎಮ್ಮೆಱೆಯನ್ ಈಗಳ್?
ಓವೋ ಪೇೞಿಯ್, ತಳ್ವುದು ಏನಿನ್?
  ಕೆಂದಿಹನೇ ತಾನ್ ಪೊಂದಿದನೇನಿನ್?

(ಹೆರಾಕ್ಲೆಸನನ್ ಮಂಚಿಲೊಳ್ ತರ್ಪರ್. ಪಿರಿಯನೊರ್ವನ ಮೈಗಾಪಿ ಗಿರ್ಪನ್. ಹಿಲ್ಲಸ್ ಪಿಂಬಡಿಂ ಬರ್ಪನ್)

ಹಿಲ್ಲಸ್

ಅಯ್ಯೋ ಎನ್ನ ಪೆತ್ತಯ್ಯನೇ, ಪೋದೆನ್, ಪಾೞಾದೆನ್!
ನೀನಿಲ್ಲದೆನ್ನ ಬರ್ದುಕೇನ್? ಅಕ್ಕಟಾ ಎನ್ನಯ್ಯನೇ!

ಪಿರಿಯನ್

ಅೞವೇಡಯ್ಯ ಮಗುವೆ; ನೀನೞ್ತು, ಅವನಾೞಿದೞಲನ್
ಕೆರಳ್ಚುವಯ್! ಪೞಿಕೆಳರನೂದಿ ಕಿಡಿಯುಗುಳ್ಚುವಯ್!
ಮುಚ್ಚೆಯೊಳ್ ಮುೞುಗಿರ್ಪನ್; ಬರ್ದುಕಿರ್ಪುದೇನೊ ದಿಟಂ.
ಒಂದರೆವೊೞ್ತು ತುಟಿಯ ಪಿಟ್ಟೆನ್ನದಿರ್.

ಹಿಲ್ಲಸ್

ಉಸಿರೊಡನೆ ಇರ್ಪನೇ ಪೇೞಿಂ?

ಪಿರಿಯನ್

ನಂಬೆನ್ನ ಪೇೞ್ವುದನ್; ಬಾೞ್ಗೊಡಿ ಇರ್ಪನ್, ನಿದ್ರೆಯೊಳಗಿರ್ಪನ್,
ಎೞ್ಚಿಸದಿರ್, ಇಲ್ಲ, ಎೞ್ಚಿಸುವೆಯಾತಂಗೆ ನೋವಿನುರಿಯನ್,
ಆ ಸಂಕಟಜ್ವಾಲೋರ್ಮಿಮಾಲೆಗಳ್ ಎರ್ದೆಬುಡವ ಬಗಿಬಗಿದು
ಚುರ್ಚುವುದು, ಬರ್ಪಾಗಳುಂ ಅಂತೆ ಬರ್ಪಾಗಳುಂ!

ಹಿಲ್ಲಸ್

ಈ ಬಲ್ಬಡಿತಮನ್ ಎಂತು ನಾನ್ ಆಂಪೆನ್?
  ಬಿರಿದೊಡೆವುದಯ್ ಎರ್ದೆಯ ಕೋಟರಂ!

ಹೆರಾಕ್ಲೆಸ್

(ಎೞ್ಚಱುತ್ತುಂ) ಅಯ್ಯೋ ದೈವಮೆ, ಅಕಟಾ ದೈವಮೇ! ಎಲ್ಲಿರ್ಪೆನಾನ್?
ಕಡೆಯಿಲ್ಲದೀ ಸುಡುನೊವಿನುರಿಚಟ್ಟೆದಿದಿರೊಳ್ ಆರಿಂತು
ನಿಂತು ಕಾಯುತ್ತಿರ್ಪರೀಗಳ್? ಕಡುನನ್ನಿ ಬಿಡದೆ ಪಲ್ಗಡಿಯುತ್ತಿದೆ.—

ಓವೋ ರೂಕ್ಷಮೇ!

ಪಿರಿಯನ್

ಅವನ ನಿದ್ರೆಯನಿಂತು ತನತು ಕಣ್ಮಿದುಳಾಱದಿಂ
ಕೆದಱಿ ಕೆರಳ್ಚದೆಯೆ, ಕೆಮ್ಮನಿರೆಯೊಳ್ಳಿತೆಂದು ನಾನ್ ನಿನಗೆ
ಪಿನ್ನೊರೆಯಲಿಲ್ಲೇನ್?

ಹಿಲ್ಲಸ್

ಕರುಣೆ ತೆಱೆವೊಱೆವ ಈ ಕೂರ್ನೋಟಮನ್ ನೋಡಲಾಱೆನ್!

ಹೆರಾಕ್ಲೆಸ್

ಇಂತಿದನ್, ಈ ಮೆಚ್ಚ ಪಡೆಯಲೆಂದೇನ್, ನಾನ್ ನಿನಗೆ
ಸಿನೊವಂ ಬೇಳ್ಕಟ್ಟೆಗಳ ಮೇಲ್ ಪಲಪಲವು ಬಲಿಗಾಣ್ಕೆಯಿತ್ತೆನ್?
ಇಂತೀ ನೀಚನಾರಕತೆಗೆಡೆವಿಟ್ಟು, ಪಾಱ್ಪೋಗಲೆಂದು,
ಆ ಮರುಳ್ವಗೆಯ ಸಂಕಟದ ಚರಮಸೀಮೆಗಡಿಯಪ್ಪ
ಮೃತ್ಯುಪಂಜರಮನೇತರ್ಕೆ ಕಂಡೆನೋ? ಇದರ್ಕೆ
ತಣ್ಪೆಱೆವ ಮರ್ದುಂಟೆ: ಸ್ಯೂಸ್‌ದೇವನನ್ನುೞಿದು ಆವದ್ಭುತಂ
ಆವಂದು ಈ ಪಾೞ್ಗುತ್ತಮನ್ ಒತ್ತರಿಸಲಾರ್ಪುದೋ?

(ಪಿರಿಯನ್ ಇದಿರ್‌ನಿಂದು ನೆರವಪ್ಪನ್)

ಬಿಡಿಮೆನ್ನ ನೋವೋ, ಬಿಡಿಮೆನ್ನ ನೋವೋ, ಕಡೆನಿದ್ರೆಗೆನ್ನನ್!
ಬಿಡಿಮೆನ್ನ ಅಂತ್ಯಕೆನ್ನನ್, ಬಿಡಿಮೆನ್ನ ಶ್ರಾಂತಿಗೆನ್ನನ್!
ನೀಂ ನೆಗೞುತ್ತಿರ್ಪುದೇನ್? ಒಳಗಡಂಗಿ ತೂಂಕಡಿಪ ೧೦೦೦
ನೋವಿನುರಿಯಂ ಕೆರಳ್ಚುವಿರ್—ಅನಿತೆ! ಅಯ್ಯೋ! ಎನ್ನನಿನ್ನುಂ
ಸೀಳಲುಂ ಪೋೞಲುಂ ಮತ್ತಮಿದೊ ಮಸಗುತಿದೆ ಮೇಲೆ ಮೇಲ್.
ಏನಾಳ್ಗಳೋ ನೀಂ? ಯವನರೊಳ್ ನೀಂ ಕೀೞ್ಗಳೊಳ್ ಕೀೞರ್.
ಪಿಸುಣರೊಳ್ ಪಿಸುಣರ್! ಕೆಟ್ಟುದನ್ ಬುಡಮಟ್ಟದಿನ್ ಕಿಡಿಸೆ,
ಆ ಕಡಲಡವಿಯೋ ಕಡೆಯೆನ್ನೆ ಅಸುವನರೆದೆನ್.
ಸಾವೆಡೆಗೆ ನಡೆದೆನ್! ಈಗಳೆನ್ನೇರ್ಗಳಂ ಕರುಣಾರ್ದ್ರಮಾದಗ್ನಿ
ಯಿಂದಮೋ,
ಖಡ್ಗದಿಂದಮೋ, ಅಱಿವ ಗಂಡರಾರ್ ನಿಮ್ಮನಿಬರೊಳ್?
ಓವೋ ಆರ್ ಬರ್ಪರೋ? ಈ ಎನ್ನ ತಲೆಯನ್
ಸುಡುವೇನೆಯುರಿಯೊಡಲಿಂದೆ ಆರ್ ಕೆತ್ತಿಕೆಡಪುವರೋ?
ಆರ್ ಎನ್ನ ಬೞಿವಂದು ಉರುಳ್ಚಿದಪರೋ?—ಅಯ್ಯೋ!

ಪಿರಿಯನ್

ನೀಡೊದವಿಯನ್ ಮಗುವೆ. ಒರ್ವಂಗೆನಗೆ ಗೆಯಲಾಗದೀ ಮಿಗಿಲ್‌ಗಜ್ಜಂ.
ಆತಂಗೆ ನೆರಮಾಗೆ ಎನ್ನಿಂ ನೀನೆ ಬಲ್ಲಾಳ್, ಬಲ್ಲಿದನ್.

ಹಿಲ್ಲಸ್

ಎನ್ನ ತೋಳ್ ತೞ್ಬಿರ್ಪವಾತನನ್. ಆದೊಡಂ ನೋವಿನುರ್ಕಿಯಿಂ
ಬರ್ದುಂಕಿಸಲ್ಕಾತನನ್ ಎನಗಮೇನ್ ಅರ್ಗಾದೊಡಂ ಪೊರ್ಗಲ್ತು.
ಈ ವಿಪತ್ವೈಪರೀತ್ಯಂ ದೈವದತ್ತಂ!

ಹೆರಾಕ್ಲೆಸ್

ಎಲ್ಲಿರ್ಪಯ್ ಮಗುವೆ, ಪಿಡಿದುಕೊಳ್ ಎನ್ನನ್, ಇಲ್ಲಿ–ಇಲ್ಲಿ–
ಮೇಲ್ ನೆಗಪು ಎನ್ನನ್, ಓವೋ ದೈವಮೇ! ಮತ್ತಮಾ ಪಾೞ್ಬೂತು
ಇಕ್ಕುೞಂಬಿಡಿವುದೆನ್ನನ್. ಕೊಳ್ವನವನೆನ್ನ ಉಸಿರನ್.
ಅದಱಿದಿರ್ ಆವುದುಂ ಪಡಿಯಿಲ್ಲ, ನೆರವಿಲ್ಲ.
ಓವೋ ಪಲ್ಲಾಸ್ ಅಥೇನೇ! ಇಲ್ಲೀಗಳೋವೋ
ಕೊೞ್ಗುದಿಗೊಂಡು ಪುಡಿವೊರಳುತಿರ್ಪೆನ್. ಓ ಎನ್ನ ಮಗುವೆ,
ಕರುಣೆದೋರೆನ್ನ ಕಱುವೆ! ಪಿಡಿ ನಿನ್ನ ಕಡುಗಮನ್, ಜಡಿ ಎತ್ತಿ ಎರ್ದೆಯ
ಮೇಲ್.
ನ್ಯಾಯ ನಿರ್ದಾಕ್ಷಿಣ್ಯದಿಂ ದಯೆಗೆಯ್ದು ಪೊಡೆ ಎರ್ದೆಯ ಮೇಲ್.
ಇದೆ ಕೊಳ್ ಇಲ್ಲಿ—ನೆತ್ತರ್ ನೆಣವಸೆಗಳನ್ ಬಸಿದಸಿವ
ಸುಡುನೋವ ಕಡೆಗಣ್ಚು ಬಾ ಕಂದ! ತಾನ್ ಗೆಯ್ದ ಅೞಿಗೆಯ್ಮೆಗಾ
ನಿನ್ನ ತಾಯ್ಗಂ ಇಂತಪ್ಪ ಜಲಕ್ಕನೆಱಗುವ ಸಾವೆ ತಾನ್ ಸಲ್ಗೆ !
ಇಂತೀ ಶಿಕ್ಷೆ ಸಲ್ವುದನ್ ಕಾಣಲಾಟಿಪೆನ್ ಅವಳ್ಗೆ,
ಓ ಇನಿಯ ಸಾವೇ, ಬಾನ್ನಿದ್ರೆಯ ಸೋದರವೇ!
ನಿದ್ರೆಗೆನ್ನನ್ ಕೞಿಪಯ್, ಕಡೆನಿದ್ರೆಗೆನ್ನ ನಿೞಿಪಯ್.
ದುರಂತದೊಂದು ಕೂರ್ಬಡಿತದಿಂ ಪೇರೞಲನಂತ್ಯಗೆಯ್.

ಮೇಳಂ

ಓ ಪೆಣ್ಣೆ, ಈ ಪೇರುಮ್ಮಳದೆ ಎಮ್ಮಱಿಯನಾ ಪಾಡೇನ್?
ಎನಿತು ಪೆರ್ಮೆಯೊಳ್ ಎನಿತು ನೋವಿನಾೞಕ್ಕೆ ಕೆಡೆದನ್?

ಹೆರಾಕ್ಲೆಸ್

ಈಯೊಡಲ್ ಮಯ್ವಾಂತ ಅನಿತುಂ ಪೆಸರ ಪೊಱಿಯೊಳ್ ಇದುವೆ
ಅತ್ಯಾಧಮಂ
ಇರ್ಕಯ್ಗಳುಂ ಪೋರ್ದ ಅನಿತುಂ ಪೆಸರ ಪೋರೊಳ್ ಇದುವೆ ಅತ್ಯಾಧಮಂ!
ಎಂದುಂ ಏವುದುಂ ಇಂತಿರ್ದುದಲ್ತು· ಆರುಮೀ ತೆಱದೆನ್ನ ಮೇಲ್
ಅೞಲ ಬಲ್ಪೊಱಿಯನಡುಕಲಿಲ್ಲ. ಆ ಕಿತವಸ್ಮಿತೆ ಒಯಿನೆಸನ ಮಗಳ್
ಕಿಸುರಸುರ ಪಾೞ್ದುಡಿಗೆಯೊಳ್ ಅಮುರ್ಚುತೆನ್ನನ್ ಅದುವೆ
ಬಲೆಯೊಳಗೆನ್ನ ನೋವೋ ತೊಡರ್ಚಿದಳ್. ಬಲ್ಪಿಡಿವಿಡಿದು

ಎನ್ನೊಡಲ್ಗೆ ಕಚ್ಚಿಱಿಯುತ್ತುಮಾ ಕುಡುತೆ ಪೀರ್ದು ಪಿೞಿದಿರ್ಪುದಯ್
ಎನ್ನ ಪ್ರಾಣಶಕ್ತಿಯನ್ ಇನಿತಿನಿತೆ. ಸೆಳೆದಿರ್ಪುದಯ್
ಎನ್ನ ಉಸಿರಗತಿಯನ್; ಕುಡಿದಿರ್ಪುದಯ್ ಎನ್ನ ಪರಿನೆತ್ತರನ್.
ಪೆಸರಿಲ್ಲದೊಂದು ಸಾವು ಸೆಱೆವಿಡಿದ ಒಡಲಿಲ್ಲದಾಳ್ ಈಗಳಾನ್.
ಆವ ಪೋರಾಳ ಕಯ್ದುವಿಂದಂ, ಆವ ನೆಲವುಟ್ಟು
ದಾನವ ಸೇನೆಯಿಂದಂ, ಆವ ದೈತ್ಯಪ್ರಾಣಿಯಿಂದಂ,
ಯವನ ವೀರನಿಂದಂ ಮೇಣ್ ಆವ ಪೆಱನುಡಿಯ
ಪೊಱಬಿಗನಿಂದೆಯುಂ, ನಾನ್ ಪೋರ್ದ ಆವ ನೆಲನಾವಾಳಿಂದೆಯುಂ
ಇಂತೀ ಪಾೞ್ದಿಸೆಯೆನಗೆ ಬಂದುದಿಲ್ಲಂ. ಆರುಮೀ ಅೞಿಪಾಡನೆನಗೆ
ತಂದರಲ್ಲಂ. ಪೆಣ್ಣೊರ್ವಳ್, ಬಱಿಯ ಪೆಣ್ಣೊರ್ವಳೇ
ಕೆಡಪಿದಳ್ ಸೋಲ್ಗೆ ಎನ್ನನ್ ಕಯ್ದುವಿಲ್ಲದೆಯೆ.
ಎನ್ನೊಡಲ ಕುಡಿಯೆ, ತೋರ ನೀನೀಗಳೆನ್ನ ಮಗನೆಂಬುದನ್!
ಎನ್ನ ಪೆಸರಿಂ ಮಿಗಿಲ್ ಮೇಲ್ವಿಡಿಯದಿರ್ ನಿನ್ನಬ್ಬೆವೆಸರನ್.
ಎೞಿದು ತಾರಯ್ ಅವಳನೆನ್ನೆಡೆಗೆ ಈಗಳ್.
ಆ ನಿನ್ನ ತಾಯನ್ ಉಯ್ದುತಾರಯ್ ನನ್ನ ಕಯ್ಗಳೊಳ್;
ಒಪ್ಪಿಸಯ್ ಎನ್ ಕಯ್ಗೆ ಅವಳನ್. ಈಯೆಡೆಯೆ ಎಡೆಯೆಡೆಯೆ
ನಾಮಿರ್ವರುಂ ಪುಡುಪುಡುನೆ ಪುಟ್ಗುವುದ ನೀನ್ ಕಾಣುವಾಗಳ್,
ಎನ್ನ ಮೆಯ್ ಕಟ್ಟುಮ್ಮಳದೆ ಬೇಯುತ್ತಿರಲ್, ತನ್ನ ತಕ್ಕುಮೆಯ
ತಪ್ಪುದಂಡಣೆಗೆ ಅವಳ ಮೆಯ್ಯುಗ್ಗಿಯೊಳ್ ಸುಟ್ಟು ಸುಲಿಯುತ್ತಿರಲ್,
ಆವುದದಱೊಳಗೆ ಚೆಲ್ವುನೋಟಮೆಂದಾಗಳುಸಿರ್. ಪೋಗು ಮಗುವೆ!
ತಪ್ಪದೆಯೆ ತೆರಳ್! ನೆಲನೆಲ್ಲಂ ಕರುಣೆದೋರ್ವೆನ್ನ ಮೇಲ್ ಕರುಣೆದೋರ್.
ಅೞಿಪಾಡಿಗಿೞಿದೆನ್ನ ಮೇಲ್ ದಯೆಗೆಯ್ಯು ಮಗುವೆ!
ಪೆಣ್ಮಗಳಂತೆ ಅೞಲುತ್ತು ಮಱುಚುತ್ತು ಮಿರ್ಪೆನ್.
ಬೞ್ದಿರ್ಪನಾವನುಂ ಪಿಂದಾವಗಂ ಇಂದಿನೀ ತೆಱದೊಳ್
ಕಂಡನಿಲ್ಲೆನ್ನನ್. ಎನ್ನ ಪಲವೞಲ ಪಯಣಂಗಳೊಳ್
ಆವೞಲುಮಿಂತು ನೋವುನರಲನ್ ತಂದುದಲ್ಲೆನ್ನ
ಬಾಯ್ದೆಱೆಯಿನಾವಗಂ. ಈಗಳಾನ್ ಪೆಣ್ಗೆ ಕಡೆ!
ಇನ್ನುಂ ಬೞಿಗೆ ಬಾರಯ್ಯ! ಬೞಿಯೊಳೇ ನಿಲ್ಲಯ್ಯ.
ಈಯೆನ್ನ ಸುಡುನೋವ ನೋಡು ನೋಡಯ್ಯ ಮಗುವೆ!
ಈಯೆನ್ನ ಕೀೞ್ಪಾಡ ಕಂಡು ಕರಗಯ್ಯ ಕಱುವೆ!
ಈ ಮೇಲುಡೆಗಳನ್ ಕೞಲ್ಚಿ ಎಸೆಯುಯ್! ಇದನ್,
ಈ ಪಾೞ್ವೀದ ಬಾೞ್ವೆಣನ ಕಣ್ದೆರೆದು ಕಾಣ್!

ಅಯ್ಯೋ ಮತ್ತಮದು ಮಱುಕೊಳಿಸಿತಯ್ಯೋ, ಮತ್ತಮದೆ
ಸುಟ್ಟು ಸುಲಿಯುವುರಿ ಅಯ್ಯೋ, ಎನ್ನ ಬರಿಗಳನ್ ಬಗಿದು
ಉಗಿ ಬಗಿ ಮಾಡಿ ಇಡಿದಿಡಿದು ನುರ್ಗುತಿವೆ ಉರಿಗಣೆಗಳಯ್ಯೋ !
ಮುಗಿದಿಲ್ಲಮಿನ್ನುಮೀ ಪೋರ್. ಆ ಕೂಟ ರಕ್ಕಸನ್
ಬಸಿದಸಿದು ಕುಡಿವನಿನ್ನುಂ ಎನ್ನ ಬಾೞ್ನೆತ್ತರನ್.
ಕೊಳ್ಳೆನ್ನ ನೋವೋ ಬರ್ದುದೊರೆಯೆ ! ಜಡಿ ಎನ್ನ ನೋವೋ ದೇವ ಅಗ್ನಿಯೆ!
ದೊರೆಯೆ, ತಂದೆಯೆ, ಕೆಡಪೆನ್ನ ತಲೆಯ ಮೇಲೊಂದು ಸಿಡಿಲನ್.
ತನ್ನಾಳ್ತನದ ಪಡೆಪಿನಿಂ ಪೊರ್ದಿ ಬಲ್ಪಿಡಿದಮುರ್ಚುವುದೊ ಮತ್ತಂ.
ಓವೋ ಕಯ್ಗಳೆ, ಓವೋ ಮುಯ್ಗಳೆ, ಎನ್ನ ಗಂಡೆರ್ದೆಯೆ ಮೇಣ್
ತೋಳ್ಗಳೆ, ಎನ್ನ ನಲ್ದೋಳ್ಗಳೆ, ನೀಮಾದ ಆ ಸಿಂಗಮನ್ ನೆನೆಯಿರೇ !
ಎನ್ನನುೞಿದಾರ್ಗಂ ಸಗ್ಗದಾ ಪಿಶಾಚಪ್ರಾಣಿಯನ್ ನೀಮೆ ಕೊಂದು
ಕೆಡಪಿದುದ ನೆನೆಯಿರೇ ! ಲರ್ನಾದ ಹೈಡ್ರಾವ ನೆನೆಯಿರೇ !
ಆಳ್ ಪಟಿಕೆಗೊಗ್ಗದಾ ಕಟ್ಟಗಡು ಮೇಣ್ ಬಿಱುಬುಱುಬು
ಪೀೞಿಗೆಯ ಅದ್ಭುತಾಸಹ್ಯ ದೈತ್ಯ ಪುರುಷಾಶ್ವಂಗಳನ್,
ಯುರಿಥೊಯದ ಕಾಟ್ಪಂದಿಯನ್, ಅರಿದುಗೆಲ್ಲದಾ ಅಡಿನೆಲನ
ಮೂದಲೆಯ ಬೇಂಟೆನಾಯ್, ಎಕ್‌ಡನದ ಕುನ್ನಿನಾಯನ್
ದೂರಪಡುವಣದ ನೆಲನ ಮೇಲ್, ಪೊಂಬಳವ ಕಟ್ಟೆಚ್ಚಱಿಂ ಕಾವ,
ಅಪೌರುಷ ವಿಚಿತ್ರ ವಿಷ ಸರ್ಪಮನ್, ಇಂತೀ ಮೊೞ್ಗದಾ
ಪಲಪಲವಱೊಳ್ ಕಾದಿ ಕೆಡಪಿದೋರ್ ನೀಂ. ಇನ್ನುಮಾನ್
ಪಾಲ್ಗೊಂಡ ಪಲವುಂ ಪಯಿಂಭಾಸಿರದ ಪೋರ್ಕಳಗಳೊಳ್
ತುದಿಗೊರ್ವನುಂ, ಆವನುಂ, ಎನ್ನಮೇಲ್ ಗೆಲಿದುಂ,
ಪಡೆದುಂ ಪ್ರಶಸ್ತಿಯುಂ, ಪಿಂದಿರುಗಿ ಗೆಲ್ಗಾಥಮಂ ಪೇೞ್ದನಿಲ್ಲಂ,
ಏನಾಗಿರ್ದೊಡೇನ್ ನಾನ್ ? ಈಗಳ್ ತಿವಳಲುಂ ಆಱದೊರ್ವ ಬಱುವಂ !
ಇಲ್ಲಮೆಯ ನೂಱ್ ! ನೀಮಱಿವಿರಿದನ್. ಈ ಕೈದವಮನ್
ಒಡ್ಡಿದಾಕೆಗೆನ್ನಿಂದೇನೊ ಕಾದಿರ್ಪುದು. ಪೊಱಗೆ ಬರ್ಕೆ ತಾನ್ ಬದಗೆ !
ಅೞಿಗೆಯ್ಮೆಗೆಯ್ದರನ್ ತಗುವವೊಲ್ ತದೆಯಲ್ಕೆ ಬೞ್ದನ್.
ಮೇಣದನ್ ಮಾಡುತುಂ ಮಡಿದನೆಂದೆಲ್ಲ ನೆಲನಱಿಯುವೊಲ್
ತೋರ್ಪೆನವಳ್ಗೊಂದು ಬೞಿಯನ್ !

ಮೇಳಂ

ಓವೊ ಹಿಲ್ಲಸ್ ! ತಾನ್ ಸಾವುದೇ ದಿಟಮಾಗೆ, ನಿನ್ನಿದಿರ್
ಅೞಲನ್, ಪೇರೞಲನಾನ್ ನೋೞ್ಪೆನ್.

ಹಿಲ್ಲಸ್

ಎನ್ನಯ್ಯನೆ, ನಿನ್ನ ಮೌನಂ ಈಗಳೆಡೆಯಿತ್ತಪುದು ಎನಗೆ ನುಡಿಯಲ್ಕೆ.
ಆನೆಂಬುದನ್ ಆಲಿಸಾ. ನಿನ್ನ ನೋವೆನಿತು ಕೂರಿತ್ತಾದೊಡಂ,
ಎನಗೆ ಪಾಟಿಯಪ್ಪುದನ್ ನಿನಗೆ ಪೇಟ್ವೆನ್, ಚುರ್ಚುರ್ವೊಳಗಿರ್ಚುರ
ತರ್ಗೆ ಬಗೆಯ ಕದಡಟಿದು ಕೇಳ್. ನೀನೆಳಸುತಿರ್ಪುದನ್
ನೀನೆ ಅಱಿಯೆ. ನಿನ್ನೆರ್ದೆಯೊಪ್ಪಿದೀ ಸೇಡು ನಡೆವುದಲ್ಲಂ.
ಇದರ್ಕೆ ಮುಳಿಯಲಾಗದು.

ಹೆರಾಕ್ಲೆಸ್

ಏನೆ ಪೇೞ್, ನಿನ್ನೊರೆವ ಒಳ್ನುಡಿಗೆ ಕಿವಿಗುಡಲ್ ಒಳಗು ತಿಳಿಯಿಲ್ಲಮೆನಗೆ.

ಹಿಲ್ಲಸ್

ಎನ್ನ ತಾಯ್—ಎಲ್ಲಿರ್ಪಳೆಂದು ನಿನಗೆ ಪೇಟ್ವೆನ್.
ನಿನಗೆಂದುಂ ಕೇಡೆಣಿಸಿದವಳಲ್ತು ತಾನ್.

ಹೆರಾಕ್ಲೆಸ್

ದ್ರೋಹಿ ! ಅವಳ ಪೆಸರನ್ ಎನ್ನಿದಿರ್ ಆಡಲೆರ್ದೆ ತರ್ಪೆಯೋ,
ನಿನ್ನಯ್ಯನನ್ ಕೊಂದ ಆ ತಾಯ ಪೆಸರನ್ ?

ಹಿಲ್ಲಸ್

ತಾನೀಗಳಿರ್ಪ ತೆಱನನ್ ಕುಱಿತೊರೆಯುವೇಟ್ಕೆನಗೆ

ಹೆರಾಕ್ಲೆಸ್

ಇರ್ಪಳ್ ? ಇರ್ದಳೆಂದೆನ್ನ ಆ ಕೇಟಿಯಂ

ಹಿಲ್ಲಸ್

ಅಂತಲ್ತು. ಇಂದವಳಿರ್ಪ ತೆಱನೊರೆವೆನ್. ನೀನದಱ ಪುರುಳಱಿತು
ಅರಗಿಸಲ್ವೇಟ್ಕುಂ.

ಹೆರಾಕ್ಲೆಸ್

ಪೇಟು, ತಲೆವೋಗವೇಟ್ಕುಮೆನೆ ಪೇಟಿನ್ನ ಮೇಲ್ ಪೊಲ್ಲದನ್.

ಹಿಲ್ಲಸ್

ನನ್ನಿಯಿದು : ಇದೆ ತಾನ್ ಅವಳ್ ಕಟಿದಿರ್ದುದನ್ ಕಂಡೆವಾಂ.

ಹೆರಾಕ್ಲೆಸ್

ಆರ್ ಎರ್ದೆ ತಂದರೋ ಮಡಿಪಲ್ಕೆ ಅವಳನ್ ? ಅದ್ಭುತಂ ಮೇಣ್
ಆಸುರಂ ಈ ಮಾರ್ಪು.

ಹಿಲ್ಲಸ್

ತನ್ನಿಂದೆ ತಾನ್ ಮಡಿದಳ್. ಅದನೆಸಗಲ್ಕಾರುಂ ಪೆಱರಲ್ಲಿರ್ದರಲ್ತು.

ಹೆರಾಕ್ಲೆಸ್

ಎನ್ನ ಕಯ್ಯಿಂದೆ ಅವಳ್ ಸತ್ತಿರ್ದೊಡಕ್ಕುಂ, ಓವೊ ದುರ್ವಿಧಿಯೆ!

ಹಿಲ್ಲಸ್

ನಿನಗೆ ಕೇಳಲ್ಕಿರ್ಪುದಿನ್ನುಂ. ಕೇಳ್ದಮೇಲ್ ಕಿನಿಸನುೞಿವಯ್.

ಹೆರಾಕ್ಲೆಸ್

ಆಗದಾಗದು, ಅಂತೆಂದೊಡೇನ್?

ಹಿಲ್ಲಸ್

ಅಂತು ನೆಗೞ್ದಿಲ್ಲಮುಂ ಅಱಿಯದಾ ಬಱಿತಪ್ಪುಗೆಯ್ತುಂ.
ಒಳ್ಳಿತ್ತನೆಸಗಲ್ಪೋಗಿ ತಪ್ಪನೆಸಗಿದಳ್ ನಿನಗೆ ತಾನ್.

ಹೆರಾಕ್ಲೆಸ್

ಖಳಕಾರ್ಯಮೊಳ್ಳಿತಲ್ತೆ? ನಿನ್ನಯ್ಯನನ್ ಕೊಲ್ವುದದು ಒಳ್ಳಿತಲ್ತೆ?

ಹಿಲ್ಲಸ್

ನಡೆದುದೀ ತೆಱನ್: ನೀನ್ ಮದುವೆ ನಿಲಲಾಟಿಸಿದ ಈ ಕನ್ನೆಯನ್
ಕಂಡು, ನಿನ್ನ ನಿಟ್ಟುಳಿಗೊಳಲ್ಕೆ ಎಸಗಲೆಣಿಸಿದಳ್ ನಿನ್ನ ಮೇಲ್
ಪ್ರೇಮತಂತ್ರಮೊಂದನ್. ಆದೊಡನಿತುಂ ಬೇಱೆ ಬಗೆಯಾದತ್ತು.

ಹೆರಾಕ್ಲೆಸ್

ಪ್ರೇಮತಂತ್ರಮೇ? ಟ್ರಾಕಿಯದೊಳಾರಿಂತು ಬಳಮುರ್ದು ಮಾೞ್ಪವರ್?

ಹಿಲ್ಲಸ್

ನಿನ್ನೊಲ್ಮೆಯನ್ ತನಗೆಂದರಳಿಸಲ್ ಕಾಂಟರಿನ ನೆಸ್ಸಾ
ಪಿನ್ನೊರ್ಮೆ ಮಂತ್ರಮೊಂದನ್ ಬಟಸಲಿತ್ತನ್ ನೆಚ್ಚಿನಲ್.

ಹೆರಾಕ್ಲೆಸ್

ಕಾಂಟರಿನ ನೆಸ್ಸಾ! ಓ ಮಿಟ್ಟುವೆ, ಉಸಿರ್ ಬಸಿವ ಮಿಟ್ಟುವೆ!
ಇದುವೆ ಕೊನೆ. ಬಱಿಯ ಮರ್ಬಲ್ಲದೆಯೆ ಬೆಳಕೆನಗೆ ಇಲ್ಲ.
ಈಗಳಾನ್ ನನ್ನಿಯಱಿತೆನ್. ಪೋಗೆನ್ನ ಮಗುವೆ.
ಸಾರೆಯಾಯ್ತೆನ್ನ ಪೊೞ್ತು, ಚೆಚ್ಚರಂಪೋಗು ಮಗುವೆ.
ನಿನ್ನೊಡವೊಟ್ಟಿದೆಲ್ಲರನ್ ಕರೆದು ತಾ ಎನ್ನೆಡೆಗೆ.
ಸ್ಯೂಸ್ ದೇವನಿನ್ ಸೊಗಮಿಲ್ಲದೊಲ್ದವಳ್ ಎನ್ನ ತಾಯ್
ಆಲ್ಕಿಮೆನಾವನ್ ಕರೆದು ತಾ ಎನ್ನೆಡೆಗೆ. ಮೇಣ್ ನಾನ್ ಮಡಿವ
ಮುನ್ನಂ, ಎನಗೆ ಪೇೞ್ದಿರ್ದ ಪಲವು ಕಣಿಗಳನ್ ಕೇಳ್ವೆ ನೀನ್—ಪೋಗು.

ಹಿಲ್ಲಸ್

ಅವರ್ಕಳಿಲ್ಲಿಲ್ಲಮಿಾಗಳ್. ಕಡಲೆಡೆಯ ತಿರನ್ಸದೊಳ್

ಮನೆಮಾಡಿರ್ಪರಾ ನಿನ್ನ ತಾಯ್ವಿರ್. ಮಿಕ್ಕವರ್ ಥೀಬ್ಸ್
ಪೊಟಿಲೊಳಿರ್ಪರನೆ ಕೇಳ್ದಿರ್ಪೆವು. ನಿನಗೆ ಬೇಟ್ಪುದೇನಿರ್ಪೊಡಂ
ಇಲ್ಲಿರ್ಪ ನಾಮೆ ಮಾಟಿಪ್ಪೆವು.

ಹೆರಾಕ್ಲೆಸ್

ಅಂತಿರಲ್ಕಾಲಿಸಯ್. ಎನ್ನ ಮಗನಾವ ಬಗೆ ಪುರುಳಿನಾದವನೊ
ಎಂಬುದನ್ ತೋರ್ಪ ಪೊಳ್ತಿದುವೆ. ಪಲಗಾಲದಿಂ ಪಿಂತೊರ್ಮೆ
ಪೆರ್ಮೆಯಯ್ಯನ್ ಪೇಟ್ದನೆನಗಿಂತು: ಸಾವು ಬರ್ದುಕಿನ ಸೀಮೆಯನ್
ದಾಂಟಿದೊರ್ವಳನುಟಿದು, ಬಾಟ್ದಲೆಯುಸಿರಿರ್ಯೆವುದುಂ
ಕೊಲಲಾಱದೆನ್ನನ್. ಆ ಕಣಿಯಂತೆ ನಡೆದಿರ್ಪುದನಿತುಂ.
ಇರ್ಪರ್ಗೆ ಅಟಿದರಿಂದಟಿವು ಬರ್ಪುದು. ಕಾಂಟರನ್
ಕೊಲ್ವನೀ ಹೆರಾಕ್ಲೇಸನನ್. ಈ ಪಟಿಯ ಕಣಿ ಆನ್
ಮುನ್ನೊರೆದುದರ್ಕೆ ಸರಿವರ್ಪುದು. ಎನ್ನಯ್ಯನ ನುಡಿಯ
ಪಡಿನುಡಿವ ನುಡಿಯಾಡುವೋಕ್ ಮರದಿಂದೆ ಕೇಳ್ದಿನಿದನ್:
ಎನ್ಮೊಡನಡೆಯುವೀಗಟಿಗೆಯೊಳಗೆನ್ನ ಮೇಲ್ ಪೊಱಿಸಿರ್ದೆಲ್ಲ
ಗೆಲ್ಗೆಯ್ಮೆಗಳಿಗೊಂದು ಸಿದ್ಧಿ ಕಯ್ಸಾರವೇಟ್ಕುಂ;
ಕಷ್ಟಗಳ ಅಡಿಯೆ ಸುಖದ ಮುಡಿಯಾಗವೇಟ್ಕುಂ—ಎಂಬೆನಾನ್.
ಆದೊಡಂ ಇದರ್ಕೆ ಗುಱಿಯೇನ್—ಮಿಟ್ತುವೆ. ಮಡಿದವರ್
ಪಡೆದಪರ್ ತಮ್ಮ ದುಡಿಮೆಗಳಿಂದೆ ಬಿಡುವನ್.
ಈಗಳೆನ್ನ ಋಗ ಮಗುವೆ, ತಗುವವೋಲೆಲ್ಲಮಾಗುವೊಡೆ
ನಿನ್ನ ಸೆರಗಂ ಪಾರ್ವೆನಾನ್. ಆಗದೆಂದಾಡಿ ಕೆರಳ್ಚದಿರು ಎನ್ನನ್.
ಒಪ್ಪು, ನೆರಂಗುಡು ಮಗುವೆ, ನಿನ್ನಟಿಪಾಡಿನಯ್ಯಂಗೆ.

ಹಿಲ್ಲಸ್

ಏನನಾಡುವೆಯೊ ಎಂದಳ್ಕುವನ್. ಎಂತಾನುಮಿಂಬುಕೆಯ್ವೆನ್

ಹೆರಾಕ್ಲೆಸ್

ಮೊದಲ್, ನಿನ್ನ ಕಯ್ ನೀಡೆನ್ನ ಕಯ್ಯೊಳ್.

ಹಿಲ್ಲಸ್

ಏತರ್ಕೆ ಈ ನಚ್ಚು?

ಹೆರಾಕ್ಲೆಸ್

ನಿನ್ನ ಕಯ್ಯನೀಯೆನ್ನ ಕಯ್ಗೆ, ಸಲ್ಲದವಿನಯಂ.

ಹಿಲ್ಲಸ್

ಅಂತಿರಲ್, ಇದೆ ಕೊಳ್ ಇಂಬುಕೆಯ್ವೆನ್.

ಹೆರಾಕ್ಲೆಸ್

ಸ್ಯೂಸ್‌ದೇವನ ಮೇಲೆ ತಲೆಯಾಣೆಯಿಡು.

ಹಿಲ್ಲಸ್

ಏನೆಂದು ?

ಹೆರಾಕ್ಲೆಸ್

ನಿನಗೀವ ಪೆರ್ವೆಸನ ನಡೆಯಿಸಲ್ಕೆ, ಆಣೆಯಿಡು ಸಪ್ರಮಾಣಂ.

ಹಿಲ್ಲಸ್

ಆಣೆಯಿಡುವೆನ್ ; ಸ್ಯೂಸ್‌ದೇವನೇ ಸಾಕ್ಷಿ.

ಹೆರಾಕ್ಲೆಸ್

ಎಡೆಯೆಡರ್ಗಳಿಂ ನೊಂದು ನೀನ್ ತೊಲಗುವೊಡೆ ಅದಱಿಂದೆ ?

ಹಿಲ್ಲಸ್

ಅಡಸವೇನುಂ ಎಡರ್ಗಳ್ ; ಬಾರದದಱಿಂದೆ ತೊಲಗುವೆಸಕಂ ;
ಎಂದವೊಲೆ ಎಲ್ಲಮುಂ ನಡೆಗೆ.

ಹೆರಾಕ್ಲೆಸ್

ಅಂತಿರಲ್ ಒಳ್ಳಿತ್ತು. ಈಗಳ್, ನಲ್ಮಲೆಯಪ್ಪ ಒಯಿಟದ
ಶಿಖರಿಯನ್, ಸ್ಯೂಸ್‌ಪೆಸರ ಪೆರ್ವೆಟ್ಟಗೋಡನ್ ಬಲ್ಲೆಯೇನ್ ?

ಹಿಲ್ಲಸ್

ಬಲ್ಲೆನಾಯಿಡೆಯನ್ ; ನಾನ್ ಪಲರ್ಮೆ ನಿಲ್ತಾ ಬೆಟ್ಟದುದಿ
ಬೇಳ್ಕಟ್ಟೆಯಿಡೆಯನ್.

ಹೆರಾಕ್ಲೆಸ್

ನಿನ್ನಾಯ್ಕೆಯ ನೆರವಿಗರೊಡನೆ ನೀನೆ ಉಯ್ವುದಾ ಎಡೆಗೆ ಎನ್ನನ್.
ಆಯೆಡೆಗೆ ಸಂದ ಮೇಲ್, ಗಟ್ಟಿಯೋಕ್‌ಮರದ ಮೇಣ್ ಬಲ್‌ಬೆಳೆದ
ಕಾಡು ಆಲಿವದ ಕೋಡುಗಳೊಟ್ಟು ಕಡಿದೊಟ್ಟಿ, ಆ ಮುಟ್ಟಿಗೆಯ
ಮೇಲೆನ್ನ ಪಟ್ಟಿರಿಸಿ, ಪೈನಿನುರಿಗೊಳ್ಳಿಯಿಂ ಪೊತ್ತಿಪುದು.
ಉಸಿರದೆಯೆ ಎಸಗುವುದು ಬೆಸನನ್. ಆಯೆಡೆಯೊಳಾರುಂ
ಅೞ್ವುದಾಗದು ಎನಗೆ. ಗೋೞಿಡುವುದುಂ ಸಲ್ಲದೆನಗೆ.
ನೀನೆನ್ನ ಮಗನೆಯಾದೊಡೆ ಮಾತಿಲಿಯೆ ಮಾಡಿದನ್.
ತಪ್ಪಿ ನಡೆಯಲ್ಕಾವಗಂ ನಿನ್ನ ತಲೆಮೇಲ್ ಬರ್ಪ ದುಶ್ಶಾಪಂ,
ಬಿಡದೆ ಬಡಿದಪುದು ಕಡೆಗಾ ನಿಸಿದಿಯಡಿಯಿಂದೆಯುಂ.

ಹಿಲ್ಲಸ್

ಎಂತಪ್ಪ ಕಡುಗೆಯ್ಮೆಯನ್ ವಿಧಿಸುತಿರ್ಪಯ್ ತಂದೆ !

ಹೆರಾಕ್ಲೆಸ್

ತಪ್ಪದೆಯೆ ಆಗಲ್ವೇೞ್ಪುದಿಂತಿದು. ತಪ್ಪಿ ನಡೆಯಲ್ಕೆ
ನೀನ್ ಪೆಱಂಗೆ ಪುಟ್ಟಿದವನ್, ಎನಗಲ್ತು.

ಹಿಲ್ಲಸ್

ಮಾಣ್ ಅಯ್ಯ ಮಾಣ್. ಅಂತಪ್ಪ ನುಡಿಗಳನ್ ಕೇಳೆನಾನ್.
ನಿನ್ನ ಬಾೞಂ ಕೊಳ್ಳಲುಂ, ಬಾೞ್ನೆತ್ತರೊಳೆನ್ನ ಕಯ್ದೊಳೆಯಲುಂ,
ಅಯ್ಯ ನೀನೆಂತು ಬೇೞ್ಪಿಯ್?

ಹೆರಾಕ್ಲೆಸ್

ನಾನದನ್ ಬೇಡೆನ್. ನೀನೀಗಳೆನ್ನ ಬೆಜ್ಜನ್.
ನಿನ್ನ ಕಯ್ಮೆಯದೊಂದೆ ಎನ್ನನೀ ಪಾೞ್ಗುತ್ತದಿಂದೆತ್ತಿದಪುದೀಗಳ್.

ಹಿಲ್ಲಸ್

ಎಂತು? ಬೆಂಕೆಯನ್ ತಗುಳ್ಚಿ ಮೆಯ್ಗೆ ತಣ್ಪೆಱೆಯಲಳವೆ?

ಹೆರಾಕ್ಲೆಸ್

ತಲ್ಲಟಿಸದಿರ್ ಮಗುವೆ, ಪೇೞ್ದುದನ್ ಪೆಱಗಿಕ್ಕದಿರ್.

ಹಿಲ್ಲಸ್

ಪೇೞ್ದೆಡೆಗೆ ನಿನ್ನನುಯ್ಯಲ್ಕಾಗದನೆಲಕ್ಕುಮೇ ಎನಗೆ?

ಹೆರಾಕ್ಲೆಸ್

ಮೇಣ್ ಎನ್ನೆಂದ ಮಾೞ್ಕೆಯೊಳೆ ಮುಟ್ಟಗೆಯ ಸಮೆಯಲ್?

ಹಿಲ್ಲಸ್

ಸಮೆಯಿಪೆನ್, ಅದರ್ಕೆನ್ನ ಬೆಸವಿತ್ತಪೆನ್.

ಹೆರಾಕ್ಲೆಸ್

ಸರಿ, ಸಾಲ್ವುದನಿತು ನಿನ್ನಿಂ ನೆರಂ. ಈ ಪಲವಿರಿಯ
ಪಾೞಿಗಳ ಕೇೞಿಗಳದೊಂದು ಕಿಱಿವೆಸನ್.

ಹಿಲ್ಲಸ್

ಎನಿವಿರಿದು ಬೆಸನಾದೊಡೇನ್? ಪೇೞಿಂ, ಮಾೞ್ಪೆಂ.

ಹೆರಾಕ್ಲೆಸ್

ಯುರಿಥೊಸನ ಮಗಳ್, ಆ ಕೂಸ ಬಲ್ಲೆಯೇನ್?

ಹಿಲ್ಲಸ್

ಅಯೋಲ್?

ಹೆರಾಕ್ಲೆಸ್

ಬಲ್ಲೆಯೆಂದಾಯ್ತು. ನೀನಿದನ್ ಎಸಗಲ್ವೇೞ್ಪುದೆನ್ನಾಸೆ.

ನಾನ್ ಮಡಿದ ಮೇಲ್ ನಿನ್ನಯ್ಯಂಗೆ ನೀನ್ ಪೂಣ್ದ ಪೂಣ್ಕೆಯನ್
ನೆನೆವೆಯಲ್ತೇ? ಈ ಕೂಸ ನಿನ್ನ ಮಡದಿಯೆನೆ ಕೊಳ್.
ನಿನ್ನಯ್ಯಗಾಗಿಯೆ ನೀನಿದನ್ ಗೆಯ್. ಪೆಱರಾರುಮಲ್ತು,
ನೀನೆ ಕೊಳ್ವುದವಳನ್. ಆವಾಗಳುಂ ಎನ್ನ ವಳಿಯಾಗಿರ್ದು
ಎನ್ನನೆಡೆವಿಡದೆ ಇರ್ದಳ್. ಮದುವೆ ನಿಲ್ ಅವಳನೆನ್ನ ಮಗುವೆ.
ಇನಿತೆ ನಾನ್ ಬೇಟ್ಪುದು. ಅನಿತಱೊಳ್ ನಚ್ಚಿನವನಾಗಿರ್ದ
ನೀನ್, ಈ ಇನಿತಲ್ಪ ಕೃತಿಯಂ ಏವುದೆಂದೇಳಿಸಲ್,
ಎನ್ನ ಮೊದಲ ಮನ್ನಣೆಯ ಕಳೆದುಕೊಳ್ವಯ್.

ಹಿಲ್ಲಸ್

ಏನೊರೆಯಲಾರ್ಪೆನ್? ಎಂತುಮಿಾಗಳ್ ನಿನ್ನೆಣಿಕೆಗಳ್ಕುವೆನ್,

ಹೆರಾಕ್ಲೆಸ್

ಏನ್ ಪೇೞುತಿರ್ಪೆ? ಬೞಿಯನಲ್ಲೆಯೋ ಏನ್?

ಹಿಲ್ಲಸ್

ಆರ್ ಅಂತು ನಡೆಯಲಾರ್ಪರ್? ಎನ್ನ ತಾಯ್‌ಗೊಲಿಗೆ,
ಮೇಣ್ ನಿನ್ನದೀ ಪಾೞ್ದೆಸೆಗೆ, ತಾನೆ ನೆರವಾದ, ಆ ಪೆಣನವಳನ್,
ಪತ್ನಿಯೆನೆ ಕೊಳ್ವುದೇ ತಂದೆ? ಸೇಡುಬೂತುಗಳಾತನನ್
ಮರುಳ್ಗೊಳಿಸಿರ್ದೊಡಲ್ಲದೆಯೆ ಮಾಡನಿದನಾವನುಂ.
ಕೆಟ್ಟಪಗೆಯ ಕೆಳೆಯಿಂದಂ ಸಾವುದೊಳ್ಳಿತ್ತು.

ಹೆರಾಕ್ಲೆಸ್

ಎನಗಿದಿರ್ ನುಡಿವೆಯೇನ್? ಸಾವ ಗೞಿಗೆಯೊಳ್‌ಬೆಸೆವೆಯೇನೆನ್ನೊಳ್?
ನಿನ್ನ ಅವಿಧೇಯತೆಗೆ ಬಾನವರ ಸೇಡು ಅಣೆದಪುದು ನಿನ್ನಂ.

ಹಿಲ್ಲಸ್

ನಿನ್ನ ಕಟ್ಟುಮ್ಮಳಕೆ ಅಡಿಮೇಗಿಲ್ಲಮೆಂದಂಜುವೆನ್.

ಹೆರಾಕ್ಲೆಸ್

ನೀನೆ ಎೞ್ಚಿಸುವಯ್ ಎನ್ನ ಒಳಗುದಿಯನೀಗಳ್,

ಹಿಲ್ಲಸ್

ಏವೆನೀಗಳ್? ಆವ ನೇರಕ್ಕೆ ತಿರುಗಿದೊಡಂ ಬಟ್ಟೆದೋರದಿದೆ.

ಹೆರಾಕ್ಲೆಸ್

ನಿನ್ನಯ್ಯನೊಳ್ ಮಿಾಱಿ ನಡೆವನ್ನಮಂತೆಯೇ.

ಹಿಲ್ಲಸ್

ಈ ಪರಿಯ ಕಱಿಗೆಯ್ಮೆಗಾನ್ ಒಪ್ಪಲ್ಕೆವೇಟ್ಕುಮೇನ್?

ಹೆರಾಕ್ಲೆಸ್

ಎನ್ನ ಬಯ್ಕೆಯನ್ ನೆಱಪುವುದು ಎಂತುಮೇನ್ ಕಱಿಗೆಯ್ಮೆಯಲ್ಲ.

ಹಿಲ್ಲಸ್

ಇದು ನಿನ್ನ ಬೆಸನೋ ಮೇಣೆನ್ನ ಪಾಟಿಯೋ ?

ಹೆರಾಕ್ಲೆಸ್

ಅಪ್ಪುದೆರಡುಂ, ದೇವರ್ಕಳೇ ಸಾಕ್ಷಿಯಿರ್ಕೆ,

ಹಿಲ್ಲಸ್

ಮಾಟಿಪ್ಪಿನದನ್. ನಿನ್ನದೆಯೆ ಗೆಯ್ಮೆಯೆಂಬುದರ್ಕೆ ನೀನೆಂದಂತೆ
ದೇವರ್ಕಳೇ ಸಾಕ್ಷಿಯಿರ್ಕೆ. ಅಯ್ಯನಾಣೆಯನೆಂಬುಕೆಯ್ವುದು
ಎನಗೆ ಕಱಿಯಲ್ತು.

ಹೆರಾಕ್ಲೆಸ್

ಅಂತಿರವೇಡ ಎನ್ನಣುಗನ್ ! ಕಟ್ಟಕಡೆಗೀಗಳ್ ಪೊಱ್ತುಗಳೆಯದಿರ್.
ನಿನ್ನ ನಂಬುಗೆಯಂತೆ ನೀನ್ ನಡೆದುಕೊಳ್. ಪೊಸ ಅಟಿಲುರಿಗಳೆಱ್ದು,
ಪೋಱ್ದು, ಪಱಿವಡಿಪ ಮೊದಲ್, ಚಿತೆಗೆನ್ನನುಯ್. ನಿಱಿಸೆನ್ನನ್
ಅದಱ ಮೇಲೆ ಮೆಲ್ಲನೆಯೆ ಮೇಲ್ ನೆಗಪು ಎನ್ನನ್. ತಳ್ವದಿರ್.
ತುತ್ತತುದಿಗೆನ್ನ ನೆಮ್ಮದಿಯ ನೆಲೆಯಿದುವೆ. ಮುಗಿದವು ಎಡರ್ಗಳುಂ,
ಮುಕ್ತನಾ ಹೆರಾಕ್ಲೀಸನುಂ !

ಹಿಲ್ಲಸ್

ತಂದೆಯೇ, ನಿನ್ನ ಬಯಕೆಯೇ ಎಮಗಾಜ್ಞೆ. ಎಮಗೆ ನಡೆಸಲ್ಕೆ
ವೇಱ್ಕುಮಾ ಆಜ್ಞೆಯನ್.

ಹೆರಾಕ್ಲೆಸ್

ಅಂತಿರಲ್, ಇನ್ನುಂ ಒಳಗನೆ ಮಲಗಿರಲ್ ನೋವು,
ತೊಟ್ಟನೆಯೆ ಕಯ್ಕೊಳ್ವುದು ತಕ್ಕುದನ್.

(ಆಳ್ಗಳೊಳ್ ಚಿತೆಯನೆತ್ತಲ್ ನಾಲ್ವರಣಿಯಪ್ಪರ್.)

ಓವೊ ತಾಳ್ಮೆಯೆ, ಎನ್ನ ಬಾಯ್ದೆಱೆಯ ಕರ್ಬೊನ್ನಿಂ ಕಟ್ಟೆ ಬಿಗಿಯಯ್ !
ಅಱಿಯೊಳ್ ಅದನ್ ಮುದ್ರಿಸಯ್; ಉಸಿರ ಸೊಲ್ಲನ್ ಅಡಂಗಿಸಯ್ !
ನಡೆಯೇನೊ ಕಡುಪು, ಕಡೆಯೇನೊ ಪದುಳಂ !

ಹಿಲ್ಲಸ್

ಎತ್ತಿಂ—(ಉಯ್ಯೆಪಡುವುದಾಳ್ವೊತ್ತ ಸಿದಿಗೆ)
ಮನ್ನಿಸಿರೆನ್ನನ್ ಎಲ್ಲರುಮಿಾಗಳ್.
ಮನ್ನಿಸದಾ ಬಾನ್ಬೊರೆಗಳ ಕೆಡುಕನ್,
ನೋಡಿಂ ಅಱಿಯಿಂ ಇಲ್ಲೀ ಕತೆಯೊಳ್.

ಮಕ್ಕಳ ತಂದೆವಿರೆಂಬೆವು ಅವರನ್.
ನಿರ್ಘೃಣರಾಗುತೆ ನೀಟ್ಕರಿಸುವರಯ್,
ಎಮ್ಮ ದುರಂತದ ದುರ್ಘಟನೆಗಳನ್.

ಮುಂದಿನದನಿತುಂ ಮುಚ್ಚಿರಲೆಮ್ಮಿನ್.
ಇಂದಿನದಿದುವೇ ಎಮ್ಮಾ ದುಃಖಂ,
ಕಾಂಬವರುಂಬವರೆಮ್ಮಾ ದುಃಖಂ.

ತಳೆಯಲ್ವೇಟ್ಪುದು ತಪ್ಪದೆ ನಾಂಗಳ್,
ಪೇಟಿಲ್ ಬಾರದ ಆಟದ ಅಟಲನ್.
ಬಾನವರಡಿಯರ್ ಇದರ್ಕೆ ತಾಂಗಳ್.

ಟ್ರಾಕಿಯ ಪೆಣ್ಗಳೆ ತೆರಳಿರ್ ನೀಮಿನ್.
ಪಲಪೊಸ ನೋಟಂ ಕಂಡಿರ್ ನೀಂಗಳ್.
ನಿಮಗಿನ್ ಬಿಡುವು ತೆರಳಿರ್ ನೀಮಿನ್.

ಓವೋ ಸಾವಿನ ಅದ್ಭುತ ಹಸ್ತಂ.
ಮೇಣ್ ಆ ಅಟಲಾ ಪೊಸತಾಕಾರಂ.
ಅಗಣಿತಮೆಟ್ಬಾ ಅಟಲ್ಗಳಪೂರಂ.
ನೀಂ ಕಂಡಿರ್ಪುದು ಅನಿತುಂ ದೈವಂ.

೧೨೬೫

—ಟಿ. ವಿ. ವೆಂಕಟಾಚಲಶಾಸ್ತ್ರೀ

ಶ್ರೀ ರಾಮಾಯಣ ದರ್ಶನದಲ್ಲಿ ವೈದೋರಿರುವ ಸಾಧಕ ಶ್ರೀ ರಾವಣ

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಶ್ರೀ ಕುವೆಂಪು ವಿರಚಿತ ಶ್ರೀ ರಾಮಾಯಣ ದರ್ಶನದಲ್ಲಿ ವೈದೋರಿರುವ ಈ ರಾವಣನೂ ವಾಲ್ಮೀಕಿ ರಾಮಾಯಣದ ಆ ರಾವಣನಂತೆ ಮಹಾಭಕ್ತ. ಬ್ರಹ್ಮನನ್ನು ಮೆಚ್ಚಿಸಿ ಅನೇಕಾನೇಕ ವರಗಳನ್ನು ಪಡೆದಿದ್ದವನು. ತಾನು ಒಲಿದ ದೇವನ ಪ್ರಸನ್ನತೆಗಾಗಿ ತನ್ನ ತಲೆಗಳನ್ನೇ ತಂದುಕೊಡಲು ಸಿದ್ಧನಾದ ವೀರಭಕ್ತ! ಯುದ್ಧಕ್ಕೆ ಹೊರಡುವ ಮುಂಚೆ, ತಾಯಿ ದುರ್ಗೆಯನ್ನು ಒಲಿಸಿಕೊಂಡು ವೈರಿ ಧ್ವಂಸನ ವರಗಳನ್ನು ಪಡೆಯುವ ಉದ್ದೇಶದಿಂದ ದೃಢಮನಸ್ಸಿನಿಂದ ತಪಸ್ಸನ್ನು ಆಚರಿಸುತ್ತಾನೆ. ದೈತ್ಯ ಭಕ್ತನ ಭೀಷ್ಮ ಭಕ್ತಿಗೆ ಮೆಚ್ಚಿದ ಜಗಜ್ಜನನಿ ಪ್ರತ್ಯಕ್ಷಳಾಗುವುದರಲ್ಲಿದ್ದಾಗ, ದೇವಗಣವು ಆಕೆಯನ್ನು ತಡೆಯುತ್ತದೆ. ಆಕೆ ಪ್ರತ್ಯಕ್ಷಳಾಗದಿದ್ದುದನ್ನು ಕಂಡ ದೈತ್ಯೇಂದ್ರ :

" .... ಏಕೆ
ತಡೆಯುತಿಹೆ, ತಾಯಿ ? ಭಕ್ತನ ಧೃತಿ ಪರೀಕ್ಷೆಗೇಂ ?
ಪೂ ಪಣ್ಣು ಬಲಿ ನಿನಗೆ ಸಾಲದಿರೆ, ಇದೆ ನೋಡು,
ಒಂದುರುಳಲಾಯೆಡೆಯೆ ಮತ್ತೊಂದು ಮೂಡುವಾ
ಹತ್ತು ತಲೆಗಳ ವರೆಗೆ ಕತ್ತರಿಸಿ ಕೊಡಲೆನಗೆ
ಇರ್ಪುದಾಯುಶ್ರೀ ! ನಿವೇದಿಸುವೆನಿದೆ ಕೊಳ್ " ೧

ದೇವರಿಗೆ ಹೂವು ಹಣ್ಣು, ಧನ ಧಾನ್ಯ, ಭೂಮಿ ಕಾಣಿಗಳನ್ನು ದಾನವಾಗಿ ಕೊಡುವ ಭಕ್ತರಿಗೇನೂ ಕಡಮೆಯಿಲ್ಲ. ಅಸಂಖ್ಯಾತವಾಗಿ ಸಿಕ್ಕುತ್ತಾರೆ. ತಮಗೆ ಪ್ರಿಯರಾದ ಮಡದಿಯನ್ನೂ ಮಕ್ಕಳನ್ನೂ ದೇವರಿಗೆ ಬಲಿಕೊಡುವಂಥ ಭಕ್ತರೂ ಅಲ್ಲೊಬ್ಬರು ಇಲ್ಲೊಬ್ಬರು ಸಿಕ್ಕುತ್ತಾರೆ. ಆದರೆ ತನ್ನ ದೇವರ ಪ್ರೀತ್ಯರ್ಥವಾಗಿ ತನ್ನನ್ನು ತಾನೇ ಬಲಿಕೊಡುವ, ದೇಹಾರ್ಪಣೆ ಮಾಡುವಂಥ ಶಿಷ್ಯೋತ್ತಮರು ಸಿಕ್ಕುವುದು ದುರ್ಲಭ! ಭಗವಂತ ನಮ್ಮನ್ನು ಒಲಿಯುವುದಕ್ಕೆ ಮುಂಚೆ ನಮ್ಮದೆಲ್ಲವನ್ನೂ ಅವನಿಗೆ ಸಮರ್ಪಿಸಲೇ ಬೇಕು. ಸಂಪೂರ್ಣ ತ್ಯಾಗದಿಂದ ಮಾತ್ರ ದೇವರಿಗೆ ಸಂಪೂರ್ಣ ತೃಪ್ತಿಯಾಗುತ್ತದೆ. ನಮ್ಮ ಎಲ್ಲ ಭೌತಿಕ ಸಂಪತ್ತುಗಳಲ್ಲಿ ನಮಗೆ ಅತ್ಯಂತ ಪ್ರಿಯವಾದುದೆಂದರೆ ಈ ದೇಹ. ಸ್ವರ್ಗ ಸುಖಕ್ಕಿಂತ ಒಂದೇ ಮೆಟ್ಟಲು ಕಡಮೆ

---

೧. ಶ್ರೀ ರಾ. ದ. ಮಹಾ ಸಂಪುಟ ೨. ಶ್ರೀ ಸಂಪುಟ : 'ದಶಾನನ ಸ್ವಪ್ನಸಿದ್ಧಿ' ಪು ೭೬೯.

ಈ ದೇಹಸುಖ. ಅಂಥ ಈ ದೇಹವನ್ನೇ ಸಮರ್ಪಿಸಬೇಕಾದರೆ ಭಕ್ತ ಮಹಾ ಭಕ್ತನಾಗಿರಬೇಕು! ಆದ್ದರಿಂದಲೇ ರಾವಣನ ಈ ಪರಾಭಕ್ತಿಗೆ ಮೆಚ್ಚಿದ ಮಹಾ ದುರ್ಗೆ, ದೇವಗಣದ ತಡೆಯನ್ನೂ ಬದಿಗೊತ್ತಿ ಪ್ರತ್ಯಕ್ಷಳಾಗುವಳು. ದೈತ್ಯೇಂದ್ರನು ಅದ್ಭುತ ಮಹಾ ಸಮಾಧಿಗೊಳಗಾಗುವನು.

ಈ ರಾವಣ ಎಂಥ ಭಕ್ತನೋ ಅಷ್ಟೇ ಶ್ರೇಷ್ಠಜ್ಞಾನಿ. ಜನನ ಜೀವ ಮರಣಗಳ ಸತ್ಯಾರ್ಥವನ್ನು ಅರಿತುಕೊಂಡಿದ್ದ ದೊಡ್ಡ ಜ್ಞಾನಿ. ಜಿಜ್ಞಾಸುಗಳ ವ್ಯಾವಹಾರಿಕ ಅನುಕೂಲತೆಗಳಿಗಾಗಿ ಭಕ್ತ, ಜ್ಞಾನಿ, ಎಂದು ಪ್ರಭೇದಗಳನ್ನು ಮಾಡಿಕೊಂಡಿದ್ದರೂ ಅವರು ಒಂದಕ್ಕೊಂದು ಸಂಬಂಧವೇಯಿಲ್ಲದಂಥ ಪ್ರತ್ಯೇಕ ವ್ಯಕ್ತಿಗಳೇನಲ್ಲ. ಭಕ್ತ ಕೊಟ್ಟ ಕೊನೆಗೆ ಜ್ಞಾನಿಯೆನಿಸಲೇ ಬೇಕು. ಜ್ಞಾನಿ ಕೇವಲ ಶುಷ್ಕಜ್ಞಾನಿಯಾಗಿರಲು ಸಾಧ್ಯವೇಯಿಲ್ಲ. ಅವನ ಜ್ಞಾನ ಭಕ್ತಿಗೇ ಕೊಂಡೊಯ್ಯುತ್ತದೆ. ಆದಕಾರಣ ರಾವಣ ಭಕ್ತನಾಗಿದ್ದರೂ ಪರಮಜ್ಞಾನಿ ಎಂಬುದರಲ್ಲಿ ವಿಶೇಷವೂಯಿಲ್ಲ, ವೈಪರೀತ್ಯವೂಯಿಲ್ಲ. ಬಲ್ಲವರಿಗೆ—ಜ್ಞಾನಿಗೆ—ಗೊತ್ತು :—ಈ ಜಗತ್ತೆಂಬುದು ಒಂದು ನಾಟಕ ರಂಗ, ನಾವೆಲ್ಲ ನಟರು, ಬಾಳೆಂಬುದೊಂದು ನಾಟಕ, ಅದನ್ನು ಆಡಿಸುವವನು ಆ ಸೂತ್ರಧಾರ, ಆ ಸೂತ್ರಧಾರನೇ ಸತ್ಯ. ನಾವೆಲ್ಲ ಅವನ ಛಾಯೆ. ಅವನಾಡಿಸಿದಂತೆ ಆಡುವ ಕೇವಲ ಬೊಂಬೆಗಳು ನಾವು, ಎಂದು ಗೊತ್ತು. ಅದನ್ನೇ ಈ ರಾವಣ ಹೇಳುತ್ತಾನೆ :

> "……………………. ನಿನ್ನ ಲೀಲೆಯನರಿಯೆನೆಂದಲ್ತು.
> ನೀನಾಡಿಸಿದವೊಲೆ ಜಗನ್ನಾಟಕಂ. ನಿನ್ನ
> ಇಚ್ಛಾಸೂತ್ರಮಿತ್ತಲೆಳೆದರೆ ರಾವಣೋತ್ಕರ್ಷ,
> ಅತ್ತಲೆಳೆದರೆ ವೈರಿಯುತ್ಕರ್ಷ! ಪಾತ್ರಮನ್
> ಸೋಲು ಗೆಲು ಸುಖದುಃಖ ಸೂತ್ರಂಗಳಿಂ ಪಿಡಿದು
> ಆಡಿಪುದೆ ನಿನಗೆ ಹರ್ಷ! ಗಾಳಿಪಟಗಳಂ
> ಆಡಿಸುವವೋಲ್!"೨

ನಿಜವಾದ ಜ್ಞಾನಿಗೆ ಚೆನ್ನಾಗಿ ಗೊತ್ತಿದೆ: ಈ ಬಾಳೆಂಬುದು ಕ್ಷಣಿಕ; ಅಶಾಶ್ವತ; ಅನಿತ್ಯ. ಈ ಬಾಳೇ ಸತ್ಯ, ಶಾಶ್ವತ, ಚಿರ—ಎಂಬ ಭ್ರಮೆ—ಮಾಯೆ— ಎಲ್ಲಿಯವರೆಗೆ ಆವರಿಸಿದೆಯೋ ಅಲ್ಲಿಯವರೆಗೆ ಅವನು ಇನ್ನೂ ಅಜ್ಞಾನವಶವರ್ತಿ. ರಾವಣ ಅಜ್ಞಾನವಶವರ್ತಿಯಲ್ಲ, ಯಾಕೆಂದರೆ :

> 'ಬಾಳ್!
> ಕಳ್ಳನೊರೆದೊಂದು ಸುಳ್ಳಿನ ಸಂತೆ! ಬರಿಬೊಂತೆ!
> ಕಡೆಗೆ, ಬೆಂಕಿಯ ಹೊರೆದು, ಬೂದಿ ರಾಸಿಯನುಳಿವ

೨. ಶ್ರೀ ರಾ. ದ. ಮಹಾಸಂಪುಟ, ೨. ಶ್ರೀಸಂಪುಟ, ದಶಾನನ ಸ್ವಪ್ನಸಿದ್ಧಿ: ಪು: ೭೭೩.

ಅರ್ಥವಿಲ್ಲದ ಬಣಗು ಕಂಥೆ! ಇದಕೇಕಿನಿತು
ಚಿಂತೆ. "೩.

ಈ ಸಾಕ್ಷಾತ್ಕಾರವಾಗಬೇಕಾದರೆ, ಹೃದಯಾನುಭವವಾಗಬೇಕಾದರೆ, ಕೇವಲ ಗ್ರಂಥ ಪಠನೆಯಿಂದ ಸಾಧ್ಯವಿಲ್ಲ. ಜೀವ ಈ ಜಗದ ಜಂಜಡ, ಕೋಟಲೆ, ಕಷ್ಟ, ಕಾರ್ಪಣ್ಯಗಳ ಕುಲುಮೆಯಲ್ಲಿ ಬೆಂದು ಉತ್ತೀರ್ಣವಾಗಬೇಕಾಗುತ್ತದೆ. ಜೀವ ಇದುವರೆಗೆ ಯಾವುದನ್ನು ಭ್ರಮಿಸಿ ಬೆನ್ನು ಹತ್ತಿ ಓಡುತ್ತಿತ್ತೊ, ಯಾವ ಸತಿಸುತರು ಬಂಧು ಬಾಂಧವರು ಪರಿವಾರದವರು ಸತ್ಯ ಶಾಶ್ವತ ಎಂದು ಬಿಗಿಯಾಗಿ ಹಿಡಿದಿತ್ತೊ ಅಂಥವರೆಲ್ಲ ಕಣ್ಣೆದುರಿನಲ್ಲೇ ಒಬ್ಬರಾದಮೇಲೆ ಒಬ್ಬರು ಉರುಳುವುದನ್ನು ಕಂಡಾಗ ಜೀವಿಗೆ ಅರಿವಿನ ಅರುಣೋದಯವಾಗುತ್ತದೆ. 'ಮರಣ' ಎಂಬ ದೂತನನ್ನು ಅಟ್ಟಿ, 'ವೈರಾಗ್ಯ' ತನ್ನ ಆಗಮನವನ್ನು ಸೂಚಿಸುತ್ತದೆ. ಇಲ್ಲಿ ರಾವಣನ ಬಾಯಿಂದ ಈ ಮಾತುಗಳು ಬರುವುದು ತಾ ಕಲಿತ ಗಿಳಿಪಾಠವಲ್ಲ. ಸ್ವಾನುಭವ ದಿಂದ ಬಂದ ಸತ್ಯವಾಕ್ಯ. ರಾವಣನ ಜೀವ ತನ್ನ ಪೂರ್ವ ಜೀವನದ ಒಗರು ಹುಳಿಯನ್ನು ತಾನಾಗಿಯೇ ಕಳೆದು ಹಣ್ಣಾಗುವಂಥ ಪರಿಸ್ಥಿತಿಯನ್ನು ಕವಿ ಇಲ್ಲಿ ಸೃಷ್ಟಿಸಿದ್ದಾರೆ. ತನ್ನ ನೆಚ್ಚಿನ ಮಗ ಇಂದ್ರಜಿತು ಐಂದ್ರಾಸ್ತ್ರದಿಂದ ಮಡಿದು ಹೋಗುತ್ತಾನೆ. ಈ ವಾರ್ತೆಯನ್ನು ಕೇಳಿದಾಗ : "ಬುಡ ಸಡಿಲ್ದುರುಳ್ದುದು ದಶಗ್ರೀವ ಧೈರ್ಯಾದ್ರಿ ಶಿಖರದ್ರುಮಂ." "ತನ್ನೊರ್ವನೆಯೆ ಮಗನ ದುರವಸಾನದ ಸಿಡಿಲ ಬಿರುಬಿಂಗಾನಲಾರದೆ ಜಜ್ಝರಿತ ಜೀವಿಯಾದಾ ಮಯನ ನಂದನೆಯ"ನ್ನು ಸಂತೈಸಲೆಂದು ಬಂದವನೇ ಕಣ್ಣೀರ್ಗರೆದು ಗೋಳಿಡುತ್ತಾನೆ. ಹೇಗೋ ಧೈರ್ಯ ವನ್ನು ತಂದುಕೊಂಡು ಮಂಡೋದರಿಯನ್ನು ಸಂತವಿಸುವಷ್ಟರಲ್ಲೇ, ಅತಿಕಾಯನು ಸತ್ತ ಸುದ್ದಿಯನ್ನು ಕೇಳಿ ಜೀವ ಬಿಡುವುದರಲ್ಲಿದ್ದ ಧಾನ್ಯಮಾಲಿನಿಯ ಸುದ್ದಿಯನ್ನು ತಂದೊಪ್ಪಿಸುತ್ತಾರೆ.

"........................ ಏರ ಮೇಲೇರ್ದೊಂಡ ಸಿಂಗದೊಲ್
ಬಾರಿ ಬಾರಿಗೆ ಸುಯ್ಯುತಸುರೇಂದ್ರನೊಯ್ಯನೆಯೆ
ಮಂಡೋದರಿಯ ಮೆಯ್ಯನಿಳುಹಿ—"೪

ಧಾನ್ಯಮಾಲಿನಿ ಇದ್ದೆಡೆಗೆ ಧಾವಿಸಿ ಹೋಗುತ್ತಾನೆ. ಅಲ್ಲಿ ಆಕೆ ಆಗಲೇ ಕೊನೆಯ ಉಸಿರು ಎಳೆಯುತ್ತಿರುತ್ತಾಳೆ. ಅವಳಿಗೆ ಆಗ ಈ ಲೋಕದ ಪ್ರಜ್ಞೆ ಯಾಗಲೀ ಪ್ರಯೋಜನವಾಗಲೀ ಇರುವುದಿಲ್ಲ. ಅವಳನ್ನು ಆಗ ಕಂಡ ರಾವಣನಿಗೆ ಇನ್ನೂ ಈ ಬಾಳಿನ ಬಗ್ಗೆ ಭ್ರಮೆ ಉಳಿದಿತ್ತು ಎಂದಿದ್ದರೆ ವಿಪರೀತವಾಗಿ ತೋರು

೩. ಶ್ರೀ ರಾ. ದ. ಮಹಾಸಂಪುಟ ೨. ಶ್ರೀ ಸಂಪುಟ. "ನೀಂ ಮಹಚ್ಛಿಲ್ಪಿಯೆ ದಿಟಂ" ಪು ೭೩೭.

೪. " " " " ಪು: ೭೩೬.

ತ್ತಿತ್ತು. ಇಂಥ ರಾವಣನ ಬಾಯಿಂದ ಮೇಲೆ ಹೇಳಿದ ಮಾತುಗಳು ಬರುವುದು ಕೇವಲ ತರ್ಕಬದ್ಧವಾಗಿದೆ.

ಜ್ಞಾನಿಯಾದವನಿಗೆ ಇನ್ನೂ ಒಂದು ಸತ್ಯ ಚೆನ್ನಾಗಿ ಗೊತ್ತಿದೆ. ಆಗಿರುವುದೆಲ್ಲವೂ ಅದೊಂದರಿಂದಲೇ, ಎಂಬುದು ಆ ಸತ್ಯ. ಅದನ್ನೇ: 'ಈಶಾವಾಸ್ಯಮಿದಂ ಸರ್ವಂ' ಎಂದು ಉಪನಿಷತ್‌ಕಾರರು ಕರೆದಿದ್ದಾರೆ. ಬ್ರಹ್ಮ, ಪರಮ ಪುರುಷೋತ್ತಮ ಶುದ್ಧಚಿನ್ನವೆಂದು ಭಾವಿಸಿದರೆ, ಸೃಷ್ಟಿ, ಪಕೃತಿ ಎಂಬುದು ಆ ಚಿನ್ನದಿಂದಲೇ ಮಾಡಿದ ಒಡವೆಗಳು. ಈ ಒಡವೆಯಲ್ಲಿ ಮಿಶ್ರಣ (alloy) ಇರುವುದರಿಂದ ಬೇರೆಯಾಗಿ ತೋರುತ್ತದೆ. ಆದರೆ ವಾಸ್ತವವಾಗಿ "ಈಶಾವಾಸ್ಯಮಿದಂ ಸರ್ವಂ" ಎಂಬುದೇ ಸತ್ಯ. ಕತ್ತಲು ಬೆಳಕು, ಉಷ್ಣ ಶೀತ, ಪಾಪ ಪುಣ್ಯ, ಸುಖ ದುಃಖ, ಉಚ್ಚ ನೀಚ-ಎಲ್ಲದೂ ಅದರಿಂದಲೇ ಬಂದುದು. ಈ ಸತ್ಯದೃಷ್ಟಿಯಿಂದ ನೋಡಿದರೆ ರಾವಣನೂ ರಾಮನೇ, ರಾಮನೂ ರಾವಣನೇ. ರಾವಣ 'ಶಿವೋಹಂ' ಎಂದು ಭಾವಿಸಿದ್ದು ಅವನ ಮತಿಭ್ರಮೆಯಲ್ಲ. ಸಾಕ್ಷಾತ್ ಶ್ರೀ ರಾಮಚಂದ್ರನೇ ಆ ಮಾತನ್ನು ಹೇಳುತ್ತಾನೆ:

'ನಾನೆ ಅವನಲ್ಲದಿರೆ ಆ ದಶಗ್ರೀವಂಗದೇನ್
ಸೀತೆಯನ್ನೊಲಿವುದುಂ, ಮೇಣವಳನುಯ್ವುದುಂ,
ಕೇಳ್, ಮೊಗ್ಗೆ ?" ೫

ಎಂದು. ಹೀಗೆ ಅವನೂ ಇವನೇ; ಇವನೂ ಅವನೇ — ಎಂಬುದು ಸತ್ಯವಾದರೆ, ಅದರಲ್ಲಿ ಕೊಲ್ಲುವವರು ಯಾರು? ಕೊಲ್ಲಿಸಿಕೊಳ್ಳುವವರು ಯಾರು? ಬದುಕಿದವರು ಯಾರು? ಸತ್ತವರು ಯಾರು? ಯಾರನ್ನು ಯಾರು ದ್ವೇಷಿಸುವರು? ಆದ್ದರಿಂದಲೇ ರಾವಣನು ಮಡಿದರೂ ರಾಮನೇ ಮಡಿದಂತೆ; ರಾಮ ಮಡಿದರೂ ರಾವಣನೇ ಮಡಿದಂತೆ. ಈ ಪರಮ ಸತ್ಯವನ್ನು ಶ್ರೀ ರಾಮಾಯಣ ದರ್ಶನದ ಕರ್ತೃಗಳು ಅನ್ಯಾದೃಶವಾಗಿ ಮೂಡಿಸಿದ್ದಾರೆ. ರಾಮನು ಬಿಟ್ಟ ಬ್ರಹ್ಮಾಸ್ತ್ರವು ರಾವಣನ ಎದೆಯನ್ನು ನೆಟ್ಟಾಗ, ರಾಮನೇ ಆ ಬಾಣಪುಂಖದ ಮೂಲಕ ಪ್ರಾಣ ರೂಪದಲ್ಲಿ ರಾವಣನ ಎದೆಯನ್ನು ಹೊಗುತ್ತಾನೆ. ಎದೆಯಲ್ಲಿ ನೆಟ್ಟ ಬಾಣವನ್ನು— ರಾಮನ ಪ್ರಾಣವನ್ನು—ಹಿಡಿದುಕೊಂಡ ರಾವಣ: "ಸೆರೆ ಸಿಲ್ಕಿದನೊ ವೈರಿ ತಿರುಗಿಸು ವರೂಥಮಂ" ಎಂದು ಯುದ್ಧರಂಗದಿಂದ ಹಿಂದಿರುಗುತ್ತಾನೆ. ರಾವಣ ಅರಮನೆಗೆ ಸೇರಿದ ಕೂಡಲೇ ಇಲ್ಲಿ ಯುದ್ಧರಂಗದಲ್ಲಿದ್ದ ರಾಮನ ಚಿತ್ತಕ್ಕೆ ಕತ್ತಲೆ ಕವಿಯುತ್ತದೆ. ಮೂರ್ಛೆಯೋ, ಮಹಾಸಮಾಧಿಯೋ ರಾಮನಿಗೆ ಚೈತನ್ಯ ಉಡುಗಿಹೋಗುತ್ತದೆ! ಬಾಣ ನೆಟ್ಟದ್ದು ರಾವಣನ ಎದೆಯಲ್ಲಾದರೆ, ರಾಮನೇಕೆ ಚೈತನ್ಯಗೆಡಬೇಕು? ಸತ್ತವನು ರಾವಣನೊಬ್ಬನೇ ಆಗಿದ್ದರೆ ರಾಮನಿಗೇಕೆ ಈ

---

೫ ಶ್ರೀ ರಾ.ದ. ಮ.ಸಂ. ೨, ಶ್ರೀ ಸಂಪುಟಂ. "ಶ್ರೀರಾಮರಾವಣ ಚಿತ್‌ತಪಸ್ ಶ್ರೀ" ಪು.೭೬೨

ಮಬ್ಬು ಮೂರ್ಛೆ, ಅಥವಾ ಸಮಾಧಿ? ಆಮೇಲೆ ದೇವಿ ಮಂಡೋದರಿಯು ಇಲ್ಲಿ ಶರಶರೀರಿಯಾಗಿದ್ದ ರಾಮನನ್ನು ರಾವಣನ ಎದೆಯಿಂದ ತೆಗೆದಾಗ ಅಲ್ಲಿ ಯುದ್ಧರಂಗದಲ್ಲಿ:

" ಕೊಡೆ, ಕಪಿಸಮಿತಿ ಘೇಘೇ ಎನುತೆ ಕುಣಿದಾಡೆ,
ಮೈದೋರ್ದುದತ್ತಲಾ ರಘುಕುಲೋತ್ತಮ ಚಿತ್ತ
ಪರ್ವತದ ಚೂಡಮಂ ಮುತ್ತಿರ್ದ ಕತ್ತಲೆಯ
ಕಡಲಿನಂಚಿನಲಿ ಚೈತನ್ಯ ಚಂದ್ರೋದಯಂ! " ೬

ಈ ಕಾವ್ಯ ಭಾಗವನ್ನು ಓದುವಾಗ ಮೊದಲನೆಯ ಬಾರಿಗೆ ನಮಗೇ ಭ್ರಮೆ ಯಾಗುತ್ತದೆ. ರಾಮನಿಗೇಕೆ ಕತ್ತಲು ಕವಿಯಿತು? ಮತ್ತೇಕೆ ಚೈತನ್ಯ ಚಂದ್ರೋದಯವಾಯಿತು? ಮೇಲೆ ವಿವರಿಸಿದ ದರ್ಶನ ದೃಷ್ಟಿಯನ್ನು ಆಧ್ಯಾತ್ಮಿಕ ಸತ್ಯವನ್ನು ಗಮನದಲ್ಲಿಟ್ಟುಕೊಂಡರೆ ಎಲ್ಲವೂ ಸೂರ್ಯಕಿರಣದಷ್ಟು ತಿಳಿಯಾಗಿ ತಿಳಿಯುವುದು. ಈ ಸತ್ಯಕ್ಕೆ ಅನುಗುಣವಾಗಿಯೇ ರಾಮಬಾಣ ರಾವಣನ ಹೃದಯವನ್ನು ಹೊಕ್ಕಾಗ ರಾವಣನಿಗೆ ನೋವು, ಸಂಕಟವಾಗಲಿಲ್ಲ: ಅವನ ಹೃದಯದ ತಮಸ್ಸೇ ಹೊರಗೆಬಿತ್ತು. ರಾವಣನಿಗೆ ಮುಕ್ತಿವುಂಟಾಯಿತು. ಅವನಲ್ಲಿ (ರಾಮನಲ್ಲಿ) ಇವನು (ರಾವಣ) ಒಂದಾಗಿಹೋದ! ಐಕ್ಯನಾದ!

ಹೀಗೆ ಈ ರಾಮಾಯಣದರ್ಶನದ ರಾವಣ ತನ್ನ ಪರಮ "ವೈರಿ" ಶ್ರೀ ರಾಮದೇವರಿಂದಲೇ ಪ್ರಶಂಸೆಯನ್ನು ಪಡೆಯುವಂಥ ಮಹಾಪುರುಷನಾಗುತ್ತಾನೆ, ಮಹಾತ್ಮನಾಗುತ್ತಾನೆ. ಪುರುಷನ ಹರಕೆಯಿಂದಲೇ ಪಕೃತಿಯ ಹಾರೈಕೆ ಈಡೇರುವುದು.

ಎಲ್ಲಕ್ಕಿಂತ ಹೆಚ್ಚಾಗಿ, ಯಾವ ರಾವಣ ತನ್ನನ್ನು ಮೋಸದಿಂದ ಕದ್ದು ತಂದನೋ ಪಾತಿವ್ರತ್ಯಾಪಹರಣ ಮಾಡಲೆಳಸಿದನೋ, ಅನಂತ ಕೋಟಲೆಗಳನ್ನು ಕೊಟ್ಟನೋ ಅದೇ ರಾವಣನನ್ನು ಶ್ರೀದೇವಿ ಸೀತಾಮಾತೆ:—

'. . . . ನಾನುಮಾ ಮಯನ ಮಗಳಾಣ್ಮಂಗೆ
ಕೃತಜ್ಞೆ ದಲ್! " ೭

ಎನ್ನುತ್ತಾಳೆ. ತನ್ನನ್ನು ಕದ್ದುತಂದು ಘೋರಯುದ್ಧಕ್ಕೆ ಕಾರಣನಾದ ಈ ರಾಕ್ಷಸನಿಗೆ ಕೃತಜ್ಞತೆಯನ್ನು ಅರ್ಪಿಸುವಂಥ ಹಿರಿಮೆ ಸೀತಾಮಾತೆಯದು ಮಾತ್ರವೇ ಅಲ್ಲ. ಈ ಕೃತಜ್ಞತೆಯಲ್ಲಿ ವ್ಯಕ್ತವಾಗುವ ಸತ್ಯವೇನು? ಈ ಭಾಗದಲ್ಲಿ ಅಡಗಿರುವ ದರ್ಶನಾಂಶವೇನು? ಸೀತೆಗೂ ಮಾಯೆ ಕವಿದಿತ್ತು, ಮಾಯಾ

---

೬ ಶ್ರೀ ರಾ.ದ. ಮ.ಸ.: ೨ ಶ್ರೀ ಸಂಪುಟ: "ದೈತ್ಯನೇರ್ದನ್ ಚೈತ್ರ ಮಂಚಮಂ" ಸಾಲು: ೬೩ ರಿಂದ

೭ ,, ,, ,, "ಶ್ರೀರಾಮರಾವಣ ಚಿತ್‌ತಪಸಾ ಶ್ರೀ" ಪು. ೭೫೭

ಮೃಗವನ್ನು ಸತ್ಯಮೃಗವೆಂಬ ಭ್ರಾಂತಿ, ಮಾಯೆ ಕವಿದಿತ್ತು. ಆ ಜಿಂಕೆ ಬಂಗಾರದ ಜಿಂಕೆಯಂತೆ ಕಂಡರೂ—ಈ ಲೋಕ ಬಹು ಆಕರ್ಷಕವಾಗಿ ಕಂಡು ಅದರ ಸೊಬಗಿಗೆ ನಮ್ಮನ್ನು ಕಣ್ಣುಮಿಟುಕಿಸಿ ಸೆಳೆದರೂ— ರಾಮಲಕ್ಷ್ಮಣರಿಗೆ ಗೊತ್ತಿತ್ತು ಅದು ಮಾಯಾಮೃಗ ಎಂಬುದು! ಇದನ್ನು ಬೆನ್ನು ಹತ್ತಿದರೆ ದುಃಖ ತಪ್ಪಿದ್ದಲ್ಲ ಎಂಬುದು ಲಕ್ಷ್ಮಣನಿಗಂತೂ ಚೆನ್ನಾಗಿಯೇ ಗೊತ್ತಿತ್ತು. ಆದರೆ ಸೀತಮ್ಮನಿಗೆ ಇನ್ನೂ ಜ್ಞಾನೋದಯವಾಗಿರಲಿಲ್ಲ. ಅವಳ ಅಜ್ಞಾನಾಂಧಕಾರವನ್ನು ಹರಿದೊಗೆಯ ಬೇಕಾಗಿದ್ದರೆ ಅವಳು ಈ ಬಾಳಿನ ಸಂಕಟ, ಕಷ್ಟ, ಕ್ಲೇಷಗಳನ್ನು ಅನುಭವಿಸ ಬೇಕಾಗಿತ್ತು. ಒಂದುವೇಳೆ ಈ ಅನುಭವ ಪಡೆಯದೆ ಅವಳು ಅಯೋಧ್ಯೆಗೆ ಹಿಂತಿರು ಗಿದ್ದರೆ, ಪರಿಪೂರ್ಣತೆಯಿಂದ ಬಹುದೂರ ಉಳಿಯಬೇಕಾಗಿತ್ತು. ಅವಳಿಗೆ ಮಾಯೆ ಹರಿಯುತ್ತಿರಲಿಲ್ಲ. ರಾವಣನು ಹೂಡಿದ ಈ ಸಂಚಿನಿಂದ ಅವಳ ಮಾಯಾ ಹನನವಾಯಿತು. ಒಂದೇ ವರ್ಷದಲ್ಲಿ ಅಜ್ಞಾನದ ತಮಸ್ಸಿನಿಂದ ಜ್ಞಾನದ ಜ್ಯೋತಿಯ ಕಡೆಗೆ ಹಾರಿಹೋದಳು. ಮೃತ್ಯುವಿನಿಂದ ಅಮೃತತ್ವಕ್ಕೆ ಧಾವಿಸಿದಳು. ಅಸತ್ತಿನಿಂದ ಸತ್ತಿನೆಡೆಗೆ ನಡೆದಳು. ಈ ಅವಕಾಶವನ್ನು ಕಲ್ಪಿಸಿಕೊಟ್ಟವನು ಯಾರು? ರಾಮನಾಮದ ಮಹಿಮೆಯಿಂದ "ರಾಮಮಯಮೀ ಸಮಸ್ತ ಲೋಕಂ"—ಈಶಾವಾಸ್ಯಮಿದಂ ಸರ್ವಂ ಎಂಬ ಸತ್ಯ ಸಾಕ್ಷಾತ್ಕಾರವಾದದ್ದು ಈ ರಾವಣನಿಂದಲೇ. ಅದಕ್ಕೆ ಸೀತಾಮಾತೆ ಬರೀ ಕೃತಜ್ಞತೆಯನ್ನು ಅರ್ಪಿಸುವುದರಿಂದ ಋಣಮುಕ್ತಳಾದಂತೆ ಆಗಲಿಲ್ಲ.

ಇಂಥ ರಾವಣನು 'ನಿಧನಯೋಗದ'ಲ್ಲಿ ಆಗಿಹೋದಾಗ, ಒಂದು ದುಷ್ಟ ಶಕ್ತಿಯ ವಿನಾಶವಾಯಿತು; ವಿಭೀಷಣನಂಥ ಸಾಧುವಿನ ರಕ್ಷಣೆಯಾಯಿತು, ಎಂದು ಭಾವಿಸಿದರೆ, ಈ ಕಾವ್ಯದ ಹೃದಯವನ್ನು ಪ್ರವೇಶಿಸಿದಂತೆ ಆಗುವುದಿಲ್ಲ.

> "ಭವ್ಯಪೌರುಷವೊಂದು
> ಜನ್ಮಾಂತರಂಬಡೆಯೆ ಕಣ್ಮರೆಯಾದ ಸಂಕಟಕೆ
> ಸೃಷ್ಟಿ ಖಿನ್ನತೆಯಾಂತ ತೆರದಿ ಘೋರಾಂಧತಾ
> ತಿಮಿರಮಾಕ್ರಮಿಸಿತು ಅಮಾವಾಸ್ಯೋದರದ
> ರೋದೋಂತಮಂ." ೮

ಇಲ್ಲಿ ಬರುವ ಒಂದೊಂದು ಪದವನ್ನೂ, ಪದಸಮುಚ್ಚಯವನ್ನೂ, ಉಪಮೆಯನ್ನೂ, ನ್ಯಾಯವಾದಿಗಳ "ಕ್ಷ" ಕಿರಣ ಬುದ್ಧಿಯ ಬೆಳಕಿನಿಂದ ತೂಗಿನೋಡಬೇಕು, ರಾವಣನು ನಿಧನಯೋಗದ ಶ್ರೀ ಮುಹೂರ್ತದಲ್ಲಿದ್ದ ಎಂದರೆ, ಸಾಮಾನ್ಯ ಅರ್ಥದಲ್ಲಿ ಸಾಯುವುದಿಲ್ಲ. ಅಸತ್ತಿನಿಂದ ಸತ್ತಿನೆಡೆಗೆ 'ಜನ್ಮಾಂತರಂ ಬಡೆಯೆ' ಆದ ಪರಿವರ್ತನೆ.

---

೮ ಶ್ರೀ ರಾ,ದ. ಮ.ಸಂ : ೨ ಶ್ರೀ ಸಂಪುಟಂ. "ದೈತ್ಯನೇರ್ದನ' ಚೈತ್ರ ಮಂಚಮಂ" ಪುಟ ೮೧೩

ಒಂದು ಬಾಗಿಲು ದಾಟಿ ಇನ್ನೊಂದು ಮನೆಯೊಳಗೆ ಹೋದಂತೆ. ಆದರೂ ಅಂಥ 'ಭವ್ಯ ಪೌರುಷ' ಕಣ್ಮರೆಯಾದಾಗ ಸಂಕಟವಾಗಿಯೇ ಆಗುವುದು ಮನಸ್‌ಶಾಸ್ತ್ರ ದೃಷ್ಟಿಯಿಂದ ಕೇವಲ ವೈಜ್ಞಾನಿಕವಾಗಿದೆ. 'ಜನ್ಮಾಂತರಂ ಬಡೆಯೆ' ನಿಧನ ಯೋಗದಲ್ಲಿರುವನೆಂದು ಕಲ್ಲೆದೆ ಮಾಡಿಕೊಳ್ಳುವುದು ಮನಶ್ಶಾಸ್ತ್ರ ದೃಷ್ಟಿಯಿಂದ ಒಪ್ಪಿಗೆಯಾಗದ ಮಾತು. ಆಗ ಸೃಷ್ಟಿ ಖಿನ್ನತೆಯನ್ನು ಅನುಭವಿಸಲೇಬೇಕು. ಕತ್ತಲೆಯಿಂದ ಮತ್ತೆ ಬೆಳಕು ಬರಲೇಬೇಕು.

ಇದು ಶ್ರೀ ಕುವೆಂಪು ಚಿತ್ರಿಸಿದ ಶ್ರೀ ರಾವಣನ ಸ್ಥೂಲ ಚಿತ್ರ!

—೪—

ಈಗ ಆ–ಈ ರಾವಣರಲ್ಲಿರುವ ಅಂತರವನ್ನು ನಾವು ಗ್ರಹಿಸಬಹುದು. ಕೇವಲ ಪರಪೀಡನೆಯಲ್ಲಿಯೇ ತನ್ನ ತೋಳ್ಬಲ, ತಪಸ್ ಶಕ್ತಿಗಳನ್ನು ಸೂರೆ ಮಾಡಿದ ಆ ರಾವಣ; ತನಗೆ ಬೇಕೆನಿಸಿದ ಹೆಣ್ಣನ್ನು ಹೊತ್ತುತಂದು ಕೆಡಿಸುವುದೇ ಸ್ವಧರ್ಮವಾಗಿದ್ದ ಕೇವಲ ಕಾಮುಕ ಆ ರಾವಣ; ಯಾರೆಷ್ಟು ಬುದ್ಧಿವಾದ ಮಾಡಿದರೂ ಅರಿವಿನ ಹಾದಿಯನ್ನು ತುಳಿಯದ ಕಡುಮೂರ್ಖಶಿಖಾಮಣಿ ಆ ರಾವಣ. ಶ್ರೀ ಕುವೆಂಪು ಅವರ ಈ ಮಹಾಕಾವ್ಯದಲ್ಲಿ ತ್ರೈಭುವನ ಗೌರವಕೆ ಯೋಗ್ಯನಾಗುವಂತೆ ವಿಕಾಸಗೊಳ್ಳುತ್ತಾನೆ. ಶ್ರೀ ರಾಮಚಂದ್ರನಿಗೆ ಸರಿಜೋಡಿ ಯಾಗಿ ನಿಂತಿದ್ದಾನೆ. ಕಡೆಗೆ ಸೀತಾಮಾತೆಯ ಬಾಯಿಂದಲೇ ಆಶೀರ್ವಾದ ಪಡೆಯುವ ಪುಣ್ಯ ಪುರುಷನಾಗುತ್ತಾನೆ.

ಪ್ರಸಿದ್ಧ ಪೌರಾಣಿಕ ಪುರುಷನ ಕಥೆಯನ್ನು ಈ ರೀತಿಯಾಗಿ ಚಿತ್ರಿಸುವ ಸ್ವಾತಂತ್ರ್ಯ ಕವಿಗೆ ಇದೆಯೆ? ಈ ರೀತಿಯಾಗಿ ಮಾಡಿರುವುದು ಯೋಗ್ಯವೆ? ಒಂದು ವೇಳೆ ಸ್ವಾತಂತ್ರ್ಯವಿದೆ ಎಂದೂ ಯೋಗ್ಯವಾಗಿದೆ ಎಂದೂ ಇಟ್ಟುಕೊಂಡರೂ ಎಷ್ಟರಮಟ್ಟಿಗೆ ಉಚಿತವಾಗಿದೆ, ಬುದ್ಧಿ ಸಮರ್ಥಕವಾಗಿದೆ. ಇದನ್ನು ನಾವು ಗಮನಿಸಬೇಕಾಗಿದೆ.

"ಹಳೆಯ ಕಥೆಯನ್ನು ಹೊಸ ಸಾಹಿತಿ ತನ್ನ ಕೃತಿಗೆ, ತನಗಿಷ್ಟದಂತೆ ಉಪಯೋಗಿಸಿಕೊಳ್ಳುವ ಪದ್ಧತಿ ಮಹಾಕವಿ ಸಂಪ್ರದಾಯ ಸಿದ್ಧವಾದುದು........ಹಳೆಯ ಕಥೆಯಾದ ರಾಮಾಯಣವನ್ನು ನನ್ನ ಮಹಾಕಾವ್ಯದ ಭಗವದ್‌ವಿಷಯವನ್ನಾಗಿ ಆರಿಸಿಕೊಂಡು ನಿತ್ಯ ಸತ್ಯಗಳ ದೃಷ್ಟಿಯಿಂದ ಸರಿಯೆಂದು ಸರಸ್ವತಿ ನನಗೆ ತೋರಿಸಿದ ಮಾರ್ಗದಲ್ಲಿ ಬದಲಾವಣೆಗಳನ್ನು ಮಾಡಿಕೊಂಡು, ಗುರುಕೃಪೆಯಿಂದ ಹಾಡಿ ಮುಗಿಸಿದ್ದೇನೆ"[೯] ಎಂದು ಶ್ರೀ ಕುವೆಂಪು ಅವರೆ ಒಂದೆಡೆ ಹೇಳಿದ್ದಾರೆ. ಹಳೆಯ ಕಥೆಯನ್ನು ಹೊಸಸಾಹಿತಿ ತನಗಿಷ್ಟಬಂದಂತೆ ಉಪಯೋಗಿಸಿಕೊಂಡಿರುವುದು ಕನ್ನಡ ಸಾಹಿತ್ಯದ

೯, 'ಶೂದ್ರತಪಸ್ವಿ' ರೂಪಕಕ್ಕೆ ಬರೆದ ಮುನ್ನುಡಿ—ಪುಟ: ೪೨–೪೩ ನೋಡಿ.

'ಪಂಪರಾಮಾಯಣ'ದಲ್ಲೇ ಸ್ಪಷ್ಟವಾಗಿ ಕಂಡುಬರುತ್ತದೆ. ನಾಗಚಂದ್ರನ ಆ ರಾಮಾಯಣ ಕಾವ್ಯದೃಷ್ಟಿಯಿಂದಲಾಗಲೀ, ಸತ್ಯ ನಿರೂಪಣೆಯ ದೃಷ್ಟಿಯಿಂದ ಲಾಗಲೀ ಇತರ ಯಾವ ಕಾವ್ಯಗಳಿಗೂ ಬಣ್ಣ ಬಿಡುವುದಿಲ್ಲ. ಜೈನ ರಾಮಾಯಣ ಗಳೆಲ್ಲವೂ ಹೊಸಕವಿಯ ಕೈಯಲ್ಲಿ ಬೇರೆ ಕೃತಿಯೆಂಬಂತೆ, ಬೇರೆ ಮೈವೆತ್ತು ಮೂಡಿವೆ. ಹಾಗೆ ಜೈನಕವಿಗಳು ವಹಿಸಿದ ಸ್ವಾತಂತ್ರ್ಯವನ್ನು ಅಲ್ಲಗಳೆಯುವ ಪಂಡಿತೋತ್ತಮರು ಯಾರೂ ಇಲ್ಲ. ಇನ್ನು ಇಂಗ್ಲಿಷ್ ಸಾಹಿತ್ಯದ ಉದ್ದಾಮ ಕೃತಿಯೆಂದು ಖ್ಯಾತಿವೆತ್ತ ಮಿಲ್ಟನ್ ಮಹಾಕವಿಯ 'ಪ್ಯಾರಡೈಸ್ ಲಾಸ್ಟ್' (Paradise Lost) ಮಹಾಕಾವ್ಯ, ಬೈಬಲ್ಲಿನಲ್ಲಿ ಸಿಕ್ಕುವ ಮೂಲಕತೆಯನ್ನು ತನಗಿಷ್ಟ ಬಂದಂತೆ ಉಪಯೋಗಿಸಿಕೊಂಡು ಮೂಡಿದ ಕಾವ್ಯವೇ. ಷೇಕ್ಸ್ ಪಿಯರ್ ಮಹಾನಾಟಕಕಾರನ ಬಹುನಾಟಕಗಳು ಹೀಗಿಯೇ ರಚನೆಯಾದದ್ದು. ಮೂಲವಸ್ತುವನ್ನು ತನಗಿಷ್ಟಬಂದಂತೆ ಬಳಸಿಕೊಂಡುದರಿಂದಲೇ ಇಂಗ್ಲಿಷ್ ಸಾಹಿತ್ಯದಲ್ಲಿ ಅಜರಾಮರವಾಗಿ ನಿಲ್ಲುವ ಶಾಶ್ವತ, ಶ್ರೇಷ್ಠ ಕೃತಿಗಳು ರಚನೆ ಯಾದದ್ದು.[೧೦]

ಇನ್ನು ಮುಂದಿನ ಪ್ರಶ್ನೆ : ಹೀಗೆ ಹಳೆಯ ಕತೆಯನ್ನು ಹೊಸಸಾಹಿತಿ ತನಗಿಷ್ಟಬಂದಂತೆ ಉಪಯೋಗಿಸಿಕೊಳ್ಳುವ ಅಧಿಕಾರ, ಸ್ವಾತಂತ್ರ್ಯವಿದೆ ಎಂಬ ಕಾರಣದಿಂದ, ರಾವಣನಂಥ 'ಅಧಮಾಧಮ' ರಕ್ಕಸನನ್ನು ಮಹಾತ್ಮನಂತೆ, ಮಹಾ ಪುರುಷನಂತೆ ಚಿತ್ರಿಸುವುದು ಯೋಗ್ಯವೆ? ಅದರಿಂದ ಲೋಕದಲ್ಲಿ ಕೆಟ್ಟದ್ದು ಕೆಟ್ಟವರು ಎನ್ನುವವರ ಬಗ್ಗೆ ಸಹಾನುಭೂತಿಯನ್ನು ವ್ಯಕ್ತಪಡಿಸಿ ದಂತಾಗುವುದಿಲ್ಲವೆ? ಅಂಥ ರಾವಣನೇ ಗೌರವಕ್ಕೆ ಯೋಗ್ಯನಾದ ಮೇಲೆ ಲೋಕದ ಯಾವ ದುಷ್ಟನೂ ತಿರಸ್ಕಾರ ಯೋಗ್ಯನಲ್ಲ; ದ್ವೇಷಾರ್ಹನಲ್ಲ ಎಂಬ ತಿಳಿವಳಿಕೆ ಮೂಡಲು ಸಹಾಯಕವಾದಂತೆ ಆಗಲಿಲ್ಲವೆ? ಇದು ಯೋಗ್ಯವೇ?

ವಾಲ್ಮೀಕಿ ರಾಮಾಯಣದ ಆ ರಾವಣನೆಂದರೆ ನಮಗೆ ಯಾವ ಗೌರವವೂ, ಅನುಕಂಪೆಯೂ, ಸದ್ಭಾವನೆಯೂ ಉಂಟಾಗುವುದಿಲ್ಲ. ಅವನೆಂದರೆ ನಮ್ಮ ಜನಮನದಲ್ಲಿ ದ್ವೇಷಭಾವನೆ ಬೇರೂರಿದೆ. ಇಂಥ ರಾವಣನ ಬಗ್ಗೆ ಗೌರವ ಅನುಕಂಪೆ, ಸದ್ಭಾವನೆಯನ್ನು ಹುಟ್ಟಿಸುವಂತೆ ಆ ಪಾತ್ರವನ್ನು ಬದಲಾಯಿಸುವ ಸ್ವಾತಂತ್ರ್ಯವಿದೆಯೆ? ಕವಿಕೃತಿ, ಕವಿಸೃಷ್ಟಿ ಅನನ್ಯ ಪರ–ತಂತ್ರವಾದದ್ದು ಎಂಬ ಕಾರಣದಿಂದ ಔಚಿತ್ಯ ಮೀರಿದ 'ವಿಕಲ್ಪನೆ'ಗೆ ಎಡೆ ಕೊಡಬಹುದೆ? ಚಾಮುಂಡಿ

೧೦. ಈ ರಚನೆ 'ಅನನ್ಯ ಪರತಂತ್ರ' ವಾದದ್ದು. 'ಕವಿಕೃತಿಯಲ್ಲಿ ಅನನ್ಯ ಪರತಂತ್ರತೆ' ಎಂಬ ಲೇಖನದಲ್ಲಿ ಇದರ ವಿವರಣೆ ದೊರೆಯುತ್ತದೆ. "ದ್ರೌಪದಿಯ ಶ್ರೀ ಮುಡಿ" ಪು : ೬೧ ಶ್ರೀ ಕುವೆಂಪು.

ಬೆಟ್ಟದ ಬುಡದಲ್ಲಿ ಗಂಗೆಯನ್ನು ಹರಿಸುವಂತಹ ವಿಕೃತಕ್ಕೆ ವಿಕಲ್ಪನೆಗೆ ಕವಿಯ ಅನನ್ಯ ಪರತಂತ್ರತೆ ಒಪ್ಪುವುದೆ ?

ಈ ಸಮಸ್ಯೆಗಳಿಗೆ ಸಮಾಧಾನಕರವಾದ ಉತ್ತರಗಳು ಬೇಕೆಂದರೆ ಈ ರಾವಣನ ಪಾತ್ರದಲ್ಲಿ ಮಾಡಿಕೊಂಡ ಬದಲಾವಣೆ ಔಚಿತ್ಯದ ಎಲ್ಲೆಯ ಒಳಗಿದೆಯೆ? ಎಲ್ಲೆ ಮೀರಿದೆಯೆ ? ಹಾಗೂ ಈ ಕಾವ್ಯದಲ್ಲಿ ಪಾಪದ ಬಗೆಗೇ ಅನುಕಂಪೆ, ಗೌರವ ಹುಟ್ಟುವಂತೆ ರಾವಣನ ಪಾತ್ರ ರಚನೆಯಾಗಿದೆಯೋ ಅಥವಾ ಪಾಪಿಯ ಬಗೆಗೆ ಅನುಕಂಪೆ ಮೂಡುವಂತಾಗಿದೆಯೋ ?—ಎಂಬ ಪ್ರಶ್ನೆಗಳಿಗೆ ಉತ್ತರವನ್ನು ಅರಸ ಬೇಕಾಗಿದೆ. “ ಕಾಲು ಜಾರಿ ಬೀಳುವ ಒಂದು ವ್ಯಕ್ತಿಯ ಬಗೆಗೆ ಸಹಾನುಭೂತಿ ತೋರಿಸುವುದು ಮನುಷ್ಯನ ಲಕ್ಷಣ. . . . . . ಪತಿತ–ಪಾತ್ರ ವಿಚಾರದಲ್ಲಿ ಸಹಾನು ಭೂತಿಯನ್ನು ಅನುಕಂಪಗಳನ್ನು ತೋರಿಸುವ ದೃಷ್ಟಿ, ಮನೋಭಾವಗಳು ಬೆಳೆದು ಬಂದಿವೆ. ವಿಧಿಯ ವಜ್ರನಿಯತಿಯನ್ನು ಕುರಿತು ಭಯಮಿಶ್ರಿತವಾದ ಗೌರವ ವುಂಟಾಗುವುದೂ, ಪತಿತಪಾತ್ರದಲ್ಲಿ ಮರುಕ ಹುಟ್ಟುವುದೂ ಈ ದೃಷ್ಟಿಗೆ ಸಹಜ. . . . . . . ಆದರೆ ಪತಿತ ಪಾತ್ರಗಳಿಗೆಲ್ಲ ಒಂದೇ ಸಮನಾಗಿ ಅನುಕಂಪ ತೋರಿಸುವುದು ಸಾಧ್ಯವೆ, ಯುಕ್ತವೆ ಎಂದು ವಿಚಾರ ಮಾಡುವುದು ಅಗತ್ಯ. ಕಾಲುಜಾರಿ ಬೀಳುವ ವ್ಯಕ್ತಿ ‘ ಮಹಾನುಭಾವ ’ ಲಕ್ಷಣಗಳನ್ನು ಹೊಂದಿದವನಾಗಿದ್ದು, ತನ್ನಲ್ಲಿರುವ ಯಾವುದೋ ಒಂದು ಕುಂದಿನಿಂದ ಅಥವಾ ವಿಧಿಯ ವಜ್ರನಿಯತಿಗೆ ಅನಿವಾರ್ಯ ವಾಗಿ ಆಹುತಿಯಾಗಿ ದುರಂತತೆಯನ್ನು ಪಡೆದರೆ ಆತನಿಗೆ ನಾವು ಅನುಕಂಪೆ ತೋರಿಸಬಹುದು. ಆದರೆ ತಾನೆ ಇಚ್ಛಿಸಿ ಅಧಃಪತನಕ್ಕೆ ಇಳಿಯುತ್ತಿರುವಾಗ, ತನ್ನ ಅಧಃಪತನವನ್ನು ಅರಿತಿದ್ದೂ ಅದನ್ನು ತಡೆಯಲು ಪ್ರಯತ್ನಿಸದೆ ಅತ್ತಲೇ ರಾಜವೇಗದಿಂದ ಸಂತೋಷದಿಂದ ಜಾರುತ್ತಿರುವಾಗ ನಾವು ಅನುಕಂಪೆ ತೋರಿಸ ಲಾದೀತೆ ? ತೋರಿಸುವುದು ಯುಕ್ತವೆ ? ”[೧೧]

ಇಲ್ಲಿ ನಿರೂಪಿಸಿದ ಈ ಮಾನದಂಡದಿಂದ, ರಾವಣನ ಪಾತ್ರದಲ್ಲಿ ಶ್ರೀ ಕುವೆಂಪು ಮಾಡಿಕೊಂಡಿರುವ ಬದಲಾವಣೆ ಕವಿಗೆ ಸಹಜವಾದ ಅನನ್ಯ ಪರತಂತ್ರ ರಚನೆಯ ಉಚಿತ ಎಲ್ಲೆಯಲ್ಲಿದೆಯೆ ? ಅಥವಾ ಚಾಮುಂಡಿಬೆಟ್ಟದ ಬುಡದಲ್ಲಿ ಗಂಗೆಯನ್ನು ಹರಿಸುವಂತಹ ವಿಕಲ್ಪನೆಗೆ ಎಡೆಕೊಟ್ಟಿದೆಯೆ? ಹಾಗೂ, ರಾವಣನು ಮಹಾನುಭಾವ ಲಕ್ಷಣಗಳಿಂದ ಒಡಗೂಡಿದವನಾಗಿದ್ದು, ಯಾವುದೋ ಒಂದು ಕುಂದು ಅಥವಾ ವಿಧಿಯ ವಜ್ರನಿಯತಿಗೆ ಅನಿವಾರ್ಯವಾಗಿ ಆಹುತಿಯಾಗಿ ಸಹಾನು ಭೂತಿಗೆ ಯೋಗ್ಯನೇ ? ಅಥವಾ ತನ್ನ ಅಧಃಪತನವನ್ನು ಅರಿತಿದ್ದೂ ರುಚಿವೇಗದಿಂದ

---

೧೧. ಶ್ರೀ ಕುವೆಂಪು ಅವರ : ‘ ದ್ರೌಪದಿಯ ಶ್ರೀಮುಡಿ ’ ಎಂಬ ಕಾವ್ಯ ಮೀಮಾಂಸಾ ಗ್ರಂಥದಲ್ಲಿ : ‘ ಯಶೋಧರ ಚರಿತೆಯಲ್ಲಿ ಕಾಮವಿಕಾರ ನಿರೂಪಣೆಯ ಉದ್ದೇಶ ’ ಪುಟ ೧೭ ನ್ನು ನೋಡಿ.

ಸಂತೋಷದಿಂದ ಜಾರುತ್ತಿರುವ ಧೂರ್ತನೆ? ರಾವಣ ವಾಲ್ಮೀಕಿ ರಾಮಾಯಣ ದಲ್ಲಿಯೂ ಕೂಡ ಮಹಾನುಭಾವನ ಲಕ್ಷಣಗಳಿಂದಲೇ ಒಡಗೂಡಿದ್ದಾನೆ. ಅವನು ಮಹಾಭಕ್ತ; ಮಹಾಜ್ಞಾನಿ; ಮಹಾದಾನಿ; ಮಹಾಶೂರ; ಮಹಾ ಬ್ರಾಹ್ಮಣನೂ ಕೂಡ! ಈ ಗುಣಗಳು ಆ-ಈ ರಾವಣರಿಗೆ ಸಮಾನವಾಗಿದೆ. ಇಂಥ ಮಹಾನುಭಾವ ರಾವಣ, ಕಾಲು ಜಾರಿದ; ಸೀತೆಯನ್ನು ಕದ್ದೊಯ್ಯಬೇಕೆಂಬ ದುರ್ಬುದ್ಧಿಗೆ ಬಲಿಯಾಗುತ್ತಾನೆ. ಈ ದುರ್ಬುದ್ಧಿ ಅವನ ಒಂದು ಕುಂದೋ? ಅಥವಾ ವಿಧಿಯ ವಜ್ರ ನಿಯತಿಯೊ? ಈ ಒಂದು ಕುಂದಿನ ದೆಸೆಯಿಂದ ಅವನು ವಿಧಿಯ ವಜ್ರ ನಿಯತಿಗೆ ಬಲಿಯಾಗಿ ಅಧಃಪತನಕ್ಕೆ ಇಳಿಯುವನೇ ಹೊರತು, 'ಯಶೋಧರ ಚರಿತೆ' ಯಲ್ಲಿ ಬರುವ ಅಮೃತಮತಿಯಂತೆ ಅಧಃಪತನವನ್ನು ಅರಿತಿದ್ದೂ ರುಚಿವೇಗದಿಂದ ಸಂತೋಷದಿಂದ ಎಂದೂ ಜಾರುವುದಿಲ್ಲ! ಆ ರಾವಣ ಮೊದಲಿನಿಂದ ಕೊನೆಯತನಕ ಯಾರೆಷ್ಟು ಹೇಳಿದರೂ ಅವನಲ್ಲಿ ಹೃದಯ ಪರಿವರ್ತನೆ ಎಂಬುದೇ ಉಂಟಾಗುವುದಿಲ್ಲ. ಆದರೆ ಈ ರಾವಣನ ನೀಚಸ್ವಭಾವ ಪರಿವರ್ತನೆಯಾಗುತ್ತ, ಆಗುತ್ತ ಹೋಗಿ ಕೊನೆಗೆ ಮಹಾನುಭಾವತೆ ಹೊಮ್ಮುತ್ತದೆ. ಇಂಥವನ ಬಗೆಗೆ ಅನುಕಂಪ, ಸಹಾನುಭೂತಿ ಮೂಡುವುದು ಕೇವಲ ಸಹಜವೂ, ಅನಿವಾರ್ಯವೂ, ಮನಶ್ಶಾಸ್ತ್ರ ದೃಷ್ಟಿಯಿಂದ ಸರ್ವಸಮ್ಮತವೂ ಆಗಿದೆ. ಹಿಂದೊಮ್ಮೆ ಸೀತೆಯನ್ನು ಕದ್ದುತಂದ ರಾಕ್ಷಸ ರಾವಣ, ಕ್ರಮೇಣ ಕ್ರಮೇಣ ತನ್ನ ತಪ್ಪನ್ನು ತಾನೇ ತಿದ್ದಿಕೊಳ್ಳಲು ಪ್ರಯತ್ನಿಸಿ, ತನ್ನ ಆ ಪ್ರಯತ್ನದಲ್ಲಿ ಬಹುಮಟ್ಟಿಗೆ ಯಶಸ್ವಿಯಾಗುತ್ತಾನೆ. ಹಾಗಾದರೆ ತನ್ನ ತಂಗಿ ಮತ್ತು ಹೆಂಡತಿಯರು ಸೂಚಿಸಿದಂತೆ ಸೀತಾದೇವಿಯನ್ನು ಶ್ರೀ ರಾಮನಿಗೆ ಒಪ್ಪಿಸಿಬಿಡಬಹುದಾಗಿತ್ತಲ್ಲವೆ? ಈ ರಾವಣ ಅದಕ್ಕೂ ಒಪ್ಪುತ್ತಾನೆ. ಆದರೆ ಆ ಗುರಿಯನ್ನು ಬೇರೆ ರೀತಿಯಿಂದ ಸಾಧಿಸಲು ಹೊರಡುತ್ತಾನೆ! ಆವನು ಕಾಣುತ್ತಿರುವುದು :—

> "ಮೂಲೋಕಮಿನ್ನೆಗಂ ಮತ್ತಮಿನ್ನಾದೊಡಂ
> ಕಂಡರಿಯದಾ ಕಾಣಲಾರದಾ ಕೊಳುಗುಳದಿ
> ರಘುಕುಲ ಲಲಾಮನಂ, ಜಗದೇಕವೀರನಂ,
> ಗೆಲ್ದು, ಸೆರೆಯಾಳ್ ಮಾಡಿ ತಂದು, ಲಂಕೇಶ್ವರನ
> ಸರ್ವ ಗರ್ವವನಿರದೆ ಸೋಲಿಸಿದ ಮೈಥಿಲಿಗೆ
> ಕಪ್ಪಮೆನೆ ಕಾಣಿಕೆಯನೊಪ್ಪಿಸುವ ಭವ್ಯತಾ
> ದಿವ್ಯದೃಶ್ಯಂ!" ೧೨

ಸೀತೆಯನ್ನು ರಾಮನಿಗೆ ಒಪ್ಪಿಸುವ ಬದಲು, ರಾಮನನ್ನೇ ಸೀತೆಗೆ ತಂದೊಪ್ಪಿಸಲು ಪ್ರಯತ್ನಿಸುತ್ತಾನೆ. ಅವನು ರಾಮನೊಡನೆ ಯುದ್ಧಕ್ಕೆ ಹೊರಟದ್ದು ರಾಮನನ್ನು

---

೧೨ ಶ್ರೀ ರಾ. ದ. ಮ. ಸಂ. ೨. ಶ್ರೀ ಸಂಪುಟ 'ನೀಂ ಮಹಚ್ಛಿಲ್ಪಿಯೆ ದಿಟಂ' ಸಾ. ೩೩೨ರಿಂದ

ಸೋಲಿಸಿ ಸೀತೆಯನ್ನು ಆಳಬೇಕೆಂದಲ್ಲ. ತನ್ನನ್ನು ಸೋಲಿಸಿದ ಸೀತೆಗೆ ಕಪ್ಪ ಕಾಣಿಕೆ ಕೊಡಬೇಡವೇ ? ಸೀತೆಗೆ ಬಹುಪ್ರಿಯವಾದ ಆ ರಾಮನನ್ನೇ ಸೆರೆಹಿಡಿದು ತಂದು ಕಪ್ಪಕಾಣಿಕೆ ಕೊಡುತ್ತೇನೆ ಎನ್ನುತ್ತಾನೆ. ಎಂಥ ಭವ್ಯತಾದಿವ್ಯದೃಶ್ಯ. ಇಂಥವನ ಬಗೆಗೆ ಅನುಕಂಪ, ಸಹಾನುಭೂತಿ ಮೂಡುವುದರಲ್ಲಿ ಆಶ್ಚರ್ಯ ವೇನಿದೆ? ಒಂದು ವೇಳೆ ಹಾಗೆ ಅನುಕಂಪ, ಸಹಾನುಭೂತಿ ಹುಟ್ಟದಿದ್ದರೇನೇ ಅಸಹಜವಾಗುತ್ತಿತ್ತು, ಆಶ್ಚರ್ಯಕರವಾಗುತ್ತಿತ್ತು.

ಹಾಗಾದರೆ, ಇಷ್ಟೊಂದು ತಿಳಿದ ಮನುಷ್ಯ, ತಾನೇ ಹೋಗಿ ರಾಮನಿಗೆ ಸೀತೆಯನ್ನು ಯಾಕೆ ಒಪ್ಪಿಸಬಾರದಾಗಿತ್ತು ? ಈ ಪ್ರಶ್ನೆಯನ್ನು ಕೇಳುವವರು ನಾವೊಬ್ಬರೇ ಅಲ್ಲ. ನಮ್ಮಂತೆಯೇ ಅವನ ತಂಗಿ ಚಂದ್ರನಖಿಯೇ ಕೇಳುತ್ತಾಳೆ. ಅದಕ್ಕೆ ರಾವಣ

> ' ಸತ್ಪಥಮೆ ದಲ್', ತಂಗೆ! ಸತ್ಪಥಮೆ ಅದು ದಿಟಂ,
> ಹೆಂಬೇಡಿಗಳಿಗೆ, ಮೇಣ್' ಜೀವಗಳ್ಳರಿಗೆ "೧೩

ಎಂದು ಹೇಳುತ್ತಾನೆ. ರಾವಣನಂಥ ಮಹಾಪರಾಕ್ರಮಿ, ರಾಮನ ಸೈನ್ಯ ತನ್ನ ರಾಜಧಾನಿಯ ಹೆಬ್ಬಾಗಿಲಿನ ಮುಂದೆ ಯುದ್ಧಕ್ಕೆ ಅಣಿಯಾಗಿ ನಿಂತಾಗ, ಸೀತೆ ಯನ್ನು ಕರೆದೊಯ್ದು ರಾಮನಿಗೆ ಒಪ್ಪಿಸುವುದು ಅವನ ಪರಾಕ್ರಮಕ್ಕೆ, ಶೌರ್‍ಯಕ್ಕೆ, ಆತ್ಮಾಭಿಮಾನಕ್ಕೆ ಒಪ್ಪುವಂಥ ಗುಣವೇ ? ಈಗ ರಾವಣ ತನ್ನ ಹೃದಯ ಪರಿವರ್ತನೆ ಯಾಗಿದೆ ಎಂದು ನುಡಿದರೂ ನಂಬುವುದು ಕಷ್ಟ ; ಅದರಂತೆ ನಡೆದರೂ ಲೋಕದ ಅಪಹಾಸ್ಯಕ್ಕೆ ಗುರಿಯಾಗಬೇಕಾಗುವುದು. ಆದಕಾರಣ ವೀರರಿಗೆ ಉಚಿತವಾದ ಮಾರ್ಗವನ್ನು ನಿರ್ಧರಿಸುವನು. ರಾಮನೊಡನೆ ಯುದ್ಧಮಾಡಿ, ರಾಮನನ್ನು ಗೆದ್ದು, ಸೀತೆಯ ವಶಕ್ಕೆ ಒಪ್ಪಿಸಲು ತೀರ್ಮಾನಿಸುತ್ತಾನೆ. ರಾವಣನ ಈ ವರ್ತನೆ ಮನಶ್ಶಾಸ್ತ್ರದ ದೃಷ್ಟಿಯಿಂದ ಸರ್ವರಿಗೂ ಒಪ್ಪಿಗೆ ಆಗುತ್ತದೆ. ಇಂಥ ರಾವಣನ ಬಗೆಗೆ ಯಾರಿಗೆ ಅನುಕಂಪ ಸಹಾನುಭೂತಿ ಉಂಟಾಗುವುದಿಲ್ಲ ? ಅಂಥವನ ಬಗೆಗೆ ಸಹಾನುಭೂತಿ ಉಂಟಾಗುವುದರಲ್ಲಿ ಯಾವ ಅನೌಚಿತ್ಯವಿದೆ ?

—೫—

ಈ ಬದಲಾವಣೆ ಎಷ್ಟರ ಮಟ್ಟಿಗೆ ಯೋಗ್ಯವಾಗಿದೆ ? ಉಚಿತವಾಗಿದೆ ? ಬುದ್ಧಿಸಮರ್ಪಕವಾಗಿದೆ ? ಕಾವ್ಯದೃಷ್ಟಿಯಿಂದ ಪರಿಣಾಮಕಾರಿಯಾಗಿದೆ ? ಎಂಬುದನ್ನು ಅವಲೋಕಿಸೋಣ. ಈ ಪಾತ್ರ ನಿರೂಪಣೆ ಮನಶ್ಶಾಸ್ತ್ರ ದೃಷ್ಟಿ ಯಿಂದ, ಕಾವ್ಯದೃಷ್ಟಿಯಿಂದ, ದರ್ಶನದೃಷ್ಟಿಯಿಂದ ಎಷ್ಟರಮಟ್ಟಿಗೆ ಸಾರ್ಥಕವಾಗಿದೆ ಎಂಬುದನ್ನು ಗಮನಿಸೋಣ.

---

೧೩ ಶ್ರೀ ರಾ. ದ. ಮ. ಸಂ. ೨. ಶ್ರೀ ಸಂಪುಟ ' ನೀಂ ಮಹಚ್ಛಿಲ್ಪಿಯೆ ದಿಟಂ ' ಸಾ. ೨೭೬ರಿಂದ

ಮನಶ್ಶಾಸ್ತ್ರದ ದೃಷ್ಟಿಯಿಂದ ನೋಡೋಣ. ಹೆಣ್ಣಿನ ಬಯಕೆಯನ್ನು ಹುಟ್ಟುತ್ತಲೇ ತನ್ನ ರಕ್ತದ ಕಣಕಣಗಳಲ್ಲಿ ಹೊತ್ತು ತಂದ ಈ ವ್ಯಕ್ತಿಯೇ, ಕೊನೆ ಕೊನೆಗೆ 'ನನಗೆ ದೇವತೆ, ಮಾತೆ! . . . . ಆತ್ಮದುದ್ಧಾರಮಂ ತಂದ ದೇವತೆ, ಪುಣ್ಯಮಾತೆ' ಎಂದು ಭಾವಿಸುವಷ್ಟು ಪರಿವರ್ತನೆ ಸಾಧ್ಯವೇ? ಅವನ ಮನೋ ವ್ಯಾಪಾರ ವೈಜ್ಞಾನಿಕವಾಗಿದೆಯೆ? ಇದನ್ನು ಮನಶ್ಶಾಸ್ತ್ರ ಒಪ್ಪುತ್ತದೆಯೆ? ಈ ರಾವಣ ಹುಟ್ಟಿನಿಂದಲೇ ಕಾಮನಿಪುಣನಾಗಿದ್ದರೂ ದುರ್ಮಾರ್ಗಕ್ಕೆ ಎಳೆಯುತ್ತಿದ್ದ ಅಂಕೆಯಿಲ್ಲದ ಕಾಮೋದ್ರಿಕ್ತ ಮನಸ್ಸಿಗೆ ಕಡಿವಾಣವಿಕ್ಕಿ ಸಂಯಮವನ್ನು ಸಾಧಿಸು ತ್ತಾನೆ. ಆದರೆ ಅವನ ದುರ್ದೈವಕ್ಕೆ ಯಾವ ಹೆಣ್ಣೂ ಅಂಥ ಪಾತಿವ್ರತ್ಯವನ್ನು ಕಾಪಾಡಿಕೊಂಡು ಬಂದಂತೆ ಕಾಣುವುದಿಲ್ಲ. ಯಾರಾದರೂ ಪತಿವ್ರತೆಯರು ಸಿಕ್ಕಾರೆಯೇ? ಅಂಥವರ ದರ್ಶನದಿಂದ ಪಾವನನಾದೇನೆಯೆ? ಎಂದು ತವಕಪಡು ತ್ತಿದ್ದ ಈ ರಾವಣನಿಗೆ ಮನಸೋತು, ಮೈಸೋತು ತೊಡೆ ಏರದ ಕನ್ಯೆಯರೇ ಇರಲಿಲ್ಲ. ಅಂಥವರೊಬ್ಬರು ಕಣ್ಣಿಗೆ ಬಿದ್ದರೆ ಅವರ ಪಾದ ಧೂಳಿಯನ್ನು ತಲೆಯಲ್ಲಿ ಧರಿಸೇನು ಎಂದೂ ಹೇಳುತ್ತಾನೆ. ಸೀತಾಮಾತೆಯನ್ನು ಕಾಣುವವರೆಗೆ ಅವನ ರೂಪಕ್ಕೆ, ದರ್ಪಕ್ಕೆ, ಐಶ್ವರ್ಯಕ್ಕೆ, ಶೌರ್ಯಕ್ಕೆ, ಮರುಳಾಗದ ಒಬ್ಬ ಹೆಣ್ಣನ್ನೂ ಅವನು ಕಾಣಲಿಲ್ಲ. ಎಂದಮೇಲೆ ಅವನು ಕಾಮರೂಪದ ರಸಾತಳಕ್ಕೆ ಜಾರಿಬಿದ್ದು ದರಲ್ಲಿ ಆಶ್ಚರ್ಯವೇನಿದೆ? ಹಾಗೂ, ಈ ರೀತಿ ಕಾಮವೆಂಬ ಹುಚ್ಚು ಹೊಳೆಯಲ್ಲಿ ಕೊಚ್ಚಿಹೋಗುತ್ತಿದ್ದ ರಾವಣ, ತಾ ಬಯಸಿದ ಹೆಣ್ಣನ್ನೇ 'ದೇವತೆ, ಮಾತೆ, ಪುಣ್ಯ ಮಾತೆ' ಎಂದು ಭಾವಿಸುವಷ್ಟು ಹೃದಯಪರಿವರ್ತನೆ ಸಾಧ್ಯವೆ? ಕೊಲೆಗಡುಕ ವ್ಯಾಧನೊಬ್ಬನು, ನಾರದ ಗುರುವಿನ ಅನುಗ್ರಹದಿಂದ, ಭಗವಂತನ ಕೃಪೆಯಿಂದ, ವಾಲ್ಮೀಕಿ ಮಹರ್ಷಿಯಾಗುವುದು ಸಾಧ್ಯವಾದರೆ, ಆ ವ್ಯಾಧನಿಗಿಂತಲೂ ಎನಿತೋ ಮೇಲಾಗಿದ್ದ ಭಕ್ತಾಗ್ರೇಸರ ರಾವಣನಲ್ಲಿ ಈ ಬದಲಾವಣೆ ಆಗುವುದರಲ್ಲಿ ಯಾವ ಸಂಶಯವಿದೆ? ಭಗವಂತನ ಕೃಪೆ, ಹೀಗೆಯೇ ಆಗುತ್ತದೆ ಎಂದು ಯಾರೂ ಹೇಳಲಾರರು.

> "ನಾವೊಂದು ಮೊಗದೊಳಾಶಿಸಿದರದು ಬೇರೊಂದು
> ನಮ್ಮೂಹೆಗಳವಲ್ಲದಿಹ ಮೊಗದಿ ಕೈಗೂಡಿ
> ನಡಸುವುದು ತನ್ನಿಚ್ಛೆಯಂ" ೧೪

ರಾವಣನಿಗೆ ಗುರು ಕರುಣೆ ಆದುದು ವಿಚಿತ್ರ ರೀತಿಯಲ್ಲಿ: ಸೀತೆಯನ್ನು ಕದ್ದು ಹೊತ್ತೊಯ್ದುದರ ಮೂಲಕವಾಯಿತು! ಹೀಗೆಯೇ ಆಗುತ್ತದೆ, ಆಗಬೇಕು ಎಂದು ಯಾರು ಹೇಳಬಲ್ಲರು? ಸೃಷ್ಟಿಯ ಸಕಲ ಚರಾಚರವೂ ವಿಕಾಸ ಹೊಂದಿ ಕೊನೆಗೆ ತಾನು ಯಾವುದರಿಂದ ಆಯಿತೋ, ಅದರಲ್ಲಿಯೇ ಆಗಿಹೋಗುವುದೇ

---

೧೪ ಶ್ರೀ ರಾ.ದ. ಮ.ಸಂ. ೨. ಶ್ರೀ ಸಂಪುಟ: 'ದಶಾನನ ಸ್ವಪ್ನಸಿದ್ಧಿ' —ಸಾ: ೨೯೩ ರಿಂದ

ಭಗವಂತನ ಇಚ್ಛೆ; ಅನಿವಾರ್ಯವಾದ ನಿಶ್ಚಯವಾದ ಇಚ್ಛೆ! ಆ ಇಚ್ಛೆಯನ್ನು ರಾವಣನ ವಿಚಾರದಲ್ಲಿ ಸೀತಾದೇವಿಯಮೂಲಕ ನೆರವೇರಿಸಿಕೊಳ್ಳುವುದು ಅವನ ಇಚ್ಛೆ. ಆದಕಾರಣ ರಾವಣನಲ್ಲಿ ಮೇಲೆ ಹೇಳಿದ ಬದಲಾವಣೆ ಆದುದು ಸತ್ಯವೂ ಹೌದು; ವೈಜ್ಞಾನಿಕವೂ ಹೌದು.

ರಾವಣನಲ್ಲಿ ಈ ಪರಿವರ್ತನೆಯನ್ನು ಉಂಟುಮಾಡಲು ಅನೇಕ ಸನ್ನಿವೇಶಗಳು ಘಟನೆಗಳು ಕೂಡಿಬರುತ್ತವೆ. ಮಂಡೋದರಿ, ಅನಲಾಕುಮಾರಿ, ವಿಭೀಷಣ ಚಂದ್ರನಖಿ—ಎಲ್ಲರೂ ಆ ಸನ್ನಿವೇಶವನ್ನು ಕಲ್ಪಿಸುವರು. ಇವರೆಲ್ಲರೂ ರಾವಣನ ಆತ್ಮೋದ್ಧಾರಕಾತರರು. ರಾವಣ ತಪ್ಪು ಹೆಜ್ಜೆ ಇಡುವ ಪ್ರತಿಯೊಂದು ಘಳಿಗೆಯಲ್ಲೂ ಘಟನೆಯಲ್ಲೂ ಈ ಆಪ್ತರು ಅವನನ್ನು ಎಡೆಬಿಡದೆ ಎಚ್ಚರಿಸುತ್ತಾರೆ; ಪ್ರಾರ್ಥಿಸುತ್ತಾರೆ; ಸದ್ಧರ್ಮದ ದೀಪವನ್ನು ಹಿಡಿದು, ಆತ್ಮೋದ್ಧಾರದ ಹೆದ್ದಾರಿಯನ್ನು ತೋರುತ್ತಾರೆ. ಇಷ್ಟು ಪವಿತ್ರಾತ್ಮರಿಂದ ಸುತ್ತುವರಿಯಲ್ಪಟ್ಟಿದ್ದ ಆ ರಾವಣನ ಮನಸ್ಸಿನ ಮೇಲೆ ಪ್ರಬಲವಾದ ಪರಿಣಾಮ ಉಂಟಾದುದು ಕೇವಲ ಸ್ವಾಭಾವಿಕವಾಗಿದೆ. ಹೂವಿನಿಂದ ಹುಟ್ಟಿದ ಫಲದಷ್ಟು ವೈಜ್ಞಾನಿಕವಾಗಿದೆ!

ರಾವಣನ ಜೀವನದಲ್ಲಿ ಈ ಪರಿವರ್ತನೆ ಉಂಟಾಗಲು ಕೆಲವು ಘಟನೆಗಳು ಸಹಾಯಕವಾದುವು. ಯಾವ ಹೆಂಗಸೂ ತನ್ನ ಮಂಚವನ್ನು ಏರಲು ಹೇಸಲಾರಳು ಎಂಬಂಥ ಅಹಂಕಾರ ತುಂಬಿದ ಅವನ ಎದೆಗೆ ಒದ್ದಂತೆ ಆಯಿತು–ಸೀತೆಯ ಪಾತಿವ್ರತ್ಯ, ಅವಳ ಕಠೋರವ್ರತ, ರಾವಣ ಬಗೆಗಿದ್ದ ಅತ್ಯಂತ ತಿರಸ್ಕಾರ. ಅವನ ಅಹಂಕಾರ ಜರ್ಜರಿತವಾಗಲು ಸೀತೆಯ ತಿರಸ್ಕಾರವೂ ಬಹುಮಟ್ಟಿಗೆ ಕಾರಣವಾಯಿತು. ಅವನ ಮೇಲೆ ಪ್ರಚಂಡ ಪರಿಣಾಮವನ್ನುಂಟುಮಾಡಿತು. ಆಗಲೇ ಹೆಡೆ ಮುದುಡಿಕೊಂಡಿದ್ದ ಅವನ ಅಹಂಕಾರ ಸರ್ಪವನ್ನು ಮೃತ್ಯುವೆಂಬ ಗರುಡನು ಸುಯ್ಯನೆ ಸುರುಗಿ ಎತ್ತಿಕೊಂಡೇ ಹೋಯಿತು. ಕಣ್ಣೆದುರಿನಲ್ಲೇ 'ಮಡಿದನಿಂದ್ರಜಿತು ಐಂದ್ರಾಸ್ತ್ರದಿಂ!' 'ಅತಿಕಾಯನೊಡಲುಳಿದುದಂ ಕೇಳಿದುದೆ ತಡಂ' ತನ್ನ ಮೆಚ್ಚಿನ ಉಪಪತ್ನಿ ಧಾನ್ಯಮಾಲಿನಿ ಅಸು ನೀಗಿದಳು. ಅವಳು ತನ್ನ ಕೊನೆಯ ಘಳಿಗೆಯಲ್ಲಿ ಪರವಶಳಾಗಿ ತನ್ನ ಮೊದಲ ಪತಿಯೊಡನೆ:

> "ಮುನಿಯದಿರ್, ಸ್ವಾಮಿ. ಮೆಯ್‌ ಸೋಲ್ತುದು ದಿಟಂ; ಮನಂ
> ಸುಡುತಿರ್ದುದದನೇಗಳಂ. ಮೆಯ್ಯನಲ್ಲದೇಂ
> ಮನವನಿತ್ತೆನೆ ರಾಕ್ಷಸಂಗೆ?"[೪೭]

ಎಂದು ರಾವಣನಿಗೆ ಕೇಳುವಂತೆಯೇ ನುಡಿದಾಗ: "ಬೋಧೆ ತಿಳಿದೇಳುತೆ ಜುಗುಪ್ಸೆಯಿಂದತಿ ನಾಣ್ಚಿ ಯಾತನಾ ಪಂಕದೊಳಸಹ್ಯದೊಳುರುಳ್ವವೋಲ್, ಪಿಂತೆಂದು-ಮಾವ ಕಾರಣಕನುಭವಿಸದೊಂದು ಮರ್ಮಘಾತದ ವೇಧೆಯಿಂ ನರಳ್ದನಾಳದಿಂ"[೪೮]

೪೭-೪೮. ಶ್ರೀ ರಾ.ದ. ಮಹಾ ಸಂಪುಟ ೨ ಶ್ರೀ ಸಂಪುಟ: ಪುಟ ೭೩೮-೩೯.

ಈ ಮರ್ಮಾಘಾತದಿಂದ ಚೇತರಿಸಿಕೊಂಡು ಸಂತಾಪ ದೀನಮನನಾಗಿ ಧಾನ್ಯ ಮಾಲಿನಿಯ ಪಾದಕ್ಕೆ ಎರಗುತ್ತಾನೆ! ಇಲ್ಲಿ ರಾವಣನ ಹೃದಯ ಎಷ್ಟು ಹಣ್ಣಾಗಿದೆ ಎಂಬುದನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಇದನ್ನು ನೋಡಿದ ಪರಶಿವನ ಮೈ ಪುಲಕಿಸಿತು. ಆದಿಶಕ್ತಿಯ ಮುಖದಲ್ಲಿ ಮುಗುಳುನಗೆಯ ಹೂ ಅರಳಿತು.

ಇಂದ್ರಜಿತುವಿನ ಸಾವು, ಧಾನ್ಯಮಾಲಿನಿಯ ದೇಹತ್ಯಾಗಗಳ ಪ್ರಚಂಡ ಆಘಾತಗಳಿಂದ ಚೇತರಿಸಿಕೊಳ್ಳುವುದಕ್ಕೆ ಮುಂಚೆಯೇ ತಾರಾಕ್ಷಿ ಚಿತೆ ಏರುವಳೆಂಬ ಸುದ್ದಿ ಮುಟ್ಟುತ್ತದೆ. ಆಗ ಗುಂಡಿಗೆಯ ಮೇಲೆ ಗರಗಸವನ್ನು ಎಳೆದಂತೆ, ಜರ್ಜರಿತ ನಾಗಿ ಹೋಗುತ್ತಾನೆ. ಹೀಗೆ ಕಠೋರ ತಿರಸ್ಕಾರ, ಮರ್ಮಾಘಾತ, ಮರಣ ವಾರ್ತೆಗಳ ಪರಂಪರೆಗಳ ಮಧ್ಯದಲ್ಲಿ ಸಿಕ್ಕುಬಿದ್ದು ಒದ್ದಾಡುತ್ತಿರುವ ಯಾವ ಮನುಷ್ಯ ಈ ಪ್ರಾಪಂಚಿಕ ಭೋಗಗಳಿಂದ ದೂರ ಸರಿಯಲಾರ? ರಾವಣ ಈ ಭೋಗೈಶ್ವರ್ಯ ದರ್ಪ ದಂಭ ಅಹಂಕಾರಗಳನ್ನು ಬದಿಗಿಟ್ಟು ವೈರಾಗ್ಯದ ಕಡೆ ತಿರುಗಿದುದರಲ್ಲಿ ಯಾವ ಆಶ್ಚರ್ಯ? ಇಂಥ ಕಷ್ಟದಲ್ಲಿ ಸಿಲುಕಿದ ಮನುಷ್ಯ, ಇಂಥ ದುಃಖ ಪರಂಪರೆಯನ್ನು ಅನುಭವಿಸಿದ ಮನುಷ್ಯ ಪರಿವರ್ತನೆ ಹೊಂದುವುದರಲ್ಲಿ ಯಾವ ಅನುಮಾನವೂ ಇಲ್ಲ; ಅಸಾಧ್ಯವೂಯಿಲ್ಲ. ರಾವಣನಲ್ಲಿ ಆದ ಈ ಪರಿ ವರ್ತನೆ ಕೇವಲ ವೈಜ್ಞಾನಿಕವಾಗಿದೆ! ಮನಸ್ಶಾಸ್ತ್ರ ದೃಷ್ಟಿಯಿಂದ ಸಮರ್ಪಕವೂ ಸತ್ಯವೂ ಸಾಧ್ಯವೂ ಆಗಿದೆ! ಆದಕಾರಣ ಇಂಥ ರಾವಣನ ಬಗ್ಗೆ ನಾವು ಅನುಕಂಪ ತೋರಿಸುವುದೂ ಸರಿಯೆ. ಆ ರಾವಣನಿಗಿಂತ ಈ ರಾವಣ ಹೆಚ್ಚು ಮಾನವೀಯನಾಗಿ, ಸಹಾನುಭೂತಿ, ಗೌರವ ಭಾಜನನಾಗಿರುವುದರಲ್ಲಿ ಯಾವ ವೈಪರೀತ್ಯವೂಯಿಲ್ಲ. ಕವಿಗೆ ಇರುವ ಸ್ವಾತಂತ್ರ್ಯ ಸದುಪಯೋಗವಾಗಿದೆ. ಕಾವ್ಯಕ್ಕೂ ಮೆರಗು ಬಂದಿದೆ.

ಈಗ ಕಾವ್ಯದೃಷ್ಟಿಯಿಂದ ರಾವಣನ ಪಾತ್ರದಲ್ಲಿ ಉಂಟಾಗಿರುವ ಈ ಬದ ಲಾವಣೆಯ ಔಚಿತ್ಯವನ್ನು ಗಮನಿಸೋಣ. ಕಾವ್ಯದ ಉದ್ದೇಶ ಪ್ರಧಾನವಾಗಿ, ಮನುಷ್ಯನನ್ನು ಮನುಷ್ಯನನ್ನಾಗಿ ಮಾಡಿ ದೇವತ್ವಕ್ಕೆ ಕೊಂಡೊಯ್ಯುವುದೇ ಆಗಿದೆ. ಮನುಷ್ಯ, ಹಿಂದಿನಂತೆ ಈಗಲೂ-ಬಹುಶಃ ಇನ್ನು ಮುಂದೆಯೂ ಕೂಡ, ನಿಜವಾದ ಮನುಷ್ಯನಾಗಿಲ್ಲದಿರುವುದಕ್ಕೆ ಅವನ ಹೃದಯದ ಸಂಕುಚಿತತೆಯೇ ಕಾರಣ. ಆ ಹೃದಯ ವಿಕಾಸವಾಗಬೇಕು. ಆ ವಿಕಾಸಕ್ಕೆ ಕಾವ್ಯ ಅನಿವಾರ್ಯವಾದ, ಅಗತ್ಯ ವಾದ ಸಾಧನ. ಈ ಕಾರ್ಯದಲ್ಲಿ ಯಶಸ್ವಿಯಾಗುವ ಕಾವ್ಯವೇ ನಿಜವಾದ ಕಾವ್ಯ. ಇನ್ನುಳಿದ ಕಾವ್ಯ ಕೇವಲ ಗಿಲೀಟಿನ ಮುತ್ತು ಇದ್ದಂತೆ. ಅದು ಎಷ್ಟು ಹೊಳಪಾಗಿ ಕಂಡರೂ ಅದರ ಉಪಯೋಗ ಬಾಹ್ಯ ಉಪಯೋಗಕ್ಕೇ ನಿಂತುಹೋಯಿತು.

ಹೃದಯ ವಿಕಾಸಹೊಂದಿದ ಮನುಷ್ಯನಾದ ಮನುಷ್ಯನ ನಿಜವಾದ ಲಕ್ಷಣ ವೆಂದರೆ, ಲೋಕದಲ್ಲಿ ಕೆಟ್ಟುದನ್ನು ಕೊನೆಯವರೆಗೂ ಕೇವಲ ಕೆಟ್ಟುದನ್ನಾಗಿಯೇ ಕಾಣದಿರುವುದು; ಕೆಟ್ಟುದನ್ನೇ ನೋಡದಿರುವುದು; ಆಡದಿರುವುದು. ಅಪ್ರಿಯ

ವಾದುದಕ್ಕೆ. ಯಾವನ ಕಣ್ಣು ಕುರುಡಾಗಿದೆಯೋ, ಯಾವನ ಕಿವಿ ಕಿವುಡಾಗಿದೆಯೋ ಯಾವನ ನಾಲಗೆ ಸೇದಿ ಹೋಗಿದೆಯೋ ಅವನೇ ನಿಜವಾದ ಮನುಷ್ಯ. ದೊಡ್ಡ ಮನಸ್ಸು ಬೆಳೆದವನ ದೃಷ್ಟಿಯಲ್ಲಿ ಯಾರೂ ದ್ವೇಷಾರ್ಹರಲ್ಲ. ಯಾಕೆಂದರೆ, ಅವನ ಹೃದಯದಲ್ಲಿ ದ್ವೇಷಕ್ಕೆ ಎಡೆಯೇಯಿಲ್ಲ. ಯಾವ ಕಾವ್ಯ ಈ ಬಗೆಯ ಹೃದಯ ವಿಕಾಸಕ್ಕೆ, ದೊಡ್ಡ ಮನಸ್ಸಿನ ಅವತರಣಿಕೆಗೆ ನೆರವಾಗುವುದೋ, ಅದೇ ನಿಜವಾದ ಕಾವ್ಯ; ಲೋಕಮಾನ್ಯವಾದ ಕಾವ್ಯ; ನಿತ್ಯ ಸತ್ಯವಾಗಿ ನಿಲ್ಲುವ ಕಾವ್ಯ.

ಈ ಹೃದಯ ಪರಿವರ್ತನೆಯ ಕಾರ್ಯ ರಾವಣನ ಪಾತ್ರದ ನಿರೂಪಣೆಯಿಂದ ಹೇಗೆ ಸಾಧ್ಯವಾಗಿದೆ? ಯಾವ ವಾಲ್ಮೀಕಿ ರಾಮಾಯಣದ ರಾವಣ ಕಡು ಪಾಪಿಯೋ, ಪರಮ ನೀಚನೋ, ಪ್ರೀತಿ, ವಿಶ್ವಾಸ, ಸಹಾನುಭೂತಿಗೆ ಅಪಾತ್ರನೋ, ಅವನು ಶ್ರೀರಾಮಾಯಣ ದರ್ಶನಂ ಮಹಾಕಾವ್ಯದಲ್ಲಿ ಸಕಲಜನ ಗೌರವಕ್ಕೆ ಭಾಗಿಯಾಗಿದ್ದಾನೆ; ಅನುಕಂಪೆಗೆ ಗುರಿಯಾಗಿದ್ದಾನೆ. ಎಂದ ಮಾತ್ರಕ್ಕೆ ಆ ದುರಾಚಾರಿಯ ದುಷ್ಕೃತ್ಯಗಳ ಬಗ್ಗೆ ಕರುಣೆಯಿಡಬೇಕೆಂದಲ್ಲ; ಸಹಾನುಭೂತಿ ತೋರಿಸಬೇಕೆಂದಲ್ಲ. "ಯಶೋಧರ ಚರಿತೆ"ಯ ಅಮೃತಮತಿ ಜಾರಿದಳು; ಪತಿತೆಯಾದಳು. ಹೋಗಲಿ, ಇಲ್ಲಿಗಾದರೂ ಮುಗಿಯಿತೇನು ಅವಳ ಕಥೆ? ಇಲ್ಲ. ಆಕೆ ಪತಿತೆ ಮಾತ್ರವೇ ಅಲ್ಲ ನೀಚೆ; ಕುಟಿಲೆ; ಪಾತಕಿ; ಸರ್ವ ಪಾಪಗಳ ಘನೀಭೂತ ಪ್ರತಿಷ್ಠೆ. ಇಂತಹ ಪಾತ್ರವನ್ನು ಕುರಿತು ಅನುಕಂಪೆ ಹುಟ್ಟುವುದು ಅಸಂಭವ.[೧೬] ಅಮೃತಮತಿಯ ಬಗ್ಗೆ ಈ ತಿರಸ್ಕರವೇಕೆ? ರಾವಣನ ಬಗೆಗೆ ಈ ಪುರಸ್ಕಾರವೇಕೆ? ಅಮೃತಮತಿ ನಿರ್ನಿಮಿತ್ತವಾಗಿ, ಯಾವ ಕಾರಣವೂ ಇಲ್ಲದೆ, ಕೇವಲ ತನುರುಚಿಯ ಚಾಪಲ್ಯಕ್ಕಾಗಿ ಜಾರುತ್ತಾಳೆ. ಆಕೆ ಬಯಸಿದ್ದು ಜಾರುವುದನ್ನು ಒಂದೇ! ಅದಕ್ಕೆ ಯಾವ ಕಾರಣವೂಯಿಲ್ಲ. ಅವಳು ಅಲ್ಲಿ ಕೇವಲ 'ಪಾದರಿ' 'ಜಾರಿಣಿ'. ಅಂಥವಳ ಬಗೆಗೆ ಅನುಕಂಪೆ ಹುಟ್ಟುವುದಿಲ್ಲ; ಅಸಹ್ಯ ಜಿಗುಪ್ಸೆಗಳು ಹುಟ್ಟುತ್ತವೆ. ಆದರೆ ರಾವಣನ ಜಾರುವಿಕೆಗೆ ಹುಟ್ಟಿದಂದಿನಿಂದಲೂ ಕಾರಣಗಳಿವೆ. ಅವನು ಜಾರುವಾಗಲೂ ಅದರ ಸೊಬಗಿಗಾಗಿಅಲ್ಲ. ತಾ ಮಾಡುವ ದುಷ್ಕಾರ್ಯ ಸರಿ ಎಂದಾಗಲೀ, ಸಮರ್ಥನೀಯವೆಂದಾಗಲೀ—ಎಂದೂ ಬಗೆಯುವುದಿಲ್ಲ. ತದ್ವಿರುದ್ಧವಾಗಿ ಅವನು ತನ್ನನ್ನು ತಾನೇ ಖಂಡಿಸಿಕೊಳ್ಳುತ್ತಾನೆ. ಪಶ್ಚಾತ್ತಾಪಪಡುತ್ತಾನೆ. ಆದರೆ ಯಾವುದೋ ಒಂದು ದೌರ್ಬಲ್ಯದಿಂದ, ವಿಧಿಯ ವಜ್ರ ನಿಯತಿಯಿಂದ, ಮೂಗುದಾಣದ ಅಳುಕಿಗೆ ಸಿಕ್ಕಿ ಜಾರುತ್ತಾನೆ. ಇಂಥವನ ಬಗೆಗೆ ಕರುಣೆ, ಅನುಕಂಪೆ ಹುಟ್ಟುವುದು ಸಹಜವೇ ಹೊರತು, ಅವನು ತಿರಸ್ಕಾರ ಯೋಗ್ಯನಲ್ಲ. ದ್ವೇಷಕ್ಕೆ ಯೋಗ್ಯನಲ್ಲ. ಹಾಗೆ ತಿರಸ್ಕರಿಸಿ ದ್ವೇಷಿಸುವುದರಿಂದ ಅವನ ಉದ್ಧಾರವೂ ಆಗುವುದಿಲ್ಲ; ದ್ವೇಷಿಸುವವರ ಉದ್ಧಾರವೂ ಆಗುವುದಿಲ್ಲ.

---

೧೬. ಶ್ರೀ ಕುವೆಂಪು ಅವರ 'ದ್ರೌಪದಿಯ ಶ್ರೀ ಮುಡಿ'ಯ ೨೩ ನೆ ಪುಟ ನೋಡಿ.

ಏಕೆಂದರೆ, ಕೆಟ್ಟವರ ಬಗೆಗಾಗಿ ದ್ವೇಷವನ್ನು ತಾಳುವುದೂ ದೊಡ್ಡ ಮನಸ್ಸಿನ ಲಕ್ಷಣವಲ್ಲ; ಮನುಷ್ಯರ ಲಕ್ಷಣವಲ್ಲ. ಈ ಸಂದರ್ಭದಲ್ಲಿ ಪಾಪದ್ವೇಷಕ್ಕೂ ಪಾಪಿ ದ್ವೇಷಕ್ಕೂ ಇರುವ ಅಂತರವನ್ನು ನೆನಪಿನಲ್ಲಿಟ್ಟುಕೊಳ್ಳುವುದು ಉತ್ತಮ. "ಕಾವ್ಯದಲ್ಲಾಗಲಿ, ಬದುಕಿನಲ್ಲಾಗಲಿ ಪಾಪ ಸಮರ್ಥನೆ ಕೇಡಿಗೆ ಹೆದ್ದಾರಿ. ಪಾಪಿಯಲ್ಲಿ (ತೋರುವ)ಅನುಕಂಪೆ, ಪಾಪದಲ್ಲಿ ಮೈತ್ರಿಯಾಗಬಾರದು.......ಶಸ್ತ್ರ ಚಿಕಿತ್ಸೆಗೆ ಅರ್ಹವಾದ ರೋಗದೊಡನೆ ಅನುಕಂಪೆ ತೋರಿದರೆ ದೇಹನಾಶ ಸ್ವತಃ ಸಿದ್ಧ. ನರಕ ಶಿಕ್ಷೆಗೆ ಅರ್ಹವಾದ ಪಾಪದೊಡನೆ ಸಹಾನುಭೂತಿಯ ಸರಸವಾಡಿದರೆ ಆತ್ಮನಾಶ ಸ್ವತಃ ಸಿದ್ಧ."೧೭ ನಮ್ಮೆಲ್ಲರಲ್ಲೂ ಇರುವ ಪಾಪವನ್ನು ದ್ವೇಷಿಸಿ ನಿರ್ಮೂಲ ಮಾಡಲೇ ಬೇಕು. ಆದರೆ ನಮ್ಮಲ್ಲಿರುವ ಪಾಪಿಗಳನ್ನು ದ್ವೇಷಿಸುವುದು ದೊಡ್ಡ ಮನಸ್ಸಿನ ಲಕ್ಷಣವಲ್ಲ. ಇಂಥ ದೊಡ್ಡ ಮನಸ್ಸಿನ ವಿಕಾಸಕ್ಕೆ, ಅವತರಣಿಕೆಗೆ ಈ ರಾವಣನ ಪಾತ್ರ ಎಷ್ಟರಮಟ್ಟಿಗೆ ನೆರವಾಗುತ್ತದೆ? ಕಾವ್ಯದ ನಡೆಗೆ, ಸೌಂದರ್ಯಕ್ಕೆ, ಶ್ರೇಷ್ಠತೆಗೆ ಹೇಗೆ ಒಪ್ಪಕೊಟ್ಟಿದೆ ಎಂಬುದನ್ನು ಸ್ವಲ್ಪದರಲ್ಲಿ ಹೇಳುವುದು ಸಾಧ್ಯವಿಲ್ಲ. ರಾವಣ-ಮಂಡೋದರಿಯರ ಸಂವಾದ, ರಾವಣ-ಅನಲಾಕುಮಾರಿಯ ಸಂವಾದ; ರಾವಣ ವಿಭೀಷಣರ ಸಂವಾದ; ರಾವಣ-ಚಂದ್ರನಖಿಯರ ಸಂವಾದ; ರಾವಣ-ತಪೋಲಕ್ಷ್ಮಿಯರ ಸಂವಾದ ಮುಂತಾದ ಸಂದರ್ಭಗಳನ್ನು ಸೂಚಿಸಬಹುದು. ರಾವಣನ ಈ ಬದಲಾವಣೆಯಿಂದ ಮಾನವನ ಗುಣಚಿತ್ರಣ ಇದುವರೆಗೆ ಎಲ್ಲಿಯೂ ಆಗದಷ್ಟು ಶ್ರೇಷ್ಠವಾಗಿ ಆಗಿದೆ ಎಂದು ಧೈರ್ಯವಾಗಿ ಹೇಳಬಹುದು. 'ರಾವಣತ್ವಂ ತವಿದು ರಾಮತತ್ವಂ' ಉಂಟಾಗುತ್ತದೆ. 'ಅರಾವಣಂ ವಾ ಅರಾಮಂ ದಿಟಂ!' ರಾಮ ರಾವಣರಿಬ್ಬರೂ ಒಂದೇ ಪುರುಷೋತ್ತಮನ ಎರಡು ಗುಣ; ಎರಡೂ ಒಂದಾಗಿಯೇ ತೀರುವುದು-ಎಂಬ ಉನ್ನತ ಸತ್ಯ ಸಾಕ್ಷಾತ್ಕಾರಕ್ಕೆ ನಾಂದಿಯಾಗುವ ಅತಿಮಾನಸದ ಅವತರಣಿಕೆಗೆ ಸಹಾಯಕವಾಗುತ್ತದೆ! ಎಂದಮೇಲೆ ಈ ರಾವಣ ನಮ್ಮ ಪ್ರಜ್ಞೆಯ ವಿಕಾಸಕ್ಕೆ ನೆರವಾಗುವುದಿಲ್ಲವೆ? ಅಂತೆಯೇ ಕಾವ್ಯವೂ ತನ್ನ ಉದ್ದೇಶವನ್ನು ನೆರವೇರಿಸಿಕೊಳ್ಳುವುದಿಲ್ಲವೆ? ಇದರಿಂದ ಕನ್ನಡದ ಶ್ರೀಮಂತ ಸಾಹಿತ್ಯ ಇನ್ನೂ ಶ್ರೀಮಂತವಾಗಿಲ್ಲವೆ?

—ಕೋ. ಚೆನ್ನಬಸಪ್ಪ

೧೭. ಶ್ರೀ ಕುವೆಂಪುರವರ "ದ್ರೌಪದಿಯ ಶ್ರೀಮುಡಿ" ಪುಟ ೨೮.

ಲಾಗ

ಲಾಗ ಹೊಡಿಯೆಲೊ ಮಂಗ ಲಾಗ ಹೊಡಿಯೆಲೊ ಮಂಗ
ಬಗ್ಗಿ ದಣಿಯರ ಮುಂದೆ ಲಾಗ ಹೊಡಿಯೊ ;
ಹಾಕು ಅಂತರ್ಲಾಗ, ಹಾಕು ಜಂತರ್ಲಾಗ
ನೆರೆದ ಮಹನೀಯರಿಗೆ ಶರಣು ಹೊಡಿಯೊ.

ಇಸ್ತ್ರಿಮಾಡಿದ ಪ್ಯಾಂಟು, ಕ್ರಾಪುತಲೆ, ಬುಶ್‌ಕೋಟು–
ತೊಗಲಚೀಲವ ಹಿಡಿದುಕೊಂಡು ಮಗನೆ
ಅತ್ತಿತ್ತ ಹಣಿಕಿದರೆ ಲತ್ತೆ ಬಿದ್ದಾವು ಬಾ
ಕುತ್ತಿಗೆಯ ಹಗ್ಗವನು ಜಗ್ಗಿದೊಡನೆ.

ಬಡಿವಾರ ಮಾಡುತ್ತ ಬಸಿನಿಂಗಿ ಬಂದಾಗ
ಓಡಿ ಹೋಗುವರೇನೊ ಬಡೇಮಿಯಾ ?
ಲಾಗ ಹೊಡೆಯುತ ಬಂದು ಗಜಮು ನಿಂತರೆ ನಿನಗೆ
ದೊಡ್ಡ ಕೋಲಿನ ಪದವಿ ನಿಸ್ಸಂಶಯ.

ಕಂಡಕಂಡವರೆದುರು ಹಲ್ಲುಕಿರಿ, ಪರವಿಲ್ಲ ;
ಕೆಲಸ ತೀರುವವರೆಗು ಮುಜುರೆ ಮಾಡು–
ತೊಲೆಯ ಸಂದಿಯ ನಡುವೆ ಬಾಲ ಜೋತಾಡಿಸುತ
ಕೀಲು ಹಿರಿದರೆ ಮಾತ್ರ ನಿನಗೆ ಕೇಡು.

ನೀಕೊಟ್ಟ ಹಣ್ಣು ರುಚಿ, ಹೃದಯವಿನ್ನೆಷ್ಟು ಸವಿ !–
ಕಡಲ ತಳದಲಿ ಮೊಸಳೆ ತೆರೆದ ಬಾಯಿ !
ಮರದಲ್ಲಿ ಹೃದಯವನು ಬಿಟ್ಟ ಸೋಜಿಗವ ನುಡಿ,
ಬದುಕಿಕೊಳ್ಳಲು ಇದೇ ತಕ್ಕ ದಾರಿ.

ಬೆಕ್ಕು-ಬೆಣ್ಣೆಯ ಜಗಳದಲ್ಲಿ ತಕ್ಕಡಿ ತೂಗಿ
ನ್ಯಾಯದಾನವಗೈದ ನಿನ್ನ ಬುದ್ಧಿ–
ರಾಜಕಾರಣಿಗಳನು ತಲೆದೂಗಿಸಿಹುದಿಲ್ಲಿ–
ನಿನಗಿಂತ ಅವರಿಗೇ ಹೆಚ್ಚು ಸಿದ್ಧಿ,

ಗುಲಗಂಜಿಯನು ಬೆಂಕಿ ಕಿಡಿಯೆಂದು ಊದಿದರೆ
ನಿನಗಂಜಿ ಚಳಿಹೋಯ್ತು, ಬರೋಬರಿ.
*ಸೂಚೀಮುಖನು ಪಟ್ಟ ಪಾಡು ಯಾರಿಗೆ ಬೇಕು
ಲಾಗ ಹೊಡಿಯೋ ರಾಜ, ನಿಂದೇ ಸರಿ.

ಪ್ರತಿವರುಷ ನಿನಗೆಂದೆ ವನಮಹೋತ್ಸವವುಂಟು
ಮೋರೆ ಒಣಗಿಸಿಕೊಂಡರೇನು ಬಂತು?
ಬೇರೆ ದೇಶಗಳಿಂದ ನಿನಗು ಬೇಡಿಕೆಯುಂಟು
ಸೇತು ಬಂಧವ ಬಿಟ್ಟು, ಹಡಗ ಹತ್ತು.

ಲಾಗ ಹೊಡಿಯೆಲೊ ಮಂಗ, ಲಾಗ ಹೊಡಿಯೆಲೊ ಮಂಗ
ಲಾಗ ಹೊಡೆದರೆ ಬೇರೆ ತ್ಯಾಗ ಬೇಡ-
ಹಾಕು ಅಂತರ್ಲಾಗ ಹಾಕು ಜಂತರ್ಲಾಗ-
ಡೋಲು ಬಡಿಸುವದಕ್ಕೆ ಮರೆಯಬೇಡ.

—ಚೆನ್ನವೀರ ಕಣವಿ

---

*ಸೂಚೀಮುಖನೆಂಬ ಪಕ್ಷಿ—ಪಂಚತಂತ್ರ.

ಕರ್ಣಾಟಕದ
ಸಂಸ್ಕೃತ ಶಾಸನ ಕವಿಗಳು

ಭಾರತೀಯ ಸಂಸ್ಕೃತಿಯ ಜೀವನಾಡಿಯಾದ ಸಂಸ್ಕೃತ ಸಾಹಿತ್ಯಕ್ಕೆ ಕನ್ನಡಿಗರ ಕಾಣಿಕೆ ಅಲ್ಪವಾದುದಲ್ಲ. ಕನ್ನಡ ಸಾಹಿತ್ಯದ ಪ್ರಾರಂಭದ ಕಾಲದಿಂದ ಇತ್ತೀಚಿನವರೆಗೆ ಕನ್ನಡ ಸಂಸ್ಕೃತಗಳೆರಡರಲ್ಲೂ ಕಾವ್ಯಾದಿಗಳನ್ನು ರಚಿಸಿ 'ಉಭಯ ಭಾಷಾಚಕ್ರವರ್ತಿ'ಗಳೆಂದೆನಿಸಿಕೊಂಡ ಕವಿಗಳನೇಕರಿದ್ದಾರೆ. ನಮ್ಮ 'ರತ್ನತ್ರಯ'ದಲ್ಲಿ ಒಬ್ಬನಾದ ಪೊನ್ನನ ಕೃತಿಯನ್ನಭ್ಯಸಿಸಿದವರಿಗೆ ಅವನು ತನ್ನನ್ನು ಕಾಳಿದಾಸನಿಗೆ ಹೋಲಿಸಿಕೊಂಡುದರಲ್ಲಿ ತಥ್ಯ ಕಾಣದಿರದು. ಆರ್ಮ್ಮಡಿ ವಿಕ್ರಮಾದಿತ್ಯ, ಬಲ್ಲಾಳರಂಥ ಆಶ್ರಯದಾತರು, ಮೂವಡಿ ಸೋಮೇಶ್ವರ, ಕೃಷ್ಣದೇವರಾಯರಂಥ ಅರಸುಕವಿಗಳು, ವಿದ್ಯಾರಣ್ಯ, ಸಾಯಣ, ಮಧ್ವಾಚಾರ್ಯ, ಜಯತೀರ್ಥ ಮುಂತಾದ ವೇದಾಂತಿಗಳು ಕನ್ನಡದೊಂದಿಗೆ ಸಂಸ್ಕೃತಸಾಹಿತ್ಯ ಹುಲುಸಾಗಿ ಬೆಳೆಯಲು ಕಾರಣವಾದರು. ವೇದ, ವ್ಯಾಕರಣ, ತತ್ತ್ವಜ್ಞಾನ, ಕಾವ್ಯ ಮುಂತಾದ, ಸಂಸ್ಕೃತ ಸಾಹಿತ್ಯದ ಎಲ್ಲ ಅಂಗಗಳಿಗೂ ಕನ್ನಡಿಗರು ತಮ್ಮ ಕಾಣಿಕೆಯನ್ನಿತ್ತುದು ಇತಿಹಾಸದ ಅವಲೋಕನದಿಂದ ಸ್ಪಷ್ಟವಾಗುತ್ತದೆ.

ಗ್ರಾಂಥಿಕ ಸಾಹಿತ್ಯಕ್ಕೆ ಪೂರಕವಾದ ಇನ್ನೊಂದು ಅಂಗವೆಂದರೆ ಶಾಸನ ಸಾಹಿತ್ಯ. ದೇಶದ ರಾಜಕೀಯ ಚರಿತ್ರೆಯ ರಚನೆಗೆ ಶಾಸನಗಳು ಆಧಾರಸ್ತಂಭಗಳೆಂಬುದು ಸರ್ವವಿದಿತ. ಜೊತೆಗೆ ಅವುಗಳ ಭಾಷೆ, ಸಾಹಿತ್ಯಗಳ ಚರಿತ್ರೆಗಳ ಅಭ್ಯಾಸ ಅಗತ್ಯ. ಅನೇಕ ಶಾಸನಗಳು, ಯಾವದೊಂದು ಐತಿಹಾಸಿಕ ಘಟನೆಯನ್ನು ನಿರೂಪಿಸುವುದರ ಜೊತೆಗೆ ಸುಂದರವಾದ ಕಾವ್ಯವನ್ನೂ ಒದಗಿಸುತ್ತವೆ. ಅಂದರೆ ಸಾಹಿತ್ಯದೃಷ್ಟಿಯಿಂದ ಅವು ಕಾವ್ಯಗ್ರಂಥಗಳಿಗೆ ಹೋಲಿಕೆಯಾಗಿ ನಿಲ್ಲುತ್ತವೆ ಎಂದಲ್ಲ. ಶಾಸನಕರ್ತರ ಮುಖ್ಯ ಉದ್ದೇಶ ಕಾವ್ಯರಚನೆಯಲ್ಲ. ಆದರೂ ಇದ್ದ ಅವಕಾಶವನ್ನು ಉಪಯೋಗಿಸಿಕೊಂಡು ಕೆಲವರಾದರೂ ತಮ್ಮ ಪ್ರತಿಭೆಯನ್ನು ವ್ಯಕ್ತಪಡಿಸಿದ್ದುದು ಕಂಡುಬರುತ್ತದೆ. ಅಂಥ ಶಾಸನಗಳು ಗಾತ್ರದಲ್ಲಿ ಅಲ್ಲದಿದ್ದರೂ ಗುಣದಲ್ಲಿ ಕಾವ್ಯಗಳೆಂದೆನಿಸಿಕೊಳ್ಳಲು ತಕ್ಕವುಗಳಾಗಿವೆ. ಕನ್ನಡನಾಡಿನಲ್ಲಿ ಇಂಥ ಶಾಸನಕಾವ್ಯಗಳು ಕನ್ನಡದಲ್ಲಿ ಬಹುಸಂಖ್ಯೆಯಲ್ಲಿ ದೊರೆತಂತೆ ಸಂಸ್ಕೃತದಲ್ಲಿಯೂ ಎಷ್ಟೋ ದೊರೆಯುತ್ತವೆ. ಇಂಥವುಗಳಲ್ಲಿ ಆಳಗುಂದ, ಐಹೊಳೆಗಳಲ್ಲಿಯ ಶಾಸನಗಳನ್ನು ಉದಾಹರಿಸಬಹುದು. ಮತ್ತೆ, ಹೀಗೆ ದೊರೆತ ಎಷ್ಟೋ ಶಾಸನಗಳಲ್ಲಿ ಒಳ್ಳೆಯ ಬಂಧದ ಪದ್ಯಗಳಿದ್ದರೂ ಅವುಗಳ ಕರ್ತೃವಿನ ಹೆಸರಿರುವುದಿಲ್ಲ. ಕವಿಯ ಹೆಸರು ಉಕ್ತವಾದ ಕೆಲವೆಡೆಗಳಲ್ಲಿ ಅವನ ವಿಷಯವಾಗಿ ಹೆಚ್ಚಿನ ವಿವರವೂ ಸಿಗುವುದಿಲ್ಲ. ಅಲ್ಲದೆ ಈ ರೀತಿಯ ಕಾವ್ಯಗಳೆಲ್ಲ ಉತ್ತಮ ಮಟ್ಟದಲ್ಲೇ ಇರುತ್ತವೆ

ಯೆಂದೂ ಹೇಳಲು ಬರುವುದಿಲ್ಲ. ಏನೇ ಆದರೂ ಇಂಥವುಗಳೂ ಸದ್ಯದ ನಮ್ಮ ಸಾಹಿತ್ಯ ಚರಿತ್ರೆಯ ಜ್ಞಾನಕ್ಕೆ ಪೂರಕವಾಗುತ್ತವೆ ಎಂಬದು ಮಾತ್ರ ನಿರ್ವಿವಾದ.

ಈ ಲೇಖನದ ಉದ್ದೇಶ, ಇಂಥ ಕೆಲ ಕವಿ-ಕಾವ್ಯಗಳ ಪರಿಚಯ.

ಗೋವಿಂದದೇವ (ಕ್ರಿ. ಶ. ೧೧೭೪)

ಬೆಳಗಾಂವ ಜಿಲ್ಲೆಯ ದೇಗಾಂವ ಎಂಬಲ್ಲಿಯ ಎರಡು ಶಾಸನಗಳಲ್ಲಿ ಗೋವಿಂದದೇವನ ಉಲ್ಲೇಖವಿದೆ.[೧] ಈ ಎರಡು ಶಾಸನಗಳು ಬೇರೆ ಬೇರೆ ಲಿಪಿಯಲ್ಲಿ, ಅಂದರೆ ಒಂದು ನಾಗರಿಯಲ್ಲಿ, ಇನ್ನೊಂದು ಕನ್ನಡದಲ್ಲಿ, ಇದ್ದರೂ ಸಾಹಿತ್ಯ ಒಂದೇ ; ಒಂದು ಇನ್ನೊಂದರ ಪ್ರತಿಮಾತ್ರ. ಶಾಸನದ ಕೊನೆಗೆ ಕವಿ ವಿಷಯಕ ವಾದ ಉಲ್ಲೇಖ ಹೀಗಿದೆ—

ತರ್ಕ್ಕೇ ತಂತ್ರೇ ಕವಿತ್ವೇ ಚ ನಿರಂಕುಶ ಮತೇರಿಯಂ ।
ಕೃತಿರ್ಗೋವಿಂದದೇವಸ್ಯ ಜಯತ್ವಾ ಚಂದ್ರತಾರಕಮ್ ॥

ಗೋವೆಯ ಕದಂಬ ಮನೆತನದ ಶಿವಚಿತ್ತ ಪೆರ್ಮ್ಮಾಡಿದೇವನ ಮಹಿಷಿ ಕಮಲಾದೇವಿ ದೇಗಾಂವೆಯ ಗ್ರಾಮವನ್ನು ಅಗ್ರಹಾರವಾಗಿ ನಿರ್ಮಿಸಿ, ಅಲ್ಲಿ ಅನೇಕ, ವಿದ್ವಾಂಸರಾದ ಬ್ರಾಹ್ಮಣರು ನೆಲಸುವಂತೆಮಾಡಿ, ಅವರಿಗೆ ಅನೇಕ ವೃತ್ತಿ ಗಳನ್ನು ಹಾಕಿಕೊಟ್ಟದು ಶಾಸನದ ಮುಖ್ಯ ವಿಷಯ. ಶಾಸನವು ಉತ್ಕೀರ್ಣ ವಾದದೂ ಅರಸಿಯ ಅಪ್ಪಣೆಯಮೇರೆಗೆ. ಇದರ ಕಾಲ ಶಿವಚಿತ್ತ ಪೆರ್ಮ್ಮಾಡಿದೇವನ ಆಳಿಕೆಯ ೨೮ ನೆಯ ವರ್ಷ, ಜಯಸಂವತ್ಸರ ಅಂದರೆ ಕ್ರಿ. ಶ. ೧೧೭೪.

ಕವಿ ಗೋವಿಂದದೇವನ ಈ ಚಿಕ್ಕ ಕಾವ್ಯದವಸ್ತು ಕದಂಬಮನೆತನದ ಪ್ರಶಸ್ತಿ— ಅವರ ಗುಣ, ಶೌರ್ಯ್ಯ, ಇವುಗಳ ವರ್ಣನೆ. ಆದರಲ್ಲಿಯ ಕೆಲವು ಶ್ಲೋಕಗಳಿವು— ಅವರ ವಂಶಾವಳಿ,

ಈ ಮನೆತನದ ಒಬ್ಬ ಅರಸು—**ಷಷ್ಠದೇವ—ಆರನೆಯ ಪಾಂಡವ**

ದುರ್ಯ್ಯೋಧನಾನೀಕ ಜಯಾಯ ಭೂಯಃ
ಕಾಲೇ ಕಲೌ ಪಾಂಡವಪುಂಗವೇಷು ।
ಪುಣ್ಯೋದಯಃ ಷಷ್ಠ ಇವಾವಿರಾಸೀ-
ತ್ತಸ್ಯಾತ್ಮಜಃ ಕೋऽಪಿ ಚ ಷಷ್ಠದೇವಃ ॥

---

೧. Journal of Bombay Branch Royal Asiatic Society, Vol. IX, PP. 266 ff and PP. 287 ff.

೨. ಇಲ್ಲಿ ತಸ್ಯ ಅಂದರೆ ಗೂಹಲ್ಲದೇವ ಅಥವಾ ಗೂವಲದೇವ—ಷಷ್ಠದೇವನ ತಂದೆ. ಇದರ ಹಿಂದಿನ ಶ್ಲೋಕದಲ್ಲಿ ಅವನ ಉಲ್ಲೇಖವಿದೆ.

ಇವನು ಲಂಕೆಯನ್ನು ಗೆಲ್ಲಲು ಸೇತುಬಂಧಾದಿಗಳಂಥ ಪ್ರಯಾಸ ಅಗತ್ಯವೇ ಇರಲಿಲ್ಲ !

ನ ಸೇತು ಬಂಧೋ ನ ಚ ದುರ್ಗರೋಧೋ
ನ ವಾನರಾನೀಕ ಪತಿಪ್ರಯಾಸಃ |
ನೋ ವಾ ಸುಮಿತ್ರಾತ್ಮಜ ಸಂಭ್ರಮೋ ಭೂ-
ಲ್ಲಂಕಾ ಪತಿಸ್ತಸ್ಯ ತಥಾಪಿ ವಶ್ಯಃ ||

ರಿಪುನೃಪರ ಅರಸಿಯರು ಇವನ ಅರಮನೆಯಲ್ಲಿ ಸೇವಕಿಯರು !

ಬಂದೀಕೃತಾರಾತಿ ನೃಪಾಂಗನಾನಾಂ
ತಸ್ಯಾರ್ಥಿನಾಂ ವೇಶ್ಮನಿರಾಕರೀಣಾಂ |
ವಿಳಾಸ ವಾಪೀಜಳ ಹಾರಿಣೀನಾಂ
ಮಂಜೀರ ನಾದಾನುಚರಾ ಮರಾಳಾಃ ||

ಷಷ್ಠದೇವನ ಮಗ ಜಯಕೇಶಿ–ಅವನ ಕಾಲದ ವೈಭವವಿದು—

ಆಂದೋಲಿಕಾಭಿರ್ಮ್ಮಣಿದಣ್ಡಿಕಾಭಿಃ
ಪ್ರಾಂತಸ್ಫುರತ್ಕಾಂಚನಕುಂಡಲೀಭಿಃ |
ಗತ್ಯಾಗತಾಭಿಃ ಖಲು ಪಂಡಿತಾನಾಂ
ಪೂರ್ಣಾಂತರಾ ಯತ್ಪುರರಾಜ ವೀಥೀ ||

ಆತನ ಮಗ ವಿಜಯಾದಿತ್ಯ — ಅವನು ಜೈತ್ರಯಾತ್ರೆಗೆ ಹೊರಟಾಗ ಸಮುದ್ರವೂ ವಂದಿಮಾಗಧರಂತೆ ಅವನ ಘೋಷಣೆ ಮಾಡುತ್ತಿತ್ತು—

ಯಾತ್ರೋತ್ಸವೇ ಪೋತ ಪರಂಪರಾಭಿ-
ರ್ನ್ನಿರ್ಘಟ್ಟಿತೋ ವಾರಿಧಿರೂರ್ಮ್ಮಿ ಘೋರೈಃ |
ದ್ವೀಪಾಂತರೇಷು ದ್ವಿಷತಾಂ ಪುರಸ್ತಾ-
ದ್ವನ್ದೀವ ಯದ್ವಿಕ್ರಮ ಘೋಷಣೋಽಭೂತ್ ||

ಇವನ ಮಗ (೨ ನೆಯ) ಜಯಕೇಶಿ, ವಿದ್ಯಾಪಕ್ಷಪಾತಿ—ಇವನ ಮಂದಿರದ ಮುಂದೆನಿಂತ ಅಸಂಖ್ಯಾಜನ ಪಂಡಿತರು ಹಿಡಿದುಕೊಂಡಿದ್ದ ಬಿಳಿ ಕೊಡೆಗಳು ಚಂದ್ರನನ್ನೇ ಹೀಯಾಳಿಸುತ್ತಿದ್ದವು. ಅವು ಬಿಳಿ ಮೋಡಗಳೇನೋ ಎಂದು ಹಂಸಗಳು ಭ್ರಮಿಸಿ ಮೋಸಹೋದವು !

ಯನ್ಮಂದಿರದ್ವಾರಿ ವಿಡಂಬಿತೇಂದು-
ಚ್ಛತ್ರಾವಲೀ ಪಂಡಿತ ಮಂಡಲೀನಾಂ |
ಉತ್ಕಂಧರೈಃ ಕೇಲಿ ಸರೋಮರಾಳೈ-
ರ್ಮ್ಮೋನೇ ಶರನ್ಮೇಘ ಪರಂಪರೇತಿ ||

ಅಪ್ಸರೆಯರೂ ಇವನ ಗುಣಗಾನವನ್ನು ಮಾಡುತ್ತಿದ್ದರು—

ಕ್ವಣತ್ಕಂಕಣ ವಾಚಾಳ ವಲ್ಲಕೀ ಕಲ ಗೀತಿಭಿಃ।
ಯಸ್ಯ ಕಿನ್ನರ ಕನ್ಯಾಭಿರ್ಗೀಯತೇ ಚರಿತಾವಲೀ ॥

ಜಯಕೇಶಿಯ ಮಗ ಶಿವಚಿತ್ತ ಪೆರ್ಮ್ಮಾಡಿ—ಅವನ ರಾಜ್ಯಾದಲ್ಲಿ ದುಷ್ಟ ಗುಣವೇ ಇರಲಿಲ್ಲ—

ಯಸ್ಮಿನ್ ಪ್ರಜಾಃ ಪಾತಿರಜೋವಿಕಾರಾಃ
ಪರಂ ಪ್ರಚಾರೇಷು ತುರಂಗಮಾಣಾಂ।
ನಿರಂಕುಶೋನ್ಮಾದ ವಿನೋದಲೀಲಾಃ
ಪರಂ ದ್ವಿಪಾನಾಂ ಮದವಿಭ್ರಮೇಷು ॥

ಆತನ ಮಹಿಷಿ ಕಮಲಾದೇವಿ—ಪ್ರತ್ಯಕ್ಷ ರೋಹಿಣಿ.

ಸಾ ತಸ್ಯ ಮುಖ್ಯಾ ಮಹಿಷೀ ಪ್ರಿಯಾಸು
ಪ್ರೇಮ್ಣಃ ಪರಂ ಮಾನಭರಸ್ಯ ಭೂಮಿಃ
ಸಾ ರೋಹಿಣೀ ಚಂದ್ರಮಸಃ ಕಲೈಕಾ।
ತಾರಾಂತರೇಭ್ಯೋ ಬಹುಮಾನಪಾತ್ರಂ ॥

ಅವಳ ದಾನಗುಣಗಳನ್ನೂ ಹೊಗಳುವದು ಕವಿಗೇ ಅಸಾಧ್ಯ—

ತೇ ಕಲ್ಪವಲ್ಲೀ ಕಲಿಕಾಕಲಾಪಾ-
ಸ್ತಾಃ ಕಾಮಧೇನೋರಪಿ ದುಗ್ಧಧಾರಾಃ।
ತಸ್ಯಾಶ್ಚ ತಾ ದಾನವಿನೋದ ಲೀಲಾಃ
ಶಕ್ಯಾಃ ಪ್ರಮಾತುಂ ನಹಿ ಮಾದೃಶಾನಾಂ ॥

ವನದೇವತೆಯರೂ ಅವಳ ಗುಣಗಾನ ಮಾಡುತ್ತಿದ್ದರು—

ಆಕರ್ಣ್ಯ ನಂದನವನೇ ವನದೇವತಾನಾಂ
ತತ್ಕೀರ್ತ್ತಿಗೀತಿಷು ಮದಸ್ಖಲದಕ್ಷರಾಣಿ।
ಆಪಾನಕೇಲಿ ಕಲೀತಾನಿ ವಿಡಂಬಯಂತಃ
ಕ್ರೀಡಾಶುಕಾಸ್ಸುರವಧೂರವಹಾಸಯಂತಿ ॥

ಈಕೆಯೇ ತನ್ನ ಪತಿಗೆ ಬಿನ್ನವಿಸಿಕೊಂಡು ಅವನ ಅನುಜ್ಞೆಯನ್ನು ಪಡೆದು ದೇಗಾಂವೆಯನ್ನು ಅಗ್ರಹಾರವಾಗಿ ನಿರ್ಮಿಸಿದಳೆಂದು ಶಾಸನದಲ್ಲಿ ಹೇಳಲಾಗಿದ್ದು ಅಲ್ಲಿ ವೃತ್ತಿಗಳನ್ನು ಪಡೆದ ಬ್ರಾಹ್ಮಣರ ಹೆಸರು ಕುಲ-ಗೋತ್ರಗಳನ್ನು ಕೊಡಲಾಗಿದೆ.

ಆದಿತ್ಯದೇವ (ಕ್ರಿ. ಶ. ೧೧೮೨)

ಕರ್ನಾಟಕದ ಕಲಚುರಿ ಮನೆತನದ ಆಹವಮಲ್ಲನ ಕಾಲದ ಶಾಸನ

೧. ಮೂಲದಲ್ಲಿ ರ ಎಂದಿದೆ.

ವೊಂದನ್ನು ಈ ಕವಿ ರಚಿಸಿದ್ದಾನೆ. ಈ ಶಾಸನ ತಾಮ್ರಪಟಗಳಲ್ಲಿದೆ೧. ಕವಿ ತನ್ನನ್ನು 'ತ್ರಿಭುವನ ವಿದ್ಯಾಚಕ್ರವರ್ತಿ' ಎಂದು ಕರೆದುಕೊಂಡಿದ್ದಾನೆ. ಆಹವಮಲ್ಲನ ಮಂತ್ರಿಯಾದ ತೇಜಚಮೂಪತಿ ಎಂಬವನು ನೂರಹತ್ತು ಜನ ಬ್ರಾಹ್ಮಣರಿಗೆ ಏಣಿಗೆ ಮತ್ತಿತರ ಗ್ರಾಮಗಳನ್ನು ದಾನಮಾಡಿದನೆಂದು ಹೇಳುವ ಈ ಶಾಸನ ದಾನಭಾಗವನ್ನು ಬಿಟ್ಟು ಮಿಕ್ಕುದುದೆಲ್ಲ ಶ್ಲೋಕಗಳಲ್ಲಿಯೇ ಇದೆ. ಕಲಚುರಿವಂಶಾವಳಿ, ಅರಸನ ಮಂತ್ರಿಯ ವಂಶಾವಳಿಗಳನ್ನು ವಿವರಿಸಲು ಕವಿ ಬೇರೆ ಬೇರೆ ವೃತ್ತಗಳನ್ನು ಬಳಸಿದ್ದರೂ ಅನುಷ್ಟುಪ್ ವೃತ್ತದಲ್ಲಿರುವ ಶ್ಲೋಕಗಳೇ ಹೆಚ್ಚು. ದಾನದ ವಿಷಯವನ್ನು ಹೇಳುವ ಗದ್ಯಭಾಗ ಒಂದೇ ಸುದೀರ್ಘವಾದ ವಾಕ್ಯವನ್ನೊಳಗೊಂಡಿದೆ. ಕವಿಯು ರಚಿಸಿದ ಶ್ಲೋಕಗಳಲ್ಲಿ ಇವು ಕೆಲವು :—

ಈ ಮನೆತನದಲ್ಲಿ ಖ್ಯಾತನಾಮನಾದವನು ಬಿಜ್ಜಣ—ಅವನ ಶೌರ್ಯ :

ಆಚಕ್ರಾಮ ನ ಕಾಂದಿಶಂ ನ ಬುಭುಜೇ ಕಂ ದೇಶಮುನ್ಮೂಲಯಾಂ
ಚಕ್ರೇ ಕಂ ನ ರಿಪುಂ ಬಭಾರ ನ ರಿಪೂನಪ್ಯಾವೃತಾನ್ಕಾನಿಹ ।
ಸಂಚಿಕ್ಷೇ ನ ಧನಾನಿ ಕಾನಿ ನ ದದೌ ಕಿಂ ದಾನಮೀಜೇ ಮಖೈಃ
ಕಿಂ ನಾಯಂ ಗುಣರತ್ನರೋಹಣಗಿರಿಃ [ಶ್ರೀ] ಬಿಜ್ಜಣಕ್ಷ್ಮಾಪತಿಃ ॥

ಚಾಂಡ್ಯಂ ಪಾಂಡ್ಯಸ್ತ್ಯಜತಿ ಭಜತೇ ಚೋಲಭೂಪಶ್ಚಲತ್ವಂ
ಭಂಗಂ ವಂಗಃ ಸರತಿ ಭರತೇ ಮಾಲವಃ ಕಾಲಶಂಕಾಂ ।
ಭೂಪಾ ಅನ್ಯೇ ಜಯತಿ ಜಗತೀಂ **ಬಿಜ್ಜಣ** ಕ್ಷೋಣಿಪಾಲೇ
ಕಿಂ ನೋ ದರ್ಪಂ ಜಹತಿ ಜಹತೇ ಕಾಂ ದಿಶಂ ಕಾಂದಿಶೀಕಾಃ ॥

ಅವನ ಮಗ **ಸೋಮ** ಅಥವಾ ಸೋವಿದೇವನ ಜನನ :

ಸರ್ವಾಶಾತಿಮಿರಂ ನುದನ್ಮುಕುಲಯನ್ ಸರ್ವ್ವದ್ವಿಷದ್ಭೂಭುಜಾಂ
ಹಸ್ತಾಂಭೋಜತತೀರ್ಜ್ಜಗದ್ಧವಲಯನ್ ಸರ್ವಂ ಸ್ವಕೀರ್ತ್ತ್ಯೌಜಸಾ ।
ಸರ್ವೋರ್ವೀಧರಮೂರ್ಧ್ವಪೀಠವಿಹಿತ ಶ್ರೀಪಾದ ರಾಜ್ಯೋದಯೋ
ರಾಜಾ **ಸೋಮ** ಉದೈತ್ಕಲಾನಿಧಿರಿತಃ ಪೂರ್ಣಸ್ಫುರನ್ಮಂಡಲಃ ॥

---

೧ Karnatak Inscriptions, Vol. II, Pp. 108

ಇದೇ ಕವಿಯು ರಚಿಸಿದ ಇನ್ನೊಂದು ತಾಮ್ರಶಾಸನ, ಆಹವಮಲ್ಲನ ತಮ್ಮ ಸಿಂಘಣನ ಆಳಿಕೆಗೆ ಸೇರಿದೆ. ಅದರ ಕಾಲ ಕ್ರಿ. ಶ. ೧೧೦೫, ಶೋಭಕೃತ್ ಸಂವತ್ಸರ (ಕ್ರಿ. ಶ. ೧೧೮೩) ಕಲಚುರಿ ವಂಶಾವಳಿಗೆ ಸಂಬಂಧಿಸಿದ ಶ್ಲೋಕಗಳೆಲ್ಲವೂ ಎರಡೂ ಶಾಸನಗಳಲ್ಲಿ ಒಂದೇ ಇದ್ದು ಸಿಂಘಣನ ವಿಷಯಕವಾದ ಮೂರು ಶ್ಲೋಕಗಳು ಇದರಲ್ಲಿ ಹೆಚ್ಚಾಗಿವೆ. ಸಿಂಘಣನು ಕುಕ್ಕನೂರು ಗ್ರಾಮವನ್ನು ಒಂದು ಸಾವಿರ ಜನ ಬ್ರಾಹ್ಮಣರಿಗೆ ದಾನಮಾಡಿದ ಸಂಗತಿಯು ಈ ಶಾಸನದಲ್ಲಿ ಉಲ್ಲೇಖಿತವಾಗಿದೆ.

Indian Antiquary Vol. IV Pp. 276.

ಅರಸು ಆಹವಮಲ್ಲನ ಮಂತ್ರಿ **ಕಾಮುಚಮೂಪತಿ** ಮತ್ತು ಅವನ ಸೋದರ **ತೇಜಿಚಮೂಪತಿ** ಇವರ ವರ್ಣನೆ; ಅನುಷ್ಟುಪ್ ವೃತ್ತದಲ್ಲಿಯ ಪದ್ಯಗಳು—ಸರಳವಿವೆ-ಸುಂದರವೂ ಇವೆ :—

ಅಸ್ತಿ ರಾಜ್ಯವಹಿತ್ರಸ್ಯ ಕರ್ಣಧಾರ ಇವೋನ್ನತಃ |
ತನ್ಮಂತ್ರೀ ಮಂತ್ರಚಾಣಕ್ಯಃ ಶ್ರೀಮಾನ್ **ಕಾಮುಚಮೂಪತಿಃ** ||
ಕಿಮನ್ಯೈರೇಕ ಏವಾಯಮಲಂ ಲೋಕಸ್ಯ ರಕ್ಷಣೇ |
ಇತಿ ಸಾಕ್ಷಾದಿವ ಬ್ರಹ್ಮಾ ಬ್ರಹ್ಮಾಯಂ ಸಮಜೀಜನತ್ ||

ಕೌಸಲ್ಯಾಪ್ರಥಮಂ ದೇವೀ ದೇವಕೀ ತದನಂತರಂ |
ತತೋ ಜಾಕಲದೇವೀಯಂ ಯೇನ ಪುತ್ರೇಣ ಪುತ್ರಿಣೀ ||

ಬಾಲ ಏವ ಹಿ ವಿಖ್ಯಾತೋ ಗುಣೈರಸ್ಯ ಸಹೋದರಃ |
ಅಭೂತ್ತೇಜಿ ಚಮೂನಾಥೋ ಬಾಲಭಾವಸ್ಯ ಕೃಷ್ಣವತ್ ||

ಸ ವಿವೇಕೀ ಚ ವಿಲಾಸೀ ಚ ವಿಕ್ರಮೀ ವಿಜಯೀ ಚ ಸಃ
ವಿಭವೀ ಚ ವಿನೋದೀ ಚ ವಿನಯೀ ಚ ವಿಶೇಷತಃ ||

ಫೂತ್ಕಾರೈರೇವಧೂನ್ವಂತಿ ರಿಪೂನ್‌ಬಿರುದಕಾಹಲಾಃ |
ಯಸ್ಯೇಹ ಗಂಡಪೆಂಡಾರ ನಾಮಾಕ್ಷರಮಹಾರವಾಃ ||

ಅಯ್ಯಂ ದಿಗಂತವಿಶ್ರಾಂತ್ಯೈರ್ಯಶೋಭಿಸ್ಸತ್ಯಮರ್ಜುನಃ| ೧
ಲಕ್ಷ್ಮೀನಾರಾಯಣಸ್ಸಾಕ್ಷಾದ್ಯನ್ಮನೋರಥಸಾರಥಿಃ ||

ಸನೃತ್ತಗೀತವಾದ್ಯಾದಿ ಕಲಾಸು ಸಕಲಾಸ್ವಪಿ |
ಆಚಾರ್ಯಃ ಸೃಷ್ಟಿಕರ್ತ್ರೇವ ಸ್ವಯಂ ನೂತನ ರೀತಿಷು ||

ಪ್ರೌಢೇಷು ಪರಮ ಪ್ರೌಢೋಪ್ಯೇಷ ಬಾಲೇಷು ಬಾಲವತ್ |
ಖೇಲನ್ ದೇವಸ್ಯ ಕೃಷ್ಣಸ್ಯ ಲೀಲಾಮನುಕರೋತಿ ಸಃ ||

ಈ ವರ್ಣನೆಯ ನಂತರ ತೇಜಿಚಮೂಪತಿ ದಾನಮಾಡಿದ ವಿಷಯ ಬರುತ್ತದೆ. ಈ ಶಾಸನದ ಕಾಲ ಶಕ ೧೧೦೪, ಶುಭಕೃತ್ ಸಂವತ್ಸರ (ಕ್ರಿ.ಶ. ೧೧೮೨).

ಅಗ್ನಿಶರ್ಮ (ಕ್ರಿ.ಶ. ೧೧೯೨)

‘ ಸಾರಸ್ವತ ಸಾರ್ವಭೌಮ’ನೆಂದು ಹೆಸರು ಪಡೆದ ಅಗ್ನಿಶರ್ಮ ಒಂದು ಚಿಕ್ಕ ಶಾಸನಕಾವ್ಯವನ್ನು ರಚಿಸಿದ್ದಾನೆ. ಅದು ಈಗ ಗದುಗಿನಲ್ಲಿದೆ. ೨ ಹೊಯ್ಸಳರ ಪ್ರಶಸ್ತಿ, ವೀರಬಲ್ಲಾಳನ ಶೌರ್ಯಾದಿಗುಣಗಳ ವರ್ಣನೆ ಇವೇ ಕಾವ್ಯದ ವಸ್ತು. ಗದುಗಿನ ತ್ರಿಕೂಟೇಶ್ವರದೇವರ ಪೂಜೆ ಪುನಸ್ಕಾರಾದಿಗಳಿಗಾಗಿ, ವಿದ್ಯಾದಾನಕ್ಕಾಗಿ

೧ ಮೂಲದಲ್ಲಿ ‘ ಯಶೋಭಿಃ ಸತ್ಯಮರ್ಜನಃ ’ ಎಂದಿದೆ.

೨ Epigraphia Indica, Vol. VI, Pp. 94 ff.

ಹೊಂಬೊಳಲು ಎಂಬ ಗ್ರಾಮವನ್ನು ದತ್ತಿಯಾಗಿ ಬಿಟ್ಟುದುದು ಶಾಸನದ ವಿಷಯ. ಮಹತ್ವವಾದ ಐತಿಹಾಸಿಕ ವಿವರಗಳನ್ನೊದಗಿಸುವುದರ ಜೊತೆಗೆ ಕವಿ ಸಂಸ್ಕೃತ ಸಾಹಿತ್ಯಕ್ಕೂ ತನ್ನ ಚಿಕ್ಕ ಕೊಡುಗೆಯನ್ನಿಟ್ಟಿದ್ದಾನೆ. ೫೨ ಸಾಲುಗಳ ಈ ಶಾಸನದಲ್ಲಿ ೪೭ ಶ್ಲೋಕಗಳಿದ್ದು ಮಿಕ್ಕ ಭಾಗ ಗದ್ಯ ಮತ್ತು ಸಾಮಾನ್ಯವಾದ ಫಲಶ್ರುತಿಯ ಶ್ಲೋಕಗಳನ್ನೊಳಗೊಂಡಿದೆ. ಅರಸು ಬಲ್ಲಾಳನ ಅನುಜ್ಞೆಯ ಮೇರೆಗೆ ಕವಿ ಈ ಕಾವ್ಯವನ್ನು ರಚಿಸಿದ್ದಾಗಿ ಹೇಳಿದ್ದಾನೆ:—

ಬಲ್ಲಾಳದೇವನೃಪತೇರಾದೇಶಾದಗ್ನಿಶರ್ಮಣಾ ರಚಿತಾ |
ಶಾಸನಪದ್ಧತಿರೇಷಾ ಸಾರಸ್ವತ ಸಾರ್ವ್ವಭೌಮೇಣ[೨] ||

ಬಲ್ಲಾಳನ ಪ್ರಶಸ್ತಿಯಲ್ಲಿಯ ಕೆಲವು ಪದ್ಯಗಳಿವು :—

ಇವನು ಜಂಗಮಮೇರುವಿನಂತೆ :—

ಮಧ್ಯಸ್ಥೇನೋನ್ನತ್ಯಾ ಕಾಂಚನ ವಿಭವೇನ ವಿಬುಧ ಸೇವ್ಯತಯಾ |
ಯೋ ಜಂಗಮ ಇವ ಮೇರುರ್ಮಹೀಭೃತಾಮುಗ್ರಣೀರ್ಜ್ಜಗತಿ ||

ಸಮುದ್ರನಲ್ಲಿರುವ ಗುಣಗಳೆಲ್ಲ ಇವನಲ್ಲಿರುವಾಗ ಅವನಿಗೂ ಇವನಿಗೂ ಭೇದವೇಕೆ ?

ಸೀಮಾತಿಕ್ರಮಭೀರೋರತಿಗಂಭೀರಸ್ಯ ವಿಪುಲಸತ್ತ್ವ[೩]ಸ್ಯ |
ರತ್ನಾಕರಸ್ಯ ಯಸ್ಯ ಚ ಕೋಽಪಿ ಲಕ್ಷ್ಮೀವತೋರ್ಭೇದಃ ||

ಇವನು ಮಾಡದ ಪುಣ್ಯಕರ್ಮವಿರಲಿಲ್ಲ :—

ತನ್ನತಪಸ್ತನ್ನೇಷ್ಟಂ ತನ್ನಹುತಂ ತನ್ನದಾನಮಸ್ತೀಹ |
ಅಸಕೃನ್ನ ಯೇನ ವಿಹಿತಂ ದೇಶೇ ಕಾಲೇ ಚ ಪತ್ರೇ ಚ ||

ಇಂಥವನಲ್ಲಿ ಪಾಪವನ್ನೆಣಿಸುವವರಾರು ?

ಸ್ತ್ರೀಷ್ವರ್ಭಕೇಷು ಶೂದ್ರೇಷ್ವನ್ಯೇಷ್ವಪಿ ಯೇಷು ಕೇಷು ಚಿಜ್ಜಗತಿ |
ಸೋಽಸ್ತಿ ನ ಜನೋ ವಿಧತ್ತೇಯಃ ಪಾಪಂ ಯತ್ರ ಶಾಸಿತರಿ ||

ಸಕಲ ವಿದ್ಯಾಪಾರಂಗತನಿವನು :—

ಷಟ್ತರ್ಕ್ಕ ಕಾವ್ಯ ನಾಟಕ ವಾತ್ಸ್ಯಾಯನ ಭರತ ರಾಜ ನೀತಿಷು ಚ |
ಅನ್ಯೇಷು ತೇಷು ತೇಷು ಚ ಶಾಸ್ತ್ರೇಷ್ವಖಿಲೇಷು ಯಃ ಕುಶಲಃ ||
ಸರ್ವ್ವೇಷು ದರ್ಶನೇಷು ಚ ಭುವಿ ತಾರ್ಕ್ಕಿಕಚಕ್ರವರ್ತ್ತಿನೋ ಯಸ್ಯ |
ನೈವಾಸ್ತಿ ಪ್ರತಿವಾದೀ ವಾದಿಮದದ್ವಿರದ ಕೇಸರಿಣಃ ||

ಶಸ್ತ್ರವಿದ್ಯೆಯಲ್ಲಿಯೂ ಅಷ್ಟೇ ಪರಿಣತ :—

ಸರ್ವ್ವಾಯುಧಾಜೀವಪುರಸ್ಸರೇಣ ಸಮಸ್ತವಿದ್ವಜ್ಜನವಲ್ಲಭೇನ |
ಶಸ್ತ್ರಾಣಿ ಶಾಸ್ತ್ರಾಣಿ ಚ ಯೇನ ಲೋಕೇ ಸನಾಥತಾಮದ್ಯ ಚಿರಾದ್ಗತಾನಿ ||

---

೨ ಮೂಲದಲ್ಲಿ ನ ಎಂದಿದೆ.

೩ ಮೂಲದಲ್ಲಿ ತ್ವ ಎಂದು ಮಾತ್ರ ಇದೆ.

ಇವನ ಯುದ್ಧಪಟುತ್ವವನ್ನೂ ಕವಿ ಸಮುಚಿತ ಶಬ್ದಗಳಲ್ಲಿ ವರ್ಣಿಸಿದ್ದಾನೆ:—

ವಿಷ್ವಗ್ವಾಜಿ ಖುರಪ್ರಹಾರ ದಲಿತ ಕ್ಷೋಣೀತಲಪ್ರೋಚ್ಚಲ
ದ್ಧೂಲೀಧ್ವಾಂತನಿಮೀಲಿತಾಖಿಲದಿಶಿದ್ವಂದ್ವ ಪ್ರದೇಶಾಗಮೇ |
ದೂತೀವಾತಿ ಪಟೀಯಸೀ ಮುಹುರಿಹ ಸ್ವಸ್ಸುಂದರೀಭಿಸ್ಸಮಂ
ವೀರಾಣಾಮಭಿಸಾರಣಂ ವಿತನುತೇ ಯತ್ಖಡ್ಗಯಷ್ಟಿರ್ದ್ವಿಷಾಮ್ ||

ವೈರಿ ವೀರರು ಮಡಿದಾಗ ಅವರ ಮಡದಿಯರು ದುಃಖಿಸುತ್ತಿದ್ದರೆ, ಇನ್ನೊಂದೆಡೆಗೆ ಅಪ್ಸರೆಯರು ಅವರನ್ನು ಸ್ವಾಗತಿಸಲು ಸಿದ್ಧರಾಗಿರುತ್ತಿದ್ದರು!

ಶಶ್ವದ್ಯತ್ಸಮರಾವತಾರ ಪಿಶುನೇಷ್ವಾಹನ್ಯಮಾನೇಷ್ವಿತ-
ಸ್ತೂರ್ಯೇಷು ಸ್ವಪತಿಪ್ರಣಾಶ ಚಕಿತಾಃ ಕ್ಷುಭ್ಯಂತ್ಯರಾತಿಸ್ತ್ರಿಯಃ |
ಅಪ್ಯೇತಾಸ್ಸುಭಟ ಸ್ವಯಂವರಕೃತೇಮಂದಾರಮಾಲಾಮಿತೋ
ಹಸ್ತಾಭ್ಯಾಂ ಪರಿಗೃಹ್ಯನಾಕವನಿತಾಸ್ಸಜ್ಜೀಭವಂತ್ಯಂಬರೇ ||

ಇವನ ಯುದ್ಧಭೇರಿಯ ನಿನಾದವೇ ಸಾಕು, ವೈರಿಗಳನ್ನು ನಡುಗಿಸಲು—

ಯಸ್ಮಿನ್ದಿಗ್ವಿಜಯಾರ್ಥಮುದ್ಯತವತಿ ಪ್ರಸ್ಥಾನ ಭೇರೀರವೇ
ಗಂಭೀರೇ ಸ್ಫುಟಮುಚ್ಚರತ್ಯವನಿಭೃತ್ಸ್ವನ್ಯೇಷುವಾರ್ತೈವ ಕಾ |
ದೂರಾದಂಗ ಕಲಿಂಗವಂಗ ಮಗಧಾಶ್ಚೋಳಾಸ್ತಥಾ ಮಾಳವಾಃ
ಪಾಂಡ್ಯಾಃ ಕೇರಳ ಗೂರ್ಜ್ಜರಪ್ರಭೃತಯೋಪ್ಯಂಜ್ಝಂತಿ ಸದ್ಯೋಧೃತಿಮ್ ||

ಈ ಶಾಸನದ ಕಾಲ ಶಕ ೧೧೧೪, ಪರಿಧಾವಿ ಸಂವತ್ಸರ (ಕ್ರಿ.ಶ. ೧೧೯೨). ಆಗ ವೀರಬಲ್ಲಾಳ ಲಕ್ಕುಂಡಿಯಲ್ಲಿ ಠಾಣೆಯನ್ನು ಹೂಡಿದ್ದು.

—ಶ್ರೀನಿವಾಸರಿತ್ತಿ, ನೀಲಗಿರಿ

ಆ ಮಗು

ನನಗಾಗಿದ್ದ ಆಪರೇಷನ್ ಬಹಳ ಚಿಕ್ಕದು. ಕೇವಲ ಒಂದು ಗಂಟೆಯಲ್ಲಿ ಆ ಆಪರೇಷನ್ ಮುಗಿದು ಪ್ರಜ್ಞೆ ಬಂದಿತ್ತು. ಅದರ ಗುರುತಾಗಿ ನನಗೆ ಕಾಣು ತ್ತಿದ್ದುದಾದರೂ ಎಡಗಿವಿಯ ಬಳಿ ಇಟ್ಟು ಕಟ್ಟಿದ್ದ ಹತ್ತಿಯಷ್ಟೆ. ಆದರೂ ಕಿವಿ ಯೆಲ್ಲಾ ಗುಂಯ್‌ಗುಡುತ್ತಲೇ ಇತ್ತು.

ನಾನು ಕ್ಷೇಮವಾಗಿದ್ದೇನೆಂದು ಅರಿತ ವೈದ್ಯರು ನನ್ನನ್ನು ಒಂಟಿಯಾಗಿ ಬಿಟ್ಟು ನಿರ್ಯೋಚನೆಯಿಂದ ಹೊರಟುಬಿಟ್ಟಿದ್ದರು. ನನ್ನನ್ನು ನೋಡಿಕೊಳ್ಳುತ್ತಿದ್ದ ನರ್ಸ್ ಸಹ ಅಲ್ಲಿರಲಿಲ್ಲ. ನನ್ನೆದುರಿಗೆ ಅಲ್ಲಿದ್ದ ನನ್ನ ಸಂಗಾತಿಗಳೆಂದರೆ ಆಗ ತಾನೇ ತೊಳೆದು ಇನ್ನೂ ಮೇಜಿನ ಮೇಲೇ ಇಟ್ಟಿದ್ದ ಚಾಕು, ಕತ್ತರಿಗಳು. ಪಕ್ಕದಲ್ಲೇ ಬೆಲ್ಲಿನ ಸ್ವಿಚ್ ಇತ್ತು. ಆ ನಿರ್ಮಾನುಷ್ಯತೆ, ಏಕಾಂತತೆಗಳು ಗಂಭೀರ ಭೀಕರವಾಗಿ ಕಂಡುವು. ಮಾನವ ಕರಸ್ಪರ್ಶಕ್ಕಾಗಿ ನಾನು ಹಾತೊರೆಯತೊಡಗಿದೆ. ಕಡೆಗೊಮ್ಮೆ ತಡೆಯಲಾರದೆ ಧೈರ್ಯಮಾಡಿ ಬೆಲ್ಲಿನ ಗುಂಡಿಯನ್ನೊತ್ತಿದೆ. ನರ್ಸ್ ಅದನ್ನು ಕೇಳಿ ನನ್ನ ಕಡೆ ತಿರುಗಿ ತೀಕ್ಷ್ಣ ನೋಟವೊಂದನ್ನು ಬೀರಿದಳು. ನಾನು ಬಯಸಿದ, ಮನಸ್ಸಿನ ಭಯ, ಬೇಸರಗಳನ್ನು ಹೋಗಲಾಡಿಸುವ, ವಸ್ತು ಅವಳಿಂದ ದೊರೆಯದೆಂದು ಕೂಡಲೇ ನನಗೆ ಅರಿವಾಯಿತು.

"ಏನು ಬೇಕು ?" ಎಂದವಳು ಕೇಳಿದಳು.

"ಏನೂ ಇಲ್ಲ", ಎಂದೆ ನಾನು ದೈನ್ಯದಿಂದ.

"ಹಾಗಾದರೆ ಕರೆದುದೇಕೆ ?" ಎನ್ನುವಂತೆ ಹುಬ್ಬುಗಂಟಿಕ್ಕಿಕೊಂಡು ನನ್ನ ಕಡೆ ನೋಡಿ ಹತ್ತಿರ ಬಂದಳು. ಸುಕ್ಕಾಗಿದ್ದ ಬೆಡ್‌ಷೀಟನ್ನು ಸರಿಮಾಡಿ ನಾಡಿಯ ಬಡಿತವನ್ನು ಎಣಿಸಿದಳು. ಆ ಮೇಲೆ ಬಾಯಲ್ಲಿ ಥರ್ಮಾಮೀಟರ್ ಇಟ್ಟು ನೋಡಿ, "ಎಲ್ಲವೂ ನಾರ್ಮಲ್" ಎಂದು ಹೇಳಿ ಹೊರಕ್ಕೆ ಹೊರಟಳು. ಹೊರಡುತ್ತಿದ್ದ ಅವಳನ್ನು ನಾನೇ ತಡೆದು,

"ನನ್ನನ್ನು ನೋಡಿಕೊಳ್ಳಲು ಪ್ರತ್ಯೇಕವಾಗಿ ಯಾರೂ ಇರುವುದಿಲ್ಲವೇ ?" ಎಂದು ಕೇಳಿದೆ.

"ಯಾರೂ ಬೇಕಿಲ್ಲ. ನೀವು ಇನ್ನು ೩-೪ ದಿನಗಳಲ್ಲೇ ರಿಲೀವ್ ಆಗುತ್ತೀರಿ. ನಿಮ್ಮ ಕೇಸ್ ಸೀರಿಯಸ್ ಅಲ್ಲ . . . ಆದರೆ ನೀವು ಏಕಾಂಗಿಯಾಗಿರುವುದೇ ನಿಮ್ಮ ಸಂಕಟಕ್ಕೆ ಕಾರಣವೆಂದು ಕಾಣುತ್ತದೆ."

"ಹಾಗೆಯೇ ಇರಬಹುದು. ನನ್ನ ಸಂಕಟಕ್ಕೆ, ವೇದನೆಗೆ ನೀವೂ ಡಾಕ್ಟರು ಗಳೂ ಏನೂ ಮಾಡಲಾರಿರೆಂದು ನಾನು ಬಲ್ಲೆ."

ಅವಳು ಒಂದು ಕ್ಷಣ ನನ್ನ ಮುಖವನ್ನೇ ದಿಟ್ಟಿಸಿ ನೋಡಿದಳು. ನಂತರ ಹತ್ತಿರ ಬಂದು ಕಿವಿಯ ಹಿಂದೆ ಮೂಳೆಯನ್ನೊತ್ತಿ "ನೋವಾಗುತ್ತದೆಯೇ?" ಎಂದು ಕೇಳಿದಳು.

"ಇನ್ನೂ ಆಗುತ್ತಿಲ್ಲ. ಡಾಕ್ಟರು ಎರಡು ಬಾರಿ ಕೇಳಿಯಾಯಿತು. ಈಗ ನೀವು ಕೇಳಿದಿರಿ. ಅದನ್ನೇ ಚಿಂತಿಸುತ್ತ ಇದ್ದರೆ ಇನ್ನು ಸ್ವಲ್ಪ ಹೊತ್ತಿನಲ್ಲೇ ನೋವು ಹುಟ್ಟುವುದು ಖಂಡಿತ," ಎಂದು ನಾನೆಂದೆ.

"ನಿಮಗೆಲ್ಲೋ ಹುಚ್ಚು. ಅದಿರಲಿ ನಿಮಗೇನಾದರೂ ತಿಂಡಿಬೇಕೇ? ಏನು ಕಳುಹಿಸಲಿ?"

ಆದರೆ ನನ್ನ ಮನಸ್ಸು ಎಲ್ಲೋ ಇತ್ತು—"ರೋಗ ಹೆಚ್ಚಾಗುವುದಿಲ್ಲವಷ್ಟೇ? ನನ್ನ ಊರಿಗೆ ಕಾಗದ ಬರೆದಿರಾ? ಕಡೆಯ ಗಳಿಗೆಯಲ್ಲೂ ಬಂಧುಗಳನ್ನು ನೋಡದಂತೆ ಮಾಡಬೇಡಿ," ಎಂದು ದೈನ್ಯದಿಂದ ಕೇಳಿದೆ.

"ಬಹಳ ಹಚ್ಚಿಕೊಂಡು ಬಿಟ್ಟಿದ್ದಾರೆ. ಅದರ ಕಡೆ ಗಮನ ತಪ್ಪಿಸಬೇಕು" ಎಂದು ತನಗೆ ತಾನೇ ಎಂದುಕೊಂಡು, "ನಿಮಗೆ ಈಗ ಸಮಾಧಾನಬೇಕು . . . ಇರಿ. ಈಗ ಕಳುಹಿಸುತ್ತೇನೆ" ಎಂದು ಹೇಳಿ ಹೊರಟು ಹೋದಳು.

ನನಗೆ ಸಮಾಧಾನಬೇಕೆಂದು ಅವಳು ಹೇಳಿದುದೇನೋ ನಿಜ. ಆದರೆ ಅದೇನು ಬಟ್ಟೆಯೇ, ಹಣ್ಣೇ, ಹೂವೇ ಅದನ್ನು ಕಳುಹಿಸಲು? ಅದೇನಾದರೂ ಇರಲಿ, 'ಬೇಗಲಾದರೂ ಕಳುಹಿಸಬಾರದೇ?' ಎಂದುಕೊಂಡೆ. ಕಿವಿಯ ಹಿಂದೆ ನೋವು ಹೆಚ್ಚಾಗುತ್ತಿತ್ತು. ನಾನು ಸಾಯುವೆನೆಂದುಕೊಂಡೆ. ನನ್ನ ಸಾವಿನ ಚಿತ್ರ ಕಣ್ಣ ಮುಂದೆ ನಿಂತಿತು. ಸತ್ತಮೇಲೆ ನನ್ನ ಶವವನ್ನು ನೋಡಲು ಬರುವ ಬಂಧುಮಿತ್ರರದೆಷ್ಟು ಜನ? ಆಸ್ಪತ್ರೆಯಿಂದ ಮನೆಯವರೆಗೂ ಕಾರುಗಳು ಸಾಲಾಗಿ ನಿಂತಿವೆ. ಇದ್ದಕ್ಕಿದ್ದಂತೆಯೇ ಎಚ್ಚರವಾಯಿತು. ಕನಸು ಒಡೆಯಿತು. ಆದರೂ ಮನಸ್ಸಿಗೆ ಬೇರೇನೂ ಹೊಳೆಯಲಿಲ್ಲ. ನನ್ನ ಶವದ ಪೆಟ್ಟಿಗೆಯನ್ನು ಹೊರುವವರಾರೆಂದು ಯೋಚಿಸುತ್ತಿದ್ದೆ.

ಅಷ್ಟರಲ್ಲಿ ಬಾಗಿಲ ಬಳಿ ನಿಂತು ೫-೭ ವರ್ಷದ ಒಬ್ಬ ಹುಡುಗ, "ಬರಲೇ?" ಎಂದು ಕೇಳಿದ. ಗುಂಗುರು ಕೂದಲಿನ, ಸೋಗೆಗಣ್ಣುಗಳ, ಆ ಹುಡುಗನನ್ನು ನೋಡುತ್ತಲೇ ನನಗೊಂದು ರೀತಿಯ ಸಮಾಧಾನವಾಯಿತು. ಹಲ್ಲುಗಳೆಲ್ಲಾ ಹೊಳೆಯುವಂತೆ ಮುಗುಳ್ನಗುತ್ತಿದ್ದ ಅವನ ಮುಖವನ್ನು ನೋಡುತ್ತಲೇ ಆನಂದವಾಯಿತು.

"ಬಾ ಮಗೂ, ಹಾಸಿಗೆಯ ಮೇಲೆ ಕುಳಿತುಕೋ ಬಾ," ಎಂದು ನನಗರಿವಿಲ್ಲದಂತೆಯೇ ಅವನನ್ನು ಕರೆದೆ. ಅದಕ್ಕಾಗಿಯೇ ಕಾದಿದ್ದ ಅವನು ಬಂದು ನಗುತ್ತಾ ನನ್ನ ಪಕ್ಕದಲ್ಲಿ ಕುಳಿತುಕೊಂಡು,

" ಈಗ ನೋವು ವಾಸಿಯೇ ? " ಎಂದು ಕೇಳಿದನು. ನಿಜಕ್ಕೂ ಅವನನ್ನು ನೋಡುತ್ತಲೇ ನನ್ನ ನೋವೆಲ್ಲಾ ಮಾಯವಾಗಿತ್ತು.

" ನರ್ಸ್ ಸ್ಮಿತ್ ನನ್ನನ್ನು ಕಳುಹಿಸಿದಳು. ನಾನು ಬಂದೆ ", ಎಂದು ತಾನು ಬಂದುದಕ್ಕೆ ಕಾರಣವನ್ನು ವಿವರಿಸಿದನು. ಅವಳು ಹೇಳಿದ ಸಮಾಧಾನ ಈ ಮಗುವೇ ಎಂದು ನನಗೆ ಆಗ ತಿಳಿಯಿತು. ಆಸ್ಪತ್ರೆಯಲ್ಲಿ ತಾನು ಮಾಡುತ್ತಿದ್ದ ಕೆಲಸವನ್ನು ವಿವರಿಸಿದನು—

" ನಾನಿರುವುದು ಯಾವಾಗಲೂ ಆಸ್ಪತ್ರೆಯಲ್ಲೇ. ನನಗೆ ಒಂಟಿಯಾಗಿರುವೆನೆಂದೆನ್ನಿಸುವುದೇ ಇಲ್ಲ. ಆದರೂ ಇಲ್ಲಿಗೆ ಬರುವ ಕೆಲವರಿಗೆ ಹಾಗೆನ್ನಿಸುತ್ತದೆ. ಆಗ ನಾನು ಅವರಲ್ಲಿಗೆ ಹೋಗಿ ಮಾತನಾಡುತ್ತೇನೆ. ಆಗ ಅವರು ಹರ್ಷಿಸುತ್ತಾರೆ. ಮಕ್ಕಳಂತೂ ಬಹಳ ಅಳುತ್ತಾರೆ. ಅವರ ಕಣ್ಣುಗಳಿಗೆ ಬ್ಯಾಂಡೇಜ್ ಕಟ್ಟಿದಾಗ ಎಲ್ಲವೂ ಕತ್ತಲೆಯಾಗಿ ಕಾಣುತ್ತದೆ. ಕತ್ತಲೆಯಲ್ಲಿ ಎಲ್ಲವೂ ಭೀಕರವಾಗಿ ಕಾಣುತ್ತದೆ. ಹುಲಿ, ಸಿಂಹಗಳು, ಗುಮ್ಮಯ್ಯಗಳು ಬಂದಂತೆ ಕಾಣುತ್ತದೆ. ಆಗ ನಾನು ಹೋಗಿ ಅವರ ಕೈ ಹಿಡಿದು ಸಮಾಧಾನಮಾಡುತ್ತೇನೆ. ಆಗ ಅವರಿಗೆ ಜಾತ್ರೆಗಳು, ಕ್ರಿಸ್ಮಸ್ ಹಬ್ಬ, ನೃತ್ಯಕೂಟಗಳು ಕಾಣತೊಡಗುತ್ತವೆ. ಅವರು ಭಯವನ್ನು ಮರೆತು ಆನಂದಿಸುತ್ತಾರೆ."

ಅವನ ಮುದ್ದು ಮಾತುಗಳು ನನಗೆ ಆಹ್ಲಾದವನ್ನುಂಟುಮಾಡಿದುವು. ಮೆಚ್ಚಿಕೆಯನ್ನು ವ್ಯಕ್ತಪಡಿಸಿದೆ. ಅವನೂ ಮುಗುಳ್ನಕ್ಕನು. ಬರುಬರುತ್ತಾ ನಾವಿಬ್ಬರೂ ಆಪ್ತರಾದೆವು. ಪಕ್ಕದ ಕೋಣೆಯಲ್ಲಿದ್ದ ಹುಡುಗನೊಬ್ಬನ ವಿಷಯವನ್ನು ಅವನೇ ಹೇಳತೊಡಗಿದ—

" ಅವನ ಹೆಸರು. ವಿಲ್ಲೀ ಮ್ಯಾಕ್ಸ್‌ವೆಲ್. ಅವನಿಗೆ ಅದೆಂಥದೋ ರೋಗವಂತೆ ; ಡಾಕ್ಟರು ಹೇಳಿದರು. ನನಗೆ ಹೇಳಲು ಬರುವುದಿಲ್ಲ. ಅವನಿಗೆ ಬಹಳ ನೋವಾಗುತ್ತದಂತೆ. ಈಗ ತಾನೇ ಅವನ ಬಳಿಗೆ ಅವನ ತಾಯಿ ಬಂದರು. ನಾನು ಎದ್ದು ನಿನ್ನ ಬಳಿಗೆ ಬಂದೆ. ಈಗ ಅವನ ಬಳಿ ಒಂದು ಗ್ರಾಮಾಫೋನ್ ಸಹ ಇಟ್ಟಿದ್ದಾರೆ. ಆದ್ದರಿಂದ ಅವನಿಗೆ ನಾನಿರದಿದ್ದರೂ ಪರವಾಯಿಲ್ಲ."

ತನಗೆ ಆಸ್ಪತ್ರೆಯ ವಿಚಾರವಾಗಿ ಗೊತ್ತಿದ್ದುದನ್ನೆಲ್ಲಾ ಹೇಳಿ ನಿಲ್ಲಿಸಿದ. ಮತ್ತೆ ಕೋಣೆಯಲ್ಲಿ ಮೌನವಾವರಿಸಿತು. ನನ್ನ ಕಿವಿಯ ಬಳಿ ಮತ್ತೆ ನೋವು ಆರಂಭವಾಯಿತು. ಆ ಮಗುವಿಗೆ—ನನ್ನ ನೋವನ್ನು ಮರೆಸಿ ಸಮಾಧಾನ ನೀಡಿದ್ದ ಆ ಮಗುವಿಗೆ ಕೊಡಲು ಆಗ ನನ್ನ ಬಳಿ ಏನೂ ಇರಲಿಲ್ಲ. ನನ್ನ ಬಳಿ ಆಗ ಹೂಗಳೂ ಇರಲಿಲ್ಲ. ಬೊಂಬೆಯ ಪುಸ್ತಕಗಳಿರಲಿಲ್ಲ. ಹೋಗಲಿ, ಚಾಕಲೇಟೂ ಇರಲಿಲ್ಲ. ಕಡೆಗೆ ನಾನೇ ಮೌನವನ್ನು ಮುರಿಯಬೇಕಾಯಿತು.

"ಮಗೂ, ನಿನಗೆ ಕಥೆ ಕೇಳಲು ಆಸೆಯೋ ?"

"ಹಾಂ! ಕಥೆಗಳೇ?" ಎಂದ ಚಿಗಿದೆದ್ದು.

"ನಿನಗೆ ಕಥೆಗಳು ಗೊತ್ತಿವೆಯೇ? ಹಾಗಾದರೆ ಹೇಳುತ್ತೀಯಾ?"

(ಈ ವೇಳೆಗಾಗಲೇ ನಮ್ಮಿಬ್ಬರ ನಡುವಿನ ಸಂಭಾಷಣೆ ಏಕವಚನದಲ್ಲೇ ನಡೆಯ ತೊಡಗಿತ್ತು).

"ಓಹೋ ನನಗೆ ತುಂಬಾ ಕಥೆ ಗೊತ್ತು. ನನಗೆ ಗೊತ್ತಿರುವ ಕಥೆಗಳನ್ನೆಲ್ಲಾ ನಾನು ದಿನಾ ಒಂದೊಂದು ಹೇಳುತ್ತಿದ್ದರೆ, ಅವು ಮುಗಿಯುವ ವೇಳೆಗೆ ನೀನು ಗಡ್ಡ ಮೀಸೆ ಬಂದ ಮನುಷ್ಯನಾಗಿ ಬಿಟ್ಟಿರುತ್ತೀ" ಎಂದು ನಕ್ಕೆನು.

"ಈಗ ತಮಾಷೆ ಬೇಡ. ನಿನಗೆ ಕಥೆ ಗೊತ್ತಿದ್ದರೆ ಈಗಲೇ ಒಂದು ಕಥೆ–ಬೇಗನೇ ಹೇಳಿ ಬಿಡು. ರಾತ್ರಿಯ ಊಟಕ್ಕೆ ಹೊತ್ತಾಗುತ್ತಿದೆ. ಬೇಗನೆ ಕಥೆಯನ್ನು ಹೇಳಿ ಮುಗಿಸು"

ನಾನು ಅಸುರ ಮರ್ದನ ಜಾಕ್ ಹುಡುಗನ ಕಥೆಯನ್ನು ಹೇಳತೊಡಗಿದೆ. ಅತಿ ಉತ್ಸುಕತೆಯಿಂದ ಅವನು ಕೇಳುತ್ತ ಕುಳಿತನು. ಜಾಕ್ ರಾಕ್ಷಸರ ಕೈಲಿ ಸಿಕ್ಕಿ ಬಿದ್ದಾಗಲೆಲ್ಲಾ ಅವನ ಉಸಿರಾಟದ ವೇಗ ಹೆಚ್ಚುತ್ತಿತ್ತು. ಬಿಡಿಸಿಕೊಂಡಾಗ ಉದ್ವೇಗ ಮಾಯವಾಗುತ್ತಿತ್ತು. ರಾಕ್ಷಸರನ್ನು ಕೊಂದಾಗ ಮುಖದಲ್ಲಿ ಮಂದ ಹಾಸ ಮಿನುಗುತ್ತಿತ್ತು.

ಕಥೆ ಮುಗಿಯುವ ವೇಳೆಗೆ ಸಾಕಷ್ಟು ಹೊತ್ತಾಗಿತ್ತು.

"ನಿನ್ನ ಕಥೆಗೆ ಬಹುಮಾನ ಏನು ಗೊತ್ತೇ?"

"ಗೊತ್ತಿಲ್ಲ".

"ಇಗೋ ಈ ಗುಲಾಬಿ ಹೂ ನಿನಗೆ", ಎಂದು ತಾನು ಅಂಗಿಗೆ ಸಿಕ್ಕಿಸಿಕೊಂಡಿದ್ದ ಹೂವನ್ನು ಪಿನ್ನಿನ ಸಹಿತ ತೆಗೆದು ನಾನು ಬೇಡವೆಂದರೂ ಕೇಳದೆ ನನ್ನ ಅಂಗಿಗೆ ಸಿಕ್ಕಿಸಿ,

"ನೀನು ಬಹಳ ಒಳ್ಳೆಯವನು. ಇನ್ನೊಂದೇ ಒಂದು ಪುಟ್ಟ ಕಥೆ ಹೇಳುತ್ತೀಯಾ?" ಎಂದು ಆಸೆಯಿಂದ ಕೇಳಿದನು.

ಅವನ ಬೇಡಿಕೆಯನ್ನು ನಿರಾಕರಿಸಲು ನನ್ನಿಂದ ಸಾಧ್ಯವೇ ಇರಲಿಲ್ಲ. ಒಂದಲ್ಲ, ಎರಡು ಕಥೆಗಳನ್ನು ಹೇಳಿದೆ. ಮೂರನೆಯ ಕಥೆಯಲ್ಲಿ ರಾಕ್ಷಸನ ಕೈಗೆ ಸಿಕ್ಕಿ ಬಿದ್ದ ರಾಜಕುಮಾರಿಯು ತನ್ನ ದುರ್ದೈವವನ್ನು ಹಳಿದುಕೊಳ್ಳುತ್ತಾ ಅಳುತ್ತಿರುವಾಗ ನರ್ಸ್ ಸ್ಮಿತ್ ಬಂದಳು. ನನ್ನನ್ನೂ ಹುಡುಗನನ್ನೂ ನೋಡಿ ನಕ್ಕಳು. ಹತ್ತಿರ ಬಂದು ನೋಡಿ,

"ಓ! ಹ್ಯಾರಿ ನಿದ್ರೆ ಹೋಗಿದ್ದಾನೆ! ಅವನಿಂದ ನಿಮಗೆ ಬಹಳ ಸಮಾಧಾನ ದೊರೆತಿರಬೇಕಲ್ಲವೇ?", ಎಂದು ಕೇಳಿ ಹುಡುಗನನ್ನೆಬ್ಬಿಸುತ್ತಾ,

"ಹ್ಯಾರೀ, ಏಳು. ನಿನ್ನ ಹೊಸ ಗೆಳೆಯರಿಗೆ ನಮಸ್ಕಾರ ಹೇಳಿ ಬಾ. ಊಟಕ್ಕೆ ಹೊತ್ತಾಯಿತು, ಹೋಗೋಣ", ಎಂದಳು.

ಹ್ಯಾರಿ ನಿದ್ರೆಯಿಂದ ಅರ್ಧ ಎಚ್ಚತ್ತು,

"ಥ್ಯಾಂಕ್ಸ್. ನಿನ್ನ ಕಥೆ ಬಹಳ ಚೆನ್ನಾಗಿತ್ತು. ನಾಳೆ ಮತ್ತೆ ಬರುವೆ. ಗುಡ್‌ನೈಟ್", ಎಂದು ಹೇಳಿ ಸ್ಮಿತ್‌ಳ ಹಿಂದೆ ಹೊರಟುಹೋದನು.

ಮಿಸ್ ಸ್ಮಿತ್ ಸ್ವಲ್ಪ ಹೊತ್ತಿನಲ್ಲೇ ಪುನಃ ಬಂದು, ನನ್ನ ಶರೀರ ಸ್ಥಿತಿಯನ್ನು ಪರೀಕ್ಷಿಸತೊಡಗಿದಳು. ಹಾಗೇ ಪರೀಕ್ಷಿಸುತ್ತಾ ಹ್ಯಾರಿಯ ವಿಷಯವನ್ನು ಹೇಳ ತೊಡಗಿದಳು. ತಬ್ಬಲಿಯಾದ ಹ್ಯಾರಿ ರೋಗಿಯಾಗಿ ಅಲ್ಲಿಗೆ ಬಂದು ಮೂರು ವರ್ಷಗಳಾಗಿತ್ತಂತೆ. ಅವನಿಗೆ ಅದೆಂತದೋ ಭಯಂಕರ ರೋಗವಿದೆಯಂತೆ. ಆದ್ದರಿಂದ ಅವನು ಆಸ್ಪತ್ರೆಯಲ್ಲೇ ಇರುವುದು ಅವಶ್ಯವಾಯಿತು. ಅಲ್ಲಿನ ವೈದ್ಯರ ಮತ್ತು ಇತರರ ಮೆಚ್ಚಿಕೆಯನ್ನು ಗಳಿಸಿದ ಅವನನ್ನು ಆಸ್ಪತ್ರೆಯಲ್ಲೇ ಇಟ್ಟು ಕೊಳ್ಳಲು ಎಲ್ಲರೂ ಇಚ್ಛಿಸಿದರು. ಮೊದಲೇ ಬಡವರಾಗಿದ್ದ ಅವನ ಚಿಕ್ಕಪ್ಪ, ಚಿಕ್ಕಮ್ಮನವರೂ ಈ ಏರ್ಪಾಡಿಗೆ ಒಪ್ಪಿದರು. ಅಂದಿನಿಂದ ಅವನು ಎಲ್ಲರ ಕಣ್ಮಣಿ ಯಾಗಿ ಆಸ್ಪತ್ರೆಯಲ್ಲೇ ಬೆಳೆದು ಬಂದಿದ್ದನು. ಅವನ ಮುಗ್ಧವಾಣಿ ಎಲ್ಲರನ್ನೂ ಮರುಳು ಮಾಡಿತ್ತು. ಅಲ್ಲಿಗೆ ಬಂದ ರೋಗಿಗಳೆಲ್ಲರಿಗೂ ಅವನು ಅಚ್ಚುಮೆಚ್ಚಾ ಗಿದ್ದನು.

" ಅವನು ನಮ್ಮೆಲ್ಲರ ಜೀವನದ ಬೆಳಕಾಗಿದ್ದಾನೆ. ನಮ್ಮ ಈ ಆಸ್ಪತ್ರೆಯ ಜ್ಯೋತಿಯಾಗಿದ್ದಾನೆ," ಎಂದು ಉತ್ಸಾಹದಿಂದ ಹೇಳಿ, ಕಡೆಗೆ ನಿಟ್ಟುಸಿರುಬಿಟ್ಟು, "ಆದರೂ ಅವನನ್ನು ಉಳಿಸುವುದು ನಮ್ಮಿಂದ ಸಾಧ್ಯವಿಲ್ಲ", ಎಂದಳು ಮಿಸ್ ಸ್ಮಿತ್.

"ಹಾಂ! ಉಳಿಸುವುದು ಸಾಧ್ಯವಿಲ್ಲವೇ?"

"ಹುಟ್ಟುತ್ತಲೇ ಸಾವನ್ನೂ ಅವನು ರೋಗದ ರೂಪದಲ್ಲಿ ಕರೆ ತಂದಿದ್ದಾನೆ. ನಾವೇನೂ ಮಾಡುವಂತೆಯೇ ಇಲ್ಲ. ನಮ್ಮೆಲ್ಲರ ಕಣ್ಮಣಿಯಾದ ಅವನ ಕೋಣೆ ಯಲ್ಲಿ ಆಟದ ಸಾಮಾನುಗಳು ತುಂಬಿವೆ. ಬಟ್ಟೆ ಬರೆಗಳು ಬೇಕಾದಷ್ಟಿವೆ. ಚಿತ್ರದ ಪುಸ್ತಕಗಳು ಬೇಕಾದಷ್ಟಿವೆ. ಅವನಿಗಾಗಿ ನಾವೆಷ್ಟು ತಂದರೂ, ನಾವೇನು ಮಾಡಿದರೂ ಅವನು ಉಳಿಯಲಾರ. ಇನ್ನು ಕೆಲವು ತಿಂಗಳು ಅಷ್ಟೇ"—ಅವಳ ಕಣ್ಣಿನಿಂದ ಎರಡು ಹನಿ ಉದುರಿತು.

"ಭಯಗೊಂಡ ಮಕ್ಕಳನ್ನು ಸಮಾಧಾನ ಮಾಡುವುದರಲ್ಲಿ ಅವನಿಗಿರುವ ಸಾಮರ್ಥ್ಯ ನಮಗಾರಿಗೂ ಇಲ್ಲ. ಅವನನ್ನು ನೀವಿನ್ನೂ ಪೂರ್ತಿ ಕಂಡಿಲ್ಲ. ಆದರೆ ಕಾಣುವಿರಿ." ಎಂದು ಹೇಳಿ ಹೊದಿಕೆಯನ್ನು ಸರಿಪಡಿಸಿ ಹೊರಟುಹೋದಳು.

ಮಾರನೆಯ ದಿನ ಬೆಳಿಗ್ಯೆ ನಾನು ತಿಂಡಿ ಮುಗಿಸುವ ವೇಳೆಗೆ ಸರಿಯಾಗಿ ಅವನು ಹಾಜರಿದ್ದನು. ಈ ಬಾರಿ "ಒಳಕ್ಕೆ ಬರಲೇ?" ಎಂದೇನೂ ಅವನು ಕೇಳ ಲಿಲ್ಲ. ನೇರಿಳೆ ಬಣ್ಣದ ಸೂಟ್ ಧರಿಸಿ, ಹಿಂದಿನ ಸಲಿಗೆಯನ್ನು ಮರೆತವನಂತೆ ನಟಿಸಿ ಗಾಂಭೀರ್ಯದಿಂದ ಹತ್ತಿರ ಬಂದನು. ಒಂದು ಕ್ಷಣ ನನ್ನ ಮುಖ ನೋಡಿ, ಜೇಬಿನಿಂದ ಆಟದ ಗಡಿಯಾರವನ್ನು ತೆಗೆದು, ಎಡಗ್ಯೆಯಲ್ಲಿ ಹಿಡಿದು, ನಾಡಿಯ ಬಡಿತವನ್ನೆಣಿಸುವವನಂತೆ ಬಲಗ್ಯೆಯಿಂದ ನನ್ನ ಮಣಿಕಟ್ಟನ್ನು ಹಿಡಿದುಕೊಂಡನು. ಸ್ವಲ್ಪ ಹೊತ್ತು ಗಡಿಯಾರವನ್ನು ನೋಡುತ್ತಿದ್ದು, ಆ ಮೇಲೆ ಅದನ್ನು ಜೇಬಿಗೆ ಹಾಕಿ ಡಾಕ್ಟರರ ಧ್ವನಿಯನ್ನು ಅನುಕರಿಸಿ,

"ಏನೂ ಗಾಬರಿಗೆ ಕಾರಣವಿಲ್ಲರೀ, ಬೇಗ ವಾಸಿಯಾಗಿ ಬಿಡುತ್ತೆ", ಎಂದು ಹೇಳಿ ತನ್ನ ತಮಾಷೆಯನ್ನು ತಾನೇ ತಡೆಯಲಾರದೆ ಗಟ್ಟಿಯಾಗಿ ನಕ್ಕನು. ಆಗ ಕೆನ್ನೆಯಲ್ಲಿ ಗುಳಿಬಿದ್ದು ಮುಖ ಕಂಗೊಳಿಸಿತು.

ನನಗೂ ನಗು ಬಂತು. ನಗುವುದರಲ್ಲಿದ್ದೆ. ಅಷ್ಟರಲ್ಲಿ ಒಳಕ್ಕೆ ಬಂದ ಮಿಸ್ ಸ್ಮಿತ್ ನಗಬೇಡವೆಂದು ಸನ್ನೆಯಿಂದ ತಿಳಿಸಿ, ಹ್ಯಾರಿಯು ಆಸ್ಪತ್ರೆಯಲ್ಲಿದ್ದ ಎಲ್ಲ ರನ್ನೂ ಚೆನ್ನಾಗಿ ಅನುಕರಿಸಬಲ್ಲನೆಂದು ಮೆಚ್ಚಿಕೆಯಿಂದ ಹೇಳಿದಳು.

ಆ ಮೇಲೆ ಹ್ಯಾರಿ, ಮೇಜಿನ ಮೇಲೆ ಹೂದಾನಿಯಲ್ಲಿಟ್ಟಿದ್ದ ಗುಲಾಬಿ ಹೂ ಗಳನ್ನು ನೋಡಿ,

"ನಾನು ನಿಮಗೆ ಗುಲಾಬಿ ಹೂ ಕೊಡಬೇಕೆಂದಿದ್ದೆ. ಆದರೆ ನಿನ್ನ ಬಳಿಯೇ ತುಂಬಾ ಇದೆ", ಎಂದು ಹೇಳಿ ಹೂಗಳ ಬಳಿ ಹೋಗಿ ಹತ್ತಿರದಿಂದ ಪರೀಕ್ಷೆಮಾಡ ತೊಡಗಿದನು. ಬಿಳಿಗುಲಾಬಿಗಳ ನಡುವೆ ಅವನ ಕೆಂಗುಲಾಬಿ ವರ್ಣದ ನಗುಮುಖ ರಂಜಿಸಿತು.

"ವಿಲ್ಲಿಯ ತಾಯಿಯೂ ಗುಲಾಬಿ ಹೂ ತಂದಿದ್ದಾಳೆ. ಅಚ್ಚ ಹಳದಿ ಬಣ್ಣ. ಆಕಡೆ ಇರುವ ಮಿಸೆಸ್‌ಗ್ರೇ ಬಳಿ ಕೆಂಪು ಗುಲಾಬಿ ಇದೆ. ನಿನ್ನ ಹತ್ತಿರ ಬಿಳಿ ಗುಲಾಬಿ ಇದೆ. ಒಬ್ಬೊಬ್ಬರ ಹತ್ತಿರ ಒಂದೊಂದು ಬಣ್ಣ!".

"ನನಗೆ ಬಿಳಿ ಗುಲಾಬಿ ಎಂದರೆ ಬಹಳ ಇಷ್ಟ. ಇವು ಇಲ್ಲಿ ಕುಂಡಗಳಲ್ಲಿ ಬೆಳೆದುವು. ಹಳ್ಳಿಗಾಡಿನಲ್ಲಿ ಬೆಳೆದ ಗಿಡಗಳ ಹೂಗಳಾದರೆ ನನಗೆ ಇನ್ನೂ ಇಷ್ಟ. ಅವು ಇವಕ್ಕಿಂತಲೂ ಸುವಾಸನೆಯಾಗಿರುತ್ತವೆ."

"ಹಳ್ಳಿಗಾಡು ಎಂದರೆ?"

ನಾನು ಅಪ್ರತಿಭನಾದೆ. ನಗರದಲ್ಲೇ ಬೆಳೆದ ಹುಡುಗನಿಗೆ ಹಳ್ಳಿಯ ಕಲ್ಪನೆ ಯನ್ನುಂಟು ಮಾಡುವುದಾದರೂ ಹೇಗೆ? ಅಂತೂ ಹಳ್ಳಿಯೆಂದರೇನೆಂದು ತಿಳಿಸಿ ನಮ್ಮ ಹಳ್ಳಿಯ ಬಳಿ ಇದ್ದ, ನಾನು ಕಂಡಿದ್ದ ಹೂವಿನ ತೋಟವನ್ನು ವರ್ಣಿಸಿದೆ. ನನ್ನ ಮಾತು ಮುಗಿದಮೇಲೆ ಆಸ್ಪತ್ರೆಯಲ್ಲಿದ್ದ ಡಾಕ್ಟರುಗಳೆಲ್ಲರ ವಿಚಾರವನ್ನೂ

ಅವನು ಹೇಳಿದನು. ಆಸ್ಪತ್ರೆಯ ಸುತ್ತಲಿನ ಹೂತೋಟದಲ್ಲಿ ಸುತ್ತಲು ತನಗೆ ತುಂಬಾ ಆಸೆಯೆಂದೂ ಹೇಳಿದನು. ಆದರೆ ಯಾವಾಗಲಾದರೂ ಸರಿ, ಹೆದರಿದ ಮಕ್ಕಳನ್ನು ಸಮಾಧಾನಮಾಡಲು ಅವನು ಸಿದ್ಧ. ಬೆಳಿಗ್ಗೆ ಒಂದು ಬಾರಿ, ಸಂಜೆ ಒಂದು ಬಾರಿ ಯಾರಾದರೂ ಬರ ಹೇಳಲಿ, ಇಲ್ಲದಿರಲಿ, ವಾರ್ಡುಗಳನೆಲ್ಲಾ ಒಂದು ಬಾರಿ ಸುತ್ತಿ ಬರುತ್ತಿದ್ದನು. ಒಂದೊಂದು ಹಾಸಿಗೆಯ ಬಳಿಯೂ ನಿಂತು ವಿಚಾರಿಸಿಕೊಂಡು, ನಗುತ್ತಾ, ನಗಿಸುತ್ತಾ, ಮಕ್ಕಳು, ಹಿರಿಯರೆಲ್ಲರಿಗೂ ಸಂತೋಷವನ್ನುಂಟುಮಾಡಿ ಮುಂದುವರೆಯುತ್ತಿದ್ದನು. 'ಇದೆಂತಹ ವಿಚಿತ್ರ ಜೀವನ' ಎಂದು ಮೊದಲು ನನಗೆನ್ನಿಸಿದರೂ, ಅದರಲ್ಲೂ ಆನಂದ, ಸಂತೃಪ್ತಿಗಳಿಗೆ ಕೊರತೆ ಇಲ್ಲವೆಂದೂ ಎನ್ನಿಸಿತು.

ತನ್ನ ಕಥೆಯನ್ನೆಲ್ಲಾ ಹೇಳಿದಮೇಲೆ, ಇದ್ದಕ್ಕಿದ್ದಂತೆ.

"ನಾನೊಂದು ದಿನವೂ ದೋಣಿಯಲ್ಲಿ ಕುಳಿತೇ ಇಲ್ಲ. ಕ್ವ್ಯಾರಿಮಮ್ ನೋಡಿಲ್ಲ. ಅಂತೂ ಒಂದುದಿನ ನೋಡಿಯೇ ನೋಡುತ್ತೇನೆ", ಎಂದನು.

"ಕ್ವ್ಯಾರಿಮಮ್! ಹಾಗೆಂದರೆ?"

"ಗೊತ್ತಿಲ್ಲವೇ? ಮೀನುಗಳನ್ನಿಟ್ಟಿರುತ್ತಾರೆ ಅಲ್ಲಿ. ದೊಡ್ಡ ದೊಡ್ಡ ಗಾಜಿನ ಬಟ್ಟಲುಗಳಲ್ಲಿ ಬಣ್ಣ ಬಣ್ಣದ ಮೀನುಗಳು ಈಜುತ್ತಿರುತ್ತವೆ. ನಿನಗೆ ಗೊತ್ತಿಲ್ಲವೇ?"

"ಓ, ಅಕ್ವೇರಿಯಮ್ಮೇ? ನನ್ನ ಜೊತೆ ಬರುವುದಾದರೆ ನಿನ್ನನ್ನು ದೋಣಿಯಲ್ಲೂ ಕರೆದುಕೊಂಡು ಹೋಗುತ್ತೇನೆ, ಆಕ್ವೇರಿಯಂಗೂ ಕರೆದುಕೊಂಡು ಹೋಗುತ್ತೇನೆ."

"ಹಾಂ! ನಿಜವಾಗಿಯೂ? ಹಾಗಾದರೆ ಯಾವಾಗ?"

"ಮುಂದಿನ ವಾರ."

"ಅಯ್ಯೋ ಎಷ್ಟುದಿನ! ಮುಂದಿನ ವಾರದ ವೇಳೆಗೆ ನಾನು ಎಷ್ಟು ಸಲ ನಿದ್ರೆಮಾಡಿ ಏಳಬೇಕು? ನೀನೇಹೇಳು."

ನಾನು ಯೋಚಿಸಿದೆ. ಡಾಕ್ಟರು ಇನ್ನು ಮೂರು ದಿನಗಳಲ್ಲಿ ನಾನು ಹೋಗಬಹುದೆಂದು ಹೇಳಿದ್ದರು.

"ಎಷ್ಟು ಸಲವೂ ಇಲ್ಲ. ಇನ್ನು ನಾಲ್ಕೈದು ಸಲ ಅಷ್ಟೇ. ಒಂದು, ಎರಡು, ಮೂರು, ನಾಲ್ಕು ಅಷ್ಟೇ. ಆಮೇಲೆ ನಾವಿಬ್ಬರೂ ಹೋಗೋಣ."

"ಹಾಗಾದರೆ ಬೇಗಲೇ ಹೋಗಬಹುದು", ಎಂದು ತೃಪ್ತಿಯ ನಿಟ್ಟುಸಿರು ಬಿಟ್ಟನು. ಅವನ ಮುಖದಲ್ಲಿ ಆನಂದದ ಮಿಂಚು ಮಿಂಚಿತು.

ಆಕ್ವೇರಿಯಂನಲ್ಲಿ ನಾವು ಕಾಣಬಹುದಾದ ದೃಶ್ಯಗಳನ್ನು ಕುರಿತು

ಮಾತನಾಡುತ್ತಿದ್ದಾಗ ಮಿಸ್‌ಸ್ಮಿತ್ ಬಂದಳು. ಕಣ್ಣಿನ ಆಪರೇಷನ್ ಆಗಿದ್ದ ಹುಡುಗಿಯೊಬ್ಬಳು ಹೆದರಿಕೊಂಡು, "ಹುಲಿ, ಕರಡಿ" ಎಂದು ಕಿರುಚಿಕೊಳ್ಳು ತ್ತಿದ್ದಳಂತೆ. ಹ್ಯಾರಿ ಅಲ್ಲಿಗೆ ಹೋಗಬೇಕಾಯಿತು. "ಮತ್ತೆ ಬಂದುಬಿಡುತ್ತೇನೆ" ಎಂದು ಹೇಳಿ ಹೋದರೂ ಪುನಃ ಮಾರನೆಯದಿನವೇ ಅವನು ಮತ್ತೆ ನನ್ನ ಬಳಿ ಬಂದುದು.

ಬಹಳ ಕಷ್ಟಪಟ್ಟು ಆಸ್ಪತ್ರೆಯ ಮುಖ್ಯ ಡಾಕ್ಟರರಿಂದ ಹ್ಯಾರಿಯನ್ನು ಒಂದು ದಿನದ ಮಟ್ಟಿಗೆ ಕರೆದುಕೊಂಡು ಹೋಗಲು ಅನುಮತಿಯನ್ನು ಪಡೆದೆ. ಅವನನ್ನು ಎಲ್ಲೆಲ್ಲಿಗೆ ಕರೆದುಕೊಂಡು ಹೋಗಬೇಕು, ಏನು ತಿಂಡಿ ಕೊಡಿಸಬೇಕು ಎಂದು ಯೋಚಿಸುತ್ತಿದ್ದೆ. ಆ ವೇಳೆಗೆ ನನ್ನ ಬೆಳಗಿನ ತಿಂಡಿ ಮುಗಿಯಿತು. ಹ್ಯಾರಿ ಮರುಕ್ಷಣವೇ ಅಲ್ಲಿದ್ದ.

"ವಿಲ್ಲೀಮ್ಯಾಕ್ಸ್‌ವೆಲ್‌ಗೆ ಗುಣವಾಗಿ ಮನೆಗೆ ಹೋದ. ಪಾಪ! ಮಿಸೆಸ್ ಗ್ರೇಗೆ ತುಂಬಾ ನೋವಂತೆ; ಅಳುತ್ತಿದ್ದಾಳೆ. ನಿನ್ನೆ ಬಂದ ಹುಡುಗಿಗೆ ಕಣ್ಣಿಗೆ ಬಟ್ಟೆ ಕಟ್ಟಿದ್ದಾರೆ." ಎಂದು ಹೇಳಿ ಒಂದು ಕ್ಷಣ ತಡೆದು, "ಜಿಮ್ಮಿ ಮರ್ಫಿ ಈ ದಿನ ದೇವರ ಬಳಿಗೆ ಹೋದನಂತೆ." ಎಂದು ನನಗೆ ವರದಿ ಒಪ್ಪಿಸಿ ಆಸ್ಪತ್ರೆಯ ಡಾಕ್ಟರು, ನರ್ಸು, ರೋಗಿಗಳನ್ನೆಲ್ಲಾ ಅನುಕರಿಸಿ ಆಟವಾಡತೊಡಗಿದನು. ಮಿಸೆಸ್ ಗ್ರೇ ನೋವಿನಿಂದ ನರಳುವುದನ್ನಂತೂ ಬಹಳ ನಾಟಕೀಯವಾಗಿ ತೋರಿಸಿ ದನು. ಗ್ರೇ ಏನಾದರೂ ಅದನ್ನು ನೋಡಿದ್ದರೆ ನೋವಿನಲ್ಲೂ ಗಟ್ಟಿಯಾಗಿ ನಗುತ್ತಿದ್ದಳು.

ನಾನು ಮಾರನೆಯ ದಿನ ಆಸ್ಪತ್ರೆಯಿಂದ ಮನೆಗೆ ಹೊರಟೆ. ನನ್ನನ್ನು ಕಳುಹಿಸಿಕೊಡುವಾಗ ಹ್ಯಾರಿ.

"ಇನ್ನೊಂದು ಬಾರಿ ಮಲಗಿ ಎದ್ದಮೇಲೆ, ನಾನೂ ನೀನೂ ಕ್ವ್ಯಾರಿಯಮ್‌ಗೆ ಹೋಗಬಹುದಲ್ಲವೇ? ಎಂದು ಕೇಳಿ ಬೀಳ್ಕೊಟ್ಟನು. ರಾತ್ರಿಯೆಲ್ಲಾ ನನಗೆ ಹ್ಯಾರಿಯ ಕನಸೇ. ಬೆಳಗಾಗುತ್ತಲೇ ಬಾಡಿಗೆಯ ಕಾರೊಂದನ್ನು ತೆಗೆದುಕೊಂಡು ಆಸ್ಪತ್ರೆಯ ಬಳಿಗೆ ಹೊರಟೆ. ಹ್ಯಾರಿ ಧರಿಸಿದ್ದ ನೀಲಿಸೂಟು, ಕೋಟಿನ ಮೇಲೆ ಸಿಕ್ಕಿಸಿದ್ದ ಕೆಂಗುಲಾಬಿ ಎರಡೂ ಅವನಿಗೆ ಬಹು ಚೆನ್ನಾಗಿ ಒಪ್ಪುತ್ತಿದ್ದುವು. ಟ್ಯಾಕ್ಸಿಯಲ್ಲಿ ನಾವಿಬ್ಬರೂ ಹೊರಟೆವು. ಮೋಟಾರು ಹೇಗೆ ಮುಂದೆ ಹೋಗುತ್ತ ದೆಂದು ಹ್ಯಾರಿ ಕೇಳಿದಾಗ ವಿಜ್ಞಾನದ ವಿಚಾರದಲ್ಲಿ ಕೇವಲ ಅಜ್ಞಾನಿಯಾಗಿದ್ದ ನಾನು ಬೆಪ್ಪಾದೆ. ಅಂತೂ ಏನೋ ಒಂದು ವೈಜ್ಞಾನಿಕ ವಿವರಣೆಯನ್ನು ಕೊಟ್ಟೆ. ನನ್ನ ವಿವರಣೆಯನ್ನು ಕೇಳಿ ಡ್ರೈವರ್ ತಡೆಯಲಾರದೆ ನಗುತ್ತಿದ್ದನು.

ಆಕ್ವೇರಿಯಂನಲ್ಲಿ ಅವನಾಡಿದ ಮಾತು, ಆಟಗಳು ಇನ್ನೂ ಕಣ್ಣಮುಂದೆ ನಡೆಯುತ್ತಿರುವಂತೆ ತೋರುತ್ತವೆ. ಕೊಳದಲ್ಲಿ ಮಲಗಿದ್ದ ಅಲಸಿ ಮೊಸಳೆ

ಗಳನ್ನು ಸೋಮಾರಿಗಳೆಂದು ಕೂಗಿ ಅಣಕಿಸಿ ನಲಿದನು. ಏಡಿಗಳ ವಕ್ರ ನಡಿಗೆಯನ್ನು ಅನುಕರಿಸಲು ಯತ್ನಿಸಿ ವಿಫಲನಾದನು. ಬಣ್ಣಬದಲಾಯಿಸುತ್ತಿದ್ದ ವಿಚಿತ್ರ ಮೀನನ್ನು ಕಂಡು ಅವನಿಗಾದ ಅಚ್ಚರಿಗೆ ಕೊನೆ ಮೊದಲಿಲ್ಲ. ಆಮೆಯನ್ನು ನೋಡಿ ಅದೊಂದು ವಿಚಿತ್ರ ಜಂತುವೆಂದನು. ಆದರೆ ಆಮೇಲೆ ಕತ್ತಿ ಮೀನನ್ನು ಕಂಡು ಅದೇ ಅತಿ ವಿಚಿತ್ರವೆಂದನು. ಮುಂದೆ ಸಾಗರ-ಸಿಂಹ (Sealion) ಗಳನ್ನು ನೋಡಿ ಕತ್ತಿ ಮೀನಿನ ಮೇಲಿನ ಮೆಚ್ಚುಗೆ ಹೊರಟುಹೋಯಿತು. ಅವನು ಮಿತಿ ಮೀರಿದ ಆನಂದ, ಆಶ್ಚರ್ಯಗಳಿಂದ ಕುಣಿದು, ನಲಿದು ಮುಗ್ಧ ಮಾತುಗಳನ್ನು ಆಡುತ್ತಿದ್ದುದನ್ನು ಕಂಡು ಬಂದಿದ್ದ ಜನರೆಲ್ಲರೂ ಅವನನ್ನೇ ನೋಡತೊಡಗಿದರು. ಮಧ್ಯೆ ಮಧ್ಯೆ ಡಾಕ್ಟರ್ ರೇನಾಲ್ಡ್ಸ್, ಡಾಕ್ಟರ್ ಮರ್ರೀ ಮೊದಲಾದವರನ್ನು ನಾಟಕೀಯವಾಗಿ ಅನುಕರಿಸಿ ಮಾತನಾಡುತ್ತಿದ್ದುದರಿಂದಲೂ, ಜನರೆಲ್ಲಾ ಅವನ ಸುತ್ತಲೇ ನೆರೆದರು. ಕೇವಲ ಹದಿನೈದು ನಿಮಿಷಗಳಲ್ಲಿ ಮೀನುಗಳನ್ನು ನೋಡುವುದನ್ನು ಮರೆತು ಇವನ ವ್ಯಾಖ್ಯಾನಗಳನ್ನು ಕಿವಿಗೊಟ್ಟು ಕೇಳತೊಡಗಿದರು. ಸ್ವಲ್ಪ ಹೊತ್ತಿನಲ್ಲೇ ಎಲ್ಲರೂ ಕುತೂಹಲದಿಂದ ಅವನಾರೆಂದು ಕೇಳುವವರೇ ಆದರು. ಅವನು ಅಲ್ಲಿ ಬಂದಿದ್ದವರೆಲ್ಲರ ಕಣ್ಮಣಿಯಾದನು.

ಮಧ್ಯಾಹ್ನ ಒಂದು ಗಂಟೆಯಾದರೂ ಹ್ಯಾರಿ ಅಲ್ಲಿಂದ ಹೊರಬರಲು ಇಚ್ಛಿಸಲಿಲ್ಲ. ಬಗೆ ಬಗೆಯ ತಿಂಡಿಗಳನ್ನೂ ಮಧ್ಯಾಹ್ನದ ದೋಣಿಯ ಪ್ರಯಾಣವನ್ನೂ ವರ್ಣಿಸಿ ಪ್ರಯಾಸದಿಂದ ಅವನನ್ನು ಅಲ್ಲಿಂದ ಹೊರಡಿಸಬೇಕಾಯಿತು.

ನಮ್ಮ ದೋಣಿಯ ಪ್ರಯಾಣವೂ ಚೆನ್ನಾಗಿತ್ತು. ಸ್ವಲ್ಪ ಸಮಯದಲ್ಲೇ ಪ್ರಯಾಣಿಕರೆಲ್ಲರೂ ಅವನ ಗೆಳೆಯರಾದರು. ಪಶ್ಚಿಮ ದಿಗಂತದಲ್ಲಿದ್ದ ಮುಗಿಲಿನಾಚೆಯಿದ್ದ ದೇವರ ಊರಿನಲ್ಲಿ ತನ್ನ ಗೆಳೆಯ ಜಿಮ್ಮಿಮರ್ಫಿ ಇರುವನೆಂದು ಅವನನ್ನು ನೆನೆಸಿಕೊಂಡ.

ದೋಣಿ ಪ್ರಯಾಣವಾದ ಮೇಲೆ ಟ್ಯಾಕ್ಸಿಯಲ್ಲಿ ಊರನ್ನೆಲ್ಲಾ ಒಂದು ಸುತ್ತು ಸುತ್ತಿದೆವು. ಆಸ್ಪತ್ರೆಯ ಬಳಿ ಬರುವ ವೇಳೆಗೆ ಅವನಿಗೆ ನಿದ್ರೆ ಬರುತ್ತಿದ್ದಂತಿತ್ತು. ಆದರೂ ಆದಿನ ಕಂಡ ಮೀನುಗಳನ್ನೂ, ದೋಣಿಯಲ್ಲಿದ್ದಾಗ ಕಂಡ ಕೆಂಪಂಚಿನ ಕರಿ ಮುಗಿಲನ್ನೂ ನೆನೆಸಿಕೊಂಡು ಅವನು ಏನೇನೋ ಮಾತನಾಡುತ್ತಲೇ ಇದ್ದನು. ಆಸ್ಪತ್ರೆಯ ಬಳಿ ನರ್ಸ್ ಒಬ್ಬಳು ಟ್ಯಾಕ್ಸಿಯ ಬಳಿ ಬಂದು ಅವನನ್ನೆತ್ತಿಕೊಂಡಳು. ಅವನೊಡನೆ ಸಂತೋಷದಿಂದ ಕಳೆದ ಸಮಯದ ಕನಸುಗಳನ್ನು ಕಾಣುತ್ತಿದ್ದ ನನ್ನನ್ನು ಅವನೇ ಎಚ್ಚರಿಸಿ,

" ಮತ್ತೊಮ್ಮೆ ಎಂದಾದರೂ ಬರುತ್ತೀರಾ ? " ಎಂದು ಕೇಳಿ ಬೀಳ್ಕೊಟ್ಟನು.

ನಾನು ಆಸ್ಪತ್ರೆಯಿಂದ ಹೊರಬಂದ ಮೇಲೆ ಒಂದು ತಿಂಗಳಿನಲ್ಲಿ ಎರಡು ಬಾರಿ ವಿರಾಮ ದೊರಕಿಸಿಕೊಂಡು ಆಸ್ಪತ್ರೆಗೆ ಹೋಗಿ ಹ್ಯಾರಿಯನ್ನು ಕಂಡಿದ್ದೆ.

ನಾನು ಅವನಿಗೆ ನಮ್ಮ ಅಕ್ವೇರಿಯಂ ಭೇಟಿಯ ನೆನಪಾಗಿ ಮೂರು ಭಂಗಾರದ ಬಣ್ಣದ ಮೀನುಗಳಿದ್ದ ಗಾಜಿನ ಗೋಳವೊಂದನ್ನು ಕೊಂಡುಕೊಟ್ಟಿದ್ದೆ. ಎರಡು ಬಾರಿಯೂ ಅದನ್ನು ನೋಡಿ, ನಾವು ಆ ಒಂದು ದಿನದ ಸವಿನೆನಪುಗಳನ್ನು ನೆನೆಸಿ ಕೊಂಡು ಹರ್ಷಿಸಿದೆವು. ಮುಂದಿನ ಬೇಸಗೆಯಲ್ಲಿ ಹಳ್ಳಿಯ ಬಳಿ ಒಂದು ತೋಟಕ್ಕೆ ಹೋಗೋಣವೆಂದು ಯೋಚಿಸಿಕೊಂಡೆವು. ಆದರೆ ಆ ಯೋಜನೆ ನಡೆಯಲಿಲ್ಲ.

ಎರಡನೇ ಬಾರಿ ನಾನು ಆಸ್ಪತ್ರೆಗೆ ಹೋಗಿಬಂದು ಒಂದು ವಾರವಾಗಿತ್ತು. ಆ ದಿನ ಬೆಳಗಾಗುತ್ತಲೇ ಟೆಲಿಫೋನ್ ಗಂಟೆ ಬಾರಿಸಿತು. ರಿಸೀವರ್ ಅನ್ನು ಕಿವಿಯ ಬಳಿ ಇಟ್ಟುಕೊಂಡಾಗ ಮಿಸ್. ಸ್ಮಿತ್‌ಳ ಧ್ವನಿ ಕೇಳಿಬಂತು. ಮೆಲುದನಿ ಯಲ್ಲಿ ಹ್ಯಾರಿ ಇನ್ನಿಲ್ಲವೆಂದೂ, ಅಂತ್ಯದರ್ಶನಕ್ಕೆ ಬರಬೇಕೆಂದೂ ತಿಳಿಸಿದಳು.

ಬರುವೆನೆಂದು ಹೇಳಿ ಸಿದ್ಧವಾದೆ. ಗುಂಗುರು ಕೂದಲಿನ, ಸೋಗೆಗಣ್ಣಿನ, ಸದಾ ನಗುವಿನಿಂದ ಕಂಗೊಳಿಸುತ್ತಿದ್ದ ಮುಖದ ಆ ಮಗುವಿಲ್ಲದ ಪ್ರಪಂಚ ನನಗೆ ಶೂನ್ಯವಾಗಿ ಕಂಡಿತು.

ಎಂಟು ಗಂಟೆಯವೇಳೆಗೆ ನಾನು ಆಸ್ಪತ್ರೆಗೆ ಬಂದಾಗ ಎಲ್ಲರ ಮುಖಗಳೂ ಕಾಂತಿ ಹೀನವಾಗಿದ್ದುವು. ಮಿಸ್‌ಸ್ಮಿತ್ ಅಳುಮುಖದಿಂದ ಹ್ಯಾರಿಯ ಕೋಣೆಯಲ್ಲಿ ನನ್ನನ್ನು ಸ್ವಾಗತಿಸಿ ಅಲ್ಲಿ ನಿಲ್ಲಲಾರದೆ ಹೊರಟು ಹೋದಳು.

ಕೋಣೆಯ ಕಿಟಕಿಗಳಿಗೆ ಪರದೆ ಹಾಕಿದ್ದುದರಿಂದ ಕತ್ತಲೆ ತುಂಬಿತ್ತು. ನನ್ನ ಹೃದಯದಲ್ಲೂ ಅದಕ್ಕಿಂತ ಹೆಚ್ಚಿನದೇನೂ ಇರಲಿಲ್ಲ. ಕೋಣೆಯ ತುಂಬಾ ಹ್ಯಾರಿಯ ಬೊಂಬೆಗಳು, ಆಟದ ಸಾಮಾನುಗಳು ತಬ್ಬಲಿಯಾಗಿ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದುವು. ನಾನವನಿಗೆ ಕೊಡಿಸಿದ್ದ ಆಟದ ದೋಣಿಯೊಂದು ನೀರಿನ ಬಕೆಟ್ಟಿನಲ್ಲಿ ನಡೆಸುವವರಿಲ್ಲದೆ ನಿಂತಿತ್ತು. ಗಾಜಿನ ಗೋಳದಲ್ಲಿದ್ದ ಮೂರು ಮೀನುಗಳು ತಮಗೂ ದುಃಖದ ಅರಿವಾಗಿದೆಯೆಂಬಂತೆ ನಿಧಾನವಾಗಿ ಸಂಚರಿಸುತ್ತಿದ್ದುವು. ಹ್ಯಾರಿ ಸಾಕಿದ್ದ ಗುಬ್ಬಚ್ಚಿಗಳೂ ಕಿಟಕಿಯಲ್ಲಿ ನೀರವವಾಗಿ ಕುಳಿತಿದ್ದುವು. ಹಾಸಿಗೆಯ ಮೇಲೆ ಹ್ಯಾರಿಯ ಬಿಳಿದೇಹ ಕೆಂಪು ಗುಲಾಬಿಗಳಿಂದಾವೃತವಾಗಿ ನಿದ್ರಿಸುತ್ತಿರುವಂತೆ ಕಾಣುತ್ತಿತ್ತು. ಚಿರನಿದ್ರೆ ಮಾಡುವಾಗಲೂ ಮುಗುಳ್ನಗುತ್ತಿದ್ದ ಹ್ಯಾರಿಯ ಮುಖವನ್ನು ಕಂಡು ನನ್ನ ಕಣ್ಣಿಂದ ಹನಿಗಳುದುರಿದುವು.

ಮಿಸ್ ಸ್ಮಿತ್ ಒಳಬಂದು, "ಹ್ಯಾರೀ, ನಾವು ನಿನ್ನನ್ನೆಷ್ಟು ಪ್ರೀತಿಸುತ್ತಿದ್ದೆ ವೆಂದು ನೀನು ಬಲ್ಲೆಯಲ್ಲವೇ?" ಎಂದು ಗೋಳಿಡತೊಡಗಿದಳು.

ಗುಬ್ಬಚ್ಚಿಗಳು ನಿತ್ಯವೂ ಹ್ಯಾರಿ ಕೊಡುತ್ತಿದ್ದ ಆಹಾರಕ್ಕಾಗಿ ಚಿಲಿಪಿಲಿಗುಟ್ಟ ತೊಡಗಿದುವು. ಪಕ್ಕದ ಕೋಣೆಯಲ್ಲಿ ಕಣ್ಣಿಗೆ ಬ್ಯಾಂಡೇಜ್ ಕಟ್ಟಿಸಿಕೊಂಡಿದ್ದ ಹುಡುಗಿಯೊಬ್ಬಳು,

" ಹ್ಯಾರೀ, ಎಲ್ಲಿದ್ದೀ ? ಬೇಗ ಬಾ, ಹುಲಿ, ಕರಡಿಗಳು ಬರುತ್ತಿವೆ ", ಎಂದು ಕೂಗಿಕೊಳ್ಳುತ್ತಿದ್ದಳು. ಪಾಪ ! ಅವಳಿಗಿನ್ನೂ ಗೊತ್ತಿರಲಿಲ್ಲ, ಹ್ಯಾರಿ ದೇವಲೋಕದ ಮಕ್ಕಳನ್ನು ಸಮಾಧಾನಮಾಡಲು ಹೋಗಿರುವನೆಂದು.

—ಕೆ. ಟಿ. ಶ್ಯಾಮಸುಂದರ್

[ಎಲಿಜಬೆತ್ ಜೋರ್ಡಾನ್‌ರವರ ' ದಿ ಕಂಫರ್ಟರ್ ' ಎಂಬ ಕಥೆಯ ಭಾವಾನುವಾದ].

ನನ್ನ ಗಡಿಯಾರವನು ತಿದ್ದಲೊಲ್ಲೆ !

ಅಂದು ತುಂಬಿದ ಬಸ್ಸಿನಲಿ ಯಾರೊ ಕೇಳಿದರು :
‘ ನಿಮ್ಮ ಗಡಿಯೂರದಲಿ ಗಂಟೆಯೆಷ್ಟು ? ’
ನೋಡಿದೆನು : ಏಳು ಮೂವತ್ತರಲಿ ಮುಳ್ಳಿತ್ತು ;
ಅವರ ಗಡಿಯಾರದಲಿ ಗಂಟೆ ಎಂಟು !

ಪಕ್ಕದಲಿ ಕುಳಿತವರು ತಮ್ಮ ಕೈ ನೋಡಿದರು :
ಏಳುಮುಕ್ಕಾಲೆಂದಿತವರ ವಾಚು
ನನ್ನ ಕೈ ಗಡಿಯಾರ ಎಲ್ಲಕಿಂತಲು ಹಿಂದೆ !
ನನಗಿವರ ನಡುವೆ ಇದು ಎಂಥ ಪೇಚು !

‘ ನಿಮ್ಮ ವಾಚಿನ ಮುಳ್ಳ ತಿದ್ದಿಕೊಳ್ಳಿರಿ ’ ಎಂದು
ಸಲಹೆಗಳು ಉದುರಿದುವು ಸುತ್ತಮುತ್ತ.
‘ ತಿದ್ದಿಕೊಳ್ಳಲೆ ಬೇಕೆ ? ತಿದ್ದೋಣ ’—ನಾನೆಂದೆ ;
ಆದರೇತಕೊ ತಡೆಯಿತೆನ್ನ ಚಿತ್ತ.....

ನನ್ನ ಕೈಗಡಿಯಾರ ಬಾನುಲಿಯ ಕಾಲಕನುಸಾರ–
ಅದ ನಾನು ಚೆನ್ನಾಗಿ ಬಲ್ಲೆ.
ಇದು ನನ್ನ ವಸ್ತು–ಎಂದಿಗು ನನ್ನದಾಗಿರಲಿ ;
ಅವರಿವರ ಕೈ ನೋಡಿ ತಿದ್ದಲೊಲ್ಲೆ !

—ಸಿ. ಪಿ. ಕೆ.

ಕನ್ನಡದಲ್ಲಿ ಳ|ಣ ಗಳ ವ್ಯತ್ಯಯ*

ಕನ್ನಡ ಭಾಷೆಯು ತನ್ನ ವಿಕಾಸ ಪಥದಲ್ಲಿ ಹಲವು ಬಗೆಯ ವರ್ಣ ವ್ಯತ್ಯಯಗಳಿಗೆ ಎಡೆಗೊಟ್ಟಿದೆ. ವ್ಯಾವಹಾರಿಕ ಭಾಷೆ, ಸಾಹಿತ್ಯ ಮತ್ತು ಶಾಸನಗಳ ಭಾಷೆಗಳನ್ನು ಪರಿಶೀಲಿಸಿದರೆ ಱ|ಳ,| ಪ|ಹ, ವ|ಮ ಱ|ರ, ಱ|ಡ|ಳ, ರ|ಳ, ಲ|ರ, ಳ|ಣ, ಇ|ಎ, ಮೊದಲಾದ ಹಲವು ರೀತಿಯ ವರ್ಣವ್ಯತ್ಯಯಗಳನ್ನು ನಾವು ಗಮನಿಸಬಹುದು. ವ|ಮ, ಪ|ಹ ವರ್ಣವ್ಯತ್ಯಯಗಳು ಕನ್ನಡ ಭಾಷೆಯ ಒಂದು ಅಸಾಧಾರಣ ಲಕ್ಷಣವೆಂದೇ ಕೇಶಿರಾಜನು ಸಾರಿದ್ದಾನೆ. ಪ್ರಸ್ತುತ ಲೇಖನದಲ್ಲಿ ಳ|ಣ ಗಳ ವ್ಯತ್ಯಯದ ಸ್ವರೂಪವನ್ನು ತಿಳಿದುಕೊಳ್ಳುವ ಕಿಂಚಿತ್ ಪ್ರಯತ್ನವನ್ನು ನಾನು ಮಾಡಿದ್ದೇನೆ.

ಇಂದಿನ ಕನ್ನಡದಲ್ಲಿ ಗಿಳಿ|ಗಿಣಿ, ಗೆಳೆಯ|ಗೆಣೆಯ, ಕೊಳ|ಕೊಣ, ಹೂಳು|ಹೂಣು, ಬೆಳವಳಿಗೆ|ಬೆಳವಣಿಗೆ, ಮೊಳ|ಮೊಣ, ಗೊಳಸು|ಗೊಣಸು, ಕಳ|ಕಣ, ಕುಳಿ|ಕುಣಿ, ಮಿಳಿ|ಮಿಣಿ, ಮುಳುಗು|ಮುಣುಗು, ಅಳಿಲೆ|ಅಣಿಲೆ, ಮದವಣಿಗ|ಮದವಳಿಗ ಮೊದಲಾದ ಹಲವಾರು ಪದಗಳಲ್ಲಿ ಳ|ಣ ಗಳ ವ್ಯತ್ಯಯವನ್ನು ನಾವು ಕಾಣುತ್ತೇವೆ.

ಹೆಚ್ಚಾಗಿ ಮೈಸೂರು ಕಡೆ, ಗಿಣಿ, ಕೊಣ, ಗೆಣೆಯ, ಹೂಣು, ಮಿಣಿ ಎಂಬುದಾಗಿ 'ಣ' ಕಾರವೇ ರೂಢಿಯಲ್ಲಿದೆ. ಈ ಪದಗಳಿಗೆ ಕನ್ನಡ ನಾಡಿನ ಇತರ ಕಡೆಗಳಲ್ಲಿ 'ಳ' ಕಾರವೂ ಬಳಕೆಯಲ್ಲಿದೆ. ಎಷ್ಟೋವೇಳೆ ಎರಡೂ ರೂಪಗಳು ಸ್ವಚ್ಛಂದವಾಗಿ ಪ್ರಯೋಗವಾಗುವುದೂ ಇದೆ.

ಇಂದಿನ ನಮ್ಮ ಭಾಷೆಯಲ್ಲಿ ರೂಢಿಯಲ್ಲಿರುವ ಗಣೆ, ಮೆಣಸು, ಗೆಣಸು, ನೊಣ ಮೊದಲಾದ ಪದಗಳಿಗೆ ಕಾವ್ಯಗಳಲ್ಲಿ ಗಱೆ, ಮೆಱಸು ('ಮೆಳಸು'–ಶಾಸನಗಳಲ್ಲಿ), ಗೆಱಸು, ನೊಳ ಎಂಬೀ ರೂಪಗಳು ದೊರೆಯುತ್ತವೆ. ಹಾಗೆಯೇ ಇಂದು ವಾಡಿಕೆಯಲ್ಲಿರುವ ಮಳಲು, ಗೋಳಿ ಮೊದಲಾದ ಪದಗಳಿಗೆ ಮಣಲ್, ಗೋಣಿ (ಗೋಣಿ=Ficus Bengaleusis ಗದಾಯುದ್ಧ) ಎಂಬ ರೂಪಗಳನ್ನು ನಾವು ಕಾವ್ಯಗಳಲ್ಲಿ ಕಾಣಬಹುದು. ನೃಪತುಂಗನು ಹೇಳುವ 'ಕೊಪಣ' ನಗರವು ಇಂದಿನ ಕನ್ನಡದಲ್ಲಿ 'ಕೊಪ್ಪಳ'ವಾಗಿದೆ.

ಜಾನಪದ ಹಾಡುಗಳಲ್ಲಿ ಳ|ಣಗಳು ಸ್ವಚ್ಛವಾಗಿ ವಿನಿಮಯ ಪಡೆಯುವುದನ್ನು ನಾವು ಕಾಣಬಹುದು. 'ಕೆರೆಗೆ ಹಾರ' ಎಂಬ ಜಾನಪದ ಹಾಡಿನಲ್ಲಿ ಗೆಳತಿ|ಗೆಣತಿ ಎಂಬೀ ಎರಡು ರೂಪಗಳೂ ದೊರೆಯುತ್ತವೆ. ಶ್ರೀ ಎಲ್. ಗುಂಡಪ್ಪನವರು

---

*ವ್ಯತ್ಯಯವು ಳ್|ಣ್ ವ್ಯಂಜನಗಳಿಗೆ ಮಾತ್ರ ಅನ್ವಯಿಸುವುದು. ಉಚ್ಚಾರ ಸೌಲಭ್ಯಕ್ಕಾಗಿ ಳ|ಣ ವ್ಯತ್ಯಯವೆಂದು ಕರೆದಿದ್ದೇನೆ.

ಸಂಗ್ರಹಿಸಿದ 'ನಾಡ ಪದಗಳು' ಇದರಲ್ಲಿ 'ಪಾರಿವಾಳ' ಪದಕ್ಕೆ 'ಪಾಲೆವಾಣದ್ ಹಕ್ಕಿ, ಪಾರಿವಾಣದ್ ಹಕ್ಕಿ' ಎಂಬ ಎರಡು ರೂಪಗಳು ಕಂಡುಬರುತ್ತವೆ.

ಕನ್ನಡ ಕಾವ್ಯಗಳನ್ನು ಅವಲೋಕಿಸಿದರೆ ಇಂತಹ ವಿನಿಮಯಗಳು ಅಲ್ಲಲ್ಲಿ ನಮ್ಮ ದೃಷ್ಟಿಗೆ ಬೀಳುತ್ತವೆ.

ಉದಾ :—ಗೋಟ್ಮುರಿಗೊಂಡು (ಪಂ. ಭಾ. ಆ. 11 ಪದ್ಯ 40), ಗೋಣ್ಮುರಿಗೊಂಡು (ಅಜಿತ ಪುರಾಣ ಆ. 1. ಪದ್ಯ 90), 'ಮಟಲ್' (ಗದಾಯುದ್ಧ, ಪುಷ್ಪದಂತ ಪುರಾಣ) 'ಮಣಲ್' (ಕಾವ್ಯಾವಲೋಕನ 409 ನೇ ಪದ್ಯ), ಚಾಣು (ಳು)ಕ್ಯ (ಮದನ ತಿಲಕ 3 ನೇ ಪದ್ಯ) ಇತ್ಯಾದಿ.

ಕಾವ್ಯಗಳ ಭಾಷೆಗಿಂತಲೂ, ಶಾಸನಗಳ ಗದ್ಯ ಭಾಗದ ಭಾಷೆಯು ಆಯಾ ಪ್ರಾಂತದ ಪ್ರಾದೇಶಿಕ ವೈಶಿಷ್ಟ್ಯಗಳನ್ನು ಹೆಚ್ಚಿನ ಮಟ್ಟಿಗೆ ಉಳಿಸಿಕೊಂಡಿದೆ. ಪಂಡಿತ ಕವಿಗಳು ತಮ್ಮ ಕಾವ್ಯಗಳಲ್ಲಿ ಪ್ರಾಸ, ಶ್ಲೇಷೆ, ಸಂದರ್ಭೋಚಿತವಾದ ಪದ ವಿನ್ಯಾಸ ಇವುಗಳ ಕಡೆಗೇನೆ ವಿಶೇಷವಾದ ಗಮನವನ್ನು ಕೊಡುತ್ತಾರೆ. ಇವಕ್ಕನು ಗುಣವಾಗಿ ಪದ ರೂಪಗಳನ್ನು ಅಳವಡಿಸಿಕೊಳ್ಳುತ್ತಾರೆ. ಆದುದರಿಂದ ಕವಿಯು ಯಾವ ಪ್ರಾಂತದವನಾಗಿದ್ದರೂ ತನ್ನ ಕಾವ್ಯಗಳಲ್ಲಿ ಆ ಪ್ರಾಂತದ ವೈಶಿಷ್ಟ್ಯಗಳನ್ನು ತಪ್ಪದೆ ಉಳಿಸಿಕೊಳ್ಳುತ್ತಾನೆ ಎಂಬುದಾಗಿ ಹೇಳಲು ಬರುವಂತಿಲ್ಲ. ಕನ್ನಡ ನಾಡಿನ ಯಾವ ಪ್ರಾಂತದಲ್ಲಿ 'ಣ' ಯಾವ ಪ್ರಾಂತದಲ್ಲಿ 'ಳ' ಪ್ರಚಲಿತವಾಗಿ ತ್ತೆಂಬುದನ್ನು ತಿಳಿದುಕೊಳ್ಳಲು ಶಾಸನಗಳು ಅತ್ಯಂತ ಉಪಯುಕ್ತ ಸಾಧನ ಗಳಾಗಿವೆ.

ಳ|ಣ ಗಳ ವ್ಯತ್ಯಯದ ಪ್ರಾಚುರ್ಯವನ್ನು ನಾವು ಈ ಕೆಳಗಣ ಶಾಸನ ಪ್ರಯೋಗಗಳಿಂದ ತಿಳಿದುಕೊಳ್ಳಬಹುದು. ಕನ್ನಡ ಶಾಸನಗಳಲ್ಲಿ ಪ್ರಯೋಗವಾದ 'ಗದ್ದೆ' ಎಂಬ ಪದದ ಬೇರೆ ಬೇರೆ ರೂಪಭೇದಗಳನ್ನು ಈ ಕೆಳಗಿನಂತೆ ತಿಳಿದು ಕೊಳ್ಳಬಹುದು.

ಗಟ್ದೆ-ಗಳ್ದೆ :—(ಕ್ರಿ.ಶ. 1039 SII. Vol. IX, Pr. I., No. 94., p 64, l. 15 ಹರಪನಹಳ್ಳಿ)

ಗರ್ದೆ (ಕ್ರಿ.ಶ. 1019, Ec, Vol. VII, Pr. I, No. 125, p 234, l. 29 ಶಿಕಾರಿಪುರ ತಾಲೂಕು)

ಗಣ್ದೆ (ಕ್ರಿ.ಶ. 1038 SII. Vol. IX, Pr. I, No. 93, p. 63, l. 29 ಹಡಗಲಿ)

ಗಜ್ದೆ (ಕ್ರಿ.ಶ. 1121 SII. Vol. IX, Pr. I, No. 200, s. 198, l. 26 ಸೋಗಿ ಹಡಗಲಿ)

ಗದ್ದೆ (ಸು.ಕ್ರಿ.ಶ. 936 SII. Vol. IX, Pr. I, No. 24, p. 12, l. 52 ಅನಂತಪುರ)

ಗೞ್ದೆ। ಗರ್ದೆ। ಗಳ್ದೆ। ಗಣ್ದೆ। ಗಜೆ। ಗದ್ದೆ

'ೞ್' ವರ್ಣವುಬಿದ್ದುಹೋಗಿ ಪರದ 'ದ' ಕಾರವು ಸಜಾತೀಯ ದ್ವಿತ್ವವಾಗಿ ಪರಿಣಮಿಸಿರುವುದಕ್ಕೆ ದೃಷ್ಟಾಂತವು ಹತ್ತನೇ ಶತಮಾನದ ಪೂರ್ವಾರ್ಧದಲ್ಲೇ ನಮಗೆ ದೊರೆಯುವುದು.

ಹತ್ತನೆ ಶತಮಾನಕ್ಕಾಗಲೆ 'ೞ' 'ಳ' ಕಾರ ಭೇದವು ವಾಡಿಕೆಯಲ್ಲಿ ಬಿಟ್ಟು ಹೋಗಿದೆ. ಆದುದರಿಂದಲೆ 'ಣ' ಕಾರವು 'ಳ' ಕಾರದೊಡನೆ ವ್ಯತ್ಯಯವನ್ನು ಪಡೆದಂತೆ 'ೞ' ಕಾರದೊಡನೆಯೂ ವ್ಯತ್ಯಯವನ್ನು ಪಡೆಯುವುದು.

ಅಣ್ಮೆ (ಕ. 'ಅಣ್ಮು'=ಪರಾಕ್ರಮ, ತು. 'ಆಣ್'=ಗಂಡು, ತ. 'ಆಣ್ಮೈ'= ಪೌರುಷ) ಎಂಬ ಪದಕ್ಕೆ ಬದಲಾಗಿ ಶಾಸನಗಳಲ್ಲಿ 'ಅೞ್ಮ' ಎಂಬ ರೂಪವು ದೊರೆಯುವುದು.

ಅೞ್ಮ ಸತ್ತನ್ (ಕ್ರಿ.ಶ.ಸು. 950 Ec. Vol. X, No. 163, p. 111, l. 3 ಮುಳಬಾಗಲು)

ಅೞ್ಮ ಸತ್ತ (ಕ್ರಿ.ಶ. 1010 Ec. Vol. X, Pr. II, No. 123, p. 331, l. 15 ಚಿಂತಾಮಣಿ)

ರಾಜರ ಹಾಗು ರಾಜವಂಶಗಳ ಹೆಸರಾದ 'ಬಿಜ್ಜಳ', 'ನೊಳಂಬ', 'ಹೊಯ್ಸಳ' ಮೊದಲಾದ ಪದಗಳಿಗೆ 'ಬಿಜ್ಜಣ', ನೊಣಂಬ', 'ಹೊಯ್ಸಣ' ಎಂಬ ರೂಪಗಳನ್ನು ನಾವು ಶಾಸನಗಳಲ್ಲಿ ಧಾರಾಳವಾಗಿ ಕಾಣಬಹುದು. ೧೨ ನೇ ಶತಮಾನಕ್ಕೆ ಬಂದಂತೆ 'ನೊಣಂಬ', ಹೊಯ್ಸಣ' ಎಂಬ ರೂಪಗಳು ನಮಗೆ ಅಧಿಕ ಸಂಖ್ಯೆಯಲ್ಲಿ ಕಂಡುಬರುತ್ತವೆ.

ನೊಳಂಬ|ನೊಣಂಬ :

ನೊೞಂಬವಾಡಿ (ಕ್ರಿ.ಶ. 1032, SII. Vol. IX, Pr. I, No. 85, p. 56, l. 11 ಹರಪನಹಳ್ಳಿ)

ನೊಳಂಬವಾಡಿ (ಕ್ರಿ.ಶ. 1046 SII. Vol. IX, Pr. I, No. 104, p. 78. l. 8)

ನೊಳಂಬ (ಕ್ರಿ.ಶ. 1036, SII. Vol. IX, Pr. I, No. 91, p. 61, l. 17, ಬಳ್ಳಾರಿ)

ನೊಣಂಬನಣುಗಿ (ಕ್ರಿ.ಶ. 1036, SII, Vol. IX, Pr. I, No. 92, p. 62, l. 8 ಬಳ್ಳಾರಿ)

ನೊಳಂಬವಾಡಿ/ನೊಣಂಬವಾಡಿ (ಕ್ರಿ.ಶ. 1101 ? Ec; Vol. V, Pr. II, No. 34, p. 379, l. 11 & 16 ಅರಸೀಕೆರೆ)

ನೊಣಂಬವಾಡಿ (ಕ್ರಿ.ಶ. 1079 SII, Vol. IX, Pr. I, No. 145, p. 127, l. 11, ಹರಪನಹಳ್ಳಿ)

ಹೊಯ್ಸಳ/ಹೊಯ್ಸಣ:

ಹೊ ಇಸಣ (ಕ್ರಿ.ಶ. 1136 Ec. Vol. V, Pr. II, No. 32, p. 377, l. 4, ಅರಸೀಕೆರೆ)

ಹೊಯ್ಸಣ (ಕ್ರಿ.ಶ. 1153 Ec; Vol. VI, No. 28, p. 20, l. 13, ಕಡೂರು)

ಪೊಯ್ಸಳ (ಕ್ರಿ. ಶ. 1138, Ec. Vol. IV, No. 65, p. 375, l. 9 ನಾಗಮಂಗಲ ತಾಲೂಕು) ಹೊಯ್ಸಳ ದೇವರು (ಕ್ರಿ.ಶ. ಸು. 1155, Ec. Vol. III, No. 29, P. 44, l. 6 ಶ್ರೀರಂಗಪಟ್ಟಣ)

ನೊಣಬೇಶ್ವರ, ಹೊಯ್ಸಣೇಶ್ವರ (ಕ್ರಿ. ಶ. 1244, Ec. Vol. XV, No. 325, p. 84, l. 3, ಬೇಲೂರು)

ಬಿಜ್ಜಳ/ಬಿಜ್ಜಣ:

ಬಿಜ್ಜಣ ಚೋಳಮಹಾರಾಜಂ (ಕ್ರಿ. ಶ. 1079, SII. Vol. IX, Pr. I. No. 147, p. 129, l. 11 ಕರ್ನೂಲು)

ಬಿಜ್ಜಣ ದೇವ (ಕಿ. ಶ. 1162, K I, Vol. I, No. 27, p. 56, l. 32 ಹೂಲಿ)

ಬಿಜ್ಜಣೋರ್ವೀಪ (ಕ್ರಿ. ಶ. 1220, Ec. Vol. XI, No. 56, p. 348, l. 2 ಹೊಳಲಕೆರೆ)

ಮಣಲು:

ಮಣಲಪೊಟಿಯೊಳ್ಕೊಟ್ಟ (ಕ್ರಿ.ಶ.ಸು. 987, SII; Vol. IX, Pr.I., No. 75, l. 8, ಹರಪನಹಳ್ಳಿ)

ಮಣಲಕೆಯಿ (ಕಿ.ಶ. 1058, SII, Vol. IX, Pr. I, No. 120, p. 101, l. 16, ಹಡಗಲಿ ತಾಲೂಕು)

ಬಡಗಲ್ಮಣಲ ಹೊಳೆ (ಕಿ. ಶ. 1154 ? Ec. Vol, V, Pr. II No. 168, P. 292, l. 35, ಹಾಸನ ಜಿಲ್ಲೆ)

ಒಳಗಣ|ಒೞಗಣ :

. . . ಯಿಂದೊೞಗಣ ಭೂಮಿ (ಕ್ರಿ. ಶ. 1115, Ec., Vol. XV, No. 100, P. 137, l. 27, ಹೊಳೆನರಸೀಪುರ)

ಮೆಳಸು|ಮೆೞಸು :

ಮೆಳಸು (ಕ್ರಿ. ಶ. 1106, SII., Vol. IX, Pr. I, No. 172, P. 166, l. 33 ಅದೋನಿ)

ಮೆಳಸು (ಕ್ರಿ.ಶ. 1111, SII, Vol. IX, Pr. I, No. 184, 177, l. 51 ಕೂಡಲಗಿ)

ಮೆೞಸು ಸಲಗೆ ಎರಡು (ಕ್ರಿ. ಶ. 1176, Ec. Vol. III, No. 97, p. 289, l. 61 ತಿರುಮಕೂಡ್ಲು ನರಸೀಪುರ)

ಬೞಂಚೆ/ಬಳಚೆ :

ಬೞಂಚೆ (ಕ್ರಿ.ಶ. 1091, SII, Vol. XI, Pr. II, No. 136, p. 161, l. 58 ಆಲೂರು, ಧಾರವಾಡ)

ಕಂಡರಿಸು|ಕಂಡಳಿಸು|ಕಂಡೞಿಸು :

ಮಲ್ಲೋವಜನ ಕಂಡರಣೆ (ಕ್ರಿ.ಶ. 1190, Ec. Vol. V, Pr. II, No. 179, p. 610, l. 215)

ಮಲ್ಲೋಜ ಖಣ್ಡರಿಸಿದ (ಕ್ರಿ. ಶ. 1159, Ec. Vol V, Pr. II, No. 141, p. 530, l. 77, ಅರಸೀಕೆರೆ)

ದೇವೋಜನು ಕಂಡಳಿಸಿದ (ಕ್ರಿ. ಶ. 1158, Ec. Vol, V, Pr. II, No. 145, p. 537, l. 34 ಅರಸೀಕೆರೆ.)

ಕೇತೋಜ ಖಂಡಿೞಿಸಿದ (ಕ್ರಿ.ಶ. 1138, Ec. Vol IV, No. 65, p. 375, l. 31, ನಾಗಮಂಗಲ ತಾಲೂಕು)

ಸಂಸ್ಕೃತ ಹಾಗು ತದ್ಭವ ಪದಗಳಲ್ಲಿಯೂ ಳ/ೞ ಗಳ ವ್ಯತ್ಯಯವನ್ನು ನಾವು ನೋಡಬಹುದು.

ಬ್ರಾಹ್ಮಣ|ಬ್ರಾಹ್ಮಳ|ಬಹ್ಮಳ :

ಬ್ರಾಹ್ಮಳರ್ಗ್ಗೆ (ಕ್ರಿ. ಶ. 1165, Ec. Vol. XI, No. 77, p. 151, l. 84 ದಾವಣಗೆರೆ)

ಬ್ರಾಹ್ಮಳರುಂ (ಕ್ರಿ.ಶ. 1142, SII, Vol. IX, Pr. I, No. 238, p. 243, l. 6 ಹಡಗಲಿ)

ಬ್ರಹ್ಮಳರುಮಂ (ಕ್ರಿ.ಶ. 1194, Ec. Vol. VII, Pr. I. No. 138, p. 253, l. 53, ಶಿಕಾರಿಪುರ)

ಪುಳಿನ/ಪುಣ್ಣಿ :

ಪುಣ್ಣಿ (ಕಿ.ಶ. 1148, KI, Vol. I, No. 23, p. 33, l. 10 ಹೂಲಿ)

ಮೃಣಾಳ/ಮೃಣಾಣ :

ಮೃಣಾಣ (ಕ್ರಿ. ಶ. 1234, Ec. Vol. V, Pr. II, No. 82, p. 443, l. 22 ಅರಸೀಕೆರೆ)

ಹೇಮಳಂಬಿ/ಹೇಮಣಂಬಿ :

ಹೇಮಳಂಬ ಸಂವತ್ಸರದ (ಕ್ರಿ.ಶ. 1058, SII, Vol. IX, Pr. I, No. 120, P. 101, l. 1. ಹಡಗಲಿ ತಾಲೂಕು)

ಹೇಬಣಂದಿ ಸಂವತ್ಸರದ (ಕ್ರಿ.ಶ. 1178, Ec. Vol. II, No. 268, p. 124, l. 31 ಶ್ರವಣಬೊಳ್ಗೊಳ)

ಹೇಮಣಂಬಿ (ಕ್ರಿ.ಶ. 1237, Ec. Vol. XI, No. 131, p. 390, l. 4 ಹೊಳಲಕೆರೆ)

ಹೇಮಳಂಬಿ (ಕ್ರಿ.ಶ. 1297, Ec. Vol. XV, No. 248, p. 59, l. 2 ಬೇಲೂರು ತಾಲೂಕು)

ಬಣಂಜಿಗ/ಬಳಂಜಿಗ :

ಬಣಂಜಿಗನೆನೆ (ಕ್ರಿ.ಶ. 1176, SII, Vol. IX, Pr. I, No. 296, p. 318, l. 27 ಬಳ್ಳಾರಿ ತಾಲ್ಲೂಕು)

ಬಳಂಜಿಗರುಂ (ಕ್ರಿ.ಶ. 1106, SII, Vol. IX, Pr. I, No. 172, p. 166, l. 31 ಅದೋನಿ)

ಕನ್ನಡದಲ್ಲಿ ಇಷ್ಟೊಂದು ವಿಶಿಷ್ಟ ರೀತಿಯಲ್ಲಿ ಗೋಚರಿಸುವ ಳ/ಣ ಗಳ ವ್ಯತ್ಯಯದ ಸ್ವರೂಪವನ್ನೂ, ಕನ್ನಡದ ಈ ವೈಶಿಷ್ಟ್ಯದ ಪ್ರತ್ಯೇಕತೆಯನ್ನೂ ಇತರ ಸಹೋದರಿ ಭಾಷೆಗಳೊಡನೆ ಹೋಲಿಸಿ ತಿಳಿದುಕೊಳ್ಳಲು ಅನುಕೂಲವಾಗುವಂತೆ ಳ/ಣ ಗಳ ವ್ಯತ್ಯಯಕ್ಕೆ ಸಂಬಂಧಿಸಿರುವ ಪದಗಳನ್ನು ಕೆಳಗಿನ ಕ್ರಮದಲ್ಲಿ ವಿಭಾಗಿಸಿಕೊಳ್ಳಬಹುದು.

1. ಮೂಲದ್ರಾವಿಡ ವರ್ಣವು 'ಳ' ಕಾರವಿದ್ದು ಇದಕ್ಕೆ ವಿಕಲ್ಪವಾಗಿ 'ಣ' ಕಾರವು ದೊರೆಯದಿರುವ ಪದಗಳು.

ಉದಾ :—ತೋಳ್, ಬಾಳ್ ಇತ್ಯಾದಿ.

2. ಮೂಲದ್ರಾವಿಡ ವರ್ಣವು 'ಣ' ಕಾರವಿದ್ದು ಇದಕ್ಕೆ ವಿಕಲ್ಪವಾಗಿ 'ಳ' ಕಾರವು ದೊರೆಯದಿರುವ ಪದಗಳು.

ಉದಾ :—ಪೆಣ್, ಮಣ್ ಇತ್ಯಾದಿ.

3. ಮೂಲದ್ರಾವಿಡ ವರ್ಣವು 'ಳ' ಕಾರವಿದ್ದು ವಿಕಲ್ಪವಾಗಿ ಕನ್ನಡದಲ್ಲಿ 'ಣ' ಕಾರವಿರುವ ಪದಗಳು.

*ಳ : ಉದಾ :—

('ಅಳಂಬೆ'| 'ಅಣಬೆ') ತು. 'ಅಲಂಬು'' ಲಾಂಬು'

'ಆಳ್ಮ|ಆಣ್ಮ'=ಒಡೆಯ, ರಾಜ ; ತೆ. 'ಏಲು' ಆಳು

'ಎಳ್|ಎಳ್ಳು|ಎಣ್ಣೆ' ತು. 'ಎಣ್ಮೆ' ಎಳ್ಳು, ತ. ಮ. ಎಳ್, ಎಳ್ಳ್

'ಒಳಗಣ|ಒಣಗಣ' < * ಉಳ್.

'ಓಳಿ|ಓಣಿ' ತು. 'ಓಳ್ಯ, ಓಳಿಯ' ಸಾಲು ತ. 'ಓಳಿ' ಸಾಲು

'ಕಳ|ಕಣ' ತ. ಮ. 'ಕಳಂ'

'ಕೆಳೆ|ಗೆಳೆ|ಗೆಣೆ'

'ಕೊಳ|ಕೊಣ' ತ. ಮ. 'ಕುಳಂ'

'ಕೊಳಗು|ಕೊಣಗು' ತ. ಮ. 'ಕುಳಂಪು'; ('ಗಾಳ|ಗಾಣ')

(ಗೋಳಿ|ಗೋಣಿ) ತ. 'ಕೋಳಿ|ಕೋಣಿ' ತು. ಗೋಳಿ' (Ficus Bengaleusis)

ತಳಿಗೆ|ತಣಿಗೆ ತ. 'ತಳಿಕ್ಕೈ'
ಪುಣಿಸೆ, ಹುಣಿಸೆ < ಪುಳಿ|ಹುಳಿ
ಬೆಳತಿಗೆ|ಬೆಣತಿಗೆ; 'ಬೆಣ್ಣೆ'; 'ಬೆಳ್ಳಿ' < *'ವೆಳ್' ಬಿಳಿ
(ಮೆಳಸು|ಮೆಣಸು),
ಮೆಣಸು ಗಡಲೆ ಪಂ.ಭಾ. ೮ 4.87 ನೇ ಪದ್ಯದ ಕೆಳಗಿನ ವಚನ,
ತ. ಮ. ಮಿಳಕು
(ಬಳಬೆ|ಬಣಂಬೆ); (ಸೆಳಸು/ಸೆಣಸು), (ನೇವಳ/ನೇವಣ)
ಇತ್ಯಾದಿ.

4. ಮೂಲ ದ್ರಾವಿಡ ವರ್ಣವು 'ಣ' ಕಾರವಿದ್ದು ವಿಕಲ್ಪವಾಗಿ ಕನ್ನಡ ದಲ್ಲಿ 'ಳ' ಕಾರವಿರುವ ಪದಗಳು.

*ಣ :

'ಅಣ್ಮೆ|ಅೞ್ಮೆ', ಕ. 'ಅಣ್ಮು' ತ. 'ಆಣ್ಮೈ' ಪೌರುಷ, ಪರಾಕ್ರಮ.

'ಆಣ್|ಆಳ್' ತ. ಮ. ತು. 'ಆಣ್' ಗಂಡು

'ಅಣಿಲ್|ಅಳಿಲ್' ತ. 'ಅಣಿಲ್', ತು. 'ಚಣಿಲ್'

'ಉಣಿ'|ಉಳಿ < *ಉಣ್

ಕಣಿಸು|ಕಳಿಸು < *ಕಣ್

ಗೋಣ್ಮುರಿಗೊಂಡು (ಅಜಿತ ಪುರಾಣ, ಆ. 1ಪ. 90)

ಗೋೞ್ಮುರಿಗೊಂಡ್ (ಪಂ. ಭಾ. ಆ. 11 ಪ. 40. ತಿ. 'ಗೊನ್ನು' ಕುತ್ತಿಗೆ)

('ಮಣಲ್|ಮಳಲ್') ತ. ಮ. ಮಣಲ್ < *ಮಣ್ ?

5. ಮೂಲದ್ರಾವಿಡ '*ೞ' ವರ್ಣಕ್ಕೆ ಸಂವಾದಿಯಾದ ಹಳೆಗನ್ನಡ 'ೞ' ಕಾರವಿದ್ದು ವಿಕಲ್ಪವಾಗಿ 'ಳ' ಕಾರ 'ಣ' ಕಾರವಿರುವ ಪದಗಳು.

[1]*ೞ > ಳ|ಣ

'ಅೞಲ್'|ಅಳಲ್|ಅಣಲ್ ; ತ. ಮ. ಅೞಲ್

'ಆೞಿ|ಆಳಿ ? |ಆಣಿ ; ತ. ಮ. ಆೞಿ

'ಕುೞಿ|ಗುಳಿ|ಕುಣಿ'; 'ಗುಣ್ಪು' ಆಳ ; ತ. ಮ. ಕುೞಿ, ತು. ಗುರಿ

'ಗೞೆ|ಗಳೆ|ಗಣೆ'; ತ. ಕೞೈ ; ಮ. 'ಕೞ'; ತು. 'ಗಣೆ'

'ಗೆೞಸು|ಗೆಳಸು ?|ಗೆಣಸು; ತ. ಕಿೞಙ್ಕು. ಮ. ಕಿೞಙ್ಙ್ ; ತು. 'ಕಿರೆಂಗ್'

'ತುೞಿ|ತುಣಿ'.

'ಪುೞ|ಪುಣುಗು'; ತ. ಮ. 'ಪುೞುಕು'; ತು. ಪುಣುಂಗು

'ಪೂೞ್|ಹೂಳು|ಹೂಣು'; ಮ. 'ಪೂೞುಕ'

'ಮುೞುಗು|ಮುಳುಗು|ಮುಣುಗು ; ತ. 'ಮುೞುಕು'

'ಮೊೞ|ಮೊಳ|ಮೊಣ'; ತ. ಮ. 'ಮುೞಂ'; ತು. ಮೊರಂಗೆ–

6. ಮೂಲದ್ರಾವಿಡ ವರ್ಣವು '*ೞ' ವರ್ಣವಾಗಿದ್ದು ಸಂವಾದಿಯಾದ ಹಳಗನ್ನಡ 'ೞ' ಕಾರವು ಇಲ್ಲದೆ ವಿಕಲ್ಪವಾಗಿ ಳ|ಣ ಕಾರಗಳಿರುವ ಪದಗಳು.

*ೞ > ಣ/ಳ :

'ನೊಣ|ನೊಳ'; ತ. 'ನುಳಂಪು'; ಮ. ನುೞಂಪು (< *ನುೞ್-ಅ)

'ಮಣಕ|ಮಳಕ' ಕರು ; ತ. 'ಮೞ' ಬಾಲ್ಯ

1. *ೞ–ಹಳಗನ್ನಡ 'ೞ' ವರ್ಣಕ್ಕೆ ಸಂವಾದಿಯಾದ ಮೂಲದ್ರಾವಿಡ ವರ್ಣಕ್ಕೆ ಸಂಕೇತ. Proto–Dravidian *Z. by Dr. Krishnamurti; Indian Linguistics, Turner Jubilee Volume I

7. ಮೂಲದ್ರಾವಿಡದಲ್ಲಿ '*ೞ' ವರ್ಣವಿದ್ದು ಹಳಗನ್ನಡದಲ್ಲಿ 'ೞ' ಕಾರವಿಲ್ಲದೆ 'ಣ' ಮಾತ್ರ ದೊರೆಯುವ ಪದಗಳು.

*ೞ > ಣ :

'ಪಣ್'; ತ. ಮ. 'ಪೞಂ'

'ಕೊಣಸು'; ಜಿಂಕೆಯಮರಿ; ತ. 'ಕುೞ' ಎಳೆ, 'ಕುೞನ್ತೈ' ಮಗು

'ತಣಲು'; ತ. 'ತೞಲ್' ಕೆಂಡ

ಕನ್ನಡವಲ್ಲದೆ ಇತರ ದ್ರಾವಿಡ ಭಾಷೆಗಳ ಜ್ಞಾತಿಪದಗಳಲ್ಲಿಯೂ ನಾವು ಳ|ಣ ಗಳ ವ್ಯತ್ಯಯವನ್ನು ಕಾಣುತ್ತೇವೆ.

ತ. ಕೋಳಿ|**ಕೋಣಿ** (Ficus Bingaleusis.)

ಬದಿಗೊಂಡು **ಗೋಣಿ** ಪಣ್ಣಂ ಬಡಿವಂತಿರೆ-(ಗದಾಯುದ್ಧ ಆ. 3, ಪ. 11)

ಕ. 'ಬಳ್ಳು, ಬಳುಕು'; ತ. 'ವಣಕ್ಕು', ವಣಂಕು, '**ವಣರ್**' ಇತ್ಯಾದಿ.

ಕ. 'ಹಾಳೆ', ತು. 'ಪಾಳೆ', ತ. ಪಾಳೈ, ಮ. **ಪಾಣು**

ಕ. 'ಕೇಳ್'; ತ. ಮ. 'ಕೇಳ್'; ತು. '**ಕೇಣ್**'

ತು. '**ಮಣ್ಪು**'|'ಮಳ್ಪು' ಮಾಡು

ಕೆ. 'ಕಳ್ಳ'; ತು. 'ಕಳುವೆ', '**ಕೆಣ್ಡ**', '**ಕೆಣ್ಡನಿ**' < ಕಳ್

ಕ. ಎಳ್|ಎಳ್ಳು; ತು. ಎಣ್ಮೆ; ಕ. 'ಕೈಕೊಳ್', ತು. '**ಕೈಕೊಣು**'

ಕ. 'ಗುಳಿ'; ತು. ಗುಣ್ಡಿ

ಕ. 'ಬೆಳ್ಳಿ'; ತೆ. ವೆಣ್ಡಿ < *ವೆಳ್

ತು. 'ಪಣ್'; ಹೇಳು; ತೆ. 'ಪಲ್-ಟಿಕು' ಮಾತನಾಡು

ಕುೞ. 'ಪ್ಲಾಪ' ಹೇಳು; ಬ್ರಾಹುಯಿ 'ಪಾಜ್' ಹೇಳು

*ಮಾಪಿಳ್ಳಾ ಮಲೆಯಾಳದಲ್ಲಿ ಕ. 'ಬಿೞ್ದುದು' ಎಂಬ ಪದಕ್ಕೆ ಸಮಾನವಾದ '**ಬೀಣ್**' ಎಂಬ ರೂಪವಿದೆ. ಹಾಗೆಯೇ ಕ. 'ಏೞ್' ಎಂಬ ಪದಕ್ಕೆ '**ಏಣಿ**' ಎಂಬ ಸಮಾನ ಪದವಿದೆ.

ಇಲ್ಲಿ ಗಮನಿಸಬೇಕಾದ ವಿಷಯವೆಂದರೆ ಇತರ ದ್ರಾವಿಡ ಭಾಷೆಗಳಲ್ಲಿ ಹೆಚ್ಚಾಗಿ ಯಾವುದಾದರೂ ಒಂದು ('ಳ' ಅಥವಾ 'ಣ') ವರ್ಣವೇ ಪ್ರಚಲಿತವಾಗಿರುತ್ತದೆ. ತುಳುವಿನಲ್ಲಿ ನಾವು 'ಕೇಣ್' ಎಂಬ ರೂಪವನ್ನಲ್ಲದೆ 'ಕೇಳ್' ರೂಪವನ್ನು ಕಾಣಲಾರೆವು. ತೆಲುಗಿನಲ್ಲಿ 'ಪಲುಕು' ರೂಪವಿದೆಯಲ್ಲದೆ 'ಣ'

---

*ಮಾಪಿಳ್ಳಾ ಮಲೆಯಾಳ–ದಕ್ಷಿಣ ಕನ್ನಡದಲ್ಲಿ ರೂಢಿಯಲ್ಲಿರುವ ಗ್ರಾಮ್ಯ (Colloquial) ಮಲೆಯಾಳ.

ಕ–ಕನ್ನಡ, ತ–ತಮಿೞ್, ಮ–ಮಲೆಯಾಳ, ತು–ತುಳು.

ಕಾರ ಯುಕ್ತವಾದ ರೂಪವಿಲ್ಲ. ಕ್ವಚಿತ್ತಾಗಿ ಇದಕ್ಕೂ ಕೆಲವು ಅಪವಾದಗಳಿವೆ. ಉದಾ : ತ. 'ಕೋೞಿ।ಕೋಣಿ', ತು. 'ಮಣ್ಪು।ಮಳ್ಪು' ಮಾಡು. ಆದರೆ ಕನ್ನಡದಲ್ಲಿರುವಷ್ಟು ಳ।ಣ ಗಳ ವ್ಯತ್ಯಯದ ಬಾಹುಳ್ಯ ಮತ್ತು ಸ್ವಚ್ಛಂದತೆಯನ್ನು ನಾವು ಇತರ ದ್ರಾವಿಡ ಭಾಷೆಗಳಲ್ಲಿ ಕಾಣಲಾರೆವು.

ಹೀಗೆ ದ್ರಾವಿಡ ಭಾಷಾವರ್ಗದ ಸಹೋದರಿ ಭಾಷೆಗಳ ಜ್ಞಾತಿಪದಗಳಲ್ಲಿ ಳ।ಣ ಗಳ ವ್ಯತ್ಯಯವು ಕಂಡುಬರುವುದರಿಂದ ಈ ವ್ಯತ್ಯಯವು ಮೂಲ ದ್ರಾವಿಡ ಭಾಷಾ ಸ್ಥಿತಿಯಲ್ಲೇ ಪ್ರಾರಂಭವಾಗಿರಬೇಕೆಂದು ಊಹಿಸಲು ಅವಕಾಶವಿದೆ. ಈ ಸಂದರ್ಭದಲ್ಲಿ ಕೇಶಿರಾಜನು ಹೇಳುವ ಎರಡು ಸೂತ್ರಗಳು (ಸೂ. 243, 244) ಸ್ಮರಿಸತಕ್ಕವುಗಳಾಗಿವೆ. ಈ ಸೂತ್ರಗಳಲ್ಲಿ ಕೇಶಿರಾಜನು ಯಾವ ಪರಿಸರಗಳಲ್ಲಿ 'ಳ' ಕಾರಕ್ಕೆ 'ಣ' ತ್ವ ಬರುತ್ತದೆ ಎಂಬುದಾಗಿ ಹೇಳಿದ್ದಾನೆ. 'ಉಳ್' ಧಾತುವಿಗೆ ನಪುಂಸಕ ಲಿಂಗದ 'ಉದು' ಪ್ರತ್ಯಯವು ಪರವಾದಾಗ 'ಉಳ್' ಧಾತುವಿನ 'ಳ' ಕಾರಕ್ಕೆ 'ಣ' 'ಣತ್ವ' ವೂ, 'ಉದು' ವಿಗೆ ಟಕಾರಾದೇಶವೂ ಬರುವುದು. ಹಾಗೆಯೇ 'ದ'ಕಾರ ಪರವಾದ 'ಕೊಳ್' ಧಾತುವಿನ 'ಳ' ಕಾರಕ್ಕೆ 'ಣತ್ವ' (ಕೊಳ್+ದ+ಅಂ=ಕೊಣ್ಡಂ) ಬರುತ್ತದೆ. ತುಳು ಭಾಷೆಯಲ್ಲಿ 'ಕಳ್' ಧಾತುವಿನ 'ಳ' ಕಾರಕ್ಕೂ 'ಣತ್ವ' ಬರುತ್ತದೆ. ಉದಾ : ಕ. 'ಕಳ್ದಂ'; ತು. ಕಣ್ಡಿಯೆ.

'ಉಳ್' ಧಾತುವಿನ 'ಳ' ಕಾರಕ್ಕೆ ಇತರ ದ್ರಾವಿಡ ಭಾಷೆಗಳಲ್ಲಿಯೂ 'ಣತ್ವ' ವಿದೆ. ಉದಾ : ತ. ಉಣ್ಡು ; ಮ. ಉಣ್ಡು ; ತು. ಉಣ್ಡು ; ತೆ. ಉನ್ದಿ ಇತ್ಯಾದಿ. ಧಾತುವಿಗೆ ಪ್ರತ್ಯಯವು ಸೇರುವಾಗ ನಡೆಯುವ ಸಂಧಿಕಾರ್ಯದಲ್ಲಿ ಈ ಬದಲಾವಣೆಯು ತಲೆದೋರಿರಬೇಕು. ಹೀಗೆ ನಿಶ್ಚಿತ ಪರಿಸರಗಳಲ್ಲಿ ತಲೆದೋರಿದ ಈ ಮಾರ್ಪು ಕ್ರಮೇಣ ಪದ ಮಧ್ಯ ಹಾಗು ಪದಾಂತ್ಯದ 'ಳ' ಕಾರಗಳಿಗೆ ವ್ಯಾಪಿಸಿ ಅನ್ಯೋನ್ಯ ವ್ಯತ್ಯಯವನ್ನು ಪಡೆದಿರಬೇಕು.

ಹಳಗನ್ನಡದ 'ೞ' ಕಾರವು ' ನೋಡುವೊಡೊಂದಕ್ಕರಮದು ಮಾಡುವೊಡು ಚ್ಚರಣೆಗರಿದು ' ಎಂಬ ಸ್ಥಿತಿಗೆ ಬಂದು ತನ್ನ ಪ್ರತ್ಯೇಕತೆಯನ್ನು ಕಳೆದುಕೊಂಡು 'ಳ' ಕಾರದೊಡನೆ ಒಂದಾಗಿ ಪರಿಣಮಿಸಿದ ಅನಂತರ ಕನ್ನಡದಲ್ಲಿ 'ೞ।ಣ' ಕಾರಗಳೊಳಗೆ ವ್ಯತ್ಯಯವು ಪ್ರಾರಂಭವಾಗಿರಬೇಕೆಂದು ಊಹಿಸುವುದೂ ಸಹಜವಾಗಿದೆ.

ಉದಾ :—ಅಣ್ಮು।ಅೞ್ಮು; ಶಾಸನಗಳನ್ನು ಕಂಡರಿಸಿದವನಿಗೆ 'ೞ' ಕಾರವೂ ಒಂದೆ 'ಳ' ಕಾರವೂ ಒಂದೆ.

ಇದೇ ಸಂದರ್ಭದಲ್ಲಿ 'ಮಳಲ್' ಎಂಬ ಪದವನ್ನು ಸ್ವಲ್ಪ ಪರಿಶೀಲಿಸಬೇಕಾಗಿದೆ. ಗದಾಯುದ್ಧ, ಪುಷ್ಪದಂತ ಪುರಾಣ, ರಾಮಾಶ್ವಮೇಧ ಮೊದಲಾದ ಹಳಗನ್ನಡ ಕಾವ್ಯಗಳಲ್ಲಿ ನಮಗೆ ' ಮೞಲ್ ' ರೂಪವು ದೊರೆಯುತ್ತದೆ. ಶ್ರೀ ಡಿ.ಎಲ್.

ನರಸಿಂಹಾಚಾರ್ಯರ ಸಂಪಾದಕತ್ವದಲ್ಲಿ ಪರಿಷ್ಕರಿಸಲ್ಪಟ್ಟ 'ಶಬ್ದ ಮಣಿದರ್ಪಣ' ದಲ್ಲಿಯೂ 'ಮಱಲ್' ರೂಪವಿದೆ.

ಉದಾ :—ಸರೋವರದ **ಮಱಲ್** ಪುರಿಗಡಲೆಗೆ।
ಪುರಿದ **ಮಱಲ್** ಕಾಯ್ವ ತೆಱದೆ ಕಾಯ್ದುತ್ತಿತ್ತಂ ॥
ಗದಾಯುದ್ಧ ಆ. 7 ಪ. 18

ಬೇಂಟೆಯೆಂದು ಸರವಿ; **ಮಳಲ** ಬೇಂಟೆಯಂ ಮಾಡಿದವೋಲ್ (ಶಬ್ದ ಮಣಿದರ್ಪಣ, ಪ್ರಯೋಗಸಾರಮೆಂಬ ಶಬ್ದಾರ್ಥನಿರ್ಣಯಂ—ಸಂಪಾದಕರು ಶ್ರೀಯುತರಾದ ಕಿಟ್ಟೆಲ್, ಪಂಜೆ ಮಂಗೇಶರಾವ್ 1920)

109 ನೇ ಸೂತ್ರದ ಕೆಳಗೆ 'ಮಣಲಿನ' ರೂಪವಿದೆ.

ಬೇಂಟೆಯೆಂದು ಸರವಿ; **ಮಱಲ** ಬೇಂಟೆಯಂ ಮಾಡಿದವೊಲ್ ಮುಮ್ಮುರಿಯೆಂದು ಕಾಸಿದ **ಮಱಲ್.**

(ಸಂಪಾದಕರು. ಶ್ರೀ ಡಿ. ಎಲ್. ನರಸಿಂಹಾಚಾರ್ 1959)

ನಾಗವರ್ಮನ ಕಾವ್ಯಾವಲೋಕನದ 409 ನೇ ಪದ್ಯದಲ್ಲಿ 'ಮಣಲಂ' ಎಂಬ ರೂಪವಿದೆ. ಶಾಸನಗಳಲ್ಲಿ 'ಮಣಲ ಪೊಱೆ', 'ಮಣಲಕೆಯಿ' ಎಂಬ ರೂಪಗಳನ್ನೇ ಹೆಚ್ಚಾಗಿ ಕಾಣುತ್ತೇವೆ. ಶ್ರೀ ಕಿಟ್ಟೆಲರು ತಮ್ಮ ನಿಘಂಟುವಿನಲ್ಲಿ 'ಮಱಲ್' ರೂಪವನ್ನು ಕೊಡಲಿಲ್ಲ. ತಮಿೞ್ ಮಲೆಯಾಳಗಳಲ್ಲಿ 'ಮಣಲ್' ಎಂಬ ರೂಪವೇ ಇದೆ. ಈ ಎಲ್ಲಾ ಕಾರಣಗಳಿಂದ 'ಮಣಲ್' ಎಂಬುದೇ ಪ್ರಾಚೀನ ರೂಪವೆಂಬುದಾಗಿ ಊಹಿಸಬಹುದು. 'ಮಣ್' ಧಾತುವಿನಿಂದ ವ್ಯುತ್ಪನ್ನವಾಗಿರಬಹುದೆ? ಳ|ಣ ಗಳ ವ್ಯತ್ಯಯವನ್ನನುಸರಿಸಿ ಅನಂತರ 'ಮಳಲ್' ರೂಪವು ರೂಢಿಗೆ ಬಂದಿರಬಹುದು. 'ಳ' ಕಾರದ ಪೂರ್ವರೂಪವು 'ಱ' ಕಾರವೆಂಬ ಕಲ್ಪನೆಯಿಂದ 'ಮಱಲ್' ರೂಪವು ಏರ್ಪಟ್ಟಿರಬಹುದು.

ಇನ್ನು ಕನ್ನಡದ 'ಕೊಣಸು', 'ತಣಲ್', 'ಪಣ್', 'ನೊಣ', 'ಮಣಕ' ಮೊದಲಾದ ಪದಗಳಲ್ಲಿ ಕಂಡುಬರುವ 'ಣ' ಕಾರಕ್ಕೆ ಮೂಲದ್ರಾವಿಡ ವರ್ಣವು '*ಱ' ಕಾರ ಇದ್ದಿರಬಹುದಾದರೂ ಹಳಗನ್ನಡದಲ್ಲಿ ಸಂವಾದಿಯಾದ 'ಱ' ಕಾರವು ಕಂಡುಬರುವುದಿಲ್ಲ. ಈ ಕಾರಣದಿಂದಾಗಿ 'ದಕ್ಷಿಣ ದ್ರಾವಿಡ' ಭಾಷೆಯ ಯಾವ ಒಂದು ಪ್ರಾಂತ ಭೇದವು ಮುಂದೆ ಕನ್ನಡ ಭಾಷೆಯಾಗಿ ರೂಪುಗೊಂಡಿರುವುದೊ ಅದೇ ಭಾಗದಲ್ಲಿ ಮೊದಲಾಗಿ ಮೂಲದ್ರಾವಿಡ '*ಱ' ವರ್ಣವು 'ಣ' ಕಾರವಾಗಿ ಮಾರ್ಪಟ್ಟಿರಬೇಕು ಎಂಬ ಊಹೆಯು ಅಸಮಂಜಸವಾಗಲಾರದೆಂದು ನನ್ನ ಭಾವನೆ. 'ನೊಣ', 'ಮಣಕ' ಇತ್ಯಾದಿ ಪದಗಳಿಗೆ 'ನೊಳ', 'ಮಳಕ' ಎಂಬ ರೂಪಗಳು 'ಳ|ಣ' ವ್ಯತ್ಯಯವನ್ನನುಸರಿಸಿ ಅನಂತರ ಬಳಕೆಗೆ ಬಂದಿರಬೇಕು.

ಒಟ್ಟಿನಲ್ಲಿ ಜಟಿಲವಾಗಿ ಹೆಣೆದುಕೊಂಡಿರುವ ಳ|ಣ ವ್ಯತ್ಯಯ ವೈಶಿಷ್ಟ್ಯದ ಎಳೆಗಳನ್ನು ಈ ರೀತಿಯಾಗಿ ಬಿಡಿಸಬಹುದು.

*ಳ > ಣ

*ಣ > ಳ

*ೞ > ಟಿ > ಳ|ಣ

*ೞ > ಣ|ಳ

*ೞ > ಣ

ಇವಲ್ಲದೆ ಕಂಡರಿಸು|ಕಂಡಳಿಸು|ಕಂಡಣಿಸು ಎಂಬುದಾಗಿ ರೂಪುಗೊಂಡ ಳ|ಣ ಗಳು.

ಹೀಗೆ ನಾನಾರೀತಿಯಾಗಿ ರೂಪುಗೊಂಡ ಳ|ಣ ಗಳನ್ನೂ, ಅವುಗಳ ಅನ್ಯೋನ್ಯ ವ್ಯತ್ಯಯವನ್ನೂ ನಾವು ಇಂದಿನ ಕನ್ನಡದಲ್ಲಿ ಕಾಣುತ್ತೇವೆ. ಕನ್ನಡದಲ್ಲಿರುವಂತೆ ಳ|ಣ ಗಳ ವ್ಯತ್ಯದ ಬಾಹುಳ್ಯವನ್ನೂ, ಸ್ವಚ್ಛಂದತೆಯನ್ನೂ ನಾವು ಇತರ ಸಹೋದರಿ ಭಾಷೆಗಳಲ್ಲಿ ಕಾಣಲಾರೆವು. ಈ ದೃಷ್ಟಿಯಿಂದ ಳ|ಣ ಗಳ ವ್ಯತ್ಯಯವನ್ನು ಕನ್ನಡ ಭಾಷೆಯ ಒಂದು ಗಣ್ಯ ವೈಶಿಷ್ಟ್ಯವೆಂದೇ ಪರಿಗಣಿಸಬಹುದು.

—ಬಿ. ರಾಮಚಂದ್ರರಾವ್

SII. South Indian Inscriptions Vols.
Ec. Epigraphia Carnatica Vols.
KI. Karnatak Inscriptions Vols.
Pr. part
p. page
l. line

ಅನುಭವ ಸಾಹಿತ್ಯ

ಅವರವರ ದರುಶನಕೆ|ಅವರವರ ವೇಷದಲಿ
ಅವರವರಿಗೆಲ್ಲ ಗುರು ನೀನೊಬ್ಬನೆ ||
ಅವರವರ ಭಾವಕ್ಕೆ| ಅವರವರ ಪೂಜೆಗಂ
ಅವರವರಿಗೆಲ್ಲ ದೇವನೀನೊಬ್ಬನೆ || —ಮುಪ್ಪಿನ ಷಡಕ್ಷರಾರ್ಯ

ಎಂತಹ ಅನುಭವ ನುಡಿಯು ತುಂಬಿಬಂದಿದೆ ಇಲ್ಲಿ! ಇದು ಅನುಭವ ಸಾಹಿತ್ಯಕ್ಕೆ ನಾಂದಿ. ಪ್ರತಿಯೊಂದು ನಾಗರಿಕತೆಯೂ ಹೆಮ್ಮೆಪಡುವಂತಹ ವಚನಾಮೃತ. ಕನ್ನಡನಾಗರಿಕತೆಯು ಸಹೋದರ ಧರ್ಮಗಳಲ್ಲಿ ತಾಳಿದ ಸಮತಾಭಾವದರ್ಶನ; ಈ ನುಡಿಯನ್ನು ಪ್ರತಿಯೊಬ್ಬ ಕನ್ನಡಿಗನೂ ತನ್ನ ಮನೆಯಲ್ಲಿ ಸುವರ್ಣಾಕ್ಷರಗಳಿಂದ ಬರೆಯಿಸಿ ಹಾಕಬೇಕು. ಇಂತಹ ಅನುಭವ ಸಾಹಿತ್ಯವನ್ನು ಪಡೆದ ಕನ್ನಡ ನಾಗರಿಕತೆಯೇ ಧನ್ಯ! ನಮ್ಮ ಇರುವಿಕೆಯೇ ನಮ್ಮ ನಾಗರಿಕತೆ. ನಾಗರಿಕತೆಯ ಒಳನಾಡಿಯೇ ಸಂಸ್ಕೃತಿ. ಸಂಸ್ಕೃತಿಯ ಉಸಿರೇ ಜನಜೀವನ. ನಾವು ತುಂಬಿದಂತೆ ನಮ್ಮ ಜೀವನ, ಜೀವನ ತುಂಬಿ ಬಂದಂತೆ ನಮ್ಮ ಸಾಹಿತ್ಯ. ಈ ಸಾಹಿತ್ಯವೇ ನಮ್ಮ ಸಂಸ್ಕೃತಿಯ ಹೊರಬೆಳಕು; ಸಹಜ ಸಾಹಿತ್ಯವು ಸತ್ಯಸುಂದರವು. ಅದು ಯುಗ ಯುಗಕ್ಕೂ ಹೊಸತು. ಅಂತಃಸ್ಫೂರ್ತಿಯು ಅದರ ಉಸಿರಾಗಿ ಅನುಭವದ ನುಡಿಯಾಗಿ ನಿಲ್ಲುವುದು. ಅನುಭವಸಾಹಿತ್ಯವು ಅಮರವಾದುದು. ಅದು ಪ್ರತಿ ಯುಗದ ಜೀವನ ಮಾರ್ಗದ ಕರುಣಾಳು ಬೆಳಕು. ಅದರಿಂದ ಜೀವನವು ಸುಖ ಮಯವಾಗುವುದಲ್ಲದೆ ಉದ್ಧಾರವಾಗುವುದು. ಜಗತ್ತಿನಲ್ಲಿ ಯಾವ ಸಾಹಿತ್ಯವೇ ಆಗಲಿ ಅದಕ್ಕೆ ಧರ್ಮವೇ ಮೂಲ ಕಾರಣಭೂತವಾಗಿದೆ.

ಧರ್ಮ:—ವಿಶ್ವಸೃಷ್ಟಿಯಲ್ಲಿ ಮಾನವನೊಬ್ಬನೆ ವಿಚಾರ ವಿನಿಮಯ ಪ್ರಾಣಿ. ಅವನಿಗೆಮಾತ್ರ ಧರ್ಮ (Religion) ವು ಅಂಟಿಕೊಂಡಿದೆ. ಅವನು ಧರ್ಮದ ಮುಖಾಂತರ ಪ್ರಪಂಚದಲ್ಲಿ ಈ ಸೃಷ್ಟಿಯೊಡನೆ ತನ್ನ ವ್ಯವಹಾರವನ್ನು ಅವ್ಯಾಹತ ವಾಗಿ ಸಾಗಿಸುತ್ತ ಬಂದಿದ್ದಾನೆ. ಸದ್ಧರ್ಮಿಯಾಗಿ ಆತ್ಮಪರಮಾತ್ಮರ ಅನೇಕ ಜಟಿಲ ಪ್ರಶ್ನೆಗಳನ್ನು ಬಿಡಿಸಲು ಪ್ರಯತ್ನಮಾಡಿದ್ದಾನೆ. ಆತ್ಮಪರಮಾತ್ಮರನ್ನು ಲೌಕಿಕ ದಲ್ಲಿ ಅರಿತುಕೊಂಡು ಆ ಪರಮಾತ್ಮನಲ್ಲಿ ಬೆರೆಯುಲು ಮಾಡಿದ ಮಾನವ ಪ್ರಯತ್ನವು ಧರ್ಮವೆಂದು ಸಾಮಾನ್ಯವಾಗಿ ಹೇಳಬಹುದು. ಈ ಲೋಕದಲ್ಲಿ ಪರಮಾತ್ಮನ ಮಾಹತಿಯನ್ನರಿತ, ಆತ್ಮನ ಚರಮ ಧ್ಯೇಯವು ಆ ಪರಮಾತ್ಮನಲ್ಲಿ ಬೆರೆಯುವುದು. ಇದೇ ಜೀವನಮುಕ್ತಿಯು, ಅಥವಾ ಮೋಕ್ಷವು. ಪರಮಾತ್ಮನ ಅಗಾಧವಾದ ವಿಶ್ವರೂಪವನ್ನು ಸಮ್ಯಕ್-ಜ್ಞಾನೋದಯದಿಂದ ಅರಿತ ಅನುಭಾವಿಯ ಮಾತಿನ ಬಗೆಯೇ ಬೇರೆ. ಅವನು ಭಕ್ತಿಮಾರ್ಗವನ್ನು ತಿಳಿದು ಶಿವಾಪೇಕ್ಷನಾಗಿ ಆ ಪರಶಿವ ನನ್ನು ಹೀಗೆ ಕಾಣುತ್ತಾನೆ.

" ತನ್ನ ವಿನೋದಕ್ಕೆ ತಾನೇ ಸೃಜಿಸಿದ ಜಗತ್ತ
ತನ್ನ ವಿನೋದಕ್ಕೆ ತಾನೆ ಸುತ್ತಿದನದಕ್ಕೆ ಸಕಲ ಪ್ರಪಂಚ.
ತನ್ನ ವಿನೋದಕ್ಕೆ ತಾನೆ ತಿರುಗಿಸಿದನಂತ ಭವದುಃಖಗಳಲ್ಲಿ
ಇಂತೆನ್ನ ಚೆನ್ನಮಲ್ಲಿಕಾರ್ಜುನನೆಂಬ ಪರಶಿವನು ತನ್ನ
ಜಗದ್ವಿಲಾಸ ಸಾಕಾದ ಮತ್ತೆ ತಾನೆ ಪರಿದನದರ ಮಾಯಾ
ಪಾಶವ."

—ಮಹಾದೇವಿಯಕ್ಕ

ನಮಗೆ ಕಾಣುವ ಸಕಲವೂ ಆ ಪರಮಾತ್ಮನ ಕೈವಾಡು.

" ಅಯ್ಯಾ ನೀ ಮಾಡಲಾದ ಜಗತ್ತು
ಅಯ್ಯಾ ನೀ ಮಾಡಲಾದ ಸಂಸಾರ
ಅಯ್ಯಾ ನೀ ಮಾಡಲಾದ ದುಃಖ
ಆಯ್ಯಾ ನೀ ಬಿಡಿಸಿದರೆ ಬಿಟ್ಟಿತ್ತು ತಾಮಸ
ಅಯ್ಯಾ ನಾನೀ ಮಾಯೆಯ ಗೆದ್ದೆನೆಂಬ ಹಮ್ಮಿನ್ನೇಕೆ ?
ಕೂಡಲ ಸಂಗಮದೇವಾ ! "

—ಬಸವಣ್ಣ

ಹೀಗೆ ಅವನ ಈ ಪರಮಾತ್ಮನ ವಿಚಾರ ನಡೆದು ಧರ್ಮಮಾರ್ಗದಲ್ಲಿ ಆತ್ಮ ಪರಮಾತ್ಮರ ಸಂಬಂಧವಾದ ಅನೇಕ ಮತಗಳೂ ಸಿದ್ಧಾಂತಗಳೂ ಉದ್ಭವಿಸಿವೆ.

ವೀರಶೈವವು:—ಧರ್ಮವು ನೂತನವಾದಷ್ಟು ತತ್ವ ಪರಿಪೂರ್ಣವಾದುದು. ಇದನ್ನು ಗ್ರಹಿಸಿಕೊಂಡಾಗ ವೀರಶೈವದ ಮಹತಿಯು ಒಡಮೂಡಿ ಬರುವುದು. ವೀರಶೈವವು ಮೂಲತಃ ಶೈವದ ಒಂದು ಶಾಖೆಯಾದರೂ ಅದು ಪರಿಪಕ್ವವಾಗಿ ಷಟ್‌ಸ್ಥಲ-ಸಿದ್ಧಾಂತ ಪಡೆದುದು ಬಸವಾದಿ ಪ್ರಮಥರಿಂದ. ಹೀಗಿದ್ದರೂ ಸನಾತನತ್ವದ ಮೋಹಕ್ಕಾಗಿ ವೀರಶೈವ ಸಮಯಾಚಾರ್ಯರು ವೈದಿಕ ಪಂಗಡದವರೊಡನೆ ವಾದಮಾಡುವಾಗ ವೀರಶೈವವೂ ಸನಾತನವೆಂದು ಸಮರ್ಥಿಸುವುದಕ್ಕಾಗಿ ನಿಗಮಾಗಮಾದಿಗಳಿಂದ ಆಧಾರಗಳನ್ನು ಕೊಟ್ಟಿರುವುದು 'ಅನುಕೂಲಸಿಂಧು' ವೆಂದು ಊಹಿಸಬೇಕಾಗುವುದು. ಇದನ್ನು ಗಮನಿಸಿದಾಗ ಶೈವನು ಶಿವಪಾತಕನಾದರೂ ಶಿವೋಪಾಸಕನಾಗಲಾರ! ಶಿವೋಪಾಸಕನು ಶಿವಪೂಜಕನಾದರೂ ಶಿವಭಕ್ತನಾಗಲಾರ! ಶಿವಭಕ್ತನು ಶಿವಾಚಾರಿಯಾದರೂ ಶಿವಶರಣನಾಗಲಾರ![೧] ಶಿವಶರಣನು ಮಾತ್ರ ಇವೆಲ್ಲವುಗಳನ್ನೊಳಗೊಂಡ ಅಷ್ಟಾವರ್ಣಗಳ ಚೌಕಟ್ಟಿನ ಪಂಚಾಚಾರ ಚಿನ್ಮಯ ಷಟ್‌ಸ್ಥಲಾನುಭಾವಿ! ಈ ಒಂದೊಂದು ಘಟ್ಟವು ಶೈವನು ವೀರಶೈವನಾದ ಸ್ಥಿತಿಗತಿಯನ್ನು ಎತ್ತಿ ತೋರಿಸುವುದು. **ವೀರಶೈವರಲ್ಲಿ ಬರುವ**

೧ ಇಲ್ಲಿ ಪ್ರಯೋಗಿಸಿದ ಈ ಶಬ್ದಗಳೆಲ್ಲವೂ ವೀರಶೈವದಲ್ಲಿ ವಿಶಿಷ್ಟ ಅರ್ಥವನ್ನೊಳಗೊಂಡಿವೆ.

ಅರವತ್ತುಮೂರು ಪುರಾತರು ಕೇವಲ ಶೈವ ಶಿವಭಕ್ತರಲ್ಲದೆ ವೀರಶೈವ ಶಿವಶರಣರಾಗಲಾರರು. ಶಿವಶರಣರದು ಶರಣಮಾರ್ಗ. ಸಮಾಜ ಸುಧಾರಣೆಯ ಅತ್ಯುಚ್ಚದೆಸೆಯನ್ನು ಮುಟ್ಟಿದ ಈ ಮಾರ್ಗವು ವೀರಶೈವರಿಗೆ ಅನುಭವಮಾರ್ಗವಾದುದರಿಂದ **ಇವರಿಗೆ ಗ್ರಂಥಗಳ ಆಧಾರವೇ ಬೇಕಿಲ್ಲ**. ಅಂತೆಯೇ ಶಿವಶರಣರು ವೇದಾಗಮಾದಿಗಳನ್ನು ನುಡಿಯಲ್ಲಿಯೂ ನಡೆಯಲ್ಲಿಯೂ ಅಲ್ಲಗಳೆದಿದ್ದಾರೆ. ೨ 'ನಮ್ಮ ನಡಾವಳಿಗೆ ನಮ್ಮ ಪುರಾತನ ನುಡಿಯೇ ಇಷ್ಟವಯ್ಯ' ಎಂದು ಸಿದ್ಧರಾಮದೇವರು ಸಮರ್ಥಿಸಿದ್ದಾರೆ. ೩ ಲಿಂಗಲೀಲಾವಿಲಾಸ ಚಾರಿತ್ರವನ್ನು ವಿರಚಿಸಿದ ಶ್ರೀ ಕಲ್ಲಮಠದ ಪ್ರಭುದೇವರು–"ಮಿಕ್ಕಿನ ವೇದಾಗಮಂಗಳು ಜಡ್ಡು ಗೊಜಡೆಂದು" ಹೇಳಿ ಪುರಾತನರ ವಚನಗಳ ಮುಖಾಂತರ ಷಟ್‌ಸ್ಥಲ ಮಾರ್ಗವನ್ನು ಬೋಧಿಸಿದ್ದಾರೆ.

ಷಟ್‌ಸ್ಥಲವು, ಭಕ್ತ-ಮಹೇಶ-ಪ್ರಸಾದಿ-ಪ್ರಾಣ-ಲಿಂಗಿ-ಶರಣ-ಐಕ್ಯ ಎಂದು, ಆರು ಹಂತಗಳಲ್ಲಿ ಹರವಿದೆ. ಭಕ್ತಿಯು ಇದರ ತಳಹದಿಯಾಗಿ, ಶೈವಶಿವಭಕ್ತರಂತೆ ಕೇವಲ ವ್ಯಕ್ತಿಗತವಾಗಿ ಆತ್ಮೋದ್ಧಾರವನ್ನೇ ಸಾಧಿಸದೆ, ಇಡಿಯ ಮಾನವ ಸಮಾಜಕಲ್ಯಾಣವನ್ನು ಸಾಮಾನ್ಯವಾಗಿ ಸಾಧಿಸಿ ಲೋಕೋದ್ಧಾರವನ್ನೇ ಮಾಡಿದೆ. ಅದು ಸಾಮಾನ್ಯ ವೈದಿಕ-ಶೈವ-ಮಂತ್ರೋಕ್ತ ಭಕ್ತಿಯಿರದೆ, ಕಾಯಕ-ದಾಸೋಹ-ಅನುಭವ-ಅರ್ಪಣೆಯ ಜೀವನ್ಮುಕ್ತ ಭಕ್ತಿಯಾಗಿದೆ. ಅದೇ ಷಟ್‌ಸ್ಥಲದ ಐಕ್ಯಸ್ಥಲವು. ವೀರಶೈವರಿಗೆ ಲಿಂಗಾಂಗ ಸಮರಸವು, ಜೀವಪರಮಾತ್ಮ ದರ್ಶನವು. ಈ ಷಟ್‌ಸ್ಥಲವು ತಾತ್ವಿಕವಲ್ಲದೆ ಭೌತಿಕವೂ, ನಿಷ್ಕಲವಾದಂತೆ, ಸಕಲವೂ ಅದ್ವೈತವಾದಂತೆ ದ್ವೈತವೂ, ಆಗಿರುವುದರಿಂದ ಅನುಭಾವಕ್ಕೆ ಕ್ರಿಯಾಜ್ಞಾನಗಳ ಕೇಂದ್ರವಾಗಿದೆ. ಅಂತೆಯೆ ಅದನ್ನು ಶ್ರೀ ಶಿವಯೋಗಿ ಶಿವಾಚಾರ್ಯರು '**ಸಕಲ ಸಿದ್ಧಾಂತ ಶಿಖಾಮಣಿ**' ಯೆಂದು ಸಂಬೋಧಿಸಿದ್ದಾರೆ.

ವೀರಶೈವವು ಹೃದಯಾನುಭವ ಧರ್ಮ. (Veerashaivism is the Religion of Heart.) ಆದುದರಿಂದ ಅದರಲ್ಲಿ ನುಡಿಯು ನಡೆಯಾಗಿ ಬಂದಿದೆ. ಅದರೊಳಗೆ ತ್ರಿಕರಣ—ಮನ-ವಚನ-ಕಾಯ—ಪೂರಕ ಸ್ವಾತಂತ್ರ್ಯವು ರೀತಿ ನೀತಿ ವಿಚಾರ ಆಚಾರಗಳ ವ್ಯವಹಾರದಲ್ಲಿ, ಕಾಯಕ ದಾಸೋಹ ಅನುಭವ-ಅರ್ಪಣೆಗಳ ಚೌಕಟ್ಟಿನಲ್ಲಿಳಿದುದರಿಂದ, ಅದು ಸ್ವಯಂಪೂರ್ಣ ಧರ್ಮವಾಗಿದೆ. ಇದನ್ನು ಜನತೆಗೆ ತೋರಿಸಿದವರು ಕರ್ನಾಟಕದಲ್ಲಿ ಶಿವಶರಣರು.

---

೨ ಬಸವಣ್ಣನವರ ಷಟ್‌ಸ್ಥಲದ ವಚನಗಳು S. S. Basavanal. ವಚನ-೨೦೮, ೨೦೯, ೫೭೦, ೭೧೬, ೭೪೯ ಇತ್ಯಾದಿ.

೩ ಸಿದ್ಧರಾಮೇಶ್ವರ ವಚನಗಳು : ಡಾ. ಹಳಕಟ್ಟಿ. ವಚನ-೪೬೧.

ಶಿವಶರಣರು : —ಕರ್ನಾಟಕದಲ್ಲಿ ಸಹೋದರ ಮತಗಳು ಈ ಶಿವಶರಣರನ್ನು ಕಡೆಗಾಣುತ್ತ ಬಂದಿವೆ. ಶಿವಶರಣರು ಕೇವಲ ಧರ್ಮೋಪದೇಶಕರಲ್ಲ. **ಪಾರಮಾರ್ಥವನ್ನು ಲೌಕಿಕದೊಡನೆ ಕಂಡುಂಡ ಮತಿವಂತರು**. ಅವರಿಗೆ ಪ್ರಪಂಚವಿದೆ; ಸಮಾಜವಿದೆ; ಈ ಪ್ರಪಂಚ ಸಮಾಜದಲ್ಲಿ ಶಿವನಿದ್ದಾನೆ; ಇದನ್ನೇ ಜನತೆಗೆ ಅರಿಕೆಮಾಡಿಕೊಡುವುದೇ ಅವರು ಆಚರಿಸಿದ 'ವಿಶ್ವಧರ್ಮ', ವೀರಶೈವ ಧರ್ಮ.

"ದೇಹಿಯಲ್ಲ ನಿರ್ದೇಹಿಯಲ್ಲ.
ಬೋಧಕನಲ್ಲ ನಿರ್ಬೋಧಕನಲ್ಲ.
ಕಾಮಿಯಲ್ಲ ನಿಃಕಾಮಿಯಲ್ಲ.
ಅಶಿವಿಡಿದು ಬಂದ ಅನುಮಿಷನಲ್ಲ.
ಅವಗುಣವಿಲ್ಲದ ನಿರ್ಗುಣಿ ನೋಡಯ್ಯ!
ಕೂಡಲ ಚೆನ್ನಸಂಗ ನಿಮ್ಮ ಶರಣ ನೋಡಯ್ಯ."

—ಚೆನ್ನಬಸವಣ್ಣ

ವಚನಕಾರರು "ನಿಮ್ಮ ಶರಣರು ಉಂಡು ಉಪವಾಸಿಗಳಯ್ಯ, ಬಳಸಿ ಬ್ರಹ್ಮಚಾರಿಗಳಯ್ಯಾ" ಎಂದು ಶಿವಶರಣರ ಶ್ರೇಷ್ಠವಾದ ನೈತಿಕಮಾರ್ಗವನ್ನು ತಮ್ಮ ವಚನಗಳಲ್ಲಿ ಬರೆದಿದ್ದಾರೆ.

'ಶಿವಶರಣ' ಶಬ್ದಪ್ರಯೋಗವು ಕನ್ನಡಸಾಹಿತ್ಯದಲ್ಲಿ ಕ್ರಿ.ಶ. ೧೧ ನೆಯ ಶತಮಾನಕ್ಕಿಂತಲೂ ಹಿಂದೆ ಎಲ್ಲಿಯೂ ಬಂದಿಲ್ಲ. 'ಶಿವಶರಣ' ಶಬ್ದವು ಒಂದು ಸಮಾಸಪದ. ಶಿವ+ಶರಣ, ಎಂಬ ಎರಡು ಪದಗಳ ಸಮಾಸವಾಗಿದೆ. ಅದನ್ನು ವಿಗ್ರಹ ಬಿಡಿಸಲು 'ಶಿವನ+ಶರಣಿ', ಅಂದರೆ ಪರಮಾತ್ಮನ ರಕ್ಷಣೆ, ಎಂದು ಅರ್ಥವಾಗುವುದು. ಈ ಸಂಭವಾರ್ಥಕ್ಕೆ, ಯಾರಿಗೆ? ಎಂದು ಪ್ರಶ್ನೆಮಾಡಲು 'ಆಗಿನ ಕಾಲದಲ್ಲಿ ಅಧಃಪತನವಾಗಿ ಅಂಧಃಕಾರದಲ್ಲಿ ತೊಳಲುವ ಜನಾಂಗಕ್ಕೆ.' ಎಂಬ ಸೂಚಿತಾರ್ಥವು ಹೊರಡುವುದು. ಇಂತಹ ಜನತೆಗೆ ಪರಮಾತ್ಮನ ಅಭಯ ರಕ್ಷಣೆಯನ್ನು ಕೊಡುವಂಥವರು ಶಿವಶರಣರಾಗಿದ್ದಾರೆ. ಈ ಶಬ್ದವನ್ನು ಬಸವಾದಿ ಪ್ರಮಥರೇ ನಿರ್ಮಾಣಮಾಡಿ ಅನುಭವಮಂಟಪದಲ್ಲಿ ಸಮಾಜಸೇವೆಯನ್ನು ಸಲ್ಲಿಸುತ್ತಿರುವ ಶಿವಭಕ್ತರಿಗೆ ಶಿವಶರಣರೆಂದು ಹೆಸರಿಟ್ಟು ಕರೆದರು. ಅಂದಿನಿಂದ ಖ್ಯಾತಿವೆತ್ತ ಈ **ಶಿವಶರಣರು ಸಮಾಜಸೇವಕ** (Social worker) ರಾಗಿ ಬಸವಾದಿ ಪ್ರಮಥರ ಅನುಭವಮಂಟಪದ ಯೋಜನೆಯಂತೆ '**ಶರಣಸಮಾಜ**' ವನ್ನು ಕಟ್ಟಿದರು; '**ಕಲ್ಯಾಣರಾಜ್ಯ**' ವನ್ನು ಹರವಿದರು. ಅವರ ಸೇವೆಯ ಮಹತಿಯನ್ನರಿತ ಕನ್ನಡಿಗರು ಅವರ ನುಡಿನಡೆಗೆ ಮನ್ನಣೆಯಿತ್ತು ಅವರ ಮಾರ್ಗವನ್ನೇ ನಿತ್ಯಜೀವನದಲ್ಲಿ ಆಚರಿಸುತ್ತ ಬರಲು ಕಾಯಕವು ನಾಡಿನ ಉಸಿರಾಗಿ ನಾಡು ಸಂಪತ್-ಸಮೃದ್ಧವಾಯಿತು. ಭಿಕ್ಷಾಟನವು(Beggary) ಮಾಯವಾಗಿ 'ಕಾಯಕವು

ಕೈಲಾಸ ' (Work is Divine) ವೆಂಬ ನಾಣ್ಣುಡಿಯಾಯಿತು. ನಾಡ ತುಂಬೆಲ್ಲ ಜೀವನವು ಸುಖಮಯವಾಗಲು ಕನ್ನಡ ಸಂಸ್ಕೃತಿಯಲ್ಲಿ ಶಿವಶರಣ (Social Worker) ರಿಗೆ ವಿಶಿಷ್ಟಸ್ಥಾನಮಾನಗಳು ದೊರೆತು, ಜನಪದ ಸಂಪ್ರದಾಯ ಗಳಲ್ಲಿಯೂ ನಡೆನುಡಿಗಳಲ್ಲಿಯೂ ಶಿವಶರಣರು ಹಾಸುಹೊಕ್ಕಾಗಿ ಕನ್ನಡ ಜನ ಪದಕ್ಕೆ ' ಮರಣ ಗೆಲಿದ ಮಹಾಂತ ' ರಾಗಿದ್ದಾರೆ.

ಜ್ಞಾನ-ಇಚ್ಛಾ-ಕ್ರಿಯಾಶಕ್ತಿಯ ಸಂಗಮವು ಅನುಭಾವವು. ಅನುಭಾವಿಯ ' ಅಂತರಂಗದಲ್ಲಿ ಅರಿವು, ಬಹಿರಂಗದಲ್ಲಿ ಕ್ರೀ ', ' ಅನುಭಾವವಿಲ್ಲದೆ ಅರಿಯ ಬಾರದು.' ಇದೇ ಶಿವಶರಣನ ಮೂಲ ಲಕ್ಷಣ. ಅವನಿಂದ ಎಲ್ಲರಿಗೂ ಈ ಭೂಲೋಕವೇ ಕೈಲಾಸವಾಯಿತು. " ಶಿವಭಕ್ತರಿದ್ದ ಠಾವೇ ದೇವಲೋಕ, ಭಕ್ತನ ಅಂಗಳವೇ ವಾರಣಾಸಿ. ಕಾಯಕವೇ ಕೈಲಾಸ." ಅಲ್ಲದೆ, ' ಶರಣರು ಮರಳಿ ಮಾನವರಾಗರು ಕ್ರೀಯಳಿದು.' ' ಅರಿದೊಡೆ ಶರಣ ಮರೆದೊಡೆ ಮಾನವ.' ಅಷ್ಟು ಅವನ ಜೀವನ ಸತ್ಯಸಂಪುಟ, ನಿತ್ಯನಿರ್ಮಲ ! ಇಂತಹ ದಿವ್ಯ ಪುರುಷರ ಮುಖದಿಂದ ಹೊರಹೊಮ್ಮಿದುದೆಲ್ಲವೂ ಅನುಭವಸಾಹಿತ್ಯ.

ಕನ್ನಡ ಸಾಹಿತ್ಯದಲ್ಲಿ :—ಕನ್ನಡ ಸಾಹಿತ್ಯದಲ್ಲಿ ಅನುಭವಸಾಹಿತ್ಯವು ಜನ್ಮವೆತ್ತಿದುದು ಕ್ರಿ.ಶ. ೧೨ ನೆಯ ಶತಮಾನದಲ್ಲಿ. ಶಿರಶರಣರ ಅನುಭವ ನುಡಿ ಗಳೇ ವಚನಾಮೃತವಾಗಿ ಹೊರಹೊಮ್ಮಿದ ಈ ಸಾಹಿತ್ಯವು ಅಖಂಡ ಕಾವ್ಯಕ್ಕಿಳಿದು ಓದುಗಬ್ಬಗಳಾಗಿ, ಹಾಡುಗಬ್ಬ-ಭಾಜನೆಗಬ್ಬಗಳ ರೂಪತಾಳಿ, ಹಾಡು (ಭಾವ ಗೀತೆ) ಗಳ ರಾಶಿರಾಶಿಯಾಗಿ ಜನಪದ ಸಾಹಿತ್ಯಕ್ಕಿಳಿದು ಹಳ್ಳಿಗರಿಗೂ ಮನೆ ಮಾತಾಗಿದೆ. ಉತ್ತರ ಕರ್ನಾಟಕವು ಶಿವಶರಣರಿಗೆ ಸಮಾಜ ಯೋಜನೆಯ ಕ್ರಾಂತಿ ಭೂಮಿ. ಈ ಕ್ರಾಂತಿ ಭೂಮಿಯಿಂದ ಉದ್ಭವಿಸಿದ ವಚನಾಮೃತ ಸೋನೆಯು ಕರ್ನಾಟಕದ ತುಂಬೆಲ್ಲ ಸುರಿದು, ಅನುಭವ ಸಾಹಿತ್ಯವಾಹಿನಿಯಾಗಿ ಝೇಂಕರಿಸಿ ಹರಿದು, ದಕ್ಷಿಣ ಕರ್ನಾಟಕದ ಗುಬ್ಬಿಯ ಕ್ಷೇತ್ರದಲ್ಲಿ ರೂಪಗೊಂಡ ಸಂಪಾದನೆ ಗಳಲ್ಲಿ ಹೆಪ್ಪುಗಟ್ಟಿದೆ.

ಹದಿನೈದನೆಯ ಶತಮಾನವು ವೀರಶೈವರ ಅನುಭವಗೀತೆಯ ಕಾಲ. ವಚನ ಸಾಹಿತ್ಯವು ಉತ್ತರದಿಂದ ಹರಿದುಬಂದರೆ ವೀರಶೈವರ ಅನುಭವಗೀತೆಯು ದಕ್ಷಿಣದ ಶಂಭುಲಿಂಗಬೆಟ್ಟದಲ್ಲಿ ನಿಜಗುಣ ಶಿವಯೋಗಿ ಹಾಗು ಮುಪ್ಪಿನ ಷಡಕ್ಷರಾರ್ಯರ ಶಿವಯೋಗಾನಂದ ಅನುಭವಸಾಗರದಿಂದ ಉದಯಿಸಿ, ಕೈವಲ್ಯಪದ್ಧತಿಯೆಂದು ಖ್ಯಾತಿವೆತ್ತ ಈ ಹೊನಲು ಸರ್ಪಭೂಷಣ ಶಿವಯೋಗಿಗಳ ಕೈವಲ್ಯಕಲ್ಪವಲ್ಲರಿ ಯಾಗಿ ತುಂಗಭದ್ರೆಯ ದಾಟಿ ಬೆಳುವಲದ ಬಯಲಿನಲ್ಲಿ ಆಧ್ಯಾತ್ಮ ಸುಂದರವನ ವನ್ನೇ ನಿರ್ಮಾಣಮಾಡಿದೆ. ಈ ಆಧ್ಯಾತ್ಮಸುಂದರ ವನದಲ್ಲಿ ಪುರಂದರ ಕನಕ

ದಾಸಾದಿಗಳ ' ಹರಿಭಕ್ತ ಸುಧೆ ' ಯಿದೆ. ಅದರ ಮಾರ್ಗವೇ ಬೇರೆ.[೪] ಮೈಲಾರ ಬಸವಲಿಂಗ ಶರಣರ **' ಶಿವಾನುಭವ ದರ್ಪಣ '** ವಿದೆ ; ಬಾಲಲೀಲಾ ಮಹಾಂತ ಶಿವಯೋಗಿಗಳ **' ಕೈವಲ್ಯದರ್ಪಣ '**ವಿದೆ. ಅಲ್ಲದೆ ಘನ ಮಠದಾರ್ಯ, ಅಥಣಿ ಶಿವಯೋಗಿ, ಗರಗದ ಮಡಿವಾಳಪ್ಪ, ನವಲಗುಂದ ನಾಗಲಿಂಗಪ್ಪ, ಕೋಡಿಕೊಪ್ಪದ ಹುಚ್ಚಯ್ಯಜ್ಜ, ಶಿಸುನಾಳ ಶರೀಫ, ಹುಬ್ಬಳ್ಳಿ ಸಿದ್ಧಾರೂಢ, ಇಂಚಲ ಸಕ್ಕರಿನಾಯಕ ಮೊದಲಾದ ಆಧ್ಯಾತ್ಮಾನುಭಾವಿಗಳ ಭಕ್ತಿ-ವೈರಾಗ್ಯ ಹಾಗು ಲೌಕಿಕ-ಪಾರ ಮಾರ್ಥಿಕ ಅನುಭವ ಪದಗಳ ರಾಶಿರಾಶಿಯಾಗಿದೆ. ಈ ಎಲ್ಲ ಗೀತೆಗಳು ಸಾಮಾನ್ಯರಿ ಗಾಗಿ ಇರುವುದರಿಂದ ಅವು ಈ ಭಾಗಗಳಲ್ಲಿ ಲೋಕಪ್ರಿಯವಾಗಿವೆ.

ವಚನಗಳು :—ಕನ್ನಡಿಗರ ತತ್ವಜ್ಞಾನ (Philosophy) ಕ್ಕೆ ವಚನ ಸಾಹಿತ್ಯವು ಹೆಮ್ಮೆಯ ಸೊತ್ತು. ಅದರಲ್ಲಿ ತತ್ವಜ್ಞಾನದ ಅನೇಕ ಅಮೌಲ್ಯ ವಿಚಾರಗಳು ಗಡುಚಾಗಿ ಬಂದಿವೆ. ಈ ತತ್ವಜ್ಞಾನವನ್ನು ಶಿವಶರಣರು **' ಶಿವಾನುಭವ '** ವೆಂದು ಬೋಧಿಸಿದ್ದಾರೆ. **ವೀರಶೈವರಿಗೆ ಇಹಲೋಕದಲ್ಲಿ ' ಕಾಯಕವೆ ಕೈಲಾಸ ' ಎಂಬ ಅರಿಕೆಯೇ ಶಿವಾನುಭವ.** ಇದುವೆ ಶಿವ ಸಾಕ್ಷಾತ್ಕಾರ ! ಈ ವಚನಸಾಹಿತ್ಯವು ವೀರಶೈವರಿಗೆ ಮಹಾಧರ್ಮ ಗ್ರಂಥ. ಅದಕ್ಕೆ **'ವಚನಶಾಸ್ತ್ರ'** ವೆಂದೂ, ವಚನಕಾರರಿಗೆ ' ವಚನಶಾಸ್ತ್ರಕಾರ ' ರೆಂದೂ ವೀರಶೈವ ಗ್ರಂಥಗಳಲ್ಲಿ ಸಂಬೋಧಿಸಿದ್ದಾರೆ. ಅವುಗಳಲ್ಲಿ ಬರುವ ವಿಷಯ, ಅಷ್ಟಾವರಣ-ಪಂಚಾ ಚಾರಾದಿ ಷಟ್‌ಸ್ಥಲ-ಸಿದ್ಧಾಂತ. ಇದುವರೆಗೆ ಸುಮಾರು ೨೬೦ ಕ್ಕೆ ಮೇಲ್ಪಟ್ಟು ವಚನಕಾರರು ಬೆಳಕಿಗೆ ಬಂದಿದ್ದಾರೆ. ಅವರಲ್ಲಿ ೩೯ ಜನ ವಚನಕಾರ್ತಿಯರಿರುವರು. ಬೆಳಕಿಗೆ ಬಾರದ ಅನೇಕ ವಚನಕಾರರ ದೊಡ್ಡ ಯಾದಿಯೂ ಇದೆ. ನವಕೋಟಿ ವಚನ ಕಾರರೆಂದೂ ತೊಂಬತ್ತಾರು ಸಾವಿರ ಕೋಟಿ ವಚನಂಗಳಿದ್ದವೆಂಬ ವೀರಶೈವ ಪರಂಪರೆಯೂ ಕೇಳಬರುತಿದೆ. ಅವುಗಳಲ್ಲಿ, ವೇದಕ್ಕಿಲ್ಲದ ಸ್ವತಂತ್ರ ವಿಚಾರ ದೃಷ್ಟಿಯ ಪಡೆದ ಉಪನಿಷತ್ತುಗಳ, ಸ್ವತಂತ್ರ ವಿಚಾರ ಮೀರಿ, ಮಾನವ ಐಕ್ಯತೆ, ಉದಾತ್ತಜೀವನ, ವಿಶ್ವಬಂಧುತ್ವ, ಮಾನವ ಕಲ್ಯಾಣ ಮೊದಲಾದ ಪ್ರಜಾ ಪ್ರಭುತ್ವದ ಹಾಗು ಆಧ್ಯಾತ್ಮದ ಉನ್ನತ ವಿಶಾಲವಿಚಾರಗಳಿವೆ. ' ದಯವೆ ಧರ್ಮದ ಮೂಲವಯ್ಯ ', ' ವಿಪ್ರ ಮೊದಲು ಅಂತ್ಯಜ ಕಡೆಯಾಗಿ ', ' ಅಯ್ಯಾ ಎಂದಡೆ ಸ್ವರ್ಗ, ಎಲವೊ ಎಂದಡೆ ನರಕ ', ' ಸಕಲ ಜೀವಾತ್ಮರಿಗೆ ಲೇಸನೇ

---

೪. ದಾಸರ ಅನುಭವವು ದಾಸಸಾಹಿತ್ಯವಾಗಿದೆ. ಅದು ದಾಸಕೂಟದ ಸೊತ್ತು. ದಾಸಕೂಟವು ಅನುಭವಮಂಟಪದ ಅನುಕರಣವಾದರೂ ಕಾಯಕಬಾಹಿರವಾಗಿ, ಪ್ರಚಾರವೇ ಅದರ ವೈಶಿಷ್ಟ್ಯವಾಗಲು ಅದರ ಮಾರ್ಗವೇ ಬೇರೆಯಾಗಿದೆ. ಕರ್ನಾಟಕದಲ್ಲಿ ದಾಸ ಮುಟ್ಟದ ಹಳ್ಳಿಯಿಲ್ಲ. ಉತ್ತರ ಕರ್ನಾಟಕದಲ್ಲಿ ಪುರಂದರವಿಠಲನ ಕೂಗು ಕೇಳಿದರೆ ದಕ್ಷಿಣದಲ್ಲಿ ಆದಿಕೇಶವರಾಯನ ಕೂಗು ಕೇಳಿ ಬರುವುದು.

ಬಯಸುವ', 'ಆಚಾರವೇ ಸ್ವರ್ಗ ಅನಾಚಾರವೆ ನರಕ' ಮೊದಲಾದ ಉನ್ನತ ಭಾವಗಳು ಸೂಸಿಬರುವುವು.

ವಚನಗಳ ಶೈಲಿಯನ್ನು ನಾವು—

೧) ಸಾಮಾನ್ಯ (ಲೌಕಿಕ) ಶೈಲಿ,
೨) ಆಧ್ಯಾತ್ಮಿಕ ಶೈಲಿ
೩) ಬೆಡಗಿನಶೈಲಿ ಎಂದು ಮೂರು ತೆರನಾಗಿ ಕಾಣಬಹುದು.

ಈ ಯಾವ ಶೈಲಿಯಲ್ಲಿಯೇ ಆಗಲಿ, ಲೋಕಾನುಭವವು ತೇಲಿಬರುವುದು. ಸಾಮಾನ್ಯ ಮಾನವನೂ ಅದನ್ನು ಅರಿಯಲು ಸಮರ್ಥನಾಗಿ ಅವನ ನೈತಿಕ ಜೀವನವೇ ಬದಲಾಗುವುದು. **'ಅಹಂಭಾವ'ವು** ಕರಗಿ **'ದಾಸೋಹಂಭಾವ'ವು** ಅಂಕುರಿಸಿ ಮಾನವಕಲ್ಯಾಣವಾಗುವುದು.

"ಏನಿ ಬಂದಿರಿ, ಹದುಳವಿದ್ದಿರೆ ? ಎಂದರೆ
ನಿಮ್ಮ ಮೈಸಿರಿ ಹಾಱಿಹೋಹುದೆ ?
ಕುಳ್ಳಿರೆಂದರೆ ನೆಲ ಕುಳಿಹೋಹುದೆ ?
ಒಡನೆ ನುಡಿದರೆ ಶಿರಹೊಟ್ಟೆಯೊಡೆವುದೆ ?
ಕೊಡಲಿಲ್ಲದಿದ್ದರೊಂದು, ಗುಣವಿಲ್ಲದಿರ್ದಡೆ
ಕೆಡಹಿ ಮೂಗ ಕೊಯ್ಯದೆ ಮಾಣ್ಬನೆ ಕೂಡಲಸಂಗಮದೇವ ?"

—ಬಸವಣ್ಣ

ಆತ್ಮ ಪರಮಾತ್ಮರ ಸಮರಸವು ಆಧ್ಯಾತ್ಮದ ಗುರಿ. ಮಾಯೆಯ ಅರಿತು, ಕಾಮನ ಗೆದ್ದು, ಮನದ ಮುಂದಣ ಆಶೆಬಿಟ್ಟಾಗ ಆತ್ಮಚಿತ್ಪ್ರಕಾಶವಾಗುವುದು.

"ಭೂಮಿ ನಿನ್ನದಲ್ಲ, ಹೇಮ ನಿನ್ನದಲ್ಲ
ಕಾಮಿನಿ ನಿನ್ನವಳಲ್ಲ, ಅದು ಜಗಕ್ಕಿಕ್ಕಿದ ವಿಧಿ.
ನಿನ್ನೊಡವೆಯೆಂಬುದು ಜ್ಞಾನರತ್ನ.
ಅಂತಪ್ಪ ದಿವ್ಯರತ್ನವ ಕೆಡಗುಡದೆ
ಆ ರತ್ನವ ನೀನಲಂಕರಿಸಿದೆಯಾದಡೆ ನಮ್ಮ
ಗೊಹೇಶ್ವರ ಲಿಂಗದಲ್ಲಿ ನಿನ್ನಿಂದ ಬಿಟ್ಟು
ಸಿರಿವಂತರಿಲ್ಲ, ಕಾಣಾ ಎಲೆ ಮನವೆ !"

—ಪ್ರಭುದೇವ

ಶಿವ, ತನ್ನ ಕಾಣದಂತೆ ಹೊನ್ನು ಹೆಣ್ಣು ಮಣ್ಣೆಂಬ ಮಾಯಾ ವಿಧಿಯ ಹುಟ್ಟಿಸಿ ಪ್ರಪಂಚದಲ್ಲಿ ಜೀವರ ಗಾಸೆಮಾಡುವನು. ಇವು ತನ್ನವೆಂಬ ಭ್ರಾಂತಿ ಬಿಟ್ಟು ಸಮ್ಯಕ್‌ಜ್ಞಾನವ ಸಾಧಿಸಿ ಪರಮನಲ್ಲಿ ಸಮರಸ ಹೊಂದಲಿ, ಎಂದು ದಿವ್ಯೋಪದೇಶವಿದೆ ಇಲ್ಲಿ. ವಚನಶಾಸ್ತ್ರದಲ್ಲಿ ಮಾತೇ ಜ್ಯೋತಿರ್ಲಿಂಗ.

ನುಡಿದರೆ ಮುತ್ತಿನಹಾರದಂತಿರಬೇಕು.
ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು.
ನುಡಿದರೆ ಲಿಂಗ ಮೆಚ್ಚಿ ಅಹುದಹುದು ಎನಬೇಕು.

ಎಂಬೀ ನುಡಿಗಳು ತೇದುಂಡ ಜೀವಿಯ ಪ್ರಪಂಚದ ಅನುಭವಾಮೃತಸಾರ !

"ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ ;
ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ ;
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ.
ಇದೇ ಅಂತರಂಗಶುದ್ಧಿ, ಇದೇ ಬಹಿರಂಗ ಶುದ್ಧಿ.
ಇದೇ ನಮ್ಮ ಕೂಡಲ ಸಂಗಮದೇವರನೊಲಿಸುವ ಪರಿ."
—ಬಸವಣ್ಣ

ಇದು ಸಮಾಜಶಾಸ್ತ್ರ (Sociology) ದಲ್ಲಿ ನೀತಿಯ ನೆಲಗಟ್ಟು. ಎಲ್ಲರೂ ಪ್ರಪಂಚದಲ್ಲಿದ್ದು ಪರಮಾರ್ಥವನ್ನು ಹೊಂದಬೇಕಾದ ಅನುಭವಸಿದ್ಧಮಾರ್ಗ ! ಹೀಗೆ ಒಂದಿಲ್ಲೊಂದು ಪರಿಯಲ್ಲಿ ಹೇಗೆ ಅವಗ್ರಹಿಸಿದರೂ ಅನುಭವವು ವಚನ ಸಾಹಿತ್ಯದ ಜೀವಾಳವಾಗಿದೆ.

ಬೆಡಗು : ಬೆಡಗು ವಚನಸಾಹಿತ್ಯದ ವೈಶಿಷ್ಟ್ಯ. ಅದಕ್ಕೆ ವಚನ ಸಾಹಿತ್ಯದಲ್ಲಿ ಒಂದು ಮಹತ್ವದ ಸ್ಥಾನವಿದೆ. ಶಿವಶರಣರು ಶಿವಯೋಗಾನಂದದಲ್ಲಿ ತುರೀಯಾವಸ್ಥೆಯೊಳಗಿನ ಅನುಭವವನ್ನು ಬೆಡಗಿನಲ್ಲಿ ಹಾಡಿದ್ದಾರೆ. ಬಹುತರವಾಗಿ ಎಲ್ಲ ವಚನಕಾರರೂ ಬೆಡಗಿನ ವಚನಗಳನ್ನು ರಚಿಸಿದ್ದಾರೆ. ಅವರೊಳಗೆ ಪ್ರಭುದೇವ, ಬಸವಣ್ಣ, ಚೆನ್ನಬಸವಣ್ಣ, ಅಕ್ಕಮಹಾದೇವಿ, ಮೋಳಿಗೆಯ್ಯ, ಆದಯ್ಯ, ಕಾಡಸಿದ್ಧೇಶ್ವರ, ಅರುವಿನ ಮಾರಿತಂದೆ, ಅಂಬಿಗರ ಚೌಡಯ್ಯ, ತೋಂಟದ ಸಿದ್ಧಲಿಂಗಾದಿಗಳೇ ಬಹು ಪ್ರಖ್ಯಾತರು. 'ಜ್ಯೋತಿರ್ಮಯ ಶಾಂಭವೀ ಜ್ಞಾನದೀಕ್ಷಾಬೋಧೆ' ಎಂಬ ಗ್ರಂಥದಲ್ಲಿ "ಅಲ್ಲಮ ಪ್ರಭುದೇವರು ಕಲ್ಯಾಣಪಟ್ಟಣದಲ್ಲಿ ಬಸವಾದಿ ಪ್ರಮಥ ಗಣಂಗಳಿಗೆ ಎರಡೆಂಬತ್ತುಕೋಟಿ ಬೆಡಗಿನ ವಚನಗಳಿಂದ ಉಪದೇಶ ಮಾಡಿದರು," ಎಂದು ಹೇಳಿದೆ. ಬೆಡಗು, ವಚನ ಸಾಹಿತ್ಯದಲ್ಲಿ ಹೆಚ್ಚಾಗಿ ಹರಿದು ಬಂದಿದೆ. ಅದು ಸಾಮಾನ್ಯರ ತಲೆ ಹಿಡಿಯದು. ಆದುದರಿಂದ ಸಾಮಾನ್ಯರಿಗೆ ತಿಳಿಯಲು ಬೆಡಗಿನ ವಚನಗಳ ವ್ಯಾಖ್ಯಾನ ಟೀಕೆ ಟಿಪ್ಪಣಿಗಳೂ ಉಪಲಬ್ಧವಿವೆ. ಪುಲಿಗೆರೆಯ ಮಹಲಿಂಗದೇವ, ಅವನ ಶಿಷ್ಯ ಕುಮಾರ ಬಂಕನಾಥ, ವಿಜಯನಗರದ ಕಲ್ಲಮಠದ ಪ್ರಭುದೇವಾದಿಗಳು ಪ್ರೌಢರಾಯರ ಕಾಲ (ಕ್ರಿ.ಶ. ೧೪೪೯-೧೪೪೬) ದಲ್ಲಿಯೇ ಈ ಬೆಡಗಿನ ವಚನಗಳ ವ್ಯಾಖ್ಯಾನ ಟೀಕೆ ಟಿಪ್ಪಣಿಗಳನ್ನು ತಮ್ಮ ಗ್ರಂಥಗಳಲ್ಲಿ ಸೇರಿಸಿ ಬರೆದಿದ್ದಾರೆ. ಕೇವಲ ಬೆಡಗಿನ ವಚನಗಳನ್ನೇ ಸಂಗ್ರಹಿಸಿ ಪಾಂಡಿತ್ಯಪೂರ್ಣವಾದ ವ್ಯಾಖ್ಯಾನವನ್ನು ಮೊಟ್ಟಮೊದಲು ಬರೆದವರು ಸಿಂಗಳದ ಸಿದ್ಧಬಸವರಾಜ ದೇವರು. (ಕ್ರಿ.ಶ. ೧೫೫೦).

ಬೆಡಗು, ಈ ಶಬ್ದದ ಸಾಮಾನ್ಯ ಅರ್ಥವು ವೈಖರಿ, ಸೋಜಿಗೆ, ಗುಟ್ಟು ಎಂದಾಗುವುದು. ಆಧ್ಯಾತ್ಮದಲ್ಲಿ ಅದು ಸುಂದರಾನುಭವ ರಹಸ್ಯ !

" ಬಯಲು ಬಯಲನೆ ಬಿತ್ತಿ, ಬಯಲು ಬಯಲನೆ ಬೆಳೆದು,
ಬಯಲು ಬಯಲಾಗಿ ಬಯಲಾಯಿತ್ತಯ್ಯ !
ಬಯಲ ಜೀವನ, ಬಯಲ ಭಾವನೆ,
ಬಯಲು ಬಯಲಾಗಿ ಬಯಲಾಯಿತ್ತಯ್ಯ !
ನಿಮ್ಮ ಪೂಜಿಸಿದವರು ಮುನ್ನವೆ ಬಯಲಾದರು !
ನಾ ನಿಮ್ಮ ನಂಬಿ ಬಯಲಾದೆ ಗೊಹೇಶ್ವರಾ ! !

ಟಿ :—ಬಯಲೆಂದರೆ ನಿಃಕಲ ಪರಶಿವಲಿಂಗವು ಅಂತಪ್ಪ ನಿಃಕಲ ಲಿಂಗವು ತನ್ನ ಲೀಲೆಯಿಂದ ತನ್ನ ನಿರವಯದ ನಿಜವ ತನ್ನ ತಾನುದ್ಭವಿಸಿ ಬೆಳೆದು ಅಖಂಡ ತೇಜೋ ಮೂರ್ತಿಯಪ್ಪ ಮಹಾಲಿಂಗವಾಯಿತ್ತು. ಅಂತಾದ ಮಹಾಲಿಂಗವು ತನ್ನ ನಿರವಯದ ನಿಜಭಾವದಲ್ಲಿ ಭರಿತನಾಗಿಪ್ಪನೆಂಬುದೀಗ ' ಬಯಲು ಬಯಲನೆ ಬಿತ್ತಿ, ಬಯಲು ಬಯಲನೆ ಬೆಳೆದು, ಬಯಲು ಬಯಲಾಗಿ ಬಯಲಾಯಿತ್ತಯ್ಯ ' ಎಂಬ ಶಬ್ದಕ್ಕರ್ಥ. ಅಂತು ಮಹಾಲಿಂಗಾಕಾರವಾದಲ್ಲಿ ಆ ಲಿಂಗದ ತದಂಶಕವೇ ಜೀವಾತ್ಮನೆಂಬ ಅಂಗವಾಯಿತ್ತೆಂಬುದೀಗ ' ಬಯಲ ಜೀವ ' ನೆಂಬ ಶಬ್ದಕ್ಕರ್ಥ. ಅಂತಪ್ಪ ಜೀವಾತ್ಮಂಗೆ ಲಿಂಗಭಾವ ಘಟಸಿತ್ತೆಂಬುದೀಗ ' ಬಯಲ ಭಾವನೆ ' ಯೆಂಬ ಶಬ್ದಕ್ಕರ್ಥ. ಅಂತು ಆತ್ಮನಿಗೆ ಲಿಂಗಭಾವ ಘಟಿಸಿದಲ್ಲಿ ಮಿಥ್ಯಾದೇಹವೆಂಬ ಬಯಲು ಬಯಲಾಗಿ ಆತ್ಮನೆಲ್ಲಾ ಲಿಂಗವೆಂಬ ಬಯಲಾಯಿತ್ತೆಂಬುದೀಗ ' ಬಯಲು ಬಯಲಾಗಿ ಬಯಲಾಯಿತ್ತಯ್ಯ ' ಎಂಬ ಶಬ್ದಕ್ಕರ್ಥ. ಅಂತಪ್ಪ ಶಿವಪೂಜಾಕ್ರೀಯಿಂದ ಪ್ರಾಣ ಮನ ಭಾವಂಗಳೆಲ್ಲವು ಲಿಂಗವೆಯಾದ ಬಳಿಕ ತಾನೇ ಲಿಂಗವೆಂಬ ಅಭಿನ್ನದರುವಿನ ವಿಶ್ವಾಸ ಘಟಿಸಿ, ಲಿಂಗವ ಭಿನ್ನವಿಟ್ಟು ಅರಿಯದೆ ಲಿಂಗವೆಯಾಗಿರ್ದ ಶರಣನೆಂಬುದೀಗ ' ನಿಮ್ಮ ಪೂಜಿಸಿದವರು ಮುನ್ನವೆ ಬಯಲಾದರು ! ನಾನಿಮ್ಮ ನಂಬಿ ಬಯಲಾದೆ.' ನೆಂಬ ಶಬ್ದಕ್ಕರ್ಥ."೫ ಬೆಡಗಿನ ವಚನಗಳ ಶಬ್ದ ಅರ್ಥ ವಿಚಾರ ಭಾವಸಂಪತ್ತು ಅನ್ಯಾದೃಶವಾಗಿದೆ. ಯೋಗಾನಂದದಲ್ಲಿ ಕಂಡ ಅನುಭವವನ್ನು ಸ್ಥೂಲದಲ್ಲಿ ತಿಳಿಸಲು ಶಬ್ದಗಳು ಸಾಲವು ; ಸಮರ್ಥವಾಗಲಾರವು. ಆ ಅನುಭವವನ್ನು ವೈಖರೀವಾಣಿಯಲ್ಲಿ ವಿವರಿಸಲು ಆ ಶಬ್ದಗಳಿಗೆ ಬೇರೆ ಬೇರೆ ಅರ್ಥವಾಗುವುದರಿಂದ ಅವನ್ನು ಸಂದರ್ಭಾನುಸಾರದ ಅನುಭವದ ಪರಿವಿಡಿಯಲ್ಲಿ ಅರ್ಥಮಾಡಬೇಕಾಗುತ್ತದೆ. ಆದುದರಿಂದ ಬೆಡಗನ್ನು ತಿಳಕೊಂಡು ತಿಳಿಸಿ ಹೇಳುವವರು ವಿರಳ. ಹೀಗೆ ಬೆಡಗು ವಚನ ಸಾಹಿತ್ಯದಲ್ಲಿ ಶಿವಶರಣರ ಪರಮಜ್ಞಾನಾನುಭವವಾಗಿದೆ.

---

೫ ಲಿಂಗಲೀಲಾವಿಲಾಸ ಚಾರಿತ್ರ. ಸಂ : ಪ್ರೊ. ಭೂಸನೂರಮಠ. ಪು. ೩೮೭.

ಇಂತು ಹೊರಹೊಮ್ಮಿದ ಬೆಡಗು ಪರಂಪರವಾಗಿ ಹರಿದು ಅನುಭವ ಪದಗಳಲ್ಲಿ ಪಲ್ಲವಿಸಿ ಜನಪದ ಸಾಹಿತ್ಯದ ಮೇಲೂ ತನ್ನ ಬೆಳಕು ಚೆಲ್ಲಿದೆ. ವೈರಾಗ್ಯ ನಿಧಿ, ನಿಜಗುಣ ಶಿವಯೋಗಿಗಳಿಂದ ಶಿಸುನಾಳ ಶರೀಫರ ವರೆಗೆ ಈ ಬೆಡಗು ಅನುಭವಗೀತೆಗಳಲ್ಲಿ ಸಾಮಾನ್ಯರಿಗೂ ತಿಳಿಯುವಂತೆ ಹಾಸುಹೊಕ್ಕಾಗಿದೆ. ವಚನಗಳ ಬೆಳಕಿನಲ್ಲಿ ಬರುವ ಈ ಬೆಡಗು ತಾಳ ರಾಗಭರಿತವಾಗಿರುವುದರಿಂದ ಆತ್ಮ ರಂಜನವೂ ಆಗಿದೆ.

ಶರೀರವೆಂತೆಂಬುವ ಹೊಲವ ಹಸನ ಮಾಡಿ
ಪರತತ್ವ ಬೆಳೆಯನೆ ಬೆಳೆದುಣ್ಣಿರೊ ॥ಪ॥

ಶಮೆದಮೆ ಎಂತೆಂಬ ಎರಡೆತ್ತುಗಳ ಹೂಡಿ
ವಿಮಲ ಮಾನಸವ ನೇಗಿಲನೇ ಮಾಡಿ ॥
ಮಮಕಾರವೆಂತೆಂಬ ಕರಿಕೆಯ ಕಳೆದಿಟ್ಟು
ಸಮತೆ ಎಂತೆಂಬ ಗೊಬ್ಬರವ ಚೆಲ್ಲಿ ॥೧॥

ಗುರುವರನುಪದೇಶ ಎಂಬ ಬೀಜವಬಿತ್ತಿ
ಮೆರೆವ ಸಂಸ್ಕಾರ ವೃಷ್ಟಿಯ ಬಲದಿ॥
ಅರಿವೆಂಬ ಪೈರನ್ನೆ ಬೆಳೆಸುತ್ತ ಮುಸುಕಿರ್ದ
ದುರಿತ ದುರ್ಗುಣವೆಂಬ ಕಳೆಯಕಿತ್ತು ॥೨॥

ಸ್ಥಿರ ಮುಕ್ತಿ ಎಂತೆಂಬ ಧ್ಯಾನವ ಬೆಳೆದುಂಡು
ಪರಮಾನಂದದೊಳು ದಣ್ಣನೆ ದಣಿದು॥
ಗುರುಸಿದ್ಧನಡಿಗಳಿಗೆರಗುತ್ತ ಭವವೆಂಬ
ಬರವನು ತಮ್ಮ ಸೀಮಿಗೆ ಕಳುಹಿ ॥೩॥

—ಸರ್ಪಭೂಷಣ ಶಿವಯೋಗಿಗಳು

ಬೆಡಗಿನ ಗಡಚು ತಿಳಿಯಾಗಿ ಸರ್ಪಭೂಷಣರ ಅನುಭವದೊಂದಿಗೆ ಸಾಲು ಸಾಲಿನಲ್ಲಿ ಅರಿಕೆಯಾಗಿದೆ ಇಲ್ಲಿ. ಅನುಭವಗೀತೆಗಳನ್ನು ಹಾಡಿದವರೆಲ್ಲರೂ ಇದೇ ಮಾರ್ಗವನ್ನೇ ಪಾಲಿಸಿದ್ದಾರೆ. ಅನುಭಾವಿಗಳ ಅನುಭವಗೀತೆಗಳನ್ನು ಕೇಳಿ ಮನಂಬುಗುವಂತೆ ಹಾಡಿ ತಣಿದ ಹಳ್ಳಿಗರೂ ಅವರವರ ಮಟ್ಟದಲ್ಲಿ ಬೆಡಗನ್ನು ಉಪಯೋಗಿಸಿದ್ದಾರೆ. ಆದುದರಿಂದ ಹಳ್ಳಿಗರ ಹಾಡು (ಭಾವಗೀತೆ)ಗಳಲ್ಲಿಯೂ ಒಗಟೆ-ಒಡಪು-ಗಾದೆಗಳಲ್ಲಿಯೂ ಇದನ್ನು ನಾವು ಕಾಣಬಹುದಾಗಿದೆ.

೧ ನೆಯ ಚೌಕು :—

ಕಾಶಿಗೆ ನಾನು ಹೋಗಿದ್ದೆ ಈಶ್ವರ ಪೂಜೆಯಮಾಡಿದ್ದೆ
ಹ್ಯಾಂಗ್ಯಾಂಗ ಬಾಳುವೆ ಮಾಡಿದ್ದೇಳ ಹೂವಿನ ॥ಪ॥

ಒಬ್ಬನ್ನ ಒಳಗಿಟ್ಟೆ ಒಬ್ಬನ್ನ ಹೊರಗಿಟ್ಟೆ
ಒಬ್ಬನ್ನ ನೋಡಿ ನಗತಿದ್ದೆ ಹೂವಿನ॥

ಯಾವನ್ನ ಒಳಗಿಟ್ಟೆ ಯಾವನ್ನ ಹೊರಗಿಟ್ಟೆ
ಯಾವನ್ನ ನೋಡಿ ನಗತಿದ್ದೆ ಹೂವಿನ॥

ಹಲ್ದಿಟ್ಟ ಒಳಗಿಟ್ಟೆ ಕುಂಕುಮ ಹೊರಗಿಟ್ಟೆ
ಕನ್ನಡಿ ನೋಡಿ ನಗತಿದ್ದೆ ಹೂವಿನ॥

೨ನೆಯ ಚೌಕು :—

ಕಾಶಿಗೆ ನಾನು ಹೋಗಿದ್ದೆ ಈಶ್ವರ ಪೂಜೆಯ ಮಾಡಿದ್ದೆ
ಹ್ಯಾಂಗ್ಹ್ಯಾಂಗ ಬಾಳುವೆ ಮಾಡಿದ್ದೇಳ ಹೂವಿನ ॥ಪ॥

ಒಬ್ಬನ್ನ ಕೂಡ್ರಿಸಿದ್ದೆ ಒಬ್ಬನ್ನ ನಿಲಿಸಿದ್ದೆ
ಒಬ್ಬನ್ನಕೂಡ ಎಳೆದಾಟ ಹೂವಿನ ॥

ಯಾವನ್ನ ಕೂಡ್ರಿಸಿದ್ದೆ ಯಾವನ್ನ ನಿಲಿಸಿದ್ದೆ
ಯಾವನ್ನ ಕೂಡ ಎಳೆದಾಟ ಹೂವಿನ ॥

ಮಜ್ಜಿಗಿ ಗಡಿಗಿ ಕೂಡ್ರಿಸಿದ್ದೆ ಕಡಗೋಲ ನಿಲಸಿದ್ದೆ
ಹಗ್ಗದ ಕೂಡ ಎಳದಾಟ ಹೂವಿನ ॥

೩ನೆಯ ಚೌಕು :—

ಕಾಶಿಗೆ ನಾನು ಹೋಗಿದ್ದೆ ಈಶ್ವರ ಪೂಜೆಯ ಮಾಡಿದ್ದೆ
ಹ್ಯಾಂಗ್ಹ್ಯಾಂಗ ಬಾಳುವೆ ಮಾಡಿದ್ದೇಳ ಹೂವಿನ ॥ಪ॥

ಒಬ್ಬನ್ನ ಕಟ್ಟಿದ್ದೆ ಒಬ್ಬನ್ನಬಿಟ್ಟಿದ್ದೆ
ಒಬ್ಬನ್ನ ಕೈಕೊಟ್ಟು ಕರಕೊಂಡೆ ಹೂವಿನ॥

ಯಾವನ್ನ ಕಟ್ಟಿದ್ದೆ ಯಾವನ್ನ ಬಿಟ್ಟಿದ್ದೆ
ಯಾವನ್ನ ಕೈಕೊಟ್ಟು ಕರಕೊಂಡೆ ಹೂವಿನ॥

ಆಕಳವ ಕಟ್ಟಿದ್ದೆ ಕರವನ್ನು ಬಿಟ್ಟಿದ್ದೆ
ಕೆಚ್ಚಲಕ ಕೈಕೊಟ್ಟು ಕರಕೊಂಡೆ ಹೂವಿನ ॥

೪ನೆಯ ಚೌಕು :—

ಕಾಶಿಗೆ ನಾನು ಹೋಗಿದ್ದೆ ಈಶ್ವರ ಪೂಜೆಯ ಮಾಡಿದ್ದೆ
ಹ್ಯಾಂಗ್ಹ್ಯಾಂಗ ಬಾಳುವೆ ಮಾಡಿದ್ದೇಳ ಹೂವಿನ ॥ಪ॥

ಒಬ್ಬನ್ನ ಇಕ್ಕಿದ್ದೆ ಒಬ್ಬನ್ನ ಎಳದಿದ್ದೆ
ಒಬ್ಬನ್ನ ಕೈಯಾಗ ಹಿಡಿದಿದ್ದೆ ಹೂವಿನ ॥

ಯಾವನ್ನ ಇಕ್ಕಿದ್ದೆ ಯಾವನ್ನ ಎಳದಿದ್ದೆ
ಯಾವನ್ನ ಕೈಯಾಗ ಹಿಡಿದಿದ್ದೆ ಹೂವಿನ ॥

ಕದವನ್ನು ಇಕ್ಕಿದ್ದೆ ಅಗಳಿನ್ನ ಎಳದಿದ್ದೆ
ದೀಪನ್ನ ಕೈಯಾಗ ಹಿಡದಿದ್ದೆ ಹೂವಿನ ॥

೫ ನೆಯ ಚೌಕು :—

ಕಾಶಿಗೆ ನಾನು ಹೋಗಿದ್ದೆ ಈಶ್ವರ ಪೂಜೆಯ ಮಾಡಿದ್ದೆ
ಹ್ಯಾಂಗ್ಹ್ಯಾಂಗ ಬಾಳುವೆ ಮಾಡಿದ್ದೇಳ ಹೂವಿನ ॥ ಪ ||

ಒಬ್ಬನ್ನ ಹಾಸಿದ್ದೆ ಒಬ್ಬನ್ನ ಇಟ್ಟಿದ್ದೆ
ಒಬ್ಬನ್ನ ಕೂಡ ಸೊಗನಿದ್ದೆ ಹೂವಿನ ||

ಯಾವನ್ನ ಹಾಸಿದ್ದೆ ಯಾವನ್ನ ಇಟ್ಟಿದ್ದೆ
ಯಾವನ್ನ ಕೂಡ ಸೊಗನಿದ್ದೆ ಹೂವಿನ ॥

ಹಾಸಿಗೆಯ ಹಾಸಿದ್ದೆ ತಲಿಗಿಂಬ ಇಟ್ಟಿದ್ದೆ
ಹಚ್ಚಡಗೂಡ ಸೊಗನಿದ್ದೆ ಹೂವಿನ ॥

—ಜಾನಪದ ಭಾವಗೀತೆಗಳು—(ಇನ್ನೂ ಪ್ರಕಟವಾಗಿಲ್ಲ)

ಬೆಡಗು ಹಾಸ್ಯಭರಿತವಾಗಿ ರಸಿಕಜೀವನದ ಸತಿಪತಿಯರ ಸುಂದರ ಸಂಭಾಷಣೆಯಿದೆ ಇಲ್ಲಿ. ಹೆಣ್ಣು ತನ್ನ ಜೀವನದಲ್ಲಿ ಅನುಭವಿಸಿದ್ದನ್ನು ಬೆಡಗಿನ ಬಿಂಕದಲ್ಲಿ ಹಾಡಿದೆ.

ಓದುಗಬ್ಬ :—ಓದಿ, ಅರಿಯಲು ನವರಸಭರಿತ ಕಾವ್ಯಗಳೆಲ್ಲ ಓದುಗಬ್ಬಗಳಾದರೂ ಚಂಪೂಶೈಲಿಯಲ್ಲಿಯ ವಸ್ತುಕಗಳ ಮಾರ್ಗವೇ ಬೇರೆ. ತ್ರಿಪದಿ-ಷಟ್ಪದ್ಯಾದಿಗಳ ಕನ್ನಡ ಛಂದದಲ್ಲಿ ಬಂದ ವರ್ಣಕಗಳಲ್ಲಿ ವೀರಶೈವರ ಓದುಗಬ್ಬಗಳ ಬಗೆಯೇ ಬೇರೆ. ಅನುಭವಮಾರ್ಗದಲ್ಲಿಯ ವೀರಶೈವ ಅನುಭಾವಿಗಳು ಇವುಗಳಲ್ಲಿ ಪ್ರಾಪಂಚಿಕ-ಪಾರಮಾರ್ಥಿಕ ಅನುಭವವನ್ನು ಭಕ್ತಿಯ ಹೊದಿಕೆಯಲ್ಲಿ ತುಂಬಿದ್ದಾರೆ. ಆದುದರಿಂದ ಅವು ಕೇವಲ ಶಿವಶರಣರ ಚರಿತ್ರೆ ಅಥವಾ ಧರ್ಮಸಿದ್ಧಾಂತಗಳಿರದೆ ಅವರ ಅನುಭವ ಜೀವನಸಾರವಾಗಿವೆ. ವೀರಶೈವರ ಓದುಗಬ್ಬಗಳಲ್ಲಿ ಪುರಾಣಗಳಿವೆ, ಧರ್ಮಸಿದ್ಧಾಂತಗಳಿವೆ, ಶತಕಗಳಿವೆ; ಅಲ್ಲದೆ ಸ್ತೋತ್ರರೂಪದಲ್ಲಿ ಅನೇಕ ' ತ್ರಿಪದಿ ' ಗಳೂ ಇರುವುವು.

ಪುರಾಣಗಳಲ್ಲಿ ಪ್ರಭುಲಿಂಗಲೀಲೆ, ಚೆನ್ನಬಸವ ಪುರಾಣಾದಿಗಳೇ ಖ್ಯಾತಿವೆತ್ತಿವೆ. ಮಂತ್ರ ತಂತ್ರ-ಯೋಗಾದಿಗಳು ಜೀವನ್ಮುಕ್ತವಾಗಲು ಸಾಧನವಾಗಲಾರವು, ಎಂಬ ಮಾತನ್ನು ಮಹಾಕವಿ ಚಾಮರಸನು ತನ್ನ ಪ್ರಭುಲಿಂಗಲೀಲೆಯಲ್ಲಿ ಅಲ್ಲಮಪ್ರಭುವಿನ ಮುಖಾಂತರ ಸಿದ್ಧಶ್ರೇಷ್ಠ ಗೋರಕ್ಷನಿಗೆ ನುಡಿಸಿದ್ದಾನೆ.

ಕಾಯ ಬಲಿದರೆ ಮಾಯೆ ಬಲಿವುದು
ಮಾಯೆ ಬಲಿದರೆ ಛಾಯೆ ಬಲಿವುದು
ಕಾಯ ಮಾಯಾ ಛಾಯ ಬಲಿದರೆ ಸಿದ್ಧತನವಲ್ಲ ||
ಕಾಯ ಮಾಯಾ ಛಾಯದಾಗಿನ
ದಾಯವನು ಅಳಿದುಳಿದನಾದೊಡೆ
ರಾಯನಾತನು ಸಿದ್ಧರೊಳು ಗೋರಕ್ಷ ಕೇಳೆಂದ ॥

—ಪ್ರಭುಲಿಂಗಲೀಲೆ. ಗತಿ ೧೯. ಪ. ೩೭.

ಎಂಬ ಪ್ರಭುವಿನ ಅನುಭವ ನುಡಿಗೆ ಅಹಂಭಾವ ತಾಳಿದ ಗೋರಕ್ಷನು ದಾಸೋಹಂಭಾವಯುಕ್ತನಾಗಿ, ಶಿವಶರಣನಾಗಿ ಜೀವನ್ಮುಕ್ತನಾಗುವನು. ಇಂತಹ ಸಂಗತಿಗಳನ್ನು ವೀರಶೈವರ ಅನೇಕ ಪುರಾಣಗಳಲ್ಲಿ ನಾವು ಕಾಣಬಹುದು.

ಧರ್ಮಸಿದ್ಧಾಂತಗಳಲ್ಲಿ ಕವಿ ಸಿದ್ಧರಾಮನ ಷಟ್‌ಸ್ಥಲ ತಿಲಕ[೬] ನಿಜಗುಣರ ಪರಮಾನುಭವಬೋಧೆ ಮೊದಲಾದ ಗ್ರಂಥಗಳೂ ಮೈಲಾರ ಬಸವಲಿಂಗ ಶರಣರ 'ಷಟ್‌ಸ್ಥಲ ಸಿದ್ಧಾಂತ' ಮೊದಲಾದುವುಗಳು ಮಹತ್ವದುವು.

ವದನದೊಳ್ ಸತ್ಯ ಕಾಯಕದಿ ಸತ್ಕೃತ್ಯ ತ್ರೈ
ವಿಧ ಲಿಂಗದೊಳ್ಭಕ್ತಿ ಗ್ನಾನದೊಳ್ ಶಕ್ತಿ ನಿಜ
ಹೃದಯದೊಳ್ ಮುಕ್ತಿ ಸಮರಸದೊಳನುರಕ್ತಿ ವಿಷಯಾದಿಯೊಳ್ ನೆರ ವಿರಕ್ತಿ॥
ಮುದದಿ ಮನದೊಳ್ ಶಾಂತಿ ಬಾಹ್ಯಕರಣದಿ ದಾಂತಿ
ವದವಿ ನಿಜ ಕರಣ ಹರನಂಶರುರಲಿಂಗಭಾ–
ವದೊಳು ಕರಿಗೊಂಡು ಮಾಯಿಯ ಪರಿದ ಲಿಂಗಾತ್ಮರಿದ ಕೇಳಿ ಸಂತಸದೊಳ್ ॥

—ಷಟ್‌ಸ್ಥಲತಿಲಕ ಸ್ಥಲ ೨, ಪದ್ಯ ೩—

ಎಂಬುದು ಲಿಂಗಾಂಗ ಅನುಭಾವಿಯ ಇರುವು ಆಗಿದೆ.

ಹಸಗೆ, ಗೋಪ್ಯ, ಶತಕ, ಸ್ತೋತ್ರ, ತಿವದಿ ಮೊದಲಾದುವುಗಳು ಷಟ್‌ಸ್ಥಲ ಸಿದ್ಧಾಂತವನ್ನು ಅರಿತುಕೊಳ್ಳಲು ಸಾಧನವಲ್ಲದೆ ಅನುಭವ ಪರಿಮಳ ತುಂಬಿ ಕೊಂಡಿವೆ, ಎಂಬ ಮಾತು ಗಮನಾರ್ಹವಾದುದು. ಇವುಗಳಲ್ಲಿ 'ತಿವದಿ' ಗಳು ವಿಶಿಷ್ಟವಾಗಿವೆ. ಮಹಾದೇವಿಯಕ್ಕ, ಸೊನ್ನಲಿಗೆಯ ಸಿದ್ಧರಾಮ, ಶೀಲವಂತಯ್ಯ, ನಿಜಗುಣ ಶಿವಯೋಗಿ, ಸರ್ವಜ್ಞ, ಮೈಲಾರ ಬಸವಲಿಂಗ ಶರಣ ಮೊದಲಾದವರ ತ್ರಿವದಿಗಳು ಉಪಲಬ್ಧವಿವೆ. ಮಹಾದೇವಿಯಕ್ಕನವರ 'ಯೋಗಾಂಗ ತ್ರಿವದಿ' ಯಲ್ಲಿ ವಿರಾಗಿಣಿಯು ಸಾಧಿಸಿದ ಅನುಭವತರಂಗವನ್ನು ಗಮನಿಸಬೇಕು.

"ಅಷ್ಟದಳ ಕಮಲದಾ ಬಟ್ಟಬಯಲೊಳಗೊಂದು
ಮುಟ್ಟಬಾರದಾ ಘನವಿಹುದು ಮನದೊಳಗೆ
ದೃಷ್ಟಿಯಿಟ್ಟವನೆ ಕಡುಜಾಣ ॥

—ಕರ್ನಾಟಕ ಕವಿಚರಿತೆ. ಭಾಗ ೧ ಪು. ೪೧೫

ಅನುಭವ ಕವಿಯಾದ ಶೀಲವಂತಯ್ಯನು 'ಆತ್ಮಲಿಂಗ' ತ್ರಿಪದಿಯಲ್ಲಿ ಲಿಂಗೋತ್ಪತ್ತಿ ಯನ್ನು ಅನುಭವಿಸಿದುದು ಸಮ್ಯಕ್‌ಜ್ಞಾನಪೂರಕವಾಗಿದೆ.

ಬಿಂದುರೂಪವೆ ಪೀಠ ಮುಂದೆ ನಾದವೆ ವೃತ್ತ
ಸಂದ ಗೋಮುಖವೆ ಕಳೆ ತ್ರಿವಿಧ ಹೃದಯದೊಳು
ನಿಂದ ಚಿನ್ಮಯನೆ ಗುರುಲಿಂಗ ॥"

—ಶೀಲವಂತಯ್ಯನ ಆತ್ಮಲಿಂಗ ತ್ರಿಪದಿ

---

೬ ಇನ್ನೂ ಪ್ರಕಟವಾಗಿಲ್ಲ.

ಈ ವಿಷಯಾದಿಗಳಲ್ಲಿ ನಿಜಗುಣರ ಕೃತಿಗಳಂತೂ ಹೆಸರಾಂತವಾಗಿವೆ, ಎಂದು ಬೇರೆ ಹೇಳಬೇಕಾಗಿಲ್ಲ.

ಹಾಡುಗಬ್ಬ-ಬಾಜನೆಗಬ್ಬ : — ನೃಪತುಂಗ ನಾಗವರ್ಮಾದಿಗಳು ತಮ್ಮ ಗ್ರಂಥ (ಕವಿರಾಜಮಾರ್ಗ-ಪರಿಚ್ಛೇದ ೧ ಪದ್ಯ ೨೫ ರಿಂದ ೩೫; ಕಾವ್ಯಾವಲೋಕನ—ಐಕ್ಯಪ್ರಕರಣ. ಸೂತ್ರ ೨೪೧ ರಿಂದ ೨೪೬) ಗಳಲ್ಲಿ ಹಾಡುಗಬ್ಬದ ಮಾತನೆತ್ತಿದರೂ ನಮಗೆ ಉಪಲಬ್ಧವಿರುವ ಹಾಡುಗಬ್ಬಗಳು ಒಂದೊ, ಎರಡೊ! ಚೆನ್ನಪ್ಪಕವಿಯ 'ಶರಣಲೀಲಾಮೃತ' ವೊಂದನ್ನು ಬಿಟ್ಟರೆ ಕನ್ನಡ ಸಾಹಿತ್ಯಕ್ಕೆ ಬೇರೊಂದು ಹಾಡುಗಬ್ಬವಿಲ್ಲವೆಂದೇ ಹೇಳಬಹುದು.

ಹಾಡುಗಬ್ಬವು ಕಥಾಸಂಪುಟವುಳ್ಳ ಹಾಡು (ಭಾವ ಗೀತೆ) ಗಳ ಸರಮಾಲಿ. ಅದಕ್ಕೆ ನೂರೊಂದು ರಾಗ. ಈ ರಾಗ-ರಾಗಿಣಿಗಳಿಗೆ ನೂರೊಂದು ಧರತಿ. ಆ ನೂರೊಂದು ಧರತಿಗೆ ನೂರೊಂದು ಸೊಲ್ಲು. ಅಂತೆಯೇ ಅದು ಕೇಳಿದಾಗ ಮನರಂಜನ, ಅನುಭವಿಸಿದಾಗ ಆತ್ಮರಂಜನ! ಈ ಹಿಡಿತವನ್ನರಿತು ಅನುಭಾವಿಗಳು ಸಾಮಾನ್ಯರಿಗಾಗಿ ಹಾಡುಗಬ್ಬವನ್ನು ಹಾಡಿದರು. ಅದರ ಮಹತ್ವವನ್ನರಿತು ಓದು ಬರೆಹ ಬಾರದ ಹಳ್ಳಿಗರೂ ನಾಡ ಶರಣರ ಹಾಗೂ ವೀರರ ಹಾಡುಗಬ್ಬಗಳನ್ನು ಪರಂಪರೆಯಿಂದ ಹಾಡುತ್ತ ಬಂದಿದ್ದಾರೆ. ಅದು ಕನ್ನಡ ಹೆಣ್ಣುಮಕ್ಕಳಿಗೆ ಇನ್ನಿಷ್ಟು ಪಾವನವಾಗಿ ಪೂಜ್ಯಭಾವ ಒಡಮೂಡಲೆಂದು!

ಹಾಡುವದು ಹಾಡುಗಬ್ಬ ಬೇಡುವದು ಉಡಿಯಕ್ಕಿ
ಮಾಡುವದು ನಿತ್ಯಶಿವಕಾಯಕೆ ।ಶಿ। ಹರಹರನೆ
ಶಿವಶಿವ ಶಿವನೆ ।ಪ।
ಕಾವ್ಯಲ್ಲ ಕಥೆಯಲ್ಲ ನಾಡ ಶರಣರ ಹಾಡು
ಹಾಡಗಬ್ಬವ್ವ ಸಬದಾಗ॥ಶಿ॥ ಏಜಾಣಿ
ದನಿಗೊಟ್ಟು ಹಾಡ ಕಲಿಯವ್ವ ॥ಶಿ॥ ೩೯ ॥
ನೀಡುವುದು ನಿತ್ಯ ಶಿವದಾನ ॥೪೦ ॥

—ಮಲ್ಲಮಲ್ಲಾಣಿ—೪ ಶಿವದರ್ಶನ (ಮಹಾ ಶೃಂಗಾರ ಹಾಡುಗಬ್ಬ).

ಎಂದು ಹಾಡಿ ಹಾಡುಗಬ್ಬದ ಪರಂಪರೆಯನ್ನು ಉಳಿಸಿ ತಂದಿದ್ದಾರೆ. ಈ ಹಾಡುಗಬ್ಬಗಳಲ್ಲಿ ಕನ್ನಡ ಹೆಣ್ಣುಮಕ್ಕಳ ಪ್ರಪಂಚಾನುಭವದ ಪರಮ ಪರಿಮಳವನ್ನು ಅನುಭವಿಸಬಹುದು. ಅವಳಿಗೆ ಪ್ರಣಯ-ದಾಂಪತ್ಯವನ್ನೊಳಗೊಂಡ ಒಗತನವು ದೇವತ್ವವಾಗಿದೆ. ಅವಳಿಗೆ ಪ್ರಣಯವು (Love) ಪೂಜ್ಯಪಾವನವಾದುದು; ದೇವ ಸಮಾನವಾದುದು. ಅಂತೆಯೇ ಅವಳ ಪ್ರಪಂಚವೂ ಪಾವನವು.

ಪ್ರಣಯ ಹಾಡುನ ಬಾರ ಪ್ರಣಯಮಾಡುನಬಾರ
ಪ್ರಣಯ ಪ್ರಣಮೆರಡು ಸರಿಮಾಡಿ।ಶಿ।ಶಿವಭಕ್ತ
ಪ್ರಣಯಿ ಮಲ್ಲಣನ ಶಿವಪದವ ||ಶಿ||೨||

—ಮಲ್ಲಮಲ್ಲಾಣೀ ಮಹಾಶೃಂಗಾರ ಹಾಡುಗಬ್ಬ, ೧ಪೀಠಿಕೆ—

ಇಲ್ಲಿ ಅವಳ ತೇದುಂಡ ಬಾಳಿನ ಅನುಭವವು ಸೂಸಾಡುತಿದೆ! 'Love is God; God is Love' ಎಂಬ ಪರಮ ತತ್ವವನ್ನು ಪಾಶ್ಚಾತ್ಯರು ಇತ್ತೀಚೆಗೆ ಅರಿತು ಕೊಂಡರೆ ಈ ಮಾತನ್ನು ಕನ್ನಡ ಹೆಣ್ಣು ಎಂದೋ ಅರಿತುಕೊಂಡು ಅದನ್ನು ತನ್ನ ನಿತ್ಯ ಜೀವನದಲ್ಲಿ ಕೃತಿಗಿಳಿಸಿದೆ.

ಥಣ್ಣ ಥಣ್ಣ!
ಶರಣರ ಘಂಟಿ ಮಾತಾಡತಾವ ||ಪ||
ಮಲ್ಲಮಲ್ಲಾಣಿ ಬರುವ ಸೊಲ್ಲ ಶಿವಲೋಕ ಕೇಳಿ
ಗಲ್ಲಿಗಲ್ಲಿಸಿ ಶಿವಜೀಕ|ಥ|ಶಿವಪದಕ
ಪ್ರಣಯ ಹಾಡೆಂದು ದನಿದುಂಬಿ ||ಥ||೩೬
—ಮಲ್ಲಮಲ್ಲಾಣಿ—೪ ಶಿವದರ್ಶನ

ಎಂದು ಹಾಡಿ ಈ ಪ್ರಪಂಚವನ್ನು ಪಾವನಮಾಡಿ ಯುಗ-ಯುಗದಲ್ಲಿಯೂ ಬಾಳ್ವೆಗೆ ಹೊಸತನ ತಂದಿದೆ. ಆದುದರಿಂದ ಕನ್ನಡ ಹೆಣ್ಣು ಬಾಳಿನಲ್ಲಿ ಎಷ್ಟು ಆಸಕ್ತ ವಾದರೂ ಅವಳ ಹಾದಿಯು 'ಇರಬೇಕ|ಇದ್ದು ಗೆದಿಯಬೇಕ" ಎಂಬುದಾಗಿದೆ.

ಅನುಭವ ಸಾಹಿತ್ಯದಲ್ಲಿ ಹಾಡುಗಬ್ಬಕ್ಕಿಂತಲೂ ಬಿಡಿಹಾಡು (ಭಾವಗೀತೆ) ಗಳು ಜನತೆಯ ಮೆಚ್ಚುಗೆ ಪಡೆದಿವೆ. ಅವುಗಳಲ್ಲಿಯ ಅನುಭವ ಚುಂಬಕವು ಅತಿ ಪ್ರಖರವಾದುದು; ಅದರ ತೀವ್ರತೆ ಬಲು ಚುರುಕಾದುದು. ಹೇಳತಕ್ಕ ಮಾತು ಮಾರ್ಮಿಕವಾಗಿ ಭಾವತುಂಬಿ ನೇರವಾಗಿ ಒಲ್ಲೆಂದರೂ ಮನಕ್ಕೆ ಮುಟ್ಟಿ ಆತ್ಮ ವಿಶ್ವಾಸಕ್ಕೆ ಯತ್ನಿಸುವುದು. ಈ ಹಾಡುಗಳು ತಾಳ-ಲಯ-ವಿನ್ಯಾಸದೊಡನೆ, ರಾಗಬದ್ಧವಾಗಿರುವುದರಿಂದ ವಾದ್ಯವು ಹಾಡುವಾಗ ಅನಿವಾರ್ಯ. ಆದುದರಿಂದ ನೃಪತುಂಗಾದಿ ಕನ್ನಡ ಲಾಕ್ಷಣಿಕರು ಇಂತಹ ಹಾಡುಗಳನ್ನು '**ಬಾಜನೆಗಬ್ಬ**'ವೆಂದು ಕರೆದಿದ್ದಾರೆ.

ನಾಗವರ್ಮನು ಕಾವ್ಯಾವಲೋಕನದಲ್ಲಿ 'ಹಾಡು' ಎಂಬ ಶಬ್ದವನ್ನು ಇಂದಿನ 'ಭಾವಗೀತೆ' ಎಂಬರ್ಥದಲ್ಲಿಯೇ ಉಪಯೋಗಿಸಿದ್ದಾನೆ. ಅವನು ಹೇಳಿರುವ ಒಂದೇ ಪದ್ಯದ 'ಇಡುಕಂ ಗಬ್ಬಂ' ಐದು ಪದ್ಯಗಳುಳ್ಳ 'ಕುಳಕ', ಹನ್ನೆರಡು ಪದ್ಯಗಳ 'ಮೇಲ್ವಾಡು' ಹಾಗು ಹದಿನೈದರಿಂದ ಇಪ್ಪತ್ತೈದು ಪದ್ಯಗಳುಳ್ಳ 'ಪಾಡು' ಇವು ಕನ್ನಡ ವಿವಿಧ ಭಾವಗೀತೆಗಳೆಂದೇ ಹೇಳಬಹುದು. ಕನ್ನಡ ಉದ್ದಾಮ ಪಂಡಿತರು ಇವುಗಳನ್ನು ಅಲಕ್ಷಿಸಿದ್ದಾರೆ. ತಮ್ಮ ಜೀವನವೇ ಜನಪದಕ್ಕಾಗಿ ಎಂದರಿತ ಕನ್ನಡ ಅನುಭಾವಿಗಳು ಮಾತ್ರ ವಿವಿಧ ವಿಷಯಗಳನ್ನು ವಿವಿಧ ಭಾವ ಗಳೊಂದಿಗೆ ಈ ಎಲ್ಲ ಹಾಡು (ಭಾವಗೀತೆ) ಗಳಲ್ಲಿ ಹಾಡಿದ್ದಾರೆ. ಶಿವಶರಣರ ಮಂತ್ರ ಗೋಪ್ಯಗಳೂ ಜಕ್ಕಣಾರ್ಯರ ಹಾಡುಗಳ ಸಂಪಾದನೆ—'ಏಕೋತ್ತರ ಶತಸ್ಥಲ'— ಯಲ್ಲಿ ಬರುವ ಹಾಡುಗಳೂ ನಾಗವರ್ಮನು ಹೇಳಿರುವ ವಿವಿಧ ಹಾಡುಗಳ

ಚೌಕಟ್ಟಲ್ಲಿರುವುವು. ಜನರು ಇವುಗಳನ್ನು ಅನುಭವಪದ, ಇಲ್ಲವೆ ಅನುಭವಗೀತೆಗಳೆಂದೇ ಸಂಬೋಧಿಸುತ್ತಾರೆ.

ಭಾಜನೆಗಬ್ಬವು ಇಂತಹ ವಿವಿಧ ಹಾಡು (ಭಾವಗೀತೆ) ಗಳ ಸಂಕಲನ. ತುಂಬಿ ಬಂದ ಅನುಭವವು ಅಖಂಡ ಕಾವ್ಯಗಳಂತೆ ಮುಂದುವರಿಯದೆ ಹಲಕೆಲವು ಪದ್ಯಗಳಲ್ಲಿ ಚುರುಕಾಗಿ ಎದ್ದು ಕಂಡು, ಮನಂಬುಗುವಂತೆ ಹಾಡಾಗಿ ನಿಲ್ಲುವುದು. ಇಂತಹ ಬಿಡಿಹಾಡುಗಳು, ಅನುಭವ ಪದಗಳೆಂದೂ ತತ್ವಪದಗಳೆಂದೂ ಕರ್ನಾಟಕದಲ್ಲಿ ಇಂದು ಬಳಕೆಯಲ್ಲಿವೆ. ಹೆಚ್ಚಾಗಿ ಶಿವಶರಣರೂ ದಾಸರೂ ಸಾಧು ಸತ್ಪುರುಷರೂ ಇಂತಹ ಹಾಡುಗಳಲ್ಲಿ ತಮ್ಮ ಅನುಭವವನ್ನು ಹಾಡಿದ್ದಾರೆ.—

ಕಾಡಲೇಕೆ ನರರುಗಳನು |
ಬೇಡಿ ಬಳಲೇಕೆ ಮನವೆ।
ರೂಢಿಗೀಶನೆಮಗೆ ದೈವವಾಗಿ ಇರುತಿರೆ ||ಪ||

ಮೃಡನ ಪೂಜೆ ಮಾಡುವುದಕೆ
ಮಡುವಿನಗ್ಗವಣಿಗಳುಂಟು
ಅಡವಿಯಲ್ಲಿ ಕಾಡ ಪತ್ರಿಪುಷ್ಪವುಂಟಿಲ್ಲೆ ॥
ಒಡಲಿಗನ್ನ ದುಡಿದರುಂಟು
ಗುಡಿಗಳುಂಟು ಶಯನಕೆಮಗೆ
ಒಡೆಯರುಗಳು ಬಿಸುಟದರುವ ಶೀತಕುಂಟಿಲ್ಲೆ ॥೧॥

ಬುದ್ಧಿಯನ್ನು ಹೇಳುವುದಕೆ
ಆದ್ಯರುಗಳ ವಚನವುಂಟು
ಉದ್ಧರಿಸುವೊಡೆಮಗೆ ಶಿವನ ಮಂತ್ರವುಂಟಿಲ್ಲೆ ॥
ಅರ್ಧನಾರಿಯೆಂಬ ದೈವ
ಇದ್ದ ಬಳಿಕ ಕರದೊಳೆಮಗೆ
ಹೊದ್ದಲೇಕೆ ನರರ ಆಶೆ ಮಾಡೆನಕ್ಕಟಾ ॥೨॥

ಮಿಗಿಲು ಮನೆಗಳೇತಕೆಮಗೆ
ಅಗಲಲೇಕನುಭಾವಿಗಳನು
ಜಗದೊಳೆಮಗೆ ಹಲವುಕೋಟಲೆಗಳು ಏತಕ್ಕೆ ॥
ಸೊಗಸು ಷಡಕ್ಷರಿಯಲಿಂಗ
ಅಗಲದೆಮ್ಮ ಕರದೊಳಿರಲು
ಬೆಗಡುಗೊಳ್ಳಲೇಕೆ ಮನವೆ ನರರ ಮಾಳ್ಕೆಯಿಂ |೩|

—ಮುಪ್ಪಿನ ಷಡಕ್ಷರಾರ್ಯ

ವಿರತಿಹೊಂದಿದ ಯೋಗಿಗೆ ಲೌಕಿಕವು ಹಂಗು; ವಿಪತ್ತು, ಸಂಪತ್-ಸಮೃದ್ಧ-ವಿಶ್ವಸೃಷ್ಟಿಯಿರಲು ನರರುಗಳ ಕಾಡಿ-ಬೇಡಿ-ಬಳಲದೆ ದೈವವಾಗಿಹ ನಿಸರ್ಗದೊಡನೆ ಅವನು ಸಮರಸನಾಗುತ್ತಾನೆ. ಅದೇ ಅವನು ಇಹಲೋಕದಲ್ಲಿ ಭೋಗಿಸುವ

ಮೋಕ್ಷಾನಂದ! ಈ ಹಂಗಿಲ್ಲದ ಅನುಭವವನ್ನು ಅವನು ತನ್ನ ಆತ್ಮಾನಂದ ಬೊಂದಿಗೆ ಹಾಡಿದ್ದಾನೆ. ಲೋಕವನ್ನೇ ತ್ಯಜಿಸಿದ ಅವನಿಗೆ ಲೋಕವೇ ಪೂಜ್ಯ. ಭಕ್ತಿಯಿಂದ ಬೆನ್ನು ಹತ್ತಲು ಆ ಪರಮಾನಂದನು "ಜಾಗ್ರತ! ಜಾಗ್ರತ!!" ಎಂದು ತನ್ನ ಆತ್ಮಕ್ಕೆ ಎಚ್ಚರವಿತ್ತು ಜನತೆಯೊಡಗೂಡುವನು.

ಜೋಕೆ ಕಂಡ್ಯಾ।ಆತ್ಮಾ।ಜೋಕೆ ಕಂಡ್ಯಾ ॥
ಕಾಕುಸ್ತ್ರೀಯರ ಬಳಗ।ವನೇಕ ಬರುತಿಹುದಿಲ್ಲಿ ||ಪ||

ಮರವೆಯ ಮನೆಯೊಳ।ಗರುವಿಲ್ಲದಂಗನೆಯರು
ಪರಿಪರಿನೆರದು ನಿನ್ನ।ಮರುಳು ಮಾಡುವರಯ್ಯ ||೧||

ವಿರತಿ ವಿರತಿಯೆಂದು।ನಿರುತದಿ ನುಡಿವೆ ನೀನು
ವಿರತಿಯೆಂದೆಂಬ ದೃಷ್ಟ। ಅರಿತರೆ ತಿಳಿವುದಿಲ್ಲಿ || ೨ ||

ನೋಡದೆ ನುಡಿಸದೆ। ಮಾಡಬಹುದು ವಿರತಿ
ನಾಡರಿಯಲು ಮಹಂತ। ಪ್ರೌಢನೊಳು ರತಿಯಿರಲಿ ॥ ೩ ॥

—ಬಾಲಲೀಲಾ ಮಹಾಂತ ಶಿವಯೋಗಿಗಳು—

ಎಂದು ವಿರತಿಯ ಗುಟ್ಟನ್ನು ಅನುಭವಿಸಿ ಹಾಡಿದ್ದಾನೆ ಶಿವಯೋಗಿ! ಪ್ರಪಂಚದ ಜಂಜಡದಲ್ಲಿ ಅಜ್ಞಾನದ ಪರಿಬಂದ ಮಾನವನಿಗೆ ಇದಾವುದೂ ತಿಳಿಯದು. ಅಂತೆಯೇ ಅವನು ಅಹಂಕಾರಭಾವದಲಿ ಮಮಕಾರದಿಂದ ಸಂಸಾರ ಸಂತೆಯನು ಸ್ಥಿರವೆಂದು ನಂಬಿ ಚಿಂತಾಕ್ರಾಂತನಾಗುವನು. ಚಿಂತೆ ಎಂಥವರಿಗೂ ಬಿಟ್ಟಿಲ್ಲವೆಂದು ತಿಳಿದು, ಏನ ನಂಬಿ ಇರಬೇಕೆಂಬುದನ್ನು ಮಹಾನುಭಾವಿಗಳಿಂದ ಅರಿತು ಅನುಭವ ಮಾರ್ಗವನ್ನು ಹಿಡಿದು, ಶಿವನೆಂದು ನಿಶ್ಚಿಂತನಾಗುವನು. ಅಂತಹ ಮಾನವರಿಗೆ ಶಿವಯೋಗಿಗಳ ಅನುಭವ ದಿವ್ಯಸಂದೇಶವಿದೆ.

ಎಲೆ ಮಾನವನೆ ಕೇಳು ಸ್ಥಿರವೆಂದು ಸಂಸಾರ
ಮಲದೇಹವನು ಮೆಚ್ಚಿ ಕೆಡಬೇಡ ಬರಿದೆ || ಪ ||

ನಾರಿ ನಿನ್ನವಳಲ್ಲ ಹೇಮ ನಿನ್ನದು ಅಲ್ಲ
ಧೀರ ಪುತ್ರಾಪ್ತರುಗಳಾರಾರು ಅಲ್ಲ ||
ಸಾರಿ ಹೇಳುವೆನೀಗ ತಿಳಿಯದದು ಮುಂದೆ ನೀ
ಘೋರ ನರಕಾರ್ಣವದೆ ಬೀಳ್ವಾಗ ತಿಳಿವೆ ॥ ೧ ॥

ಕದನ ಕರ್ಕಶದಿಂದ ಜರಿದೆ ನೀನನ್ಯರನು
ಮದಸೊಕ್ಕಿದಾನೆಯೊಲ್ ಜರಿಯದಿರು ಮನುಜಾ ||
ಕುದಿದು ನಾ ಹೆಚ್ಚು ತಾ ಹೆಚ್ಚೆಂದು ಒಣವಾದ
ಪದವಿಗಿದು ತರವಲ್ಲ ಕುತ್ತಹದು ಮುಂದೆ ॥ ೨ ॥

ಗುರುಹಿರಿಯರನು ಕಂಡು ಕೋಣನಂದದಿ ಮಲೆತು
ಸಿರ ಬಾಗದಿರೆ ಮುಂದೆ ಘನ ಬಾಧೆಬಡುವೆ ||
ಮೊರೆವ ಕಾಲನ ಕೈಗೆ ಸೆರೆಯ ಸಿಕ್ಕುವೆ ನೀನು
ಭರದೊಳು ಮಹಂತೇಶನಡಿವಿಡಿಯೊ ಮರುಳೆ || ೩ ||

—ಬಾಲಲೀಲಾ ಮಹಂತ ಶಿವಯೋಗಿಗಳು.

ಇದನರಿತು ನಂಬಿ ಭಕ್ತಿಯಿಂದ ಸದ್ಧರ್ಮಿಯಾಗಿ ನಡೆದರೆ ಆವುದು ಅಸಾಧ್ಯ? ಇಂತಹ ಚೆನ್ನುಡಿಗಳನ್ನು ಹಾಡಿದ ಶಿವಯೋಗಿಯು ಪರಮಪೂಜ್ಯನಲ್ಲವೇ? ಅವನನ್ನು ಹೆತ್ತ ಕನ್ನಡಮ್ಮನು ಧನ್ಯಳಲ್ಲವೇ? ಇಂತಹ ಲೀಲಾಮೂರ್ತಿಗಳ ಮಹಿಮೆಯ ತಿಳಿಯುವುದೇ ದುಸ್ತರವಾದುದು. ಅದು ಆಳಳೆಯಲಾಗದ ಮಹಿಮಾ ಸಾಗರ!

ಶರಣರ ಮಹಿಮೆ ತಿಳಿಯುವದೇ ಶಿವ
ಪರಿಪರಿ ಪಾಪದ ನರಗುರಿಗಳಿಗೆ || ಪ ||

ದುರುಳರ ಸಂಗದಿ ಸರಸವನಾಡುತ
ಪರದ್ರವ್ಯವನಪಹರಿಸುವವರಿಗೆ || ೧ ||

ಹೆಣ್ಣಿನರೂಪವ ಕಣ್ಣಲೆ ಕಂಡು
ಸಣ್ಣಾಗುವ ಈ ನರಗುರಿಗಳಿಗೆ ||೨||

ಧರೆಯೊಳು ಮೆರೆಯುವ ಪರತರ ಅಥಣಿ
ವರ ಶಿವಯೋಗಿಯ ನೆನೆಯದವರಿಗೆ || ೩ ||

“ಶರಣರನು ಮರಣದಲ್ಲಿ ನೋಡು” ಎಂಬ ನುಡಿಯು ಸಿದ್ಧವಾದುದು. ಅದನ್ನು ಪರಿಹಾಸ್ಯ ಮಾಡಕೂಡದು. ಮಾಡಿದರೆ ‘ಸುಣ್ಣದಕಲ್ಲು ಮಡುಲಲ್ಲಿ ಕಟ್ಟಿಕೊಂಡು ಮಡುವ ಬಿದ್ದಂತೆ!’ ಅವರ ಸಿಡಿಮಿಡಿ ನುಡಿಗಳಲ್ಲಿಯೂ ಕಲ್ಯಾಣಹುದುಗಿದೆ, ಎಂಬುದನ್ನು ಅನೇಕರ ಜೀವನದಿಂದ ಅರಿಯಬಹುದು. ಅವರು ಜ್ಞಾನಪೂರ್ಣ ಜಗಜ್ಜ್ಯೋತಿಗಳು. ಅಂತೆಯೆ ಶರಣರಿಗೆ ಮರಣವಿಲ್ಲ. ಇಂತು ಹರಿದುಬಂದಿದೆ ಅನುಭವಸಾಹಿತ್ಯವು ಬಾಜನೆಗಬ್ಬಗಳಲ್ಲಿ!

ಜನಪದ ಸಾಹಿತ್ಯ:—ಅನುಭವ ಸಂಸ್ಕೃತಿಯ ಕುಲುಮೆಯಲ್ಲಿ ಪಡಿಯಚ್ಚಾಗಿ ಬಂದ ಕನ್ನಡಿಗರಿಗೆ ಅಂತಃಕರುಣಾನುಭವದ ಎದೆಗಣ್ಣಿದೆ. ಆದುದರಿಂದ ಆ ಸಂಸ್ಕೃತಿಯು ಶಬ್ದ ಚಾಪಲ್ಯದ ಒಣವಾದವಾಗದೆ, ನುಡಿನಡೆಯಾದ ವಿಶ್ವಸಮಾಜವಾಗಿದೆ. ಅಲ್ಲಿ ಎಲ್ಲವೂ ಅನುಭವದ ಕುಲುಮೆಯಲ್ಲಿ ಹಾಯ್ದು ದಾಸೋಹಂಭಾವದ ನೀರುಂಡೇ ಬರಬೇಕು. ಹೀಗೆ ಬಂದ ಈ ಜನತೆಯ ಲೋಕಸಾಹಿತ್ಯವು ಪರಂಪರೆಯಿಂದ ಉಳಿದುಬಂದ, ಜನತೆಯ ಅನುಭವರಾಶಿಯಾಗಿದೆ. ಅದರಲ್ಲಿ ಪ್ರಪಂಚ ಪಾರಮಾರ್ಥಾದಿಗಳ ಸಮಸ್ಯೆಗಳು ಬಲು ಸಹಜವಾಗಿ

ಬಿಡಿಸಲ್ಪಟ್ಟು, ಜೀವನವು ಸುಖಮಯವಾದುದನ್ನು ಮನಗಾಣಬಹುದು. ನಿರಕ್ಷರ, ಜನಪದ ಮಹಾಕವಿ, ಶ್ರೀಸಾವಳಿಗೇಶನು ಹಾಡಿದ ನೂರೊಂದು ಶಿವಶರಣರ ಹಂತಿಯ ಹಾಡುಗಳಲ್ಲಿ ಪ್ರಪಂಚದ ಅನುಭವ ರಸಾಯನವು ಸೂಸಾಡುತಿರುವುದು.

" ಹೊಲೆಯಲಲ್ಲದೆ ಲೋಕ ತಲೆಯಲ್ಲಿ ಹುಟ್ಟುವದೆ
ಹೊಲೆಯ ಎಣಿಸಿದರೆ ಕುಲವುಂಟೆ | ಶರಣರಿಗೆ
ಹೊಲಬಳಿದು ಬೇರೆ ಕುಲವುಂಟೆ ॥ ೨೫ ॥

—ಹರಳಯ್ಯನ ಹಾಡು.

ಗಂಡಭಕ್ತನು ಹಣತೆ ಹೆಂಡತಿಯು ಶಿವಬತ್ತಿ
ಉಂಡಬಾಳುವೆಯು ಹಣತೆಣ್ಣೆ | ಕಾಯಕವು
ಕಂಡ ಶಿವಬೆಳಕು ಜಗದೊಳಗೆ ॥ ೩೧ ॥

—ಮಾದರ ಚೆನ್ನಯ್ಯನ ಹಾಡು.

ಮುತ್ತೈದಿ ನಿನ ಮರಣ ಎತ್ತಹೋದರು ಪೂಜೆ
ಕತ್ತೂರಿ ನಾತವಿದ್ದಂತೆ। ಜಗದೊಳಗೆ
ಉತ್ತಮರ ಮನಕೆ ಕಾಯಕವು ॥ ೬೦ ॥

—ಮಡಿವಾಳ ಮಾಚಯ್ಯನ ಹಾಡು.

ಕಾಯಕವೆ ಕೈಲಾಸ ಮಾಯೆ ಕೊಲ್ಲುವ ಕೆಲಸ
ಆಯು ಬೆಳಿಸುದಕೆ ಸಾಹಸವು |ಜಗದೊಳಗೆ
ಹೇಯ ಸಂಸಾರ ನೀಗುದಕೆ ॥ ೩೩ ॥*

—ಹೂಗಾರ ಮಾದಯ್ಯನ ಹಾಡು.

ಇಲ್ಲಿ ಕುಲಹೊಲೆಗಳ ನೆಲೆಯ ತೂಕವಿದೆ; ಕಾಯಕದ ಮಹತಿಯೊಡನೆ ಜೀವನ ಸ್ವಾರಸ್ಯವಿದೆ; ಹೆಣ್ಣಿಗೆ ದಿವ್ಯತೆಯೊಡನೆ ಮುತ್ತೈದಿ ದಂಡೆಯ ಆಶೀರ್ವಾದವಿದೆ. ಹೀಗೆ ಅನುಭವವು ಪ್ರಪಂಚದಲ್ಲಿ ಬೆಂದಜೀವಿಗೆ ಅಮೃತವಾಗಿ ಉದ್ಧಾರಮಾಡಲು ನಿಂತಿದೆ.

ಮಾತಿಗೆ ಮಲಕಿಲ್ಲ ನೀತಿಗೆ ತೊಡಕಿಲ್ಲ
ಸಾಸಿಕಾಳಿಗೆ ಹುಳಕಿಲ್ಲ | ಅತ್ತಿಮನಿ
ಸೋಸಿ ನಡೆದರ ಅರಿಕಿಲ್ಲ ॥

ಕಾಣದ ಮಾತಿಗೆ ಖಂಡಗಂದರೇನ
ಬಂಡ ಮಾಡವರ ಗೊಡವೇನ । ತುಂಬಿದ
ಬಂಡಿ ನಡೆದ್ಹಂಗ ನಡೆದೇನ ॥

ತನ್ನಂತೆ ನೋಡಿದರ ಭಿನ್ನಭೇದವನಿಲ್ಲ
ತನ್ನ ಹೊಟ್ಟೆಯ ಸಿಸುವಂತೆ | ನೋಡಿದರ
ಕಣ್ಣಮುಂದೈತೆ ಕೈಲಾಸ ॥ —ಜನತಾಗೀತೆಗಳು—ಪು. ೫೩.

---

*' **ಶಿವಶರಣರ ಹಂತಿಯ ಹಾಡುಗಳು** ' ಸಂಗ್ರಾಹಕರು—ಡಾ. ಬಿ. ಎಸ್. ಗದ್ದಗಿಮಠ.

ಎಂಬ ತಿಳಿನುಡಿಗಳು ಬಾಳಿನಲ್ಲಿದ್ದು ಪ್ರಪಂಚವನ್ನು ಗೆದ್ದ ಅನುಭಾವಿಯ ಮಾರ್ಗದರ್ಶನವು. ಅದು ಎಲ್ಲರಿಗೂ ಬೇಕಾದುದು. ಪ್ರಪಂಚದಲ್ಲಿ ಇದನ್ನರಿತು ಕೊಂಡ ಗಂಡುಹೆಣ್ಣಿನ ಬಾಳು, ತುಂಬಿದ ಬಂಡಿ ನಡೆದಂತೆ! ಇಂತಹ ಬಾಳನ್ನುಂಡ ಹೆಣ್ಣು ತವರಮನೆಯನ್ನು ನೆನೆದರೂ ಗಂಡನಿಗೆ ನೆಮ್ಮದಿಯಾಗಿ ಹೋಗುವಳು. 'ತಾಯಿಗಿಂತ ಬಂಧುವಿಲ್ಲ' ಎಂಬ ನಾಣ್ಣುಡಿಯಿದ್ದರೂ ಹೆಣ್ಣಾಗಿ, ಹಣ್ಣಾಗಿ ಜೀವನ ಸಾಗಿಸುವ ಅವಳ ಹಾದಿ ಗಮನಾರ್ಹವಾದುದು. ಸಂಸಾರಬಂಧನದಲ್ಲಿ ಸಿಲುಕಿ ಚಿಂತೆಯಿಂದ ವ್ಯಾಕುಲವಾದ ಅವಳ ಮನಸ್ಸು ನಿಶ್ಚಿಂತವಾಗಲೂ ಹವಣಿಸಿದೆ.

ಚಿಂತಿ ಚಿಂತ್ಯಾಗ ಬಂದೆ ಚಿಂತ್ಯಾಗ ನಾನಿದ್ದೆ
ಚಿಂತ್ಯಾಗ ಕಳೆದೆ ಅನುಗಾಲ | ಶಿವರಾಯ
ನಿಶ್ಚಿಂತನಾದೆ ನಿನ ನೆನೆದು ||

ಎಂದು ಆ ಪರಮಾತ್ಮನನ್ನು ಸ್ಮರಿಸಿ ಮೋಕ್ಷಹೊಂದುವಳು.

ಕನ್ನಡ ಪ್ರಪಂಚ ಹುಟ್ಟಿದಂದಿನಿಂದ ಬಾಳಿನ ರಸವಿರಸಾದಿಗಳನ್ನೀಂಟಿದ ಹೆಣ್ಣು ಅವೆರಡರ ಸಮರಸವೇ ಜೀವನವೆಂದು ಅರಿತು, ಅನುಭವ-ಮಾರ್ಗದಲ್ಲಿ ತನ್ನ ಜೀವನವನ್ನು ಸಾರ್ಥಕಮಾಡಿಕೊಂಡಿದೆ. ಅದನ್ನು ತೀದುಂಡ ಹೆಣ್ಣು, ಅದರ ಮಹತಿಯನ್ನು ಮನಗಂಡು, ಪೀಳಿಗೆಯು ಉದ್ಧಾರವಾಗಲೆಂದು ಹಾಡಿ ಕನ್ನಡ ಪ್ರಪಂಚಕ್ಕೆ ಕಲ್ಯಾಣಮಾಡಿದೆ.

"ಗೆಳತೀ ಹನಿಗೂಡಿದರ್ಹಳ್ಳ || ಪ ||
ಹನಿಹನಿಗೂಡಿದರ್ಹಳ್ಳ ತೆನಿತೆನಿಗೂಡಿದರ ರಾಸಿ
ಮನಕ ಮನಗೂಡಿದರ ಮುನಿಮಾರ ಗೆಳತೀ || ಅ. ಪ ||

ಹರಿಯ ಹೊತ್ತಿಲೆದ್ದು ಅತ್ತಿಮಾವಗ ಶರಣ
ಮತ್ತೊಂದು ಶರಣ ಗುರುವೀಗೆ | ಗೆ | ನಾ ಮಾಡಿ
ಹೊಕ್ಕೀನಿ ಮುನಿಯ ದಗದಕ || ಗೆ || ೧ ||

ಕಲ್ಲೀಗಿ ಮುಕ್ಹಾಕಿ ಬಲ್ಲಿದನ ನೆನದೇವ
ಸೊಲ್ಲ ಕೇಳಾಕ ಶಿವಬಂದ | ಗೆ || ಮ್ಯಾಗಿರುವ
ಮುಕ್ಕಣ್ಣ ಮನಸನೋಡಾಕ ||ಗೆ || ೨ ||

ಸಂಸಾರವೆಂಬೂದು ಸಾಗರಹೊಳಿಯವ್ವ
ಈಸಬಲ್ಲವಗ ಎದೆಯುದ್ದ ||ಗೆ|| ಗಿಳಿರಾಮ
ಓದಬಲ್ಲವಗ ಕೈಲಾಸ|| ಗೆ || ೩ ||

ಸತಿಪತಿ ಇದ್ದರ ಹಿತವಂತರಿರಬೇಕ
ಕುಂಬಾರ್‍ನುಳದಂಗ ಸಂಸಾರ ||ಗೆ|| ಸಾಗಿದರ
ಮುಂದೈತಿ ತಂಗಿ ಕೈಲಾಸ || ಗೆ|| ೪ ||

ಹೆಣ್ಣೀನ ಈ ಜಲುಮ ಸಣ್ಣಮಾಡಲಿಬೇಕ
ಸುಣ್ಣರಳ ಮಾಡಿ ಸುಡಬೇಕ ॥ಗೆ॥ ಈ ಜನುಮ
ಮಣ್ಣಾಡಿ ಮರ್ತೆ ಗೆದಿಬೇಕ ॥ಗೆ॥೫॥

ಸಂಸಾರದಂದುಗ ಹಿಂಗದೊ ಶಿವರಾಯ
ಹಿಂಗುದಕ ಹಾದಿ ಶರಣರದ॥ಗೆ॥ ತಿಳಕೊಂಡು
ಗೆದಿಬೇಕ ಇದ್ದು ಸಂಸಾರ ॥ ಗೆ ॥೬॥ ”

ಜನತಾಗೀತೆಗಳು–ಪು. ೩೬

ಇದೇ ನಮ್ಮ ಪ್ರಪಂಚ ದರ್ಶನ. ಕನ್ನಡಿಗರು ಕಂಡುಂಡ ಬಾಳಿನ ತಿಳಿಬೆಳಕು. ಕುಟುಂಬ-ಸಮಾಜ-ರಾಷ್ಟ್ರಾದಿಗಳ ತಳಕಟ್ಟು! ಇದರಲ್ಲಿ ಕಂಡುಂಡ ಅನುಭವವು ಹೆಪ್ಪುಗಟ್ಟಿನಿಂತಿದೆ. ಇಂತಹ ಅನುಭವ ಪದ್ಯಗಳು ಇನ್ನಿತರ ಸಾಹಿತ್ಯದಲ್ಲಿ ವಿರಳವೆಂದೇ ಹೇಳಬಹುದು. ಹೀಗೆ ಅನುಭವಸಾಹಿತ್ಯವು ಜನಪದ ಸಾಹಿತ್ಯದಲ್ಲಿಯೂ ಹಾಸುಹೊಕ್ಕಾಗಿ ಮನೆಮಾತಾಗಿದೆ. ಆದುದರಿಂದ ಸಮಯ ಬಂದಾಗ, ಹಳ್ಳಿಯ ಹೆಣ್ಣು ಮಾತಿಗೊಂದು ಅನುಭವ ನುಡಿದು ಮಾತಿನ ಮೇಲ್ಮೆಯನ್ನು ತೋರಿಸುವಳಲ್ಲದೆ, ತಾನು ನಡೆದು ಬಂದ ಅನುಭಪರಂಪರೆಯನ್ನೂ ವಿಶದಗೊಳಿಸದಿರಳು.

ಅನುಭವ-ಪದಗಳ ಛಂದಬಂಧ :—ಕನ್ನಡ ಅನುಭವ ಪದಗಳು ಕನ್ನಡ ಅನುಭಾವಿಗಳ ಹಾಡು (ಭಾವಗೀತೆ) ಗಳು. ಅವೆಲ್ಲವುಗಳೂ ಕರ್ನಾಟಕ ವಿಷಯ ಜಾತಿಯ ಮಟ್ಟುಗಳ ಅಚ್ಚಗನ್ನಡ ಛಂದದಲ್ಲಿಯೇ ಬಂದಿವೆ. ಇದೇ ಕನ್ನಡ ಅಂಶಬಂಧ. ಈ ಮಟ್ಟುಗಳು ಕರ್ನಾಟಕಕ್ಕೆ ವಿಶಿಷ್ಟವಾದುವುಗಳೆಂದು ಲಾಕ್ಷಣಿಕರು ಒಪ್ಪಿಕೊಂಡಿದ್ದಾರೆ. ಏಳೆ, ತ್ರಿಪದಿ, ಚೌಪದಿ, ಷಟ್ಪದಿ, ಅಕ್ಕರ, ಉತ್ಸಾಹ ಮೊದಲಾದ ಹತ್ತು ಜಾತಿಗಳನ್ನು ನಾಗವರ್ಮನು ತನ್ನ ಛಂದೋಂಬುಧಿಯ ಪಂಚಮಾಶ್ವಾಸದಲ್ಲಿ ಹೇಳಿದ್ದಾನೆ. ಇವೆಲ್ಲವುಗಳಿಗೆ ಮೂಲವು **ತ್ರಿಪದಿ**. ಕನ್ನಡ ಛಂದದಲ್ಲಿ ತ್ರಿಪದಿಯು ಹಿಗ್ಗಿ, ಹರವಿ, ಅನೇಕ ರೂಪತಾಳಿದೆ. ಆದುದರಿಂದ ಅದರ ಮಟ್ಟು ಬಹಳ ಮಹತ್ವದುದಾಗಿದೆ.

ತ್ರಿಪದಿಯು ಕನ್ನಡ ಛಂದಸ್ಸಿಗೆ ಓಂಕಾರ! ಜನಪದ ಸಾಹಿತ್ಯದ ಬೀಸುವ ಹಾಡಿನಿಂದ ಕನ್ನಡ ವರ್ಣಕಗಳಲ್ಲಿ ನೀನಾದವಾಗಿ ಝೇಂಕರಿಸುವ ಷಟ್ಪದಿಯವರೆಗೆ, ಎಲ್ಲ ಛಂದಗಳಿಗೂ ತ್ರಿಪದಿಯೇ ತಳಹದಿ. ತ್ರಿಪದಿಯಿಂದ ಸಾಂಗತ್ಯ, ಪಿರಿಯಕ್ಕರ, ಮೂಲಷಟ್ಪದಿ, ಮಾತ್ರಾಗಣ ಷಟ್ಪದಿ, ಸೀಸ ಮೊದಲಾದ ಮಟ್ಟುಗಳು ಕನ್ನಡ ಅನುಭವ ಸಾಹಿತ್ಯದ ಒಳನಾಡಿಯಾಗಿ ಆ ಕಾವ್ಯಪ್ರಪಂಚದ ತುಂಬೆಲ್ಲ ಹರಿದಾಡಿವೆ. ಈ ಎಲ್ಲ ವೃತ್ತಗಳು ಹಾಡು (ಭಾವಗೀತೆ) ಗಳಿಗೆ ಒಪ್ಪುವ ಛಂದೋಬಂಧಗಳಾಗಿರುವುದರಿಂದ ಶಿವಶರಣರು ಕ್ರಿ.ಶ. ೧೨ ನೆಯ ಶತಮಾನದಿಂದ ಇವುಗಳನ್ನು ತಮ್ಮ ಅನುಭವವನ್ನು ಹಾಡಲು ಬಳಸಿಕೊಂಡಿದ್ದಾರೆ.

ತ್ರಿಪದಿಯು ಕನ್ನಡಜನಾಂಗದ ಕಂಠಸ್ವರವಾಗಿ ಹುಟ್ಟಿ ಕನ್ನಡ ಜನಪದ ಕಾವ್ಯದ ಜೀವಾಳವಾಗಿ ಕಲ್ಬರೆಹಗಳಲ್ಲಿಯೂ ಕಾಣಿಸಿಕೊಂಡಿದೆ. (ಕಪ್ಪೆಯ ಅರಭಟ್ಟನ, ಬಾದಾಮಿಯ ಶಿಲಾಶಾಸನ. ಕ್ರಿ.ಶ.ಸು. ೭೦೦) ಹೀಗೆ ಅಂಶಗಣ ಬಂಧದಲ್ಲಿ ಬಂದ ತ್ರಿಪದಿಯು ಕವಿ ಪಂಪ-ಪೊನ್ನ ಮೊಲಾದ ಕವಿಗಳ ಕಾವ್ಯಗಳಲ್ಲಿ, ಒಡೆದು ಕಾಣುವ ಹೆಚ್ಚುಕಡಮೆಗಳಿಲ್ಲದೆ ಕಾಣಿಸಿಕೊಳ್ಳುತ್ತದೆ. ಈ ಅಂಶಗಣವು ಮುಂದೆ ಎಣಿಕೆಯಾಗಿ ಮಾತ್ರಾಗಣಕ್ಕೆ ತಿರುಗಲು ಮೊದಲು ಮಾಡಿದುದು, ಕ್ರಿ.ಶ. ೧೨ ನೆಯ ಶತಮಾನದಲ್ಲಿ, ಬಸವಾದಿ ಪ್ರಮಥರ ಜಾಗ್ರತ ಕಾಲದಲ್ಲಿ! ಇದನ್ನು ನಾವು ಮಹಾದೇವಿಯಕ್ಕನ 'ಯೋಗಾಂಗತ್ರಿಪದಿ'ಯಲ್ಲಿಯೂ ಕಾಣಬಹುದಾಗಿದೆ. ಕ್ರಿ.ಶ. ೧೫ ನೆಯ ಶತಮಾನದಲ್ಲಿ ತ್ರಿಪದಿಯು ಸಂಪೂರ್ಣ ಮಾತ್ರಾಗಣಕ್ಕಿಳಿದು ನಿಜಗುಣಶಿವಯೋಗಿಗಳ '**ಅನುಭವಸಾರ**'ದಲ್ಲಿಯೂ '**ಪುರಾತನರ ತ್ರಿಪದಿ**'ಯಲ್ಲಿಯೂ ತುಂಬಿ ಬಂದಿದೆ. ಸರ್ವಜ್ಞನ ವಚನಗಳಲ್ಲಿ ಅದು ಜನಪ್ರೀತವಾಗಿ, ಲೋಕಸಾಹಿತ್ಯದ ಜೀವಾಳವಾಗಿ ಲೋಕಪ್ರಿಯವಾಯಿತು. ಇಂದು ಉಪಲಬ್ಧವಿರುವ ಜನಪದಸಾಹಿತ್ಯವು ನೂರಕ್ಕೆ ತೊಂಬತ್ತರಷ್ಟು ತ್ರಿಪದಿಯಲ್ಲಿಯೇ ಇದೆ.

ಮಂಗಲದ ಮುನ್ನೋಟ :—ಅನುಭವ ಸಾಹಿತ್ಯದಲ್ಲಿ ಪಲ್ಲವಿಯಿಲ್ಲದ ಹಾಡುಗಳೇ ಇಲ್ಲ. ಅದು ಬಿಡಿ ಹಾಡುಗಳ ರಾಶಿರಾಶಿ. ಹಾಡುಗಬ್ಬದಲ್ಲಿ ಸೊಲ್ಲಿಗೆ ಸಲಿಗೆ, ರಾಗಕ್ಕೆ ಪ್ರಾಧಾನ್ಯವಿದ್ದರೆ ಅನುಭವ ಸಾಹಿತ್ಯದಲ್ಲಿ ಹಾಡಿಗೆ ಪಲ್ಲವಿಯು ಮಂಗಲ ತಿಲಕ! ಅದು ಪ್ರತಿ ಹಾಡಿನಲ್ಲಿಯೂ ಔಚಿತ್ಯ ಪೂರಕವಾಗಿ ಸಂದರ್ಭಕ್ಕೆ ವೈವಿಧ್ಯವಾಗಿ ಬೆರತುಕೊಳ್ಳುವುದು. ಮಾನವನ ಸಕಲ ಭಾವಗಳಲ್ಲಿ ಅನುಭವವು ಒಡಮೂಡುವುದರಿಂದ ಅನುಭವಸಾಹಿತ್ಯವು ಮನಶ್ಶಾಸ್ತ್ರದ ಮನೋವಿಲಾಸ! ಅದರಲ್ಲಿ ದೇವಮಾನವ ಸಮರಸ ಚಮತ್ಕಾರದ ಮನೋವ್ಯಾಪಾರದ ಪರಿಜ್ಞಾನವನ್ನು ತುಂಬ ಕಾಣಬಹುದು. ಅದು ಸಾಹಿತ್ಯಕನಿಗೆ ಕಾವ್ಯವಿಲಾಸವಾದರೆ, ತತ್ವಜ್ಞಾನಿಗೆ ಜ್ಞಾನಪ್ರಕಾಶ; ಶಾಸ್ತ್ರಜ್ಞನಿಗೆ ವಿವಿಧ ಶಾಸ್ತ್ರಗಳ ತರ್ಕ ಪ್ರಪಂಚ; ಸಮಯವಾದಿಗಳಿಗೆ ಸಕಲಸಮಯಾದಿಗಳ ಸತ್ವಸಾರ; ಸಾಮಾನ್ಯರಿಗೆ ಕರುಣಾಳು ಬೆಳಕು. ಆದುದರಿಂದ ಅದು ಎಲ್ಲರಿಗೂ ಬೇಕಾದ ಸಾಹಿತ್ಯವಾಗಿದೆ.*

—ಶುಭಂ ಮಂಗಲಂ—

—ಡಾ॥ ಬಿ. ಎಸ್. ಎಸ್. ಗದ್ದಗಿಮಠ

---

* ಈ ಲೇಖನದ ಲೇಖಕರು ಮೊನ್ನೆ ತಾನೆ ಶಿವೈಕ್ಯರಾದರು, ಎಂದು ತಿಳಿದು ಅತೀವ ದುಃಖವಾಯಿತು. ಅವರ ಈ ಲೇಖನವನ್ನು ಚಾಚೂ ತಪ್ಪಿಲ್ಲದಂತೆ ಅಚ್ಚುಹಾಕಿಸಿ ಪ್ರಕಟಿಸುವ ಕರ್ತವ್ಯ ಮಾಡುವ ಮೂಲಕ ನಾವು ದಿವಂಗತರಿಗೆ ನಮ್ಮ ಪ್ರೀತಿಗೌರವವನ್ನು ವ್ಯಕ್ತಪಡಿಸುತ್ತೇವೆ; ಅವರ ಆತ್ಮಕ್ಕೆ ಶಾಂತಿ ದೊರೆಯಲೆಂದು ಪ್ರಾರ್ಥಿಸುತ್ತೇವೆ; ಅವರ ಬಂಧುಗಳ ದುಃಖದಲ್ಲಿ ಸಹಭಾಗಿಗಳಾಗುತ್ತೇವೆ–ಸಂ.

ಮರಳಿ ಬಂದೀತೆ....?

“ ಸಂತ ಮಹಂತ ಮಹಾತ್ಮರ ನಾಡು
ಇದು ಸ್ವಾತಂತ್ರ್ಯದ ಬೀಡು, ಭಾರತ ನಾಡು ”
ಇರಬಹುದು ಇರಬಹುದು
ನೀವು ಸುಳ್ಳುಹೇಳುವಿರೇನು ? !
ಉತ್ತರದ ಹಿಮಗಾಳಿ ಹೊಡೆತಕ್ಕೆ
ಎದೆಗೊಟ್ಟ ಹಿಮಾಚಲ,
ಹುಟ್ಟಿ ಹರಿದಿದ್ದಲ್ಲಿಂದ
ಗಂಗಾ, ಸಿಂಧೂ, ಬ್ರಹ್ಮಪುತ್ರ.

ಫಲವತ್ತು ಉತ್ತರದ ಉತ್ತಮದ ಭೂಮಿ
ಕೊಚ್ಚಿಹೋದದೆಷ್ಟೊ ಮನೆಮಠವಾರು ? !
“ ಇಳಿದು ಬಾ ತಾಯಿ, ಇಳಿದು ಬಾ ತಾಯಿ ”
ಎಂದು ಕರೆದಾಗ ಬಂದದ್ದು ಮೂರೆ ಬಾರಿ
ಬಳಿಕೆಲ್ಲೋ ಸವಾರಿ ?

ಬಂದಾನೊ ಬಾರಾನೋ ಎಂದು
ನೊಂದು ನುಡಿದಿತ್ತಂದು ಜನ ಶಬರಿ-
ಬಂದೇ ಬಂದ, ನಂಜುಂಡ,

ನುಡಿದಂತೆ ನಡೆದು ಮರೆಯಾದ;
ಚಂದ್ರಮೋಹಕೆ ಕಡಲನೀರೆಯ ಏರು
ತುಪಾನು ಬೀಸಿ ಅಪ್ಪಳಿಸಿತ್ತು
ಸಪ್ಪೆಯೂರೆಲ್ಲ ಉಪ್ಪುಪ್ಪು.

ದಂಡಪಿಡಿದಿದ್ದ, ತುಂಡುವಸ್ತ್ರದ ಗಂಡು
ಜಗಕೆ ಉತ್ತರಿಸಿದ್ದ, ಜನವ ಉದ್ಧರಿಸಿದ್ದ
ಉತ್ತರದ ಎಡೆಯಿಂದ.

ಹೆಜ್ಜೆಗುರುತೆಲ್ಲೆಲ್ಲೋ,
ಕತ್ತಲಲಿ ಕಾಣುವುದೆ ನೆರಳು ?
ಅಡವಿಯರಮನೆಯಿಂದ ಹೊರಬಂದ
ಕಾಜಾಣ ಕೋಗಿಲೆಗಳಂದದಲಿ ಸ್ವಚ್ಛಂದ,
ಸ್ವಾತಂತ್ರ್ಯ ಘೋಷಿಸುತೆ ತಂದ ಆನಂದ.

ಅಹುದಹುದು,
"ಜಗವೆಲ್ಲ ಮಲಗಿರಲು ಇವನೊಬ್ಬನೆದ್ದ"
ಎಡಮಗ್ಗುಲಲೆ ಎದ್ದಿರಬೇಕು ಇವ,
ಮುಗ್ಗರಿಸಿ ಬಿದ್ದ,
ಕಾಲಲ್ಲೆ ಧರಿಸಿದ್ದ ಕೆರ, ಹರಿದು ಕೈಕೊಟ್ಟಿತ್ತು !
ಬರಿಗಾಲಲಿ ನಡೆವಾಗ, ಹೆಜ್ಜೆಹೆಜ್ಜೆಗೆ
ಮುಳ್ಳಿನೊತ್ತಿಗೆ ಸುಸ್ತು !
ನಿಲ್ಲುವಂತೆಯೆ ಇಲ್ಲ, ಕಟ್ಟಿರುವೆ ಸಾಲು.

ಚಿಟ್ಟೆಗಳ ಹಾರಾಟ ಮಳೆ ನಿಂತಮೇಲೆ,
ಅಹಾ ! ಎಂತಿಹುದು ವಿಜಯದಶಮಿಯಲೀಲೆ !
ಕಕ್ಕಡವ ಹಚ್ಚಿ ದೆವ್ವಬಿಡಿಸಿದ ಹಾಗೆ.
ಊರಹೊರಗಿನ ಮಾರಿ, ಅದಕೆ ಬಲಿಕೊಡಬೇಕು,
ಕೋಳಿಮೇಣೆಯನೇಕೆ ಮುರಿವೆಯಣ್ಣಾ ?
ಕ್ಕೊಕ್ಕೋ ಎಂದು ಹುಂಜ,
ಕತ್ತಲೆಯ ಹಿಂಜಿತ್ತು,
"ಧಿಯೋ ಯೋ ನಃ ಪ್ರಚೋದಯಾತ್"
ಪ್ರಾರ್ಥನೆಯ ದನಿಮೂರು
ಮಾರ್ದನಿಯೆ ಇಲ್ಲ ಎಲ್ಲೆಲ್ಲು !
ನಿದ್ದೆಗಣ್ಣಲ್ಲಿ ಅಲ್ಲಲ್ಲಿ,
ಕನವರಿಸುತಿದ್ದ ಸೋಲಿನಸೊಲ್ಲು,
ಇಲ್ಲ, ಇಲ್ಲ, ಎಚ್ಚರವೆ ನನಗಂತು,
ಉರಿಬಿಸಿಲೆ ನನ್ನ ಎಚ್ಚರದ ವೇಳೆ,
ಅಷ್ಟುಹೊತ್ತಿಗೆ ರೈಲುದಾಟಿತ್ತು ಆಚೆ,
ಕಂಬಿ ಏನೋ ಇತ್ತು ಸತ್ತಂತೆ ಹೊತ್ತು.
ಕಾಯಲೇಬೇಕು ರೈಲು ಮರಳುವವರೆಗೆ
ನಿದ್ದೆಗೆಟ್ಟಾದರೂ ಸರಿಯೆ, ನಾಳೆಯವರೆಗೆ,
ಹತ್ತಿಹೊರಡಲೆಬೇಕು, ಮತ್ತಿಲ್ಲ ಬೇರೆ.

—ಕೋಣಂದೂರು ಲಿಂಗಪ್ಪ

ಮೌಲ್ಯಮಾಲಿಕೆ

ಪುರಾ ಕವೀನಾಂ ಗಣನಾಪ್ರಸಂಗೇ
ಕನಿಷ್ಠಿಕಾಧಿಷ್ಠಿತ ಕಾಲಿದಾಸಾ |
ಅದ್ಯಾಪಿ ತತ್ತುಲ್ಯಕವೇರಭಾವಾ-
ದನಾಮಿಕಾ ಸಾರ್ಥವತೀ ಬಭೂವ ||

—ಹರಿಹಾರಾವಳಿ

ಕಾಲಿದಾಸಗಿರಾಂ ಸಾರಂ ಕಾಲಿದಾಸಸ್ಸರಸ್ವತೀ
ಚತುರ್ಮುಖೋಽಥವಾ ಸಾಕ್ಷಾದ್ವಿದುರ್ನಾನ್ಯೇ ತು ಮಾದೃಶಾಃ ||

—ಮಲ್ಲಿನಾಥ

ಕಾಳಿದಾಸಕವಿತಾ ನವಂ ವಯೋ ಮಾಹಿಷಂ ದಧಿ ಶರ್ಕರಂ ಪಯಃ ।
ಶಾರದೇಂದುರಬಲಾ ಚ ಕೋಮಲಾ ಸ್ವರ್ಗಸೌಖ್ಯಮುಪಭುಂಜತೇ ನರಾಃ ॥

—ಶಾರ್ಙ್ಗಧರ ಪದ್ಧತಿ

'ಕವಿಕುಲಗುರುಃ ಕಾಲಿದಾಸೋ ವಿಲಾಸಃ'
'ಉಪಮಾ ಕಾಲಿದಾಸಸ್ಯ'
'ಕಾಲಿದಾಸಸ್ಯ ಸರ್ವಸ್ವಮಭಿಜ್ಞಾನ ಶಕುಂತಲಂ'

ಸುಕವಿಜನಗಣನೆಯೊಳ್‌ದ
ತ್ತಕನಿಷ್ಠಿಕನಾಗೆ ಕಾಳಿದಾಸಂ ಮೊದಲೆಂ-|
ದು ಕರಂ ಬಣ್ಣಿಪರದಱಿಂ-
ದೆ ಕಾಳಿದಾಸಂಗೆ ದಾಸರೆನಿಪರ್ ಕವಿಗಳ್ ॥

—ರುದ್ರಭಟ್ಟ

ಆಹಂ ವಿರಿಂಚಿಜಾಯೆ ಕವಿ ದಂಡಿ ಗಡಾನುಸುರಾರೆನಲ್ ತ್ವಮೇ-
ವಾಹಮಸಂಶಯಂ ದಲೆನುತುಂ ನುಡಿದಳ್ಗಡ ವಾಣಿಯೆಂದೆನ-
ಲ್ಕೂಹಿಸಲಪ್ಪುದೇನವನ ವಾಕ್ಪರಿಪಾಟಿಯದಾರ ಸಾಟಿ ಪುಂ-
ದೇಹದ ವಾಣಿಯಂ ನುತಿಸದಿರ್ಪರದಾರ್ ಕವಿಕಾಳಿದಾಸನಂ ॥

—ಬಸವಪ್ಪಶಾಸ್ತ್ರಿ

"ಕಾಳಿದಾಸನು ಸುಪ್ರಸಿದ್ಧನಾದ ಸಂಸ್ಕೃತಕವಿ; ಭಾರತೀಯ ಕವಿಗಳಲ್ಲಿ ಅಗ್ರಪಂಕ್ತಿಗೆ ಸೇರಿರತಕ್ಕವನು .... ಕಾಳಿದಾಸನು ಶ್ಲೇಷಯಮಕಾನುಪ್ರಾಸಗಳನ್ನಿಟ್ಟು ಪಂಡಿತ ಪ್ರೀತಿಯಾಗುವಂತೆ ಬರೆಯಬಲ್ಲನು ; ಆದರೆ ಅದರ ಮೇಲೆ ಅವನಿಗೆ ಮೋಹವಿಲ್ಲ. ಸಹಜವಾಗಿ, ಸರಳಸುಂದರವಾಗಿ ಬರೆಯುವುದರಲ್ಲಿ ಕಾಳಿದಾಸನು ಎತ್ತಿದ ಕೈ. ಅವನು ಎಷ್ಟು ಸರಳವಾಗಿ ಬರೆಯುತ್ತಾನೆಂದರೆ, ಇಂದಿಗೂ ಅವನ 'ರಘುವಂಶ' ವನ್ನು ಬಾಲಪಾಠವಾಗಿ ಹೇಳಿಕೊಡುತ್ತಾರೆ—ಮಕ್ಕಳಿಗೆ ಹಸುವಿನ ಹಾಲನ್ನು ಕುಡಿಸುವಂತೆ. ಸರಳವಾದದ್ದಕ್ಕೂ ಸುಲಭವಾದದ್ದಕ್ಕೂ ಎಲ್ಲರಿಂದಲೂ ಯಾವಾಗಲೂ ಗೌರವ ಸಲ್ಲುವುದಿಲ್ಲ—ಮೋದಕಪ್ರಿಯನು ಮೆಚ್ಚದಿದ್ದ ಮಾತ್ರಕ್ಕೆ

ಹಾಲಿಗೂ ಹಸುವಿಗೂ ಬೆಲೆ ಕಡಮೆಯಾದೀತೆ? ಹಾಲು ಬಾಲರಿಗೂ ಬೇಕು, ವೃದ್ಧರಿಗೂ ಬೇಕು. ಭಾರತೀಯ ಶ್ರೇಷ್ಠ ಕವಿಯಾದ—ಅಥವಾ ಕೆಲವೇ ಶ್ರೇಷ್ಠ ಕವಿಗಳಲ್ಲಿ ಒಬ್ಬನಾದ — ಶ್ರೇಷ್ಠ ವಿಶ್ವಕವಿಗಳ ಪಂಕ್ತಿಯಲ್ಲಿ ಗಣ್ಯನಾಗಿರುವ ಕಾಳಿದಾಸನ ಕಾವ್ಯಗಳನ್ನು ಪರಿಚಯ ಮಾಡಿಕೊಳ್ಳದಿರುವ ಭಾರತೀಯನು ವಿದ್ವಾಂಸನೆನ್ನಿಸಿಕೊಳ್ಳಲಾರನು."೧

"ಮರ್ತ್ಯದಲ್ಲಿ ಅಮರ್ತ್ಯವನ್ನು ಸವಿದ ಪ್ರತಿಭೆ ಕಾಳಿದಾಸನದು.

ಕಾಳಿದಾಸನ ಜೀವನ ಕಾಲಗಳ ವಿಷಯವಾಗಿ ಜಿಜ್ಞಾಸೆ ನಡೆದಿದೆ, ನಡೆಯುತ್ತಿದೆ. ಕೆಲವರು ವಿದ್ವಾಂಸರು ಅವನು ಜನ್ಮದಿಂದ ಬ್ರಾಹ್ಮಣನಾಗಿದ್ದು ಅನಾಥನಾದುದರಿಂದ ಗೊಲ್ಲರೊಡನೆ ಬೆಳೆದು ಬಂದನೆಂದೂ ಮತ್ತೆ ಕೆಲವರು ಅವನು ಹುಟ್ಟಿನಿಂದಲೇ ಕುರುಬನೆಂದೂ ಅಭಿಪ್ರಾಯಪಡುತ್ತಾರೆ. ಇಂತಹ ಸಂದರ್ಭಗಳಲ್ಲಿ ಆಧಾರಗಳು ಖಚಿತವಾಗಿ ದೊರೆಯುವವರೆಗೆ ಸ್ವಾರ್ಥ ಮೂಲವಾದ ಅಭಿಸಂಧಿಯಿಂದ ಹೀಗೆಯೆ ಇರಬೇಕೆಂದು ನಿರ್ಣಯಿಸುವುದು ಉಚಿತವಾಗಿ ತೋರುವುದಿಲ್ಲ. ಒಮ್ಮೊಮ್ಮೆ ಜನಜನಿತವಾದ ಕಥೆಯಲ್ಲಿ ಹೆಚ್ಚು ಸತ್ಯಾಂಶ ಪ್ರಕಟವಾಗುವುದುಂಟು. ಕುರುಬನಾದ ಮಾತ್ರಕ್ಕೆ ಕಾಳಿದಾಸ ಪ್ರತಿಭಾಶಾಲಿಯಾದ ಮಹಾಕವಿಯಾಗಲಾರನೆಂದು ಹೇಳಲಾದೀತೆ? ಭಗವಂತನ ಶಕ್ತಿ ಎಲ್ಲಿ ಬೇಕಾದರೂ ಯಾವ ರೂಪದಲ್ಲಿಯಾದರೂ ಮೈದೋರಬಹುದು. ಅಲ್ಲದೆ ಕವಿ ಕವಿಯಾಗಿರುವುದು ಅವನ ಜಾತಿಯಿಂದಲ್ಲ. ಅದನ್ನು ಕಟ್ಟಿಕೊಂಡೇನಾಗಬೇಕು ಸಹೃದಯರಿಗೆ?

ಭೋಗ ಪ್ರಧಾನವಾದ ಶ್ರೀಮಂತಕಾಲದಲ್ಲಿ ಬದುಕಿ ಬಾಳಿದವನು ಕಾಳಿದಾಸ. ಋತುಸಂಹಾರ, ಮಾಲವಿಕಾಗ್ನಿಮಿತ್ರ, ವಿಕ್ರಮೋರ್ವಶೀಯ, ಕುಮಾರ ಸಂಭವ, ಶಾಕುಂತಲ, ಮೇಘದೂತ, ರಘುವಂಶ ಇವೇ ನಮಗೆ ದೊರಕಿರುವ ಅವನ ಕೃತಿಗಳು. ಕವಿಯ ಪ್ರತಿಭೆ ಉನ್ಮೀಲನವಾಗುತ್ತಿರುವಾಗಲೆ ಮೂಡಿಬಂದ ಮೊದಲ ಕೃತಿ ಋತುಸಂಹಾರ. ಪ್ರಕೃತಿಯ ಬಹು ಮುಖ ಸೌಂದರ್ಯ ವಿಲಾಸಗಳು ಮಾನವೀಯತೆಯಿಂದ ಸ್ಪಂದಿಸುವ ಚಿತ್ರಮಯ ಲೋಕವನ್ನು ಋತುಸಂಹಾರದಲ್ಲಿ ಚಿತ್ರಿಸಿದ್ದಾನೆ ಕವಿ. ಈ ಕೃತಿಯಲ್ಲಿ ಕೆಲವು ಕಡೆ ಭಾವ ರಸತ್ವಕ್ಕೇರದಿರುವುದರಿಂದ ರಸಾನುಭವಕ್ಕೆ ಬದಲಾಗಿ ಭಾವೋದ್ರೇಕವಾಗುವುದುಂಟು. ಆದರೂ ಈ ಪ್ರಥಮ ಕೃತಿಯಲ್ಲಿ ಕವಿಯ ರಚನಾಕೌಶಲವನ್ನೂ ಸುಮನೋಹರ ಕಲ್ಪನಾಮಾಧುರ್ಯವನ್ನೂ ನಾದಮಯ ಸುಲಲಿತಶೈಲಿಯನ್ನೂ ಕಾಣುತ್ತೇವೆ. ಮಾಲವಿಕಾಗ್ನಿಮಿತ್ರ ವಿಕ್ರಮೋರ್ವಶೀಯಗಳಲ್ಲಿ ಪ್ರಯೋಗಗಳನ್ನು ನಡೆಸಿ ಪುಷ್ಟಿಗೊಂಡ ಪ್ರತಿಭೆ ಶಾಕುಂತಲದಲ್ಲಿ ಮುಗಿಲು ಮುಟ್ಟಿದೆ. 'ಶಾಕುಂತಲ' ಭಾರತೀಯರನ್ನು ಮಾತ್ರ

೧ ಶ್ರೀ ಎ. ಆರ್. ಕೃಷ್ಣಶಾಸ್ತ್ರಿ—ಎಸ್. ವಿ. ಪರಮೇಶ್ವರಭಟ್ಟರ 'ಕನ್ನಡ ರಘುವಂಶ'ದ ಮುನ್ನುಡಿಯಲ್ಲಿ.

ವಲ್ಲದೆ ಜಗತ್ತಿನ ಸಾಹಿತ್ಯಾರಾಧಕರನ್ನೂ ರಸಾವೇಶಗೊಳಿಸಿದೆ. ಮೇಘದೂತದಂತಹ ರಮಣೀಯ ಕಾವ್ಯದಲ್ಲಿ ಅತಿ ನೂತನವಾದ ವಸ್ತುವನ್ನು ಅಳವಡಿಸಿಕೊಂಡು ಶೃಂಗಾರಗೋಪುರವನ್ನೆ ಬೆಳ್ಮುಗಿಲ ಬಾನಿನಲ್ಲಿ ತೇಲಿಬಿಟ್ಟಿದ್ದಾನೆ ಕವಿ. ಕುಮಾರಸಂಭವ ಕಾವ್ಯದಲ್ಲಿಯೂ ರಘುವಂಶ ಮಹಾಕಾವ್ಯದಲ್ಲಿಯೂ ಕವಿಯ ಕಾವ್ಯಯೋಗ ಆತ್ಮಸಾಧನೆಯಾಗಿಯೂ ಪರಿಣಮಿಸಿರುವುದನ್ನು ಕಾಣಬಹುದು.

ಸುಮಧುರ ಕಾವ್ಯಮಧುವಿನಿಂದ ಸಹೃದಯರನ್ನು ರಸತೃಪ್ತಿಪಡಿಸುವ ವಿಶೇಷ ಶಕ್ತಿ ಕಾಳಿದಾಸನದು. ಅವನ ಕಾವ್ಯಗಳ ಕಲ್ಪನಾ ವಿಲಾಸಕ್ಕೂ ನಾದ ಮಾಧುರ್ಯಕ್ಕೂ ಮೋಹಿತರಾಗದವರು ಅಪೂರ್ವ. ತನ್ನ ಹಿತಮಿತ ವಚನಗಳಿಂದಲೂ ಸುಂದರ ಉಪಮೆಗಳಿಂದಲೂ ಲೋಕಪ್ರಿಯನಾಗಿದ್ದಾನೆ, ಕವಿಕುಲಗುರುವಾಗಿದ್ದಾನೆ. ಇಂತಹ ಕವಿ ಭಾರತೀಯ ಸಂಸ್ಕೃತಿ ಇರುವವರೆಗೆ, ಭಾರತೀಯ ಜನರಿರುವವರೆಗೆ, ಅಷ್ಟೇ ಏಕೆ, ಜಗತ್ತಿನ ಸಾಹಿತ್ಯ ಸಂಸ್ಕೃತಿಗಳಿರುವವರೆಗೆ ಚಿರ ನೂತನವಾಗಿ ಬಾಳುವುದರಲ್ಲಿ ಸಂಶಯವಿಲ್ಲ.

ಸಂಸ್ಕೃತ ಸಾಹಿತ್ಯದ ಮೂರನೆಯ ಘಟ್ಟ ಕಾವ್ಯಯುಗ. ಆ ಯುಗದ ಅಧಿಷ್ಠಾತೃ ರಾಷ್ಟ್ರಕವಿ ಕಾಳಿದಾಸ....ಮುಗಿಲೆತ್ತರವನ್ನು ಮುಟ್ಟಿರುವ ಈತನ ಕಾವ್ಯಶಕ್ತಿ ಮೂರು ನಾಟಕಗಳನ್ನೂ ನಾಲ್ಕು ಕಾವ್ಯಗಳನ್ನೂ ಜಗತ್ತಿಗೆ ನೀಡಿ ಕೃತಕೃತ್ಯವಾಗಿದೆ.

ಸಂಸ್ಕೃತ ಸಾಹಿತ್ಯ ಶೈಲದ ಗೌರೀಶಂಕರದಂತಿರುವ ಕಾಳಿದಾಸನಿಗೆ ಹೊಯ್‌ಕಯ್ಯಾಗಿ ನಿಲ್ಲಬಲ್ಲ ಮತ್ತೊಬ್ಬ ಸಂಸ್ಕೃತ ಕವಿಯಿಲ್ಲ."೨

"ಕಾಳಿದಾಸನ ಪ್ರತಿಭೆ ದುಷ್ಯಂತನು ಬೆನ್ನಟ್ಟಿದ ಸಾರಂಗದಂತೆ 'ವಿಯತಿ ಬಹುತರಂ ಸ್ತೋಕಮುರ್ವ್ಯಾಂ ಪ್ರಯಾತಿ' ಮರ್ತ್ಯದಲ್ಲಿ ಜನ್ಮವೆತ್ತಿ ಮೃತ್ ಭಾರದಿಂದ ಜಗ್ಗುತ್ತಿರುವ ಅದಕ್ಕೆ ಉರ್ವೀತಲವೇನೊ ಬೇಕು, ವಿಯತ್ತಲ ವಿಹಾರಕ್ಕಾಗಿ. ಬಹುಪಾಲಿನ ವಿಯತ್ ಸಂಚಾರಕ್ಕಾಗಿ ಇನಿತಿನಿತೆ ಮೃತ್‌ಸ್ಪರ್ಶ. ಅದು ಯಾವ ಒಂದು ಲೋಕದಲ್ಲಿಯೂ ಪಟ್ಟುಹಿಡಿದು ವ್ಯವಹರಿಸುವುದಿಲ್ಲ. ಕಾಳಿದಾಸನ ಪ್ರತಿಭೆ ಬಹುಲೋಕವ್ಯವಹಾರಿ; ಬಹು ಭೂಮಿಕಾಸಂಚಾರಿ; ವಿಧೇಯನಾದ ಪ್ರತೀಹಾರಿಯಂತೆಯೂ ಸಮರ್ಥನಾದ ರಾಯಭಾರಿಯಂತೆಯೂ ಕವಿಯ ವಿರಾಡ್ ದರ್ಶನಕ್ಕೆ ಅದು ಸೇವೆ ಸಲ್ಲಿಸುತ್ತದೆ."೩

"ವಿಶ್ವಕವಿಗಳ ವಿರಳಪಂಕ್ತಿಯಲ್ಲಿ ಕಾಳಿದಾಸನಿಗೆ ಭದ್ರವಾದ ಸ್ಥಾನವನ್ನು ಗಳಿಸಿಕೊಟ್ಟಿರುವ ಕೃತಿ 'ಅಭಿಜ್ಞಾನ ಶಾಕುಂತಲ'. 'ಕಾವ್ಯೇಷು ನಾಟಕಂ ರಮ್ಯಂ

---

೨ ಶ್ರೀ ಕುವೆಂಪು—'ಕಾಳಿದಾಸ' ಮತ್ತು 'ಸಂಸ್ಕೃತ ಕಾವ್ಯ'— ಎಂಬ ಗ್ರಂಥಗಳ ಮುನ್ನುಡಿಗಳು.

೩ ಶ್ರೀ ಕುವೆಂಪು—'ತಪೋನಂದನ'.

ತತ್ರಾಪಿ ಚ ಶಕುಂತಲಾ'—ಎಂದು ಹೇಳಿ ಭರತಖಂಡದ ಪಂಡಿತರು ಸಂಸ್ಕೃತ ಸಾಹಿತ್ಯದಲ್ಲಿ ಶಾಕುಂತಲ ನಾಟಕಕ್ಕೆ ಅಗ್ರಪಟ್ಟವನ್ನು ಕಟ್ಟಿದರು. ಪಾಶ್ಚಾತ್ಯರಲ್ಲಿ ಗಯಟೆಯಂಥ ಮಹಾಕವಿ ಮರ್ತ್ಯ ಸ್ವರ್ಗಗಳ ಸಾರಸಮ್ಮಿಳನವನ್ನೇ ಶಾಕುಂತಲ ವೆಂಬ ಒಂದು ಹೆಸರಿನಲ್ಲಿ ಕಂಡನು. ಎಷ್ಟೋ ಉತ್ತಮ ಕೃತಿಗಳನ್ನು ಕೂಡ ಒಂದು ಬಾರಿ ಸವಿನೋಡಿದ ಮೇಲೆ ಮತ್ತೆ ಕೈಗೆ ತೆಗೆದುಕೊಳ್ಳಲು, ಬೇಗ ಮನಸ್ಸು ಬರುವುದಿಲ್ಲ. ಆದರೆ ಶಾಕುಂತಲವನ್ನು ಓದಿದಷ್ಟೂ ಅದರ ಸವಿ ಹೆಚ್ಚುತ್ತದೆ; ನಮ್ಮ ಅನುಭವ ಆಳವಾದ ಹಾಗೆಲ್ಲ ಅದರ ಅರ್ಥವೂ ಅಭಿನವವಾಗುತ್ತದೆ. ತರುಣರಿಗೆ, ಪರಿಣತರಿಗೆ—ಎಲ್ಲರಿಗೂ ಇದರಲ್ಲಿ ಆಹ್ಲಾದವುಂಟು, ಆತ್ಮ ಸಂಸ್ಕಾರ ವುಂಟು."೪

"ಕಾಳಿದಾಸನು ಸಂಸ್ಕೃತಸಾಹಿತ್ಯದ ಅತ್ಯುನ್ನತ ಶಿಖರ. ಅವನಿಗೆ ಕೈ ಮುಗಿಯದ ಕವಿಯಿಲ್ಲ; ಅವನನ್ನು ಮೆಚ್ಚದ ವಿಮರ್ಶಕನಿಲ್ಲ, ಅವನ ಹೆಸರನ್ನು ಗೌರವಿಸದ ಭಾರತೀಯನಿಲ್ಲ. ಅವನ ಕಲ್ಪನಾದೃಷ್ಟಿ ಉದಗ್ರವೂ ಹೌದು, ಸಮಗ್ರವೂ ಹೌದು. ಅವನ ಕಾವ್ಯಸೃಷ್ಟಿ ಅಭಿನವವಷ್ಟೇ ಅಲ್ಲ, ಅಭಿರಾಮವೂ ಹೌದು. ಅವನ ರಸವೃಷ್ಟಿ ಬಗೆ ಮುಗಳನ್ನು ಅರಳಿಸುತ್ತದೆ; ಆನಂದಲತೆಯನ್ನು ಕೊನರಿಸುತ್ತದೆ.

ಅಲಂಕಾರಗಳಲ್ಲಿ ಉಪಮೆಯೇ ಜೀವಾಳವೆಂದು ವಿಮರ್ಶಿಸತೊಡಗಿದ ಆಲಂಕಾರಿಕರು 'ಉಪಮಾ ಕಾಳಿದಾಸಸ್ಯ' ಎಂದು ಅವನಿಗೆ ಅದರ ಸರ್ವಮಾನ್ಯ ವಹಿಸಿ ಮೂಕರಾಗಬೇಕಾಯಿತು. ರಸಧ್ವನಿಯೇ ಕಾವ್ಯದ ಅಂತರಾತ್ಮವೆಂದು ಪರೀಕ್ಷಿಸ ಹೊರಟ ಆನಂದವರ್ಧನಾದಿಗಳು ಮಹಾಕವಿಯೆಂದರೆ ಋಷಿಗಳಾದ ಮೇಲೆ ಕಾಳಿದಾಸನೊಬ್ಬನೇ ಎಂದು ನಿರ್ಣಯಿಸಿ ನಿವೃತ್ತರಾಗಬೇಕಾಯಿತು. ತಮ್ಮ ತಮ್ಮ ದೃಷ್ಟಿಕೋಣಗಳಿಂದ ವಿಮರ್ಶಿಸಿದ ಪಾಶ್ಚಾತ್ಯ ರಸಿಕಾಗ್ರಣಿಗಳೂ ಕಾಳಿದಾಸನ ಘನತೆ ಅಮೇಯವಾಗಿದೆಯೆಂದು ಮುಕ್ತಕಂಠದಿಂದ ಘೋಷಿಸಿ ವಿಶ್ವಕವಿಗಳ ಮಾಲೆಯಲ್ಲಿ ಆತನಿಗೊಂದು ಶಾಶ್ವತ ಸ್ಥಾನವನ್ನಂಗೀಕರಿಸಬೇಕಾ ಯಿತು. ಕಾಳಿದಾಸನು ವಾಲ್ಮೀಕಿ ಅಶ್ವಘೋಷಾದಿಗಳ ಕಾವ್ಯಕಲೆಯ ಮರ್ಮ ವನ್ನೆಲ್ಲ ತನ್ನದಾಗಿಸಿಕೊಂಡರೂ 'ಪರಪ್ರತ್ಯಯನೇಯ ಬುದ್ಧಿ' ಯಾಗದೆ ಒಂದು ಅಭೂತಪೂರ್ವವಾದ ರಸಮಯ ಜಗತ್ತನ್ನು ಸೃಷ್ಟಿಸಿದ ಕವಿವಿರಿಂಚಿ. ಮಹಾ ಕಾವ್ಯದ ಪರಂಪರೆಯನ್ನು ಮಹೋನ್ನತಿಯ ಶಿಖರಾಗ್ರಕ್ಕೆ ಮುಟ್ಟಿಸಿದ್ದಲ್ಲದೆ, ಲಘುಕಾವ್ಯದ ವಿವಿಧ ಪ್ರಕಾರಗಳ ಪ್ರಥಮ ಪ್ರದರ್ಶನವನ್ನೂ ನಾಟಕ ಕ್ಷೇತ್ರದ ಬಹುಮುಖ ವಿಸ್ತಾರವನ್ನೂ ಸಾಧಿಸಿದ ಅಪೂರ್ವ ಪ್ರತಿಭಾಶಾಲಿ. ಪ್ರಾಚೀನರು ಆತನನ್ನು ಸರಸ್ವತಿಯ ಅವತಾರವೆಂದೇ ಪೂಜಿಸಿದರೆ ಆಶ್ಚರ್ಯಪಡುವ ಕಾರಣವಿಲ್ಲ."೫

೪ ಶ್ರೀ ತೀ. ನಂ. ಶ್ರೀಕಂಠಯ್ಯ—'ಕಾವ್ಯಸಮೀಕ್ಷೆ'.

೫ ಡಾ|| ಕೆ. ಕೃಷ್ಣಮೂರ್ತಿ—'ಸಂಸ್ಕೃತಕಾವ್ಯ'.

"ಪಾಶ್ಚಾತ್ಯ ಸಾಹಿತ್ಯಗಳಲ್ಲಿ ಬೇರೆ ಬೇರೆ ರೀತಿಯವೆಂದು ಹೇಳುವ ಕಾವ್ಯ ಶಾಖೆಗಳಲ್ಲಿ ಒಂದೊಂದರಲ್ಲಿ ಒಂದೊಂದು ಉಚ್ಚರೀತಿಯ ಗ್ರಂಥವನ್ನು ಬೇಕೆಂದೇ ಬರೆದನೋ ಎಂಬಂತೆ ಈ ಕವಿಯು ಸುಂದರವಾದ ಒಂದು ಭಾವಗೀತೆ, ಉದಾತ್ತ ಶೈಲಿಯ ಒಂದು ಇತಿಹಾಸಕಾವ್ಯ, ಭಕ್ತಿಭಾವಪೂರಿತವಾದ ಒಂದು ಪುರಾಣಕಥೆ, ನಿರ್ಮಲವಾದ ಪ್ರೇಮದ ಸ್ವರೂಪವನ್ನು ವರ್ಣಿಸಿರುವ ಒಂದು ನಾಟಕ, ಹೀಗೆ ಬಹುರೂಪದ ಗ್ರಂಥಗಳನ್ನು ಬರೆದಿದ್ದಾನೆ. ಇವು ಕಾವ್ಯಶೈಲದ ಹಲವು ಶಿಖರ ಗಳಾಗಿ ನಿಂತಿವೆ. ಭಾವಗೀತೆ ಎಂಬ ಜಾತಿಯ ಕಾವ್ಯವು ವಿಶೇಷವಾಗಿ ಸಿಕ್ಕುವುದು ಪಾಶ್ಚಾತ್ಯ ಸಾಹಿತ್ಯದಲ್ಲಿ. ಅದು ಭಾರತವರ್ಷದ ಸಾಹಿತ್ಯದಲ್ಲಿ ಅಷ್ಟು ಹೆಚ್ಚಾಗಿಲ್ಲ. 'ಮೇಘಸಂದೇಶ' ಕಾವ್ಯವು ಈ ಜಾತಿಯದು. ನಮ್ಮಲ್ಲಿ ವಾಡಿಕೆಯಲ್ಲಿಲ್ಲದ ಜಾತಿಗೆ ಸೇರಿದ್ದಾದರೂ ಈ ಕಾವ್ಯವು ಪ್ರಪಂಚದ ಅತ್ಯುತ್ತಮ ಭಾವಗೀತೆಗಳಲ್ಲಿ ಒಂದಾಗಿದೆ. ಸಂಸ್ಕೃತ ಸಾಹಿತ್ಯದಲ್ಲಿ ಇದರ ಜೊತೆಗೆ ನಿಲ್ಲುವ ಬೇರೆ ಗ್ರಂಥವಿರುವಂತೆ ಕಾಣುವುದಿಲ್ಲ; ಪ್ರಪಂಚದ ಸಾಹಿತ್ಯದಲ್ಲಾಗಲಿ ಇದರ ಜೊತೆಗೆ ತೂಗುವ ಯೋಗ್ಯತೆಯನ್ನುಳ್ಳ ಗ್ರಂಥ ಹಲವು. ಇಲ್ಲ.

ಅವನ ದೇಶಪ್ರೇಮ, ಧರ್ಮಪ್ರೇಮ, ದೈವಭಕ್ತಿ, ಉದಾರಹೃದಯ, ಮಾನವನ ಜೀವನವನ್ನು ಕುರಿತ ಕನಿಕರ, ಪ್ರಕೃತಿಯಲ್ಲಿ ಮಾಡಿದ ಈಶ್ವರಾನುಷ್ಠಾನ, ಅವನ ಸೌಂದರ್ಯ ಗ್ರಹಣಶಕ್ತಿ, ಕವಿಮನೋವೃತ್ತಿ, ರಸಿಕತೆ, ಆಡಂಬರವಿಲ್ಲದ ಪಾಂಡಿತ್ಯ, ನಿಸ್ಸೀಮವಾದ ಕಲಾಕೌಶಲ್ಯ—ಇವೆಲ್ಲ ಈ ಗ್ರಂಥದಲ್ಲಿ ಕಾಣುತ್ತವೆ."[೬]

"ನಾಟಕಕಾರ ಕಾಳಿದಾಸನ ನಾಟಕಗಳಲ್ಲಿ ಒಂದು ವಿಶಾಲ ದೃಷ್ಟಿಯಿದೆ. ಅದರ ಅರಿವು ಜನಕ್ಕೆ ಚೆನ್ನಾಗಿ ಆಗಲೆಂದು ಕೆಲವೊಂದು ವಿಷಯಗಳನ್ನು ಪ್ರತ್ಯೇಕವಾಗಿ ವಿಮರ್ಶಿಸಬೇಕೆನ್ನುತ್ತೇನೆ. ಮೊದಲನೆಯದು, ಅವನ ಪ್ರಾರ್ಥನಾ ಪದ್ಯಗಳು. ಇವು ಭರತವಾಕ್ಯ ರೂಪವಾಗಿ ನಾಟಕಗಳ ಕೊನೆಗೆ ಬರುವುವು.... ಖ್ಯಾತವಾದ ಮೂರು ನಾಟಕಗಳನ್ನೇ ಕುರಿತು ವಿಚಾರಿಸುವ. ಮೊದಲನೆಯದು ಮಾಳವಿಕಾಗ್ನಿಮಿತ್ರ, ಎರಡನೆಯದು ಅಭಿಜ್ಞಾನ ಶಾಕುಂತಲ, ಮೂರನೆಯದು ವಿಕ್ರಮೋರ್ವಶೀಯ. ಅವುಗಳ ಮೂರು ಭರತ ವಾಕ್ಯಗಳಲ್ಲಿ ಜೀವನದ ಸಮಗ್ರ ನೋಟವು ಅಡಕವಾಗಿದೆ. ಅದು ಅವನ ಪ್ರತಿಭೆಯ 'ತ್ರಿವಿಕ್ರಮ' ಎನ್ನೋಣ!

ಕಾಳಿದಾಸನ ಭರತ ವಾಕ್ಯಗಳು ಇಂದಿಗೂ, ಸಾಮಾಜಿಕ ಶಾಂತಿ ನೆಲಸ ಬೇಕಾದರೆ ಪ್ರಾರ್ಥನಾ ಪದ್ಯಗಳಲ್ಲಿ ಸೇರಬೇಕು."[೭]

"ತರುಣವತ್ಸರದ ಪುಷ್ಪ ಮತ್ತು ಪರಿಣತವತ್ಸರದ ಫಲ ಇವುಗಳನ್ನೂ

---

೬ ಶ್ರೀ ಮಾಸ್ತಿ ವೆಂಕಟೇಶಯ್ಯಂಗಾರ್—'ವಿಮರ್ಶೆ'—೪.

೭ ಶ್ರೀ ದ. ರಾ. ಬೇಂದ್ರೆ—'ಅಭಿವಂದನೆ'.

ಸ್ವರ್ಗ ಮತ್ತು ಮರ್ತ್ಯ ಇವೆರಡನ್ನೂ ಏಕತ್ರ ನೋಡಬೇಕೆಂದು ಯಾರಾದರೂ ಅಪೇಕ್ಷಿಸುವುದಾದರೆ ಅವರು ಅವನ್ನು ಶಾಕುಂತಲದಲ್ಲಿ ನೋಡಬಹುದು."[೮]

"ಸ್ತ್ರೀಪುರುಷರಿಗಿರಬೇಕಾದ ಸಂಯತ ಸಂಬಂಧವು ಭರತಖಂಡದ ಧರ್ಮಶಾಸ್ತ್ರಗಳಲ್ಲಿ ಕಠಿಣ ನಿಯಮಗಳ ರೂಪವಾಗಿ ಉಕ್ತವಾಗಿದೆ, ಅದೇ ಸಂಬಂಧವೇ ಕಾಳಿದಾಸನ ಕಾವ್ಯಗಳಲ್ಲಿ ಸೌಂದರ್ಯ ಸಾಮಗ್ರಿಯಿಂದ ರಚಿತವಾಗಿದೆ.

ಭರತಖಂಡದ ಪುರಾತನ ಕವಿಯು ಪ್ರೇಮವೇ ಪ್ರೇಮದ ಚರಮಲಕ್ಷ್ಯವೆಂಬುದನ್ನೊಪ್ಪದೆ ಮಂಗಳವನ್ನೇ ಪರಮಲಕ್ಷ್ಯವೆಂಬುದಾಗಿ ಸಾರಿರುತ್ತಾನೆ. ಸ್ತ್ರೀಪುರುಷರ ಪ್ರೇಮವು ಬಂಜೆಯಾಗಿ ಕೇವಲ ತಮ್ಮ ತಮ್ಮಲ್ಲಿಯೇ ಸಂಕೀರ್ಣವಾಗಿದ್ದರೆ, ಮಂಗಳವನ್ನು ಪಡೆಯದೆ ಸಂಸಾರದಲ್ಲಿಯೂ ಮಕ್ಕಳು ಮರಿಗಳಲ್ಲಿಯೂ ಅತಿಥಿ ಅಭ್ಯಾಗತರಲ್ಲಿಯೂ ನೆರೆಹೊರೆಯವರಲ್ಲಿಯೂ ಅಪೂರ್ವ ಸೌಭಾಗ್ಯರೂಪವಾಗಿ ವ್ಯಾಪಿಸದಿದ್ದರೆ, ಅಂತಹ ಪ್ರೇಮವು ಸುಂದರವೂ ಅಲ್ಲ, ಸ್ಥಾಯಿಯೂ ಅಲ್ಲ ಎಂಬುದೇ ಆತನ ಮತ."[೯]

"ಯೂರೋಪು ಯಾವುದನ್ನು ಹತ್ತೊಂಬತ್ತನೇ ಶತಮಾನದ ತನಕ ತಿಳಿದುಕೊಳ್ಳಲಿಲ್ಲವೋ ಮತ್ತು ಈಗಲೂ ಅಪೂರ್ಣವಾಗಿ ಮಾತ್ರ ಗ್ರಹಿಸಿದೆಯೋ ಅದನ್ನು ಕಾಳಿದಾಸ ಐದನೇ ಶತಮಾನದಲ್ಲಿಯೇ ಅರ್ಥಮಾಡಿಕೊಂಡಿದ್ದ : ಅದೇನೆಂದರೆ, ಜಗತ್ತು ಮನುಷ್ಯನಿಗಾಗಿ ಮಾಡಿದ್ದಲ್ಲ; ಮಾನವ ಪರಿಪೂರ್ಣತೆ ಪಡೆಯುವುದು ಮಾನುಷವಲ್ಲದ ಜೀವನದ ಘನತೆಯನ್ನೂ ಬೆಲೆಯನ್ನೂ ಅರಿತಾಗ. ಈ ಸತ್ಯವನ್ನು ಕಾಳಿದಾಸ ಗ್ರಹಿಸಿದ್ದು ಅವನ ಧೀಶಕ್ತಿಗೆ ಅದ್ಭುತವಾದ ಕಾಣಿಕೆ. ಪರಿಪೂರ್ಣ ಛಂದೋಬಂಧದಷ್ಟೇ ಈ ಗುಣವೂ ಕೂಡ ಶ್ರೇಷ್ಠ ಕಾವ್ಯಕ್ಕೆ ಆವಶ್ಯಕ. ನಿರರ್ಗಳ ಕಾವ್ಯಶಕ್ತಿ ಅಪರೂಪವಲ್ಲ; ಬೌದ್ಧಿಕ ಗ್ರಹಣಶಕ್ತಿ ಅಸಾಧಾರಣವಲ್ಲ; ಆದರೆ ಅವುಗಳ ಸಂಯೋಗ ಪ್ರಪಂಚ ಮೊದಲಾದಂದಿನಿಂದ ಕೆಲವು ಸಲ ಮಾತ್ರ ತೋರಿಬಂದಿರಬಹುದು. ಈ ಸಾಮರಸ್ಯಪೂರ್ಣ ಸಂಯೋಗ ಇದ್ದುದರಿಂದಲೇ ಕಾಳಿದಾಸ ಸೊಫೋಕ್ಲಿಸ್, ವರ್ಜಿಲ್, ಮಿಲ್ಟನ್ನರೊಡನೆ ಸ್ಥಾನ ಪಡೆಯುತ್ತಾನೆ; ಅನಾಕ್ರಿನ್, ಹೊರೇಸ್, ಶೆಲ್ಲಿ—ಇವರ ಜತೆಯಲ್ಲಲ್ಲ."[೧೦]

"ಶಾಕುಂತಲದ ಕವಿಯು ಟೆಂಪೆಸ್ಟಿನ ಕವಿಗಿಂತಲೂ ಹೀನ ತೇಜಸ್ಸಿನವನಲ್ಲ...

ಷೇಕ್ಸ್‌ಪಿಯರಿನ ನಾಟಕವು ಸಾಗರ ಸದೃಶವಾದುದು. ಕಾಳಿದಾಸನ ನಾಟಕವಾದರೋ ನಂದನವನ್ನು ಹೋಲತಕ್ಕುದು. ವನಕ್ಕೂ ಸಾಗರಕ್ಕೂ ತುಲನೆಯಾಗುವುದಿಲ್ಲ. ಸುಂದರವಾದುದೂ ಸದೃಶವಾದುದೂ ಸುಗಂಧವಾದುದೂ

---

೮ ಗಯಟೆ.

೯ ರವೀಂದ್ರನಾಥ ಟಾಗೂರ್—'ಪ್ರಾಚೀನ ಸಾಹಿತ್ಯ'

೧೦ ರೈಡರ್—'ಕಾಳಿದಾಸ'.

ಸುರಸವಾದುದೂ ಮನೋಹರವಾದುದೂ ಸುಖಕರವಾದುದೂ ಎಲ್ಲವೂ ಈ ನಂದನ ವನದಲ್ಲಿ ಮಿತಿಯಿಲ್ಲದಷ್ಟಿದೆ. ಗಂಭೀರ ದುಸ್ತರ ಚಂಚಲ ಭಯಂಕರ ಧ್ವನಿಯುಳ್ಳದ್ದೆಲ್ಲವೂ ಸಾಗರದಲ್ಲಿರುತ್ತದೆ. ಸಾಗರದಂತೆ ಷೇಕ್ಸ್‌ಪಿಯರಿನ ಈ ಅನುಪಮ ನಾಟಕವು ಹೃದಯದಿಂದ ಎದ್ದು ಬರುವ ಚಂಚಲವಾದ ತರಂಗಮಾಲೆಗಳಿಂದ ಸಂಕ್ಷುಬ್ಧವಾದುದು; ದುರಂತವಾದ ರಾಗದ್ವೇಷ ಈರ್ಷ್ಯಾದಿ ಬಿರುಗಾಳಿಯ ಹೊಡೆತಕ್ಕೆ ಸಿಕ್ಕಿದುದು. ಇದರ ಪ್ರಬಲವೇಗ, ದುರಂತ ಕೋಲಾಹಲ, ಚಂಚಲ ತರಂಗಮಾಲೆ, ಮಧುರ ನೀಲವರ್ಣ, ಅನಂತವಾಗಿ ಭಿನ್ನಭಿನ್ನವಾಗಿ ಪ್ರತಿಬಿಂಬಿತವಾಗಿರುವ ಬೆಳಕು, ರತ್ನಸಮೂಹ, ಕಾಂತಿ, ಮೃದುಗತಿ— ಇವುಗಳು ಸಾಹಿತ್ಯ ಸಂಸಾರದಲ್ಲಿ ದುರ್ಲಭ.'೧೨

"ನಮ್ಮ ನಾಗರಿಕತೆಯ ಮಹೋನ್ನತ ಯುಗಗಳಲ್ಲಿ ಒಂದನ್ನು, ಅದರ ಹಲವಾರು ಮುಖಗಳನ್ನು ತನ್ನ ಬರಹಗಳಲ್ಲಿ ಕಾಳಿದಾಸ ಪ್ರತಿನಿಧಿಸುತ್ತಾನೆ.

ಅವನೊಬ್ಬ ಮನುಜರಾಗಗಳ, ಸೌಂದರ್ಯಪಂಥದ ಗಂಭೀರಾಮೋದದ ವರಕವಿ.

ಕಾಳಿದಾಸನ ನಾಟಕ ಪ್ರತಿಭೆಯ ನಯ ಮತ್ತು ಸೂಕ್ಷ್ಮಕೋಮಲತೆ ತನ್ನ ನಿರಂತರವೂ ಸ್ವಭಾವಜನ್ಯವೂ ಆದ ಪರಿಪೂರ್ಣತೆಯೊಡನೆ ಸ್ತ್ರೀಪಾತ್ರಗಳ ಚಿತ್ರಣದಲ್ಲಿ ವ್ಯಕ್ತವಾಗುವಂತೆ ಮತ್ತೆಲ್ಲಿಯೂ ವ್ಯಕ್ತವಾಗುವುದಿಲ್ಲ.

ಗೌಣಪಾತ್ರಗಳ ಬಗ್ಗೆ ತೋರಿಸುವ ಎಚ್ಚರದ ಪರಿಶ್ರಮವು ನಾಟಕರಂಗಕ್ಕೆ ಪ್ರವೇಶಿಸಿದ ಕವಿಯನ್ನು ನಾಟಕಕಾರನಿಂದ ಪ್ರತ್ಯೇಕಿಸುವಂತೆ ಮತ್ತಾವುದೂ ಖಚಿತವಾಗಿ ಪ್ರತ್ಯೇಕಿಸಲಾರದು. ಕಲಾವಿದನಿಗೆ ಯಾವುದೂ ಚಿಕ್ಕದಲ್ಲ; ಅವನು ತನ್ನ ಮಹೋನ್ನತ ಪಾತ್ರಗಳ ವಿಸ್ತಾರದಲ್ಲೆಂತೊ ಅಂತೆಯೆ ಗೌಣಪಾತ್ರಗಳ ಸಂಕುಚಿತ ಪರಿಮಿತಿಯಲ್ಲೂ ತನ್ನ ಕಲೆಯನ್ನು ವೆಚ್ಚಮಾಡುತ್ತಾನೆ. ಷೇಕ್ಸ್‌ಪಿಯರ್ ಗೌಣಪಾತ್ರಗಳಿಗೆ ಜೀವಂತತೆಯನ್ನು ಸೂರೆಮಾಡುತ್ತಾನೆ; ಅವನಲ್ಲಿ ಅದು ಅಗಾಧವಾದ ಸೃಷ್ಟಿಶಕ್ತಿಯ ಪರಿಣಾಮ; ದೇವನು ಜಗತ್ತನ್ನು ಸೃಷ್ಟಿಸಿದಂತೆ ಅವನು ಸಜೀವ ಮಾನವರನ್ನು ಸೃಷ್ಟಿಸುತ್ತಾನೆ. ಅವನು ಹಾಗೆ ಮಾಡದಿರಲಾರ, ಏಕೆಂದರೆ ಅದು ಅವನ ಸ್ವಭಾವದಲ್ಲಿಯೇ ಇರುವುದರಿಂದ ಹೊರಹೊಮ್ಮಲೇಬೇಕು. ಆದರೆ ಯಾವಾಗಲೂ ಕೋಮಲವೂ ಸೂಕ್ಷ್ಮವೂ ಆದ ಕಾಳಿದಾಸನ ನಾಟಕ ಪ್ರತಿಭೆಗೆ ಈ ದೈವೀಸಮೃದ್ಧಿಯಿಲ್ಲ. . .

ಗಯಟೆಯಂಥ ಬರಿ ಕವಿಯೊಬ್ಬ ಒಂದು 'ಶಾಕುಂತಲ'ಕ್ಕೆ ಹಿಡಿತವೇ ಇಲ್ಲದ ತಮರೂಪಿನ (Superlative) ಹೊಗಳಿಕೆಯನ್ನು ಅರ್ಪಿಸಬಹುದು, ಆದರೆ

೧೨ ಬಂಕಿಮ ಚಂದ್ರ ಚಟರ್ಜಿ 'ಪ್ರಾಚೀನ ಸಾಹಿತ್ಯ' ದಿಂದ.

ವಿಮರ್ಶನಗುಣವೂ ಪಾಂಡಿತ್ಯವೂ ಉಳ್ಳ ಹೆಚ್ಚು ಬುದ್ಧಿವಿವೇಕದ ಮನಸ್ಸು ಕಡಮೆ ಮೆಚ್ಚಿಕೆಯ ತೀರ್ಪನ್ನು ಘೋಷಿಸುತ್ತದೆ.”೧೩

“ಕಾಳಿದಾಸ ಷೇಕ್ಸ್‌ಪಿಯರಿನಷ್ಟೇ ದೊಡ್ಡವನೆಂದು ತಿಳಿಯುವುದಾದರೆ, ನಮ್ಮ ದೇಶಪ್ರೇಮ ಕುರುಡಾಗಲು ಆಸ್ಪದವೀಯುತ್ತೇವೆ. ಅವನಿಗೂ ಷೇಕ್ಸ್‌ಪಿಯರಿಗೂ ಸಾದೃಶ್ಯವೇ ಇಲ್ಲವೆಂದು ದೃಢವಾಗಿ ಹೇಳಬೇಕು.”೧೪

“ಹೋಲಿಕೆಯನ್ನು ಕಲ್ಪಿಸುವುದು ಉಪಯುಕ್ತವಾದಲ್ಲಿ, ಕಾಳಿದಾಸ ಭಾರತೀಯ ನಾಟಕದ ಸೊಫೋಕ್ಲಿಸ್‌ನಾಗಿ ನಿಲ್ಲುತ್ತಾನೆ. ಅದು ಪ್ರಶ್ನಾತೀತ. ಭಾರತೀಯ ಕವಿಗೆ ಸಾಧ್ಯವಾದಷ್ಟು ಮಟ್ಟಿಗೆ ಅವನು ಜೀವನವನ್ನು ನಿರಂತರ ಶ್ರದ್ಧೆಯಿಂದ, ಪೂರ್ಣವಾಗಿ ಅವಲೋಕಿಸಿದ.

ಕಾಳಿದಾಸನ ಕೃತಿಗಳು ಪ್ರಶಂಸನೀಯವಾದರೂ, ಅವನು ನಾಟಕಗಳಲ್ಲಿ ಹಾಗೂ ಕಾವ್ಯಗಳಲ್ಲಿ ಜೀವನದ ಹಾಗೂ ಅದೃಷ್ಟದ ದೊಡ್ಡ ಸಮಸ್ಯೆಗಳ ಬಗ್ಗೆ ಆಸಕ್ತಿ ತೋರಿಸುವುದಿಲ್ಲವೆಂಬ ಸತ್ಯವನ್ನು ಅಲಕ್ಷಿಸುವುದು ಅನ್ಯಾಯವಾಗುತ್ತದೆ.

ಭಾರತೀಯ ನಾಟಕಕಾರರಲ್ಲಿ ಅತ್ಯಂತ ಶ್ರೇಷ್ಠನಾದ ಕಾಳಿದಾಸ ಜೀವನ ರಚನೆಯನ್ನು ಅಥವಾ ಜಗತ್ತಿನ ವ್ಯಾಪಾರಗಳನ್ನು ಕುರಿತು ಆತಂಕಪಡುವುದಿಲ್ಲ. ಅವನು ಭಾರತದ ಸಮಾಜ ರಚನೆಯನ್ನು ಯಾವ ಪ್ರಶ್ನೆಯಾಗಲಿ, ಅತೃಪ್ತಿಯಾಗಲಿ ಇಲ್ಲದೆ ಅಂಗೀಕರಿಸುತ್ತಾನೆ.”

ಗಯಟೆಯ ಪ್ರಶಂಸೆ ಮತ್ತು ವಿಲಿಯಮ್ ಜೋನ್ಸ್ ಕಲ್ಪಿಸಿದ ಷೇಕ್ಸ್‌ಪಿಯರಿನ ಶೈಲಿಯ ಹೋಲಿಕೆ ಯೋಗ್ಯವಾಗಿದ್ದರೂ ತತ್ಕಾಲೀನ ವೈದಿಕ ಪಂಥದಲ್ಲಿ ಕಾಳಿದಾಸನಿಗಿದ್ದ ನಿಷ್ಠೆ ಅವನ ಮೇಲೆ ವಿಧಿಸಿರುವ ಪರಿಮಿತಿಗೆ ನಾವು ಕುರುಡಾಗಬಾರದು. ಮಾನವ ತನ್ನ ಸ್ವಂತ ಕರ್ಮಗಳಿಂದ ಪಡೆದುಕೊಳ್ಳುವ ನ್ಯಾಯಪೂರಿತ ಅದೃಷ್ಟವೊಂದು ಎಲ್ಲವನ್ನೂ ಆಳುತ್ತದೆ ಎಂದು ನಂಬಿದ್ದ ಅವನು ಜಗತ್ತನ್ನು ಒಂದು ರುದ್ರದೃಶ್ಯವಾಗಿ ಕಾಣುವುದಕ್ಕಾಗಲಿ, ಬಹುಜನರ ದೌರ್ಭಾಗ್ಯದ ಬಗೆಗೆ ಅನುಕಂಪ ತಳೆಯುವುದಕ್ಕಾಗಲಿ ಅಥವಾ ಪ್ರಪಂಚದಲ್ಲಿರುವ ಅನ್ಯಾಯದ ಆಳ್ವಿಕೆಯನ್ನು ಅರಿತುಕೊಳ್ಳುವುದಕ್ಕಾಗಲಿ ಅಸಮರ್ಥನಾಗಿದ್ದ. ಅವನಿಗೆ ತನ್ನ ಸಂಕುಚಿತ ಪರಿಧಿಯಾಚೆಗೆ ಹೋಗುವುದು ಅಶಕ್ಯವಾಗಿತ್ತು; ಇಂಥ ಪರಿಮಿತಿಯಲ್ಲೂ 'ಶಾಕುಂತಲ' ದಂತಹ ಶಾಶ್ವತ ಘನತೆಯನ್ನುಳ್ಳ, ಪರಿಣಾಮಕಾರಿಯಲ್ಲದ ಭಾಷಾಂತರಗಳ ರೂಪದಲ್ಲಿಯೂ ಒಂದು ಗುರುಕಾವ್ಯವೆಂದು ಸಾರ್ವತ್ರಿಕ

---

೧೩ ಶ್ರೀ ಅರವಿಂದರು—'ಕಾಳಿದಾಸ' (ಭಾಗ ೧–೨)

೧೪ ಎ. ಬಿ. ಗಜೇಂದ್ರ ಗಡ್ಕರ್—'ಶಾಕುಂತಲ' (ಸಂಪಾದಿತ) ದ ಮುನ್ನುಡಿಯಲ್ಲಿ

ಸಮ್ಮತಿಗಳಿಸಿದ ವಿಶ್ವಕೃತಿಯನ್ನು ಸಾಧಿಸಿದುದಕ್ಕಾಗಿ ಅವನಿಗೆ ನಾವು ಕೃತಜ್ಞ ರಾಗಿರಬೇಕು." ೧೫

"ಸಂಸ್ಕೃತ ಮಹಾಕವಿಗಳಲ್ಲಿ ಕಾಳಿದಾಸನೂ ಒಬ್ಬ; ಮುಖ್ಯವಾಗಿ 'ಶಾಕುಂತಲ' ರೂಪಕದಿಂದ ಪ್ರಪಂಚ ಕವಿಗಳ ಮಧ್ಯೆ ಅವನಿಗೊಂದು ಸ್ಥಾನ ಸಿಕ್ಕಿದೆ; ಇದಕ್ಕುಂಟು ನನ್ನ ಪೂರ್ಣ ಸಮ್ಮತಿ. ಆದರೆ ಅವನು ಬಿಟ್ಟು ಹೋಗಿರುವುದೆಲ್ಲವೂ ನಿರ್ದುಷ್ಟ, ಪರಮೋತ್ಕೃಷ್ಟ; ಅನುಪಮ, ಅದ್ವಿತೀಯವೆಂದು ಭಾಸವಾಗುವುದಿಲ್ಲ ನನಗೆ. ಕೇವಲ ಲೋಪದೋಷಗಳೇ ಅಲ್ಲ, ಪುನರುಕ್ತಿ ಕವಿ ಸಮಯಗಳೇ ಅಲ್ಲ, ಸಾಧಾರಣಮಟ್ಟದ ಬರವಣಿಗೆ ಎಷ್ಟೋ ಇದೆ ಅವನಲ್ಲಿ.

ಪ್ರಶಂಸಾತ್ಮಕ ವಿಶೇಷಣ, ಗುಂಪು ಕಿರಿಚಲು, ಪ್ರಶಸ್ತಿ ಸೂತ್ರ, ಗಾದೆ ಮಾತು ಇತ್ಯಾದಿಗಳಿಂದ ವಿನಮ್ರ ಕಾಳಿದಾಸ ನೊಂದಿರುವಷ್ಟು ಪ್ರಾಯಶಃ ಬೇರಾವ ಸಂಸ್ಕೃತ ಲೇಖಕನೂ ನೊಂದಿಲ್ಲ. 'ಅನಾಮಿಕಾ ಸಾರ್ಥವತೀ ಬಭೂವ' ಎಂಬ ಕ್ಷುಲ್ಲಕ ಕೂಗನ್ನು ವೇದಪ್ರಮಾಣವೋ ಎಂಬಂತೆ ಅಂಗೀಕರಿಸಿ, ಅದರಿಂದ ಧ್ವನಿತವಾಗುವ ಇತರ ಸಂಸ್ಕೃತ ಕವಿವರ್ಯರ ತಿರಸ್ಕಾರವನ್ನು ಲಕ್ಷಿಸದೆ, ತಲೆದೂಗುವ ವಿದ್ವಾಂಸರು ಇಲ್ಲದಿಲ್ಲ ಈಗಲೂ ಕೂಡ. ಭಾಸ ಭವಭೂತಿ ಬಾಣ ಭಾರವಿ ಜಿನಸೇನ ಮಾಘ ಶ್ರೀಹರ್ಷ ಮೊದಲಾದವರಿಗೂ ಅದೇ ನುಡಿಯನ್ನು ಅನ್ವಯಿಸಬಾರದೇತಕ್ಕೆ? ಅವರಿಗೂ ಖಚಿತವಾಗಿ ಇದ್ದೇ ಇದೆ ಅವರವರದ್ದೇ ಆದ ವ್ಯಕ್ತಿವರ್ಚಸ್ಸು.

'ಶಾಕುಂತಲ'ವೊಂದನ್ನು ಬಿಟ್ಟು ಬಿಟ್ಟರೆ, ಕಾಳಿದಾಸನ ಉಳಿದೆಲ್ಲ ಕೃತಿಗಳೂ ಪರಿಪೂರ್ಣತೆಯಿಂದ ಕೆಳಗೆ, ಮಹೌನ್ನತ್ಯದಿಂದ ಎಷ್ಟೋ ಕೆಳಗೆ.

ಆರಿಸಿದ ಪದಗಳು, ಪ್ರತಿಯೊಂದು ಪದಕ್ಕೂ ಅತ್ಯನುರೂಪವಾದ ಸ್ಥಳ, ಅದನ್ನು ವಿಹಿತವಾಗಿ ಜೋಡಿಸಿ ದನಿಗೈಸುವ ಜಾಣ್ಮೆ, ಸರಾಗವಾದ ಲಯವಿಲಾಸ, ಮಧುರವೂ ಮೋಹಕವೂ ಆದ ನಾದಮೇಳ—ಇವಿಂದ ಕಾಳಿದಾಸನ ವಾಣಿ ಸುಶ್ರಾವ್ಯವಾಗಿ ಕರ್ಣಕಲ್ಯಾಣವಾಗಿದೆ, ಬೆಡಗಿನ ಶಬ್ದಚಿತ್ರಗಳಿಂದ ಕೂಡಿ ಸೊಗಸಾಗಿದೆ.

ಕಾಳಿದಾಸನ ಬರವಣಿಗೆ ಸರಳವಾದದ್ದು, ಪರಿಸ್ಫುಟವಾದದ್ದು, ಅರ್ಥವ್ಯಕ್ತಿಯಿಂದ ಸುಲಭವಾದದ್ದು.

ಒಂದು ಸಾರಸ್ವತ ವೈಚಿತ್ರ್ಯವೂ ನಡೆಯುತ್ತದೆ ನಮ್ಮ ನಡುವೆ ಆಗಾಗ: ಕಾಳಿದಾಸನನ್ನು ಷೇಕ್ಸ್‌ಪಿಯರನಿಗೆ ಸರಿಸಮಾನನೆಂದೋ ಅವನಿಗಿಂತ ಅಧಿಕನೆಂದೋ ನಿಶ್ಚಿಂತೆಯಿಂದ ಒತ್ತಿಹೇಳಿ ಸನ್ಮಾನಿಸುವಿಕೆ. ಅದು ಸಲ್ಲದ ಹೇಳಿಕೆ, ಇಲ್ಲದ ಸತ್ಯಾಂಶ, ಬರಿಮಾತು. ಷೇಕ್ಸ್‌ಪಿಯರನಿಗೆ ಸದೃಶನಾದ ಕವಿ ಒಬ್ಬನೇ,

---

೧೫ ಎ. ಬಿ. ಕೀತ್—'ಸಂಸ್ಕೃತನಾಟಕ'

ಷೇಕ್ಸ್‌ಪಿಯರ್. 'ಶಾಕುಂತಲ' ನಾಟಕದಲ್ಲಿ ಕೊಂಚಮಟ್ಟಿಗೆ ಅಲ್ಲಲ್ಲಿ ಕಾಣಬಹುದು ಷೇಕ್ಸ್‌ಪಿಯರನಂದದ ಕೌಶಲವನ್ನ, ರಾಗವರ್ಷವನ್ನ, ಘನತೆಯನ್ನ.

'ಶಾಕುಂತಲ' ಕಾಳಿದಾಸನ ಏಕೈಕ ಅತ್ಯುತ್ಕೃಷ್ಟ ಕೃತಿ.

ಸುರಮ್ಯ ಸಂಸ್ಕೃತವನ್ನು ನೇಯಬಲ್ಲ ಅವ; ಅವನ ನೇಕಾರ ಹಸ್ತ ಪಳಗಿದುದೇ ಸರಿ, ಅನುಮಾನ ಬೇಡ. ಆದರೆ ಎಲ್ಲ ಸಮಯದಲ್ಲಿಯೂ ಒಂದೇ ಬಗೆಯ ಬಟ್ಟೆಯನ್ನು ನೆಯ್ದರೆ ಗತಿ? ಉಡುವ ಧೋತ್ರ ಬೇರೆ, ಹೊದೆವ ಉತ್ತರೀಯ ಬೇರೆ, ಮಲಗುವ ಮಗ್ಗಲು ಹಾಸಿಗೆ ಬೇರೆ. ವ್ಯತ್ಯಾಸಗಳನ್ನು ಸಾಕಷ್ಟು ಮನ್ನಿಸಿದ್ದಾನೆಯೆ ಕಾಳಿದಾಸ?

ಕಾಳಿದಾಸನ ಪ್ರಕೃತಿಪ್ರಪಂಚ ಆಸ್ಥಾನದ ಹತ್ತಿರದ ಉಪವನ ಸರೋವರ, ನಗರಕ್ಕೆ ಸಮೀಪವಾದ ನದಿ ಬೆಟ್ಟಗಳಿಂದ ಪರಿಮಿತವಾದದ್ದು, ಸಾಹಿತ್ಯ ಸಂಕೇತದಿಂದ ಕೊಂಚಮಟ್ಟಿಗೆ ಲೋಕೋತ್ತರವಾದದ್ದು, ಪ್ರೀತಿ ಮಾಧುರ್ಯ ಸೌಖ್ಯಗಳೇ ಪ್ರಮುಖವಾದದ್ದು. ಅವನೀಯುವ ಅನೇಕ ವಿವರಗಳು ಊಹಾಜನ್ಯ, ಚಮತ್ಕಾರ ಲಾಂಛಿತ, ಅಲಂಕೃತ.

ಕಾಳಿದಾಸನನ್ನು 'ನಿಸರ್ಗಕವಿ' ಯೆನ್ನುವುದರಿಂದ ಉಪಕಾರ ಮಾಡಿದಂತಾಗುವುದಿಲ್ಲ ಅವನಿಗೆ. ಮಾನವೀಯತೆ ಅವನ ಪ್ರಖ್ಯಾತಿಗೆ ಆಧಾರ.

'ಕುಮಾರ ಸಂಭವ'ದ ಸ್ವಾರಸ್ಯ ಒಳ್ಳೆಯ ಮಧ್ಯಮವರ್ಗದ ಕವಿತೆಯ ಸ್ವಾರಸ್ಯವೇ ಹೊರತು ಉತ್ತಮ ವರ್ಗದ ಕವಿತೆಯ ಸ್ವಾರಸ್ಯವಲ್ಲ. ಕಥನ ಚಾತುರ್ಯ, ಪಾತ್ರಗಳ ಸಜೀವ ತೇಜಸ್ಸು, ಅಭಿಪ್ರಾಯ ವೈಭವ-ಎಲ್ಲವೂ ಅಷ್ಟಕ್ಕಷ್ಟೆ.

'ರಘುವಂಶ' ಹೆಚ್ಚಾಗಿ ಅದ್ಭುತಕಾವ್ಯ (Romance), ಕಡಮೆಯಾಗಿ ಇತಿಹಾಸಕಾವ್ಯ (Verse chronicle).

'ಮಾಲವಿಕಾಗ್ನಿಮಿತ್ರ' ಅವನ ಪ್ರಾರಂಭದ ಪ್ರಯತ್ನ, 'ವಿಕ್ರಮೋರ್ವಶೀಯ' ಅದಕ್ಕಿಂತ ಕೊಂಚ ಉತ್ತಮವಾದರೂ ಮೂರನೆಯದಕ್ಕಿಂತ ಎಷ್ಟೋ ಕೆಳಗೆ; ಮೂರನೆಯದಾದ 'ಅಭಿಜ್ಞಾನ ಶಾಕುಂತಲ' ಅವನ ಪರಿಪೂರ್ಣ ವಿರಚನೆ, 'ಕಾಳಿದಾಸಸ್ಯ ಸರ್ವಸ್ವಮಭಿಜ್ಞಾನ ಶಕುಂತಲಂ' ಎಂಬುದು ಸ್ಥಿರಸತ್ಯ ವಚನ. ಪ್ರಪಂಚದ ಅತ್ಯುತ್ತಮ ರೂಪಕಗಳಲ್ಲಿ ಅದು ಒಂದು. ಅದರ ಕಡೆಗೆ ಬಾಹುವನ್ನೆತ್ತಿ ಭಾರತೀಯ ಹೆಮ್ಮೆಪಟ್ಟರೆ ಸಾರ್ಥಕ.

ಕಾಳಿದಾಸನಿಗೆ ಶೃಂಗಾರ, ಅದರಲ್ಲಿಯೂ ಸಂಭೋಗ ಶೃಂಗಾರ ತುಷ್ಟಿ ಪುಷ್ಟಿಯ ಪರಮಪ್ರಿಯ ವಸ್ತು. ಅದರ ಪ್ರತಿ ಚಿತ್ರಣದಲ್ಲಿ ಅವ ಪ್ರದರ್ಶಿಸಬಲ್ಲ ಸೂಕ್ಷ್ಮವಾದ ಕುಸುರಿ ಕೆಲಸದಿಂದ ಹಿಡಿದು ದಪ್ಪಕುಂಚದ ಗಾಢ ರಚನೆಯವರೆಗೂ ಇರುವ ನಾನಾ ಬಗೆಯ ಕೈಚಳಕವನ್ನ. ನಮ್ಮೆಯ ಕವಿಗಳಲ್ಲಿ ಅವನಿಗೊಂದು ಉಚ್ಚಸ್ಥಾನ ಮೀಸಲು; ಅವನೇ ಅಗ್ರೇಸರನೆನ್ನುವುದು ಅಂಧಾನುರಾಗದ

ಉತ್ಪ್ರೇಕ್ಷೆ. ಜೀವನದ ಇತರ ಜಿಗುಟು ಸಮಸ್ಯೆಗಳನ್ನು ಆಸಕ್ತಿಯಿಂದ ಮನಸ್ಸಿಗೆ ತೆಗೆದುಕೊಂಡಿಲ್ಲ ಅವ, ಆಳವಾಗಿ ಮಂಥನ ಗೈದಿಲ್ಲ. ಆ ಸಾಮರ್ಥ್ಯ, ಆ ದರ್ಶನಸತ್ವ, ಆ ಭವ್ಯಪ್ರತಿಭೆ ಅವನಲ್ಲಿರಲಿಲ್ಲ. ಅವನ ಭಾರಿ ಸೊತ್ತು ಆವುದೆಂದರೆ, ಕೋಚುಪಾಚೊಂದೂ ಇಲ್ಲದೆ ಹರುಕು ಮುರುಕಾವುದನ್ನೂ ತೋರಿಸದೆ ನಯ ನುಣುಪು ನಾಜೂಕುಗಳನ್ನೇ ಮೆರೆಯುವ ಪರಿಷ್ಕೃತ ಸಂಸ್ಕೃತ. ಬಹುಶಃ ಯೋಚಿಸಿ ಬರೆದು ಅಳಿಸಿ ಪುನಃ ಬರೆಯುವ ಸಂತತ ಶ್ರದ್ಧೆಯಿಂದ ಅದು ಲಭ್ಯ ವಾಯ್ತು ಅವನಿಗೆ. ಅದು ಕೇವಲ ರಮಣೀಯವೇ ಅಲ್ಲ, ಸಂತೋಷಕರವೇ ಅಲ್ಲ; ಅದರ ಗಾರುಡೀಬಲದಿಂದ ಅವ ಸುಲಭವಾಗಿ ನಮ್ಮ ಮೇಲೆ ಬೀಸಬಲ್ಲ ಮೂರ್ಛೆ ಗೊಳಿಸುವ ಮೋಡಿಯನ್ನ. ಸಹಜಶಕ್ತಿಯ ಜೊತೆಗೆ ಅಭ್ಯಾಸದಿಂದಾದ ದಕ್ಷತೆಯೂ ಕೂಡಿಕೊಂಡಿತು ಅವನನ್ನ. ಅವನ ವಾಕ್ಸಂಯಮ ನಿಜವಾಗಿ ಆರ್ಜಿಸಿಕೊಂಡದ್ದು. ಸಾಲಂಕೃತ ಕವಿತಾಪದ್ಧತಿ ಅವನ ಕಾಲದ ಹೊತ್ತಿಗಾಗಲೇ ಏರ್ಪಟ್ಟಿತ್ತು; ಅವನೂ ಅದಕ್ಕೆ ಸೇರಿದವನೇ, ಅವನೂ ಒಬ್ಬ ಪಂಡಿತ ಕವಿಯೇ. . . . . ಅವನೊಬ್ಬ ಮಹಾಕವಿ; ಅಷ್ಟುಸಾಕು; ಅದಕ್ಕೂ ಮುಂದಣ ಅತ್ಯುಕ್ತಿಯೇಕೆ?

ಆವುದೋ ಉತ್ಸವಘಳಿಗೆಯ ಉತ್ಕರ್ಷತೆಯಲ್ಲಿ ಕಾಳಿದಾಸನನ್ನು 'ರಾಷ್ಟ್ರಕವಿ' ಎಂದು ಉಲ್ಲೇಖಿಸಿ, ಗಾಳಿಮಾತನ್ನು ಗಾಳಿಗೆಸೆಯುವುದುಂಟು . . . . ನಮ್ಮ ನಾಡಾದ ಭರತವರ್ಷಕ್ಕೆ ಖಂಡಿತ ಹೊರಚ್ಚಾದುದು ಆ ತೆರದ ವ್ಯಕ್ತಿಪೂಜೆ . . . . ನಮ್ಮ ಹಿಂದೂಸ್ಥಾನ ಸಮ್ಮಿಶ್ರ ಸಂಸ್ಕೃತಿಯ ಅಪೂರ್ವಭಂಡಾರ, ಸಮನ್ವಯ-ವಿವೇಕ ಸಹನೆ ಸಹಬಾಳುವೆಯ ವಿಶಾಲ ಪ್ರಯೋಗ ಮಂದಿರ. ಪುಣ್ಯದಿಂದ ನಮಗಿರುವ ರಾಷ್ಟ್ರಭಾಷೆ ಒಂದಲ್ಲ, ಎರಡಲ್ಲ, ಹದಿನಾಲ್ಕು: ಅವಲ್ಲಿ ದೊಡ್ಡ ಸಾಹಿತ್ಯವನ್ನು ಬರೆದ, ಬರೆಯುತ್ತಿರುವ ದೊಡ್ಡ ಕವಿಗಳು ಅನೇಕರಿದ್ದಾರೆ. ಅವರೆಲ್ಲರೂ ರಾಷ್ಟ್ರಕವಿಗಳೇ.

ಹಾಗೂ, ಯಾರಾದರೂ ಒಬ್ಬ ಸಂಸ್ಕೃತದ 'ಕವಿಕುಲಗುರು' ವೆಂದು ನಿರ್ಬಾಧಿತವಾಗಿ ನುತಿಸಬಹುದಾದರೆ, ಅವ ಮತ್ತಾರೂ ಅಲ್ಲ, ಆದಿಕವಿ ವಾಲ್ಮೀಕಿ, 'ರಾಮಾಯಣ'ದ ವಾಲ್ಮೀಕಿ" ೧೫

ಮಾಲೆಗಾರರು :— —ಸಿ. ಪಿ. ಕೆ., ಸುಜನಾ

---

೧೫ ಶ್ರೀ ಎಸ್. ವಿ. ರಂಗಣ್ಣ—'ಹೊನ್ನಶೂಲ'.

ಸುಖವಿಲ್ಲದ ಕಲ್ಪನೆ

ಕುಡಿಯಲು ಕೈಗೆತ್ತಿಕೊಂಡೆ
ಒಂದು ಲೋಟ ಹಾಲನು :
ಬೆಳ್ಳಗಿರುವ ಹಾಲಿನೊಳಗೆ
ತೇಲಾಡಿತು ವಿಸ್ತಾರದ
ಹುಲ್ಗಾವಲ ಬಯಲು !
ದನದ ಕೊರಳ ಗಂಟೆ ದನಿ
ಹಸುರ ತುಂಬ ಮಿರುಗುವ ಹನಿ
ಮರಗಿಡದಲಿ ಹಕ್ಕಿದನಿ
ಮೆಲುಗಾಳಿಯ ಮರ್ಮರ,
ತುಟಿಬಟ್ಟಲ ನಟ್ಟ ನಡುವೆ
ಏನಪಾರ ವಿಸ್ತರ !

ಕಂಬಳಿಯನ್ನೆಳೆದುಕೊಂಡು
ಕಣ್ಣುಮುಚ್ಚಿ ಮಲಗಿದೆ :
ಮೈಯ ಮೇಲೆ ಕುರಿಮಂದೆಯ
ಹಿಂಡು ಹಿಂಡೆ ನಡೆದಿದೆ !
ಮೈಚಾಚಿದ ಗುಡ್ಡವಾದೆ
ಮಲಗಿದಲ್ಲೆ ಅಲುಗದೆ.
ಗಿಡಮರಗಳು ಬಂಡೆಗುಂಡು
ಹುಲ್ಲು ಬೆಳೆದ ಪೊದೆಯಲಿ
ಕುರಿಮಂದೆಯ ಅರಚುವ ದನಿ
ಹೆಜ್ಜೆ ತುಳಿದ ಭರದಲಿ
ಬೆಚ್ಚಿ ಬಿದ್ದು ಎದ್ದು ಕುಳಿತೆ
ಎಂಥ ಹುಚ್ಚು ಯೋಚನೆ
ಬೇಕು ಯಾರಿಗಿನ್ನು ಇಂಥ
ಸುಖವಿಲ್ಲದ ಕಲ್ಪನೆ ?

—ಜಿ. ಎಸ್. ಶಿವರುದ್ರಪ್ಪ

ಹಾದಿಯ ಬದಿಯ ತತ್ತ್ವಜ್ಞಾನಿ

ಮೊನ್ನೆ ನೆರೆನಾಡಿನ ರಾಷ್ಟ್ರನಾಯಕರೊಬ್ಬರು ನಮ್ಮ ನಗರಕ್ಕೆ ಬಂದಿದ್ದಾಗ ಅವರನ್ನು ರಾಜಬೀದಿಗಳಲ್ಲಿ ವೈಭವದ ಮೆರವಣಿಗೆಯಲ್ಲಿ ಕರೆದೊಯ್ಯಲಾಯಿತಷ್ಟೆ. ಆಗ ದಾರಿಯುದ್ದಕ್ಕೂ ಇಕ್ಕಡೆಗಳಲ್ಲೂ ಲಕ್ಷೋಪಲಕ್ಷ ಜನ ನಿಂತು ಅತ್ಯುತ್ಸಾಹ ದಿಂದ ಜಯಕಾರ ಮಾಡಿ ಅವರನ್ನು ಸ್ವಾಗತಿಸಿದುದು ನಿಮಗೆ ನೆನಪಿರಬಹುದು. ಸಾಮಾನ್ಯವಾಗಿ ಇಂಥ ಆಡಂಬರದ ಪ್ರದರ್ಶನಗಳನ್ನು ನೋಡುವುದೆಂದರೆ ನನಗೆ ಅಷ್ಟೇನೂ ಇಷ್ಟವಿಲ್ಲ. ಆದರೆ ಅಂದು ನಗರದ ಮೂಲೆಮೂಲೆಗಳಿಂದ ಮಾತ್ರವಲ್ಲದೆ ಸುತ್ತಮುತ್ತಣ ಹಳ್ಳಿಯೂರುಗಳಿಂದಲೂ ಹರಿದುಬರುತ್ತಿದ್ದ ಗಂಡು ಹೆಣ್ಣುಗಳ ಪ್ರವಾಹವನ್ನು ಕಂಡು ನಾನು ನಿರ್ಲಕ್ಷ್ಯದಿಂದಿರಲು ಆಗಲಿಲ್ಲ. ಅನಾಯಾಸವಾಗಿ ಇಷ್ಟು ದೊಡ್ಡ ಜನಸ್ತೋಮವನ್ನು ಹತ್ತಿರದಿಂದ ವೀಕ್ಷಿಸುವ ಸದವಕಾಶವನ್ನು ಕಳೆದುಕೊಳ್ಳಲು ಮನಸ್ಸೊಪ್ಪಲಿಲ್ಲ. ಆದುದರಿಂದ ಎಲ್ಲರಂತೆಯೇ ನಾನೂ ವಸ್ತ್ರ ಭೂಷಿತನಾಗಿ ಮನೆಯಿಂದ ಹೊರಬಿದ್ದು ಮೆರವಣಿಗೆಯ ಮಾರ್ಗದಲ್ಲಿ ಅನುಕೂಲ ವಾದ ಸ್ಥಳವೊಂದನ್ನು ಹುಡುಕಿ ನಿಂತು ಗುಂಪಿನಲ್ಲಿ ನಾನೂ ಒಬ್ಬನಾಗಿ ಇತರರು ಕುಣಿದಂತೆ ಕುಣಿದು ಕೂಗಿದಂತೆ ಕೂಗಿ ಸ್ವಲ್ಪಹೊತ್ತು ನನ್ನ ಮೇಲ್ಮಟ್ಟದ "ಸಂಸ್ಕೃತಿ"ಯ ಹಿಡಿತನವನ್ನು ಬಿಟ್ಟು ಇತ್ತಿಂದತ್ತ ಅತ್ತಿಂದಿತ್ತ ಓಡಾಡಿದೆ. ಎಲ್ಲೆಲ್ಲೂ ಜನ ಹಿಂದಿದ್ದವರು ಮುಂದುಮುಂದಕ್ಕೆ ನುಗ್ಗಿ ಪ್ರಥಮ ಪಂಕ್ತಿಯಲ್ಲಿ ಎಡೆ ಪಡೆಯಲು ಪ್ರಯತ್ನಿಸುತ್ತಿದ್ದರು. ಮಾನವರ ಸ್ವಾರ್ಥತೆಯೂ ಸ್ಪರ್ಧಾಬುದ್ಧಿಯೂ ಎಲ್ಲ ಕ್ಷೇತ್ರಗಳಲ್ಲೂ ಎಲ್ಲ ಸಮಯಗಳಲ್ಲೂ ಹೀಗೆ ಯಾವುದಾದರೂ ಒಂದು ರೀತಿ ವ್ಯಕ್ತ ವಾಗುವುದನ್ನು ಕಂಡು ನನಗೆ ಅಚ್ಚರಿಯಾಯಿತು. ಅಷ್ಟೇ ಕುತೂಹಲಕಾರಿ ಗಳಾಗಿದ್ದವು ಅವರ ಆಸಕ್ತಿಯನ್ನು ಕೆರಳಿಸುತ್ತಿದ್ದ ವಸ್ತುಗಳು. ಕೆಲವರು ಮೆರ ವಣಿಗೆಯಲ್ಲಿ ಬಂದ ಪ್ರಸಿದ್ಧ ಪುರುಷರ ಮುಖಭಂಗಿಯನ್ನು ನೋಡಿ ಹರ್ಷಿತರಾದರೆ ಇನ್ನು ಕೆಲವರು ಅವರ ಉಡಿಗೆತೊಡಿಗೆಗಳಿಂದಲೂ ಅನುಚರರಿಂದಲೂ ಆಕರ್ಷಿತ ರಾದರು. ಮತ್ತೆ ಕೆಲವರಿಗೆ ಅವರು ಕುಳಿತಿದ್ದ ಮೋಟಾರು ಮತ್ತು ಅದರ ಅಕ್ಕ ಪಕ್ಕದಲ್ಲೇ ಹೋಗುತ್ತಿದ್ದ ಕಾವಲುಗಾರರ ಠೀವಿ ಮೊದಲಾದವೂ ಗಮನಾರ್ಹ ವಾಗಿದ್ದವು. ಇವರನ್ನೆಲ್ಲಾ ಪರಿಶೀಲಿಸಿ ನನ್ನ ಹಸಿವನ್ನು ಆದಷ್ಟೂ ಪರಿಹರಿಸಿ ಕೊಳ್ಳುತ್ತ ನಾನು ಯಾವುದೋ ಜ್ಞಾನದಲ್ಲಿ ನಡೆಯುತ್ತಿದ್ದಾಗ ಯಾರೋ ಪುಣ್ಯಾತ್ಮ ನನ್ನ ಪಾದರಕ್ಷೆಯೊಂದರ ಹಿಮ್ಮಡಿಯನ್ನು ತುಳಿದ. ತತ್ಫಲವಾಗಿ ಅದರ ಮೇಲ್ಭಾಗದ ಪಟ್ಟಿ ಕಿತ್ತುಹೋಯಿತು. ಅದನ್ನು ಸರಿಮಾಡಿಸಿದ ಹೊರತು ನಾನು ಒಂದು ಹೆಜ್ಜೆಯನ್ನೂ ಮುಂದಕ್ಕಿಡುವುದಕ್ಕಾಗದೆ ಹೋಯಿತು. ಅವನ್ನು ಕಾಲು ಗಳಿಂದ ಕಳಚಿ ಕೈಯಲ್ಲಿ ಹಿಡಿದುಕೊಂಡರೆ ಅಪಾರ್ಥಕ್ಕೆ ಅವಕಾಶ ಕೊಟ್ಟಂತಾಗು ತ್ತಿತ್ತು. ಆದ್ದರಿಂದ ನನ್ನ ಅನ್ವೇಷಣೋತ್ಸಾಹವನ್ನು ಅಷ್ಟಕ್ಕೇ ತಡೆಹಿಡಿದು—

ಸ್ವಲ್ಪ ಖಿನ್ನಮನಸ್ಕನಾಗಿಯೇ ಎಂದು ಒಪ್ಪಿಕೊಂಡು ಬಿಡುತ್ತೇನೆ—ಅಲ್ಲೇ ಹಿಂಬದಿಗೆ ಸರಿದು ನಿಂತ ಕಡೆಯಿಂದಲೇ ಅತ್ತಿತ್ತ ಕಣ್ಣು ಹೊರಳಿಸತೊಡಗಿದೆ.

ನಾನು ಹೀಗೆ ನಿಂತಿದ್ದಾಗ ಅಷ್ಟು ಹೊತ್ತೂ ನಾನು ನೋಡಿದ್ದ ವಸ್ತುಗಳೆಲ್ಲಕ್ಕಿಂತಲೂ ಹೆಚ್ಚು ಅಸಾಧಾರಣವೂ ವಿಸ್ಮಯಕಾರಕವೂ ಆದ ನೋಟವೊಂದು ನನ್ನ ಕಣ್ಣಿಗೆ ಬಿತ್ತು. ಸ್ವಲ್ಪ ದೂರದ ಆಚೆ ರಸ್ತೆಯ ಪಕ್ಕದ ಒಂದು ದೊಡ್ಡ ಹೊಂಗೆಯ ಮರದ ನೆರಳಿನಲ್ಲಿ ಮೋಚಿಯವನೊಬ್ಬ ತಲೆಯೆತ್ತದೆ ಕುಳಿತು ಹಳೆಯ ಜೋಡೊಂದನ್ನು ಹೊಲಿದು ಸರಿಪಡಿಸುತ್ತಿದ್ದ. ಅಷ್ಟು ಲಕ್ಷ ಜನರ ಕಣ್ಮನಗಳನ್ನು ಸೆಳೆದು ಸೆರೆಹಿಡಿದಿದ್ದ ಮೆರವಣಿಗೆಯ ವೈಭವ ಇವನೊಬ್ಬನ ಸಂಪೂರ್ಣವಾದ ನಿರ್ಲಕ್ಷ್ಯಕ್ಕೆ ಗುರಿಯಾಗಿದ್ದುದನ್ನು ಕಂಡು ನನಗೆ ಸಹಜವಾಗಿಯೇ ಕುತೂಹಲವುಂಟಾಯಿತು. ನನ್ನ ಚಪ್ಪಲಿಯನ್ನು ರಿಪೇರಿಮಾಡಿಸಬೇಕಾದ ಅಗತ್ಯವಿದ್ದುದರಿಂದ ಅವನ ಬಳಿಗೆ ಹೋಗಲು ನನಗೊಂದು ನೆಪ ಸಿದ್ಧವಾಗಿಯೇ ಇತ್ತು. ಆದುದರಿಂದ ಕೂಡಲೆ ಅವನೆಡೆಗೆ ತೆರಳಿ ಹರಿದ ಚಪ್ಪಲಿಯನ್ನು ಅವನ ಮುಂದೆ ಬಿಟ್ಟು ಸರಿಮಾಡಿಕೊಡಬೇಕೆಂದು ಹೇಳಿ ಅಲ್ಲೇ ಇದ್ದ ಒಂದು ಕಲ್ಲಿನ ಮೇಲೆ ಕುಳಿತು ಅವನೊಡನೆ ಸಂಭಾಷಣೋದ್ಯುಕ್ತನಾಗಿ, "ಏನಪ್ಪ, ಇಷ್ಟೊಂದು ಜನರ ಅಮಿತ ಸಂತೋಷಕ್ಕೆ ಕಾರಣವಾಗಿರುವ ಸೊಗಸಾದ ದೃಶ್ಯ ನಿನ್ನೊಬ್ಬನಲ್ಲಿ ಮಾತ್ರ ಸ್ವಲ್ಪವೂ ಆಸಕ್ತಿಯನ್ನು ಕೆರಳಿಸಿದಂತೆ ಕಾಣುವುದಿಲ್ಲ. ಇಷ್ಟು ದೊಡ್ಡ ಜನ ಜಂಗುಳಿ ನಿನ್ನ ಕೆಲದಲ್ಲೇ ನೆರೆದು ನಿಂತು ಓಡಾಡಿ ಕೂಗಾಡಿ ಗಲಭೆಯೆಬ್ಬಿಸುತ್ತಿರುವಾಗ ಅದೆಲ್ಲಕ್ಕೂ ವಿಮುಖನಾಗಿ ಹೀಗೆ ಏಕಾಗ್ರಚಿತ್ತನಾಗಿರಲು ನಿನಗೆ ಹೇಗೆ ತಾನೆ ಸಾಧ್ಯ?" ಎಂದು ಮೆಲ್ಲನೆ ಪ್ರಶ್ನಿಸಿದೆ. ಅದಕ್ಕವನು "ಸೊಗಸು? ಯಾರಿಗೆ ಸ್ವಾಮಿ ಸೊಗಸು? ನಿಮ್ಮಂತ ದುಡ್ಡಿರೋರಿಗೆ ಅದ್ಯೆಲ್ಲಾ, ನಮುಗ್ಯಾತ್ಕೆ? ಮೋಚೀ ಕ್ಯಲ್ಸಾ ಮಾಡಾದು ಸುಮ್ಕೆ ಅಂದ್ಕಂಡಿದೀರಾ? ನೀವು ಅಂದ್ರೆ ಪುಣ್ಯಾತುಮರು; ಇಂದಲ ಜಲ್ಮದಾಗೆ ಕೊಟ್ಟುವುಟ್ಟಿದೀರಿ, ಈಗ ಸುಕ್ವಾಗಿ ಕುಂತ್ಕಂಡು ತಿನ್ನ ಬೌದು. ನಾವು ಅಂಗ್ಮಾಡಿದರೆ ಆದಾತ? ನೀವ್ಗೇನು ಸ್ವಾಮಿ, ಅಗಲ್ಯೆಲ್ಲಾ ಅಲ್ಲಿ ಇಲ್ಲಿ ಅಡ್ಡಾಡಿಕಂಡು ರಾತ್ರಿ ಮನಿಗೋಗಾ ವತ್ಗೆ ಬಿಸಿಬಿಸೀ ಊಟ ಸಿದ್ದ ವಾಗಿರ್ತೈತೆ. ಅದೇ ನಾನು ಅಂಗೆ ಓಡಾಡಿದರೆ ವಟ್ಟೆ ಅಸಿವು ಯಚ್ಚೈತೇ ವರ್ತು ಇನ್ನೇನೂ ಉದ್ದಾರಾಗಾ ಅಂಗಿಲ್ಲ. ಸದ್ಯ, ಇರಾ ಅಸಿವ್ನ ತಡಕಂಡ್ರೆ ಸಾಕಾಗ್ಯೆತೆ, ಅದನ್ನ ಇನ್ನೂ ಜಾಸ್ತಿ ಮಾಡ್ಕಂಡ್ರೆ ಯಂಗೆ? ದಿನಕ್ಕೆ ಮೂರ್ರೂ ನಾಕೂ ಪಟ್ಟು ಪಟ್ಟಾಗಿ ಊಟಾ ವಡೆಯೋ ನಿಮ್ಮಂತ ದಣೇರು ಮಾಡಾದ್ನ್ಯೆಲ್ಲಾ ನಾವ್ಮಾಡಾ ಕೋದ್ರಾಕ್ತೈತಾ? ದೇವರು ನಮಗೆ ಯೇನು ಕೊಟ್ಟಿದಾನೋ ಅದ್ರಾಗೆ ತ್ರುಪ್ತಿ ಪಟ್ಗಂಡು ಮರ್ವಾದಿಯಿಂದ ಬದುಕು ನೂಕಬೇಕಾದ್ದು ನಮ್ಮ ಕ್ಯಲ್ಸ. ಸಾವ್ಕಾರ್ರ ಅವ್ವ್ಯಾಸಗಳ್ಯೆಲ್ಲಾ ನಮ್ಗ್ಯಾಕೆ ಸ್ವಾಮಿ?" ಎಂದ. ನಾನು ತನ್ನ ಮಾತು ಕೇಳಿ ನಸುನಕ್ಕುದನ್ನು ಕಂಡು ಮತ್ತೆ "ಇಲ್ನೋಡಿ, ಬುದ್ದಿ, ಈ ಆರೆ, ಈ ಸೂಜಿ, ಈ

ಅಡಿಗಲ್ಲುಗಳ್ನ. ಇವೇ ನನ್ನ ಗೆಳೇರು. ನಂಗೆ ಗೆಳೇರು ಬೇಕು ಅಂತ ಉಡಿಕ್ಕಂಡು ಓದ್ರೆ ಯಾರೂ ಗೆಳೇರಾಗಲ್ಲ ಸ್ವಾಮಿ. ಈಗ ತಾನೆ ಆ ಮೆರವಣಿಗೆ ಜತಿಯಾಗೆ ಓದ್ರಲ್ಲ, ದೊಡ್ಡಮನಸ್ಸ್ರು—ಅವರಿಗ್ಯಲ್ಲಾ ಒಬ್ಬೊಬ್ಬರಿಗೂ ಐವತ್ತು ಅರವತ್ತು ಗೆಳೇರಿರ್‍ತಾರೆ. ಯಾಕೆ ಅಂತಿರೋ? ಆ ಗೆಳೇರಿಂದ ಇವರಿಗೆ ಯೋನೂ ಬೇಕಾಗಿರಲ್ಲ, ಅದ್ಕೆ. ಅದೇ ಇವರಾಗೊಬ್ಬ ಗತಿಗೆಟ್ಟು ಗರೀಬನಾಗಲಿ, ನೋಡ್ತಿರ್ರಿ. ಆಗ ಗೆಳೇರೂ ಇಲ್ಲ ಗಿಳೇರೂ ಇಲ್ಲ ಅವನಿಗೆ ಆಗಾರು! ನಮ್ಮ ತಾವ ಕಾಸಿರಾ ತನ್ಕ ಜನ ಯಾವ್ದಾರಾ ನ್ಯಪ್ದಾಗೆ ನಮ್ಮನ್ನ ಅನ್ಸರಿಸ್ತಾರೆ. ಕೈ ಬರೀದಾತು ಅಂದ್ರೆ ಯಾರು ಕೇಳ್ತಾರೆ ನಮ್ಮನ್ನ? ಪರ್ಪಂಚವೇ ಇಂಗೆ, ಸ್ವಾಮಿ. ಅದೂ ಅಲ್ದೆ, ಇಗಾ ನೋಡಿ ಈ ನನ್ನ ಗೆಳೇರು–ಇವರನ್ನ ಬಿಡ್ದೆ ಇರಾವರೆಗೂ ನಾನು ನೆಮ್ಮದಿಯಾಗಿರಬೌದು. ಅದು ಬಿಟ್ಟು ವಂದೀಟೇನಾರಾ ಅತ್ಲಾಗಿತ್ಲಾಗೆ ಅದ್ನ ಇದ್ನ ನೋಡಾಕೆ ಅಂತ ಅಲೆದಾಡಿದೆ ಅನ್ನಿ, ಅಮ್ಯಾಕೆ ಮತ್ತೆ ಈ ಕ್ಯಲ್ಸ ಮಾಡಾಕೆ ನಂಗೆ ಮನಸೇ ಬರಲ್ಲ, ಈಟ್ಟೆ ನ ಇಲ್ದೇ ಇರಾ ಅಸಮಾದಾನ, ದುರಾಸೆ, ಯಲ್ಲಾ ಬಂದ್ಬಿಡ್ತಾವೆ" ಎಂದು ಒಂದು ಪುಟ್ಟ ಉಪನ್ಯಾಸವನ್ನೇ ಮಾಡಿದ.

ಈ ಪ್ರವಚನವನ್ನು ಕೇಳಿ ಜನ್ಮತಃ ತತ್ತ್ವಜ್ಞಾನಿಯಾದ ಈ ಶ್ರಮಜೀವಿಯ ವಿಚಾರದಲ್ಲಿ ನನ್ನ ಕುತೂಹಲ ಮತ್ತಷ್ಟು ಬೆಳೆಯಿತು. ಆದುದರಿಂದ ನಾನು ಅದೂ ಇದೂ ಮಾತಾಡುತ್ತ ಮೆಲ್ಲಗೆ ಅವನು ತನ್ನ ಆತ್ಮಕಥೆಯನ್ನು ನಿರೂಪಿಸುವಂತೆ ಪ್ರೇರಿಸಿದೆ. "ಈ ಐವತ್ತು ಅರವತ್ತು ವರ್ಸ ನನ್ನ ಬಾಳ್ಯಲ್ಲಾ ಬರೇ ಅಲೆದಾಟ್ದಾಗೇ ಕಳೆದೋತು, ಸ್ವಾಮಿ. ಇವತ್ತು ಇಲ್ಲಿ, ನಾಳೆ ಇನ್ನೊಂದು ತಾವ—ಇಂಗೇ ಕಾಲಾ ಕಳೆದುಬಿಟ್ಟೆ ಚಿಕ್ಕಂದಿನಾಗ. ಯಲ್ಲೂ ತಳ ಊರಿ ನಿಲ್ಲಾಕೇ ಮನಸ್ಸು ಒಗ್ತಿರ್‍ಲಿಲ್ಲ ಆಳಾದ್ದು!" ಎಂದು ಅವನು ಆರಂಭಿಸಿದ. "ಹಾಗಾದರೆ ನೀನೊಬ್ಬ ದೇಶಸಂಚಾರಿಯಾಗಿದ್ದೆ ಅನ್ನು" ಎಂದೆ. "ಇಲ್ಲ, ಸ್ವಾಮಿ; ದೇಶ ಸಂಚಾರವೂ ಇಲ್ಲ ಗೀಸಸಂಚಾರವೂ ಇಲ್ಲ. ಉಟ್ದಾಗ್ಲಿಂದ್ಲೂ ನಂಗೆ ನೆಪ್ಪಿರಾಮಟ್ಟಿಗೆ ಮೂರು ಪಟ್ಟೆಗಿಂತ ಯಚ್ಚಿ ಈ ಊರು ಬಿಟ್ಟು ವರಾಕೆ ವಂಟಿಲ್ಲ. ಇದೇ ಊರಾಗೇ ನನ್ನ ಸಂಚಾರ ಯಲ್ಲಾ ಇದ್ದದ್ದು, ಆದರೆ ಇಲ್ಲಿ ಮಾತ್ರ ಯಾವಾಗಲಾದ್ರೂ ವಮ್ಮೆ ನಾನೋಡ್ದೇ ಇರಾ ವಾಸಾ ಮಾಡ್ದೇ ಇರಾ ಪ್ಯಾಟೇನೇ ಇಲ್ಲ ಅಂತ ಧೈರ್ಯವಾಗಿ ಯೇಳ್ಬಲ್ಲೆ. ಯೆಲ್ಲಾರಾ ವಂದ್ಕಡೆ ಅಂಗ್ಡಿ ಅಚ್ಚಿ ವಂದೀಟು ಕುದರ್‍ಕಳಾಕಿಲ್ಲ, ಆಗ್ಲೇ ಬ್ಯಾಸರಾತು ಅನ್ನು ನಂಗೆ, ವಂಟೆ ಅನ್ನು ಬ್ಯಾರೆ ಕಡೀಗೆ. ನಾ ಓದ್ದೇ ತಡ ಅತ್ಲಾಗೆ, ಇತ್ಲಾಗೆ ನಾ ಬಿಟ್ಟೋದ ಗಿರಾಕಿಗಳ ನಡ್ವೆ ಇನ್ಯಾವೋನೋ ಬುದ್ದಿವಂತ ಬಂದು ದುಡ್ಮಾಡ್ಯಾತಿದ್ದ. ವಬ್ಬ ಅಂತು ನಾನು ಕಟ್ಟಿದ್ದ ಗುಡ್ಲಾಗೇ ಕುಂತು ಕ್ಯಲ್ಸಮಾಡಿ ಕಡೀಗೆ ಅಲ್ಲೇ ಸತ್ತ. ಸತ್ತಾಗ ಅವನ ಸೊಂಟ್ದಾಗೆ ನಗದು ಇಪ್ಪತ್ತು ಬೆಳ್ಳಿ ರೂಪಾಯ್ಗಳ್ನ ಪಂಚೆ ಅಂಚ್ನಾಗೆ ಸಿಗಿಸ್ಗಂಡಿದ್ದನಂತೆ."

ಇದ್ದ ಊರಿನಲ್ಲೇ ಹೀಗೆ ನಿರಂತರ ಸಂಚಾರಿಯಾಗಿದ್ದ ಇವನ ಚರಿತ್ರೆಯನ್ನು

ಕೇಳಿ ನನಗೆ ನಸುನಗೆ ಬಂತು. ಅವನ ವಿಷಯ ಇನ್ನಷ್ಟು ತಿಳಿದುಕೊಳ್ಳೋಣ ವೆಂದು "ಮದುವೆ ಮಾಡಿಕೊಂಡಿರಲಿಲ್ಲವೇನಜ್ಜ?" ಎಂದು ಅವನನ್ನು ಪ್ರಶ್ನಿಸಿದೆ. ಅವನು "ಮಾಡ್ಕಳ್ದೆ ಯೇನು, ಸ್ವಾಮಿ. ಮದ್ವೆಗಿದ್ವೆಯಲ್ಲಾ ಆಗಿತ್ತು. ವಂದಲ್ಲ ಯಳ್ಡಲ್ಲ ಅದ್ನಾರು ವರ್ಸ ಸಂಸಾರದ ನೊಗಾನ ವತ್ಗಂಡಿದ್ದೆ ಕುತ್ಗೆ ಮ್ಯಾಗೆ. ಸುಕಾ ಮಾತ್ರ ಕನಸಿನ ಗಂಟಾಗಿತ್ತೆ ವರ್‍ತು ವಂದಿನಾನೂ ಕೈಗೆ ಸಿಗಲಿಲ್ಲ. ಯಾರೇ ಳ್ಕೊಟ್ರೋ ಯ್ಯೋನೋ ಕಾಣೆ-ಪರ್ಪಂಚದಾಗೆ ಶಂದಾಗಿ ಬದಕ್ಬೇಕಾದರೆ ದುಡ್ಡು ಕೂಡಿಡಬೇಕು ಅನ್ನೋ ಯೋಚ್ನೆ ನನ್ನ ಯೇನ್ತಿಗೆ ಅದೆಂಗೋ ಬಂತು. ನಮಗಿದ್ದ ಆದಾಯ ವಾರವ್ಯಲ್ಲಾ ಮೂಗಿಗೆ ಮೂಗ್ದಾಣಾ ಆಕ್ಕಂಡು ದುಡದ್ರೂ ಯಲ್ಡು ರೂಪಾಯಿ ಮ್ಯಾಗಿರಲಿಲ್ಲ. ನಾನು ಮೂರೊತ್ತೂ ಬೇದ್ಯಾಗೆ ಕುಂತಿ ರಾನು; ಮನೀಗೆ ಸಾಮಾನು ತರಾಕೆ ಪುರಸತ್ತೆಲ್ಲಿ ತರ್‍ಲಿ. ಬಂದ್ಬಂದದ್ನ್ಯಲ್ಲಾ ಕರ್ಶಿಗೆ ಅಂತ ಅವಳ ಕಡೀಗೇ ಕೊಟ್ಟಿರ್‍ತಿದ್ದೆ. ಮಾರಾಯ್ತಿ ಯಲ್ಲಾನೂ ಮುಚ್ಚಿಟ್ಟ ಡೋಳು. ಯೋಟು ದುಡದ್ರೂ ಯೋಟು ಸಂಪಾದಿಸಿದ್ರೂ ಕಡೀಗೆ ನಂಗೆ ಸಿಗ ತಿದ್ದದ್ದು ಅರವೊಟ್ಟೇಗೆ ಕೂಡ ಸಾಕಾಗದೋಟು ಉಪ್ಗಂಜೀನೆ! ವೊಂದೊಂದಿನ ಅದ್ಕೂ ಬರ್‍ತಿತ್ತು ಸಂಚಕ್ಕಾರ! ಮದಮದಲು ಈ ಇಶಾರ್‍ದಾಗೆ ನಂಗೂ ಅವಳಿಗೂ ದಿನವೂ ಯಾಜ್ಯ ನಡೀತಿತ್ತು. ಆದರೇನು, ಇಂತಾದ್ಕ್ಯಲ್ಲಾ ಯದರಾಳಲ್ಲ ಅವಳು. ಯೇನೇ ಆಗಲಿ ದುಡ್ಡು ಮುಚ್ಚಿಡಾ ತನ್ನ ಶಾಳೀನ ಬಿಡಲೇ ಇಲ್ಲ. ಕಡೀಗೆ ನಂಗೂ ಬಾಯಿ ಮಾಡಿ ಮಾಡಿ ಸಾಕಾಗಿ ಸುಮ್ನಾಗಿಬಿಟ್ಟೆ, ಮನೇ ಅಗರಣಾನ ಮರೆಯಾಕೆ ಅಂತ ಯಂಡ್ದಂಗ್ಡೀ ಸೇರಾಕೆ ಸುರು ಮಾಡ್ದೆ. ಅಲ್ಲಿಗೆ ಬರ್‍ತಿದ್ದಾರ್‍ಯಲ್ಲಾ ನನ್ನಂಗೇನೇ ಮನೆ ಅಂದರೆ ಯದರ್‍ಕಾತಿದ್ದೋರು. ಅವರ ಸಾವಾಸದಾಗೆ ನಾನು ಸುಕವಾಗಿದ್ದು ಕೈಯಾಗೆ ಕಾಸಿರಾ ತನ್ಕ ಕುಡೀತಿದ್ದೆ ಕೈಕಾಲಿ ಆತು ಅಂದ್ರೆ ಸಾಲ ಕೊಯ್ದಾದರೂ ಚಟ ತಿರಸ್ಕಾಬೇಕಾಗಿತ್ತು, ಇಲ್ದಿದ್ರೆ ಮನ್ಸಿಗೆ ಸುಕ ಇರ್‍ತಿರ್‍ಲಿಲ್ಲ. ಯೋಟು ದಿನ ಅಂತ ಇಂಗೇ ನಡದಾತು? ವಂದು ದಿವಸ ಸಾಲ್ಗಾರ್‍ರು ಬಂದು ಮನೇ ಬಾಕ್ಲಾಗೆ ಮುರಾಡಾ ಆಕ್ಕಂಡು ನಿಂತರು ಅನ್ನಿ, ಅವರನ್ನ ಕಂಡು ನಾಯೇಟು ಸಾಲ ಮಾಡಿದ್ದೆ ಅಂತ ಅವರ ಬಾಯಿಂದ ಕೇಳಿದ್ದೇ ತಡ, ನನ್ನೇನ್ನಿ ನಿಂತಿದ್ದಂಗೇನೇ ಯದೆವಡ್ದು ಕುಸದು ಬಿದ್ದು ಪ್ರಾಣಾಬಿಟ್ಲು. ಆಮ್ಯಾಕೆ ಮನೀಗೆ ಮನೀನೇ ಸೋದನೆ ಮಾಡ್ದೆ ಅವಳು ಮುಚ್ಚಿಟ್ಟಿದ್ದ ದುಡ್ಯೇನಾರಾ ಸಿಗತೈತೇನೋ ಅಂತ. ಕೇಳ್ಬೇಬ್ಯಾಡ ಅದರ ಸುದ್ದೀನ! ಯೊಲ್ಲೆಲ್ಲಿ ಯೋಟೇಟು ಉಡ್ಕಿದ್ರೂ ಅದರ ಸುಳುವೇ ಇರಲಿಲ್ಲ. ವಟ್ಯಾಗೆ ಇಟ್ಗಂಡು ಅಂಗೇ ತಗಂಡೋದ್ಲು ಅಂತ ಕಾಣ್ತೈತಾ ದನಪಿಸಾಚಿ!" ಎಂದ.

ಇಷ್ಟು ಹೊತ್ತಿಗೆ ನನ್ನ ಚಪ್ಪಲಿಯನ್ನು ಹೊಲಿದು ಸರಿಪಡಿಸಿದ್ದು ಮುಗಿ ದಿತ್ತು. ಅವನಿಗೆ ಅವನು ಮಾಡಿದ ಕೆಲಸಕ್ಕೂ ಹೇಳಿದ ಆತ್ಮಕಥೆಗೂ ಬೇರೆ

ಬೇರೆಯಾಗಿ ಧಾರಾಳವಾಗಿಯೇ ಪ್ರತಿಫಲವನ್ನು ಕೊಟ್ಟು, ಅನುಭವಜನ್ಯವಾದ ಅವನ ತತ್ತ್ವಜ್ಞಾನ ಎಷ್ಟು ಹಿತವಾಗಿದ್ದಿತೆಂದು ಮತ್ತೆ ಮತ್ತೆ ಅದನ್ನು ಮನಸ್ಸಿನಲ್ಲಿ ತಿರುವಿ ಹಾಕುತ್ತ ಮನೆಗೆ ಮರಳಿದೆ.

(ಗೋಲ್ಡ್‌ಸ್ಮಿತ್ ಕವಿಯ ಪ್ರಬಂಧವೊಂದರಿಂದ ಪ್ರೇರಿತ)

—ಎಂ. ರಾಮರಾವ್

ಬಟ್ಟೆಯಂಗಡಿಯಲ್ಲಿ

ಬಟ್ಟೆಯಂಗಡಿಯಲ್ಲಿ ದೀಪಗಳ ಬೆಳಕು
ಒಂದೊಂದು ಬಟ್ಟೆಯೊಳು ಏನೆಂಥ ಹೊಳಪು!

ಹೂವೆಲ್ಲ ಕೈ ಹಿಡಿದು ಕಿಲಕಿಲನೆ ನಕ್ಕು
ಬಟ್ಟೆಗಳ ದಾರಿಯಲಿ ಹೆಜ್ಜೆಗಳನಿಟ್ಟು
ಈಗ ತಾನೇ ಎಲ್ಲೊ ಹೋದಂತಿವೆ!

ಗಾಳಿಗೂ ಬಗೆ ಬಗೆಯ ಬಣ್ಣಗಳ ಬೆರಸಿ
ಬೆಳಕುಗಳ ಮಗ್ಗದಲಿ ಹಗಲಿರುಳು ಶ್ರಮಿಸಿ
ನೈಲಾನು ಬಟ್ಟೆಗಳ ನೇಯ್ದಂತಿದೆ!

ಇದೊ ಇಲ್ಲಿ ಹಾಲು ಬಿಳಿ, ಅಲ್ಲಿ ಮಳೆಬಿಲ್ಲು!
ಇಲ್ಲಿ ರೇಸಿಮೆ ನುಣುಪು, ಅತ್ತ ಮಕಮಲ್ಲು,
ಕಣ್ಣು ಕಾಲಿಟ್ಟೆಡೆಗೆ ಮೆದು ಜಾರುಗಲ್ಲು!

ಕಣ್ಣು ಹೊರಳಿದ ಕಡೆಗೆ ಬಣ್ಣಗಳ ದಾಳಿ
ಯಾವ ಚೈತ್ರನ ಹಿಡಿದು ತಂದುದೀ ನೋಡಿ!
ಬಣ್ಣದರಮನೆಯಿಂದ ಬಂದ ವೈಹಾಳಿ!

" ಬಟ್ಟೆ ಕೊಂಡದ್ದಾಯ್ತು, ದುಡ್ಡು ಕೊಡಿ ಮತ್ತೆ "
ಹೀಗೆನಲು ಹೆಣ್ಣುದನಿ, ಬೆಚ್ಚಿ ಎಚ್ಚತ್ತೆ
ಕನಸೊಡೆದು ತಳಮಳಿಸಿ ಹಣವನ್ನು ತೆತ್ತೆ.

ಬಟ್ಟೆಯಂಗಡಿಯಲ್ಲಿ ದೀಪಗಳ ಬೆಳಕು
ಒಂದೊಂದು ಬಟ್ಟೆಯೂ ಎದೆಗೊಂದು ತಿರುಪು!

—ಜಿ. ಎಸ್. ಶಿವರುದ್ರಪ್ಪ

ರೇಡಿಯೋ ಭಾಂಗಿ

ಮೊನ್ನೆ ತಾನೇ ಬಂತು ಈ ಭಾಂಗಿ,
 ರೇಡಿಯೋ ಭಾಂಗಿ.
ಎಂದೋ ಕೊಟ್ಟ ಆರ್ಡರಿಗೆ ಇಂದು ಬಂತು;
 ಸದ್ಯ ಈಗಾದರೂ ಬಂತಲ್ಲ.
ದೇವರ ದಯೆ, ಏನೆಂತುದೂ ಜಖಂ ಇಲ್ಲ;
ಆಕಾರ : ನೋಡಲು ಬಹು ಪುಟ್ಟದು,
ಮಾಡೆಲ್ : ಯಾವುದೊ ಅದೂ ತಿಳಿಯದು,
 ಬಹುಶಃ ಬಹಳ ಹಳೆಯ ಅಚ್ಚಿರಬೇಕು;
ನಮ್ಮಜ್ಜಿ ಮನೆ ರೇಡಿಯೋ ಇಂತೆ ಇದ್ದಂತೆ ನೆನಪು.
ಸರಿ, ಹೇಗಿದ್ದರೂ ಪರವಿಲ್ಲ.
ನಾಕೊಟ್ಟ ಹಣವೂ ಸ್ವಲ್ಪ!
ಬೆಲೆಯ ಪಟ್ಟಿಯ ಚಿತ್ರಗಳ ನೋಡಿ
ನಾ ಮೊದಲು ಇಟ್ಟಿದ್ದ ಇಂಡೆಂಟೊ ಬಹು ದುಬಾರಿಯದೆ.
 ಏಕೊ ಏನೋ ಅದು ಬರಲೆ ಇಲ್ಲ;
ನಾಕೊಟ್ಟ ಮುಂಗಡದ ಹಣ ಹೋದಂತೆಯೆ ಸರಿ,
 ದೇವರ ದಯೆ ಇಷ್ಟಾದರೂ ಬಂತಲ್ಲ!
ನನ್ನ ಮಿತ್ರ ರೇಡಿಯೋ ವೈದ್ಯ—ವ್ಯಾಪಾರಿ
 ಅಂದದ್ದುಂಟು: "ಇದು ಬಹಳ ಒಳ್ಳೆಯದಯ್ಯ;
ಮಾಡೆಲ್ ಬಹಳ ಹಳೆತು; ಅದಕ್ಕೆ ಅದು ಬಹು ಖಾತರಿ;
ಆಕಾರ ಪುಟ್ಟದು, ಬೆಲೆ ಸ್ವಲ್ಪ—ಚಿಂತೆಬೇಡ;
ನಮ್ಮಂಥ ಬಡಪರಿಗೆ ಅಷ್ಟೆ ಸಾಕು;
ಇದರ ತಂತ್ರ ಬಹಳ ಸರಳ;
ದುಡ್ಡು ಹೆಚ್ಚಾದಷ್ಟು ಯಂತ್ರಗಳ ತಂತ್ರ ಅತಿ ಜಟಿಲ;
ಅಷ್ಟೆ ಅಲ್ಲ, ಹೆಚ್ಚು ಹಣ ಕೊಟ್ಟು ಹೆಚ್ಚು ರೋಗಗಳ
 ಕೊಳ್ಳುವೆವು ಬರಿದೆ;
ಕೊಡುವ ಅಧಿಕತರ ಬೆಲೆಯಲ್ಲು ಅರ್ಥ ಸುಂಕ ಲಾಭಗಳೆ
 ಇದ್ದೀತು;
ಸಾಕಿಷ್ಟೆ ನಮ್ಮಂಥ ಸಾಮಾನ್ಯ ವರ್ಗಕ್ಕೆ."
ಇರಬಹುದು;
ಅನಿವಾರ್ಯ ಅಭಾವ ವೈರಾಗ್ಯ ವೇದಾಂತ,

ಇದ್ದರೂ ಇರಬಹುದು.
ಅದಿರಲಿ, ಈ ಯಂತ್ರವನು ನೋಡಿ :
ಕೀಲುಕೊಡದೆಯೆ ನುಡಿಯುವುದು, ನುಡಿಯುತ್ತಲೆ
ಇರುವುದು—
ಮೊನ್ನೆ ಬಂದಂದಿನಿಂದ.
ನನಗೊ ಬಹು ವಿಸ್ಮಯ !
ಮತ್ತೆ, ನನಗೀ ರೇಡಿಯೋ ಯಂತ್ರಗಳ ತರಂಗ ಶ್ರುತಿ
ಪರಿಚಯವಿಲ್ಲ
ಆದರೂ ಪರವಿಲ್ಲ; ಇದು
ನಾ ಹೇಗಿದ್ದರೂ ದನಿಗೊಡುವುದಲ್ಲ !
ಅ್ಹ ! ಅದೂ ಎಂಥ ಸೂಟಿಯಿಂದ.
ಅದರ ಪ್ರಸಾರಕ್ಕೆ ಕಾಲಗತಿ ವೇಳೆ ಮಿತಿ
ರೀತಿ ನೀತಿಗಳೊಂದು ಇಲ್ಲ.
ಮುನ್ಸೂಚಿಸದೆ ಅತ್ಯಪೂರ್ವ ಹೊಸಪ್ರಸಾರಗಳ ನಡೆಸುವುದು
ಆ ಅವಿರತ ಸುದೀರ್ಘತರ ವಿಚಿತ್ರ ಕಾರ್ಯಕ್ರಮಾವಳಿಗೆ
ನಾನೊ ದಿಙ್ಮೂಢ.
ಅದರ ಮೋಹ : ಅನಿವಾರ್ಯ ಅತಿಗಾಢ !
ಮುಂದೆ ಇದು ಯಾವ ಹೊಸ ಗೀತೆಯನು ಒಸರಲಿಹುದೊ
ಯಾವ ಹೊಸಕೇಂದ್ರವನು ತೋರಲಿಹುದೊ
ಯಾವ ದೂರದ ಅಶ್ರುತ ತರಂಗವನು ಸೆಳೆದು ತಹುದೊ
ಸಾವಧಾನದಿ ಕಾದು ಕೇಳಿ ಕಾಣಬೇಕು :
ಮೊನ್ನೆ ತಾನೆ ಇವಳು ಮನೆಯೊಳಗೆ ಕಾಲಿಟ್ಟು
ದೀಪ ಹೊತ್ತಿಸಿ ಹಾಲುಕ್ಕಿಸಿಹಳು !

—ಸುಜನಾ.

ಕನ್ನಡದಲ್ಲಿ ಕಾಳಿದಾಸ ಕೃತಿಗಳು :

ಅಭಿಜ್ಞಾನ ಶಾಕುಂತಲ

ಕೃತಿಯ ಹೆಸರು	ಶ್ರೀಯುತರಾದ
(೧) ಶಾಕುಂತಲ ನಾಟಕ ನವೀನ ಟೀಕು: ಅಥವಾ ಶಕುಂತಲೋಪಾಖ್ಯಾನ.	ಮುಮ್ಮಡಿ ಕೃಷ್ಣರಾಜ (೧೭೯೪-೧೮೬೮)
(೨) ಕರ್ಣಾಟಕ ಶಾಕುಂತಲ ನಾಟಕ:	ಬಸವಪ್ಪಶಾಸ್ತ್ರೀ, ಬೆಂಗಳೂರು ೧೮೮೩
(೩) ಅಭಿಜ್ಞಾನ ಶಾಕುಂತಲ ನಾಟಕ :	ಚುರುಮುರಿ (ತುರಮರಿ) ಶೇಷಗಿರಿರಾವ್ ಬೆಳಗಾವಿ, ೧೮೭೦
(೪) ಶಾಕುಂತಲಾ :	'ಶಾಂತಕವಿ'
(೫) ಅಭಿಜ್ಞಾನ ಶಾಕುಂತಲ ನಾಟಕ :	ಬಿ. ಕೃಷ್ಣಪ್ಪ, ೧೯೨೨.
(೬) ಅಭಿಜ್ಞಾನ ಶಾಕುಂತಲ :	ಮಲ್ಲಿಕಾರ್ಜುನಪ್ಪ, ಶಿವಲಿಂಗಪ್ಪ, ರೈನಾಪುರ, ೧೯೩೩.
(೭) ಅಭಿಜ್ಞಾನ ಪ್ರದಾನ ನಾಟಕ :	ನಂಜನಗೂಡು ಸುಬ್ಬಾಶಾಸ್ತ್ರೀ, ಶೇಷಗಿರಿ—
(೮) ಕೇಡುತಂದ ಉಂಗುರ (ಶಾಕುಂತಲಾ ನಾಟಕದ ರೂಪಾಂತರ) :	ಶೇಷೋ ಜನಾರ್ದನ ಕೊಣ್ಣೂರ, ೧೯೨೦ ಧಾರವಾಡ
(೯) ಕನ್ನಡ ಅಭಿಜ್ಞಾನ ಶಾಕುಂತಲ :	ಎಸ್.ವಿ. ಪರಮೇಶ್ವರಭಟ್ಟ, ಮೈಸೂರು

ವಿಕ್ರಮೋರ್ವಶೀಯ :

(೧) ವಿಕ್ರಮೋರ್ವಶೀಯ (ಗದ್ಯ) :	ಮುಮ್ಮಡಿ ಕೃಷ್ಣರಾಜ
(೨) ಕರ್ಣಾಟಕ ವಿಕ್ರಮೋರ್ವಶೀಯ ನಾಟಕ :	ಸೋಸಲೆ ಅಯ್ಯಾಶಾಸ್ತ್ರೀ, ಮೈಸೂರು ೧೮೯೧.
(೩) ಕರ್ಣಾಟಕ ವಿಕ್ರಮೋರ್ವಶೀಯ ನಾಟಕ :	ಬಸವಪ್ಪಶಾಸ್ತ್ರೀ, ಅಭಿನವ ಕಾಳಿದಾಸ
(೪) ಕನ್ನಡ ವಿಕ್ರಮೋರ್ವಶೀಯ :	ಎಸ್.ವಿ. ಪರಮೇಶ್ವರಭಟ್ಟ, ಮೈಸೂರು

ಮಾಳವಿಕಾಗ್ನಿಮಿತ್ರ :

(೧) ಮಾಳವಿಕಾಗ್ನಿ ಮಿತ್ರೀಯ (ಟೀಕು)	ಮುಮ್ಮಡಿ ಕೃಷ್ಣರಾಜ
(೨) ಕರ್ಣಾಟಕ ಮಾಳವಿಕಾಗ್ನಿಮಿತ್ರ:	ಸಾಗ್ಗೆರೆ ಶ್ರೀಕಂಠಶಾಸ್ತ್ರೀ
(೩) ಮಾಳವಿಕಾಗ್ನಿಮಿತ್ರಂ :	ನಾರಾಯಣ ಗುರುನಾಥ ಕರಗುದರಿ, ಧಾರವಾಡ

(೪) ಮಾಳವಿಕಾಗ್ನಿಮಿತ್ರ : ಧೋಂಡೋ ನರಸಿಂಹ ಮುಳುಬಾಗಿಲು, ಧಾರವಾಡ
(೫) ಕರ್ಣಾಟಕ ಮಾಳವಿಕಾಗ್ನಿಮಿತ್ರ ನಾಟಕಂ : ಮೋಟಗಾನಹಳ್ಳಿ ಶಂ. ಸುಬ್ರಹ್ಮಣ್ಯ ಶಾಸ್ತ್ರೀ, ಬೆಂಗಳೂರು
(೬) ಮಾಳವಿಕಾಗ್ನಿಮಿತ್ರ : ನಂಜನಗೂಡು ಸುಬ್ಬಾಶಾಸ್ತ್ರೀ
(೭) ಕನ್ನಡ ಮಾಳವಿಕಾಗ್ನಿಮಿತ್ರ : ಎಸ್.ವಿ. ಪರಮೇಶ್ವರಭಟ್ಟ, ಮೈಸೂರು

ರಘುವಂಶ :

(೧) ಅಜನೃಪ ಚರಿತೆ, ದಿಲೀಪ ಚರಿತೆ: ಎಸ್. ಜಿ. ನರಸಿಂಹಾಚಾರ್ಯ
(೨) ರಘುವಂಶ : ಎಂ. ಕೃಷ್ಣಪ್ಪ.
(೩) ರಘುವಂಶ : ದೊಡ್ಡಬೆಲೆ ನಾರಾಯಣಶಾಸ್ತ್ರೀ.
(೪) ರಘುವಂಶ (೨ ನೆಯ ಸರ್ಗ) ಬಾಳಾಚಾರ್ಯ, ಗೋಪಾಳಾಚಾರ್ಯ ಸಕ್ಕರಿ, (ಶಾಂತಕವಿ)
(೫) ರಘುವಂಶ : ರಾಮಚಂದ್ರ, ಶ್ರೀನಿವಾಸ, ನರೇಗಲ್ಲ ೧೮೭೫
(೬) ರಘುವಂಶ ರಹಸ್ಯ ಬಸವರಾಜಶಾಸ್ತ್ರೀ, ಮಲ್ಲಿನಾಥಶಾಸ್ತ್ರೀ, ಕೋಡಿಕೊಪ್ಪಮಠ (೧೯೩೧)
(೭) ರಘುವಂಶಸಾರ ಸಂಗ್ರಹ ಶಿವರಾಮಯ್ಯ, ಸುಬ್ರಾಯ, ಐರೋಡಿ (೧೯೨೬)
(೮) ರಘುವಂಶ : ನರಹರಿ, ರಾಮಚಂದ್ರ, ಕನಮಡಿ ೧೯೨೮
(೯) ರಘುವಂಶ : ವೈ. ನಾಗೇಶಶಾಸ್ತ್ರೀ ೧೯೩೨
(೧೦) ಕನ್ನಡ ರಘುವಂಶ (ಸಮಗ್ರಕಾವ್ಯ) ಎಸ್.ವಿ. ಪರಮೇಶ್ವರಭಟ್ಟ, ಮೈಸೂರು

ಮೇಘದೂತ :

(೧) ಮೇಘದೂತ (ಷಟ್ಪದಿ) : ಶಾಂತಕವಿ, ಬಾಳಾಚಾರ್ಯ ಗೋಪಾಲಾಚಾರ್ಯ, ಸಕ್ಕರಿ, ೧೮೯೩
(೨) ಮೇಘದೂತ : ಮಲ್ಲಿಕಾರ್ಜುನಪ್ಪ ಶಿವಲಿಂಗಪ್ಪ, ರೈನಾಪುರ (೧೯೧೦)
(೩) ಮೇಘದೂತ : ದ. ರಾ. ಬೇಂದ್ರೆ,
(೪) ಮೇಘದೂತ : ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರೀ
(೫) ಕನ್ನಡ ಮೇಘದೂತ : ಎಸ್. ವಿ. ಪರಮೇಶ್ವರಭಟ್ಟ

ಋತುಸಂಹಾರ :

(೧) ಋತುಸಂಹಾರ : (ಶಾಂತಕವಿ) ಬಾಳಾಚಾರ್ಯ ಗೋಪಾಲಾಚಾರ್ಯ, ಸಕ್ಕರಿ

(೨) ಕನ್ನಡ ಋತುಸಂಹಾರ : ಎಸ್.ವಿ. ಪರಮೇಶ್ವರಭಟ್ಟ, ಮೈಸೂರು

ಕುಮಾರಸಂಭವ :

(೧) ಕರ್ಣಾಟಕ ಕುಮಾರಸಂಭವ : ಅಸಗ ? ೯ನೆಯ ಶತಮಾನ

(೨) ಕುಮಾರ ಸಂಭವ : ವೈ. ನಾಗೇಶಶಾಸ್ತ್ರೀ, (೧೯೩೮)

(೩) ಕುಮಾರ ಸಂಭವ : ದೊಡ್ಡಬೆಲೆ ನಾರಾಯಣಶಾಸ್ತ್ರೀ

(೪) ಕುಮಾರಸಂಭವ ಸಾರ : ಬಸವರಾಜಶಾಸ್ತ್ರೀ, ಮಲ್ಲಿನಾಥಶಾಸ್ತ್ರೀ, ಕೋಡಿಕೊಪ್ಪ ಮಠ.

(೫) ಕನ್ನಡ ಕುಮಾರ ಸಂಭವ : ಎಸ್.ವಿ. ಪರಮೇಶ್ವರಭಟ್ಟ, ಮೈಸೂರು

ಇಲ್ಲಿ ಕೊಟ್ಟಿರುವ ಪಟ್ಟಿಯು ಸಮಗ್ರವಾದುದೇನೂ ಅಲ್ಲ. ನಮಗೆ ದೊರೆತಷ್ಟು ವಸ್ತುವನ್ನು ಮಾತ್ರ ಸಂಗ್ರಹಿಸಿ ಕ್ರೋಡೀಕರಿಸಿದ್ದೇವಷ್ಟೆ. ಇತ್ತೀಚಿನ ಕೆಲವು ಭಾಷಾಂತರಗಳನ್ನು ಇನ್ನೂ ಪ್ರತ್ಯಕ್ಷವಾಗಿ ನೋಡಿಲ್ಲವಾದ ಕಾರಣದಿಂದ ಅವನ್ನು ಹೆಸರಿಸಿಲ್ಲ. ಹಾಗೆಯೆ ಹಳೆಯ ಅನುವಾದಗಳು ಇನ್ನೂ ಇದ್ದಿರಬಹುದು. ಒಮ್ಮೆ ಹೀಗೆ ಸಂಗ್ರಹಿಸಿದ ಒಂದು ಪಟ್ಟಿಯನ್ನು, ಅದು ಎಷ್ಟೆ ಅಸಮಗ್ರವಾದುದಾಗಿದ್ದರೂ, ಒಂದೆಡೆ ಪ್ರಕಟಿಸಿದರೆ ಕಂಡ ಯಾರಾದರೂ ತಮಗೆ ತಿಳಿದ ಅನುವಾದಗಳನ್ನು ತಿಳಿಸಿ ಸೇರಿಸಲು ನೆರವಾಗಬಹುದೆಂಬೊಂದು ಕಾರಣದಿಂದಷ್ಟೆ ಹೀಗೆ, ಅಪೂರ್ಣವಾದೊಂದು ಪಟ್ಟಿಯನ್ನೆ ಪ್ರಕಟಿಸಲಾಗಿದೆ. ಇದನ್ನು ತಯಾರಿಸಲು ಕವಿಚರಿತೆಯ ಮೂರನೆ ಭಾಗ, ಸಂಸ್ಕೃತ ನಾಟಕ (ಎ. ಆರ್. ಕೃ) ಸಿರಿಗನ್ನಡ ಗ್ರಂಥಕರ್ತರ ಚರಿತ್ರಕೋಶ, (ಶ್ರೀ. ವೆಂಕಟೇಶ ಸಾಂಗಲಿ) ಎಂಬ ಗ್ರಂಥಗಳನ್ನು ಆಶ್ರಯಿಸಿದೆ. ಆ ಕೃತಿಕಾರರಿಗೆ ನಾವು ಋಣಿಗಳು, ಅವರಿಗೆ ನಮ್ಮ ಕೃತಜ್ಞತಾಪೂರ್ವಕ ಧನ್ಯವಾದಗಳು. ಸಂ.

ನೇಹಿಗರೇ

ನೇಹಿಗರೇ ನೇಹಿಗರೇ
ಬೆಳಕಿನೂರ ದಾರಿಗರೇ
ಬೆಳಕಿನೂರ ಕೇರಿಗರೇ
ಕತ್ತಲ ದಾರಿಯ ಪಯಣಿಗರೇ—

ಬಂದಿರಿ ನೀವ್ ಕಂಡಿರಿ ನೀವ್
ಒಂದೇ ಚಣ ಒಡನಿದ್ದಂತೆಯೆ ತೆರಳಿದಿರಿ
ಚಿರ ಸಹಯೋಗಭ್ರಾಂತಿಯನೂಡಿಧಿರಿ,
ಮಧುರ ವಿಯೋಗಧ್ವಾಂತವನುಳಿಸಿದಿರಿ;
ಕೇಳದೆ ಬಂದಿರಿ, ಹೇಳದೆ ತೆರಳಿದಿರಿ—
ನೇಹಿಗರೇ. . . . .

ತೆಂಗುಪರಂಗಿಗೆ ಬಹ ರೆಂಬೆಯ ತೆರ ಬಂದು
ಎಳೆಸುಳಿಯಾಗೊಳಗಿಂದುಣ್ಮುತೆ ಮೂಡಿದಿರಿ
ಗರಿ ಗರಿಯಾಗೆಳೆ ಗರಿಯುರ್ಚುತೆ ಮರ್ಮರ ನಾದಂಗೈದಿದಿರಿ,
ಒಣಸೋಗೆಯ ಸೋಗಿಂದುದುರುತೆ ಗೆರೆಬರೆನೆನಪೊಂದನೆ
ನಿಲಿಸಿದಿರಿ.

ನೇಹಿಗರೇ................

ಆಲದ ಮರಕಿಳಿದೈತಹ ಬೀಳಲ ತೆರ ನೀವೇತಕೆ ಬಾಳಿರಿ?
ಮೂಲದ ಕಾಂಡವ ತುಸವುಳಿಸದವೊಲು ಬೆಳೆ ಬೆಳೆದಾಗುತೆ
ಚಿರದಾಲಂಬನದಾನಂದಸ್ತಂಭಗಳಾಗುಳಿದಿರಿರಿ?
ನೇಹಿಗರೇ ನೇಹಿಗರೇ
ಬೆಳಕಿನೂರ ದಾರಿಗರೇ. . . .

—ಸುಜನಾ

ಕುಮಾರಸಂಭವ-ಗಿರಿಜಾಕಲ್ಯಾಣ

ಕಾಳಿದಾಸನ ಕುಮಾರಸಂಭವ ಹರಿಹರನ ಗಿರಿಜಾಕಲ್ಯಾಣಗಳಲ್ಲಿ ಚಿತ್ರಿತವಾಗಿರುವ ಹರಗಿರಿಜಾ ಪ್ರೇಮಪ್ರಪಂಚವು ಆಯಾ ಕವಿಪ್ರತಿಭೆ ಮನೋಧರ್ಮಗಳಿಗೆ ಹಾಗೂ ಯುಗಮನೋಧರ್ಮಗಳಿಗೆ ಹಿಡಿದ ಸರಳಮುಕುರವಾಗಿದೆ. ಸುಮಾರು ಸಾವಿರ ವರ್ಷಗಳ ಅಂತರದಲ್ಲಿದ್ದ ಈ ಕವಿದ್ವಯರು ಭರತವರ್ಷದ ದಕ್ಷಿಣೋತ್ತರ ಭೂಖಂಡಗಳಲ್ಲಿದ್ದಂತೆಯೆ ಭಿನ್ನ ಪ್ರಕೃತಿಯಲ್ಲಿ ಬೆಳೆದು ಬಂದಿದ್ದರು. ರಾಜಾಶ್ರಯದ ತಂಬೆಳಗಿನಲ್ಲಿ, ಕೋಮಲ ಶೃಂಗಾರ ಚಂದ್ರಿಕಾಮೋದನಾಗಿ ಉಸಿರೆಳೆದು, ಸ್ಮೃತಿಗತವಾದ ಶ್ರುತಿಗಳನ್ನು ಶಾಸ್ತ್ರಸ್ಥವಾದ ವೇದಾಂತಗಳನ್ನು ಅವುಗಳ ಸದ್ಯಸ್ವರೂಪದಲ್ಲಿ ಸ್ವೀಕರಿಸಿ ಆ ಪ್ರಾಚೀನ ಪರಂಪರೆಯಲ್ಲೆ ಸಂತೃಪ್ತನಾಗಿದ್ದ ಸರಳಾಮೋದದ ರಾಜಕವಿಯೊಬ್ಬ. ಪಾಚಿಗಟ್ಟಿದ್ದ ಪ್ರಾಚೀನ ಪದ್ಧತಿಗಳನ್ನೆಲ್ಲ ಪ್ರಮಂಥನಗೈದು ಅನುಭವಸ್ಥವಾದ ನವ್ಯಯುಗಮೌಲ್ಯಗಳನ್ನು ಕಂಡು ಬೆಳೆದು ಬಾಳಿದ ಶಿವಶರಣರ ಕಾಲಾನಂತರದಲ್ಲಿ ಉಸಿರಿದ ವೀರೋತ್ಸಾಹದ ಭಕ್ತ ಕವಿಯೊಬ್ಬ.

ಕಾಳಿದಾಸ ಹರಿಹರರಿಬ್ಬರೂ ಅತಿ ಪ್ರಾಚೀನವೂ ಪರಮಪೂಜ್ಯವೂ ಹೈಮಾಚಲ ಸದೃಶವೂ ಆದ ಈ ಪಾರ್ವತೀ ಪರಮೇಶ್ವರರ ಪುಣ್ಯಪ್ರಣಯದ ಪ್ರಣವ ಕಥೆಯನ್ನೆ ತಮ್ಮ ಈ ಕಾವ್ಯಗಳ ವಸ್ತುವನ್ನಾಗಿ ಆರಿಸಿಕೊಂಡಿದ್ದಾರೆ. ದಾಂಪತ್ಯ ಪ್ರೇಮದ ಅತ್ಯಂತ ವರಿಷ್ಠ ಪ್ರತಿಮೆಯಾದ, ಸೃಷ್ಟಿಶಕ್ತಿಯ ದ್ವಿಮುಖವಾದ ಈ ಪ್ರಕೃತಿ ಪುರುಷರ ಚಿರನೂತನ ಪ್ರಣಯ ಪ್ರಣವ ಕಥೆಯನ್ನು ಹೇಗೆ ಅವರು ನಿರೂಪಿಸಿದ್ದಾರೆ ಎಂಬ ವಿವೇಚನೆಯೆ ನಮ್ಮ ಸದ್ಯದ ಕರ್ತವ್ಯ.

ಕವಿಕಾಳಿದಾಸ ತನ್ನ ಕಾವ್ಯವನ್ನು ನೇರವಾಗಿ ಹಿಮಾಚಲ ವರ್ಣನೆಯಿಂದಲೆ ಪ್ರಾರಂಭಿಸುತ್ತಾನೆ. ಹರಿಹರನ ಕಾಲಕ್ಕೆ ಅಷ್ಟಾದಶ ವರ್ಣನೆಯ ಬಾಹ್ಯ ಶೃಂಖಲೆಗಳು ಉಸಿರುಕಟ್ಟುವಂತೆ ಬಿಗಿದುಕೊಂಡಿದ್ದುದರಿಂದಲೊ ಏನೊ ಅವನು ತನ್ನ ಕಾವ್ಯ ಕಥೆಯನ್ನು ಕಾಣಿಸುವ ಮುನ್ನ ಸಹೃದಯರನ್ನು ಸಾಗರ ಗಿರಿವನ ನದಿನದ ಉಪವನ ಮೊದಲಾದ ಗೊಂಡಾರಣ್ಯದಲ್ಲಿ ಕರೆದುಕೊಂಡು ಹೋಗುತ್ತಾನೆ: ಅಷ್ಟೆಲ್ಲ ಕಿರುಕುಳವಾದರೂ ಅವನ ಉತ್ಸಾಹದ ವರ್ಣನೋದ್ಗಾರಕ್ಕೆ ಕಲ್ಪನೆಯ ಹುಚ್ಚಿಗೆ ಮೆಚ್ಚುಗೊಂಡವರಾಗಿ ಮುನ್ನಡೆಯುತ್ತೇವೆ. ಆದರೆ ಕಾಳಿದಾಸನ ಕಾಲಕ್ಕಿನ್ನೂ ಅಷ್ಟಾದಶವರ್ಣನೆಗಳ ಪ್ರಭುತ್ವ ಮೇಲುಗೈಯಾಗಿದ್ದಿರಲಿಲ್ಲ. ಆ ಸೌಲಭ್ಯ ಅವನಿಗಿತ್ತು. ನೇರವಾಗಿಯೆ ಹೊರಡುವ ಅವನ ಕಾವ್ಯಯಾತ್ರೆಯ ಪ್ರಾರಂಭದಲ್ಲೆ ಎದುರುಗೊಳ್ಳುವ ಹಿಮಾಲಯ ಚಿತ್ರವು ಸಹೃದಯರನ್ನು ಈಷನ್ಮಾತ್ರವೂ ಪುಳಕಿತರನ್ನಾಗಿಮಾಡುವುದಿಲ್ಲ. "ಪೃಥಿವ್ಯಾ ಇವ ಮಾನದಂಡಃ" ಎಂಬೊಂದು ಮಾತನ್ನು ಬಿಟ್ಟರೆ ಉಳಿದಂತೆ ಬರುವ ವರ್ಣನೆಗಳು

ಅತ್ಯಂತ ಸಾಧಾರಣ ಕಲ್ಪನೆ ಸೃಷ್ಟಿಸಿದಂತಹ ಮಾತುಗಳು; ಸಂಪ್ರದಾಯ ಬದ್ಧ ಚಮತ್ಕಾರ ಚಿತ್ರಿಸಿದ ಸೊಬಗುಗಳು. ಹಿಮಗಿರಿಯ ಭವ್ಯಮಹೋನ್ನತಿಯಾಗಲಿ, ಅಲ್ಲಿಯ ಶೀತಸ್ಪರ್ಶವಾಗಲಿ, ಮೇಘಾಚ್ಛಾದಿತ ಶ್ವೇತಶೀತಲನಿಗೂಢ ಮೌನವಾಗಲಿ ಏನೊಂದೂ ಪ್ರತಿಮಿತವಾಗಿಲ್ಲ. ಅಲ್ಲಿಯೂ, ಆ ಶೀತೋನ್ನತ ಪ್ರದೇಶದಲ್ಲೂ ಗಜಗಳು, ಸಿಂಹನಖಹತವಾದ ಗಜಗಳಿಂದುದುರಿದ ಮುತ್ತುಗಳು, ಧಾತುರಾಗದಿಂದ ಭೂರ್ಜಪತ್ರದ ಮೇಲೆ ಪ್ರಣಯಪತ್ರ ಬರೆಯುವ ವಿದ್ಯಾಧರಿಯರು, ಮೇಲುದ ಜಾರಲು ನಾಚಿದ ಕಿನ್ನರಿಯರಿಗೆ ಮರೆಯಾಗುವ ಮೋಡಗಳು, ಕತ್ತಲೆಯಲ್ಲಿ ಸುರತ ಪ್ರದೀಪವಾಗುವ ಓಷಧಿಗಳು, ಕೊನೆಗೆ ಸೂರ್ಯನ ಓರೆಕಿರಣಗಳಿಂದ ಅರಳಿದ ಗಿರಿಯ ನೆತ್ತಿಯ ಕೆರೆಯ ತಾವರೆಗಳನ್ನು ಕೊಯ್ಯುವ ಸಪ್ತರ್ಷಿಗಳು ಇತ್ಯಾದಿ ಇತ್ಯಾದಿ ಮೆರೆಯುತ್ತಾರೆ. ಹಿಮಗಿರಿಯ ವಾಸ್ತವಚಿತ್ರವನ್ನೆ ಕೊಟ್ಟಿದ್ದರೂ ಮಹತ್ತರಾನುಭೂತಿಯೆ ಉಂಟಾಗುತ್ತಿದ್ದಿತು. ಆದರದೊಂದೂ ನೆರವೇರಿಲ್ಲ ಇಲ್ಲಿ. ಹಿಮಾಲಯದ ಮೇಲೆ ಕವಿತೆ ಬರೆದ ಮಾತ್ರದಿಂದಲೆ ಅದಕ್ಕೆ ಹಿಮಾಲಯ ಗುರುತ್ವ ಸ್ಥಿರತ್ವಗಳು ಬರುವುದಿಲ್ಲವೆಂಬುದು ಸರ್ವವಿದಿತ. ಹಿಮಾಲಯವನ್ನು ಕುರಿತ ಕವಿತೆ ಗುಂಡು ಸೂಜಿಯನ್ನು ಕುರಿತ ಕವಿತೆಗಿಂತಲೂ ಹಗುರವಾಗಬಹುದು. ಕಾಳಿದಾಸನ ಈ ಹಿಮಗಿರಿ ವರ್ಣನೆ, ಅವನ ಈ ಕಾವ್ಯದ ವಸ್ತುವಿನ ಮೇರುಭವ್ಯತೆ ಎಷ್ಟರಮಟ್ಟಿಗೆ ಇಲ್ಲಿ ಕೃತಿರೂಪದಲ್ಲಿ ಸಂಭವಿಸಿದೆ, ಪ್ರತಿಮಿತವಾಗಿದೆ ಎಂಬ ಅಂಶವನ್ನು ವ್ಯಂಗವಾಗಿ ಸೂಚಿಸುತ್ತಿರುವಂತೆ ಕಾಣುತ್ತದೆ. ಹರಿಹರನ ಆ ದೀರ್ಘ ವರ್ಣನೆಯನ್ನು—ಅದು ಹಲವೆಡೆಗಳಲ್ಲಿ ಉನ್ಮಾದಕವಾಗಿ ಸುಂದರವಾಗಿದ್ದರೂ–ನಿರ್ದಾಕ್ಷಿಣ್ಯವಾಗಿ ಸಂಗ್ರಹಿಸಿದರೆ ನಮಗೆ ಹಿಮಗಿರಿಯ ಮಹಿಮಾವರಣವನ್ನು ಕೊಂಚಮಟ್ಟಿಗಾದರೂ ಅರಿವು ಮಾಡಿಕೊಡುವಂತಹ ಮಾತುಗಳು ಸಿಗುತ್ತವೆ. "ಸ್ಮರರಿಪು ನಾಟ್ಯದೊಳ್ ನೆಲಸಿ ನಿಂದವೊಲೊಪ್ಪು"ವ ಆ ಗಿರಿ ಪ್ರದೇಶದಲ್ಲಿ "ಪುಣ್ಯಂ ಪಣ್ಣಾದ ತೆಱ" ನಿದ್ದ ತಾಪಸರು ಮಾಡುವ ಹೋಮಗಳು ರಚಿಸುವ ಧೂಮರಾಜಿಯ ಚಿತ್ರವಿದು:

> "ಇದು ಭೂಮಿ ಸ್ಥಾನದಿಂ ಮುಕ್ತಿಗೆ ನಡೆಯಿಪ ನಿಲಾಶ್ಮ ಸೋಪಾನಮಾಹಾ
> ಇದು ಸಂಸಾರಾತಪಶ್ರಾಂತರೊಳತಿಸುಖಮಿಾವಂಬುದ ಶ್ರೇಣಿ ಮೇಣಿಂ
> ತಿದು ದುಷ್ಕರ್ಮಾಬ್ಜಷಂಡಂಗಳನುಱಿಕೊರಗಿಪ್ಪೊಂದು ನೀಹಾರಮೆಂಬಂ
> ದದೆ ಹೋಮಸ್ತೋಮಧೂಮಂ ನೆಗೆದುದು ಮುನಿಗಳ್ ಬೇಳ್ವ ಮಂತ್ರಾಗ್ನಿಯಿಂದಂ॥"
>
> ೧.೬೭.

ಉಪಮಾನವಾಗಿ ಬಂದಿರುವ ವಸ್ತುಗಳೆಲ್ಲ ಹಳೆಯವಾದರೂ ಸ್ವಭಾವೋಕ್ತಿಗಿಂತಲೂ ಅತಿಶಯತೆಗೆ ಪ್ರಾಧಾನ್ಯವಿದ್ದರೂ ಅಖಂಡರೂಪಕದಿಂದ ಧ್ವನಿತವಾಗುವ ಭಾವವು ಸುಂದರವಾಗಿದೆ. ಹೀಗೆ ತಪೋವನಗಳಿಂದ ಪರಿವೃತವಾದ ಗಿರಿರಾಜನ ಪುರೋಪವನದ ವರ್ಣನೆ ಬರುತ್ತದೆ. ಅಲ್ಲಿ ಬರುವ ಚಿತ್ರವೊಂದು ಅತ್ಯಂತ ಧ್ವನಿಪೂರ್ಣವಾಗಿದೆ.

ಸಿರಿ ತಂದಿಕ್ಕಿದಶೋಕೆ ವಾಗ್ವನಿತೆಯಿಟ್ಟಾಮ್ರಂ ಶಚೀದೇವಿಯಿ
ಟ್ಟಿರನೇರಿಲ್ ಮಿಗೆ ರಂಭೆಯಿಟ್ಟ ಕದಳೀಷಂಡಂ ಸುರಸ್ತ್ರೀಯರಿ
ಟ್ಟರವಿಂದಾಕರಮೂರ್ವಶೀವಧು ಸರಾಗಂ ತಂದ ಪೂಗದ್ರುಮಂ
ತರದಿಂದಂ ರತಿಯಿಟ್ಟ ದಾಡಿಮಕುಲಂ ಸಾರ್ವರ್ತುಕೋದ್ಯಾನದೊಳ್॥—೨.೩೧.

ಲೋಕಮಾತೆಯ ಬಾಲಲೀಲೆಗೆ ಆಡುಂಬೊಲವಾಗುವ ಉದ್ಯಾನದಲ್ಲಿರುವ ವನಸ್ಪತಿಯ ಚಿತ್ರವಿದು. ಕವಿ ತನ್ನೆಲ್ಲ ವರ್ಣನೆಯಲ್ಲೂ ಆ ತನ್ನ ಪರಮೋದ್ದೇಶವನ್ನೆ ಧ್ವನಿಸುತ್ತಾನೆ. ಆದರೆ ಕಾಳಿದಾಸನ ಹಿಮಗಿರಿಯ ವರ್ಣನೆಯಲ್ಲಿ ನಮಗೆ ವ್ಯಕ್ತವಾಗುವುದೇನೊ ತಿಳಿಯದು.

ಈ ಹಿಮವಂತನಿಗೆ ಆತ್ಮಾನುರೂಪ ಸತಿಯಾಗಿ ಮೇನಕೆ ಬರುತ್ತಾಳೆ. ಮೈನಾಕನನ್ನು ಪಡೆಯುತ್ತಾಳೆ. ಆ ವೇಳೆಗೆ ದಕ್ಷಯಜ್ಞದಲ್ಲಿ ತನಗಾದ ಅಪಮಾನವನ್ನು ಸಹಿಸಲಾರದ ಶಂಕರಿ ಯೋಗದಿಂದ ಒಡಲುಳಿದು ಶೈಲವಧು ಮೇನಕೆಯ ಮಗಳಾಗಿ ಹುಟ್ಟುತ್ತಾಳೆ. ಅವಳ ಹುಟ್ಟಿನಿಂದ ದಿಕ್ಕುಗಳು ತೊಳಗುತ್ತವೆ, ಗಾಳಿ ನಿರ್ಮಲವಾಗುತ್ತದೆ. "ಪ್ರಸನ್ನ ದಿಕ್ಪಾಂಸು ವಿವಿಕ್ತವಾತಂ"—ಕಾಳಿದಾಸನ ಈ ವರ್ಣನೆ ಶ್ರೇಷ್ಠವಾಗಿದೆ. ಮುಂದೆ ಈ ಶಿಶು ಬಳೆಯುತ್ತಾಳೆ, ಏಕಕಲೆಯ ಚಂದ್ರಶಿಶು ಬಳೆಬಳೆದು ತುಂಬುಬೆಳಗಾಗುವಂತೆ. ತಂದೆ ಹಿಮವಂತನಿಗೆ ಇವಳಲ್ಲಿ ಅತಿಶಯವಾದ ಸುಮ್ಮಾನ:

"ತಂದೆ ಹಿಮವಂತನಿಗೆ ತನ್ನಿತರ ಮಕ್ಕಳಲಿ
ಪಾರ್ವತಿಯ ನೋಟದೊಳೆ ಸುಮ್ಮಾನವು
ಚೈತ್ರದಲಿ ಅರಳಿರುವ ಬಗೆಬಗೆಯ ಹೂಗಳಲಿ
ಚೂತ ಸಂಗವೆ ದುಂಬಿಗತಿ ಮೋದವು.*

ಇಲ್ಲಿ ಬಂದಿರುವ ಉಪಮಾನವನ್ನು ಓದಿದಾಗ ಆಶ್ಚರ್ಯವಾಗುತ್ತದೆ, ಕಾಳಿದಾಸನ ಉಪಮಾಪ್ರತಿಭೆ ಹೇಗೆ ತಾನೆ ಇಂಥ ಚಿತ್ರವನ್ನು ಕೊಟ್ಟಿತು ಎಂದು. ತಂದೆಗೆ ತನ್ನ ನೂರು ಜನ ಮಕ್ಕಳಲ್ಲಿ ಗಿರಿಜೆಯೊಬ್ಬಳನ್ನು ಕಂಡರೆ ಅತಿತೃಪ್ತಿ; ಚೈತ್ರದಲ್ಲಿ ಅರಳಿರುವ ಬಗೆಬಗೆಯ ಹೂಗಳಲ್ಲಿ ಮಾವಿನ ಹೂವಿನ ಸಂಗವೆ ದುಂಬಿಗೆ ಸವಿಶೇಷವಾಗಿರುತ್ತದೆ. ಈ ಸಾದೃಶ್ಯ, ಚಿತ್ರ ಹೇಗೆ ತಾನೆ ಔಚಿತ್ಯಪೂರ್ಣವಾಗಿದೆ. ದುಂಬಿ ಹೂವುಗಳ ಸಂಬಂಧ ಪ್ರಣಯಿಗಳ ಸಂಬಂಧವನ್ನು ಚಿತ್ರಿಸುವ ಪರಿಕರವಾಗಿ ಎಷ್ಟು ಚಿರಪರಿಚಿತವಾಗಿದೆ ಎಂದರೆ ಅದು ಕವಿಸಮಯವೆ ಆಗಿ ಹೋಗಿದೆ. ಶಾಕುಂತಲಾ ನಾಟಕದಲ್ಲಿ ಬರುವ ಆ ಪ್ರಸಿದ್ಧ ಪದ್ಯವನ್ನಾದರು ನೋಡಿ.

೫ ಅಂಕ ೧ ಪದ್ಯ.

---

* ಮಹೀಭೃತಃ ಪುತ್ರವತೋಽಪಿ ದೃಷ್ಟಿಸ್ತಸ್ಮಿನ್ನಪತ್ಯೇ ನ ಜಗಾಮತೃಪ್ತಿಮ್ ।
ಅನಂತಪುಷ್ಪಸ್ಯ ಮಧೋರ್ಹಿ ಚೂತೇ ದ್ವಿರೇಫಮಾಲಾ ಸವಿಶೇಷಸಂಗಾ ॥
೧-೨೭.

ಅದನ್ನು ಸವಿದ ನಾಲಗೆ ಇದನ್ನು ಹೇಗೆ ತಾನೆ ರುಚಿಸಬಲ್ಲದು ? ಕವಿಪ್ರತಿಭೆ ಯಾವುದನ್ನೂ ಅತಿಕ್ರಮಿಸಬಲ್ಲದು, ನಿಯತಿಕೃತಿಯನ್ನೂ ಅತಿಕ್ರಾಂತಗೈಯುವಾಗ ಕವಿಸಮಯದ ಮಾತೇಕೆ; ಹೀಗೆನ್ನಬಹುದು. ಆದರೆ ಅತಿಕ್ರಾಂತತೆ ಮಹತ್ಪರಿಣಾಮಾರ್ಹವಾಗಿದ್ದಿದ್ದರೆ ಪ್ರಶಂಸಾರ್ಹವೆ. ಆದರಿಲ್ಲಿ ಅಂಥ ಯಾವ ಸಾಧನೆಯಾಗಿದೆ ? 'ಉಪಮಾ ಕಾಳಿದಾಸಸ್ಯ' ಎಂಬಂಥ ವ್ಯರ್ಥ ಪ್ರಲಾಪಗಳಿಗೆ ಇಂಥ ಅಸಂಬದ್ಧತೆಗಳು ಕಾಣದೆ ಹೋಗುವುದು ಸಹಜ.

ಅದಿರಲಿ; ಮುಂದೆ ಗಿರಿಜೆ ಬೆಳೆಯುತ್ತಾಳೆ. ಅದರ ವರ್ಣನೆಯಂತೂ ರೋಚಕವಾಗಿಯೆ ಇದೆ. ಪೂರ್ವ ಜನ್ಮದ ಅವಳ ಗುಣಗಳು ಅಂದು ಗಿರಿಜೆಯನ್ನು ಅನುಸರಿಸಿ ಬರುತ್ತವೆ, ಹಂಸೆಗಳು ಶರತ್ಕಾಲದಲ್ಲಿ ಗಂಗೆಯನ್ನರಸಿ ಹೋಗುವಂತೆ, ಕತ್ತಲಾದೊಡನೆಯೆ ಬೆಳಕೆಲ್ಲವೂ ಓಷಧಿಗಳಲ್ಲಿ ಅಂತರ್ಗತವಾಗಿ ಹೋಗುವಂತೆ. ಮಾತೇನೊ ಚೆನ್ನಾಗಿದೆ; ಆದರೆ ಅವು ಎಷ್ಟರಮಟ್ಟಿಗೆ ಹೊಸ ಸೃಷ್ಟಿಯಾಗಿವೆ ವಿವೇಚಿಸಬೇಕು. ಈ ಪೂರ್ವಜನ್ಮದ ಗುಣಗಳನ್ನು ತುಂಬಿಕೊಂಡು ಬೆಳೆಯುತ್ತಿದ್ದ ಗಿರಿಜೆ ಪುಷ್ಪವಿರಹಿತ ಕಾಮಬಾಣವೆಂಬಂತೆ ಚಾರುಯೌವನವನ್ನು ಪಡೆಯುತ್ತಾಳೆ; ಆಕೆಯ ಕಾಲಂದುಗೆಯ ನಾದವನ್ನು ಕಲಿಯಲು ಹಂಸ ತನ್ನ ಅಲಸಗಮನವನ್ನು ಕಲಿಸಿತೇನೊ; ಅವಳನ್ನು ಸೃಜಿಸಿದ ವಿಧಿ ಶೇಷಾಂಗ ನಿರ್ಮಾಣವಿಧಿಯಿಂದ ತಾನು ಲಾವಣ್ಯ ಪಡೆದನೇನೊ; ಅವಳ ನುಣ್ದೊಡೆಯನ್ನು ಸೊಂಡಿಲಿಗೆ ಹೋಲಿಸುವುದೆಂದರೆ ಅದು ಅತಿ ಕಠಿಣ, ಬಾಳೆಗೆ ಹೋಲಿಸಲೆಂದರೆ ಬಾಳೆ ಬಹಳ ಶೀತವಲ್ಲ; ಶಂಕರ ಸತಿಯಾದ ಈಕೆಯ ಕಾಂತಿ ಊಹಾತೀತವಲ್ಲಾ ; ಅದಿರಲಿ, ನೀವಿಯನ್ನು ಅತಿಕ್ರಮಿಸುತ್ತಿರುವ ನತನಾಭಿರಂಧ್ರವನ್ನು ಬಳಸಿ ರಾಜಿಸುತ್ತಿರುವ ನವರೋಮರಾಜಿ ಅವಳ ನೀಲ ಮೇಖಲೆಯ ಮಧ್ಯದ ರತ್ನದಂತಿದೆ; ಅವಳ ತ್ರಿವಳಿಯೋ ಕಾಮನ ಆರೋಹಣಕ್ಕೆ ಯೌವನ ನಿರ್ಮಿಸಿದ ಸೋಪಾನಪಂಕ್ತಿಯಂತಿವೆ; ಅವಳ ಅನ್ಯೋನ್ಯ-ಸ್ಪರ್ಶಿತಸ್ತನದ್ವಯಗಳು ಬಿಸತಂತುವಿಗೂ ಎಡೆಯಿಲ್ಲದಂತೆ ಒತ್ತಾಗಿ ಬೆಳೆದಿವೆ; ಸೋತ ಮನ್ಮಥ ಶಿರೀಷ ಕುಸುಮಕ್ಕಿಂತಲೂ ಕೋಮಲವಾದ ಇವಳ ತೋಳುಗಳನ್ನು ಹರಕಂಠಪಾಶವಾಗಿ ಮಾಡಿದನಲ್ಲ; ಚಂದ್ರನನ್ನು ಸೇರಿದರೆ ಅರವಿಂದದ ಕಾಂತಿ ದೊರೆಯದು, ತಾವರೆಯನ್ನು ಸಾರಿದರೆ ಇಂದು ಕಾಂತಿ ಸಿಗದು ಎಂದು ಚಿಂತಿಸುವ ಲಕ್ಷ್ಮಿಗೆ ಉಭಯ ಕಾಂತಿಯೂ ಉಮೆಯ ಮುಖದಲ್ಲೆ ಲಭಿಸಿತಲ್ಲ; ಅಮೃತವನ್ನೊಸರುವ ಅವಳ ನುಡಿಗಳಿಂದ ಕೋಗಿಲೆಯ ಇಂಚರವೂ ಪರಮಕರ್ಕಶ ಅಪಸ್ವರವೆಂಬಂತೆ ತೋರುತ್ತಿದೆ; ಇತ್ಯಾದಿ ಇತ್ಯಾದಿ ವರ್ಣಿಸಿ ವರ್ಣಿಸಿ ಬೇಸತ್ತ ಕವಿ ಕೊನೆಗೆ ಹೇಳುತ್ತಾನೆ :

" ಎಲ್ಲ ತೆರನುಪಮಾನ ಕರಣಗಳನಳವಡಿಸಿ
ಎಡೆಯರಿಯುತನುಗೊಳಿಸಿ ನೋಂತು ಶ್ರಮಿಸಿ
ವಿಧಿಯವಳ ಸೃಜಿಸಿದನು ಸರ್ವ ಸೌಂದರ್ಯವನು
ಒಂದೆಡೆಯೆ ತಾನೊಮ್ಮೆ ನೋಡಲೆಳಸಿ. " ೧—೪೯

ಅಷ್ಟೆಲ್ಲ ಮಾತುಗಳಲ್ಲಿ ವರ್ಣಿಸಿದ ಮೇಲೆ ಈ ಮಾತನ್ನೆ ಆಡಬೇಕು. ಮಾಲವಿಕೆಯಾಗಲಂತೆ, ಊರ್ವಶಿಯಾಗಲಂತೆ, ಶಂಕುತಲೆ ಗಿರಿಜೆಯಾಗಲಂತೆ ಎಲ್ಲರ ಸೌಂದರ್ಯವನ್ನೂ ಬ್ರಹ್ಮ ತನ್ನ ಸರ್ವಾದರ್ಶ ಪ್ರಥಮ ಪ್ರತಿಗಳಾಗಿಯೆ ಸೃಷ್ಟಿಸಿದ. ಅದೆ ಮಾತು, ರೀತಿಬೇರೆ ಇರಬಹುದು; ಅದೆ ಅಚ್ಚು, ಅದೆ ಎರಕ, ಅದೆ ರೂಪ; ಹೆಸರು ಬೇರೆಯಷ್ಟೆ. ಮುಂದೆ ಬಂದ ಬಹುಜನ ಕವಿಗಳಿಗೆ ಈ ಪಲಾಯನಕ್ರಮ ಪರಮಾದರ್ಶವಾಯಿತು. ಹೋಗಲಿ, ಇಲ್ಲಿಯ ಗಿರಿಜೆಯನ್ನು ಹೇಗೆತಾನೆ ಉಳಿದ ಹೆಣ್ಣುಗಳಿಂದ ಬೇರ್ಪಡಿಸಲು ಸಾಧ್ಯ? ಜಗನ್ಮಾತೆಯಾದವಳ ಸೌಂದರ್ಯವೆ ಇದು? ಸಾಧಾರಣ ಹೆಣ್ಣಿನ ಸೌಂದರ್ಯವೆ ಆಗಲಿ, ಮೇಲಿನ ಮಾತು ಹೃದಯಸ್ಪರ್ಶಿಯಾದ ವರ್ಣನೆಯೆ, ಇಲ್ಲ ಬರಿಯ ಉಡಾಫೆಯ ಚಮತ್ಕಾರವೆ? ಕವಿಯ ವರ್ಣನೆ ಕಡೆದು ನಿಲ್ಲಿಸಿರುವ ಈ ಹೆಣ್ಣು ಕಲ್ಪನಾ ಇಂದ್ರಿಯಗಳಿಂದ ಮುಟ್ಟುವಷ್ಟು ಗಟ್ಟಿಮುಟ್ಟಾಗಿ ಸಜೀವವಾಗಿ ನಿಂತಿರುವಳೆ? ಮೇಲಾಗಿ ಇದು ಪಾರ್ವತಿಯ ವರ್ಣನೆಯೆ? ಜಗನ್ಮಾತೆಯ ಬಾಹ್ಯ ಸೌಂದರ್ಯವನ್ನು ವರ್ಣಿಸಬಾರದೆಂದಲ್ಲ. ಪರಾಶಕ್ತಿ ಮಾನವ ಲೋಕದಲ್ಲಿ ಶರೀರಧಾರಣೆ ಮಾಡಿದ ಮೇಲೆ ನಾವು ಅವಳನ್ನು ಕಾಣುವುದಾದರೂ ಅವಳ ಶರೀರ ರೂಪದರ್ಶನ ಮುಖಾಂತರವೆ. ಆದರೆ ಆ ರೂಪದಲ್ಲಿ ಅತಿಕ್ರಾಂತವಾಗಿ, ಸದಾ ಪ್ರಕಾಶವಾಗುತ್ತಿರುವ ಒಂದು ಅತೀತ ತೇಜಸ್ಸಿಲ್ಲವೆ? ರೇಡಿಯಂ ಲೋಹವನ್ನೂ ಕಬ್ಬಿಣದ ಅದುರನ್ನೂ, ಎರಡೂ ಲೋಹಗಳೆ ಆದರೂ, ಒಂದೇ ತಕ್ಕಡಿಯಲ್ಲಿ ಯಾವ ಬೆಪ್ಪುತಕ್ಕಡಿಯೂ ತೂಗುವುದಿಲ್ಲ. ಎರಡೂ ಒಂದೆ ತೂಕವಿದೆ ಎಂದು ಒಂದೆ ತಕ್ಕಡಿಯಲ್ಲೆ ತೂಗಲಂತೆ; ಆದರೆ ಅವುಗಳ ತೂಕ ನಮಗೆ ವೇದ್ಯವಾಗುತ್ತಿರುವಂತೆ ಅವುಗಳ ಗಾತ್ರಮಿತವಾದ ಹಾಗೂ ಗಾತ್ರಾತೀತವಾದ ತೇಜಸ್ಸು ಪ್ರಭೆ ಪ್ರಸಾರವಾಗುತ್ತಿರುವುದಿಲ್ಲವೆ? ಅದನ್ನೂ ಕವಿ ಕಾಣಬೇಕಲ್ಲವೆ, ಕಾಣಿಸಬೇಡವೆ? ಗಿರಿಜೆಯ ವರ್ಣನೆ ಊರ್ವಶಿಯ ವರ್ಣನೆಗಿಂತ ಬೇರೇನು? ಹೋಗಲಿ ಅದರಲ್ಲಿ ಜೀವರಕ್ತವಾದರೂ ಉಂಟೆ?

ಮಹರ್ಷಿ ವಾಲ್ಮೀಕಿಯು ಸೀತಾದೇವಿಯನ್ನು ಸ್ವಯಂವರ ಸನ್ನಿವೇಶದಲ್ಲೂ, ಅದು ಆಕೆಯ ಪ್ರಥಮದರ್ಶನವಾದರೂ, ಬಾಯಿಬಿಟ್ಟು ವರ್ಣಿಸುವುದಿಲ್ಲ. ಸ್ವಯಂವರದಲ್ಲಿ ಹೆಣ್ಣಿನ ಸೌಂದರ್ಯವನ್ನು ಯಾರು ಬೇಕಾದರೂ ನೋಡಬಹುದಂತೆ; ಹಾಗಿದ್ದರೂ ಆ ಬ್ರಹ್ಮರ್ಷಿ ಆಕೆಯ ಶರೀರಮಿತ ಸೌಂದರ್ಯವನ್ನು ವರ್ಣಿಸ ಹೋಗುವುದೆ ಇಲ್ಲ. ರಾಮನನ್ನು ಸಮೀಪಿಸುತ್ತಿರುವ ಅವಳು ಯಜ್ಞವೇದಿಯನ್ನು ಸಮೀಪಿಸುವ ಯಜ್ಞಾಗ್ನಿಯಂತಿದ್ದಳಂತೆ; ಅಷ್ಟೆ. ಅವಳನ್ನು ಮುಂದೆ ಕವಿ ತಾನೆ ಸಂಬೋಧಿಸಬೇಕಾದಾಗಲೆಲ್ಲ, ಶುಚಿಸ್ಮಿತಾ, ಪೂರ್ಣೇಂದುವದನಾ, ಸ್ಮಿತಪೂರ್ವ ಭಾಷಿಣಿ ಮುಂತಾದಾಗಿಯೆ ವರ್ಣಿಸುತ್ತಾನೆ. ಆದರೆ ವಾಲ್ಮೀಕಿಗೆ ಹೆಣ್ಣಿನ ರೂಪವನ್ನು ವರ್ಣಿಸಬಾರದೆಂಬ ಶಠತ್ವವೇನೂ ಇರಲಿಲ್ಲ. ಅಂಥ ಎಷ್ಟೋ ಸನ್ನಿವೇಶ

ಗಳನ್ನು ಅವನು ನೀಡಿದ್ದಾನೆ. ರಾಕ್ಷಸ ಸ್ತ್ರೀಯರು, ಅಯೋಧ್ಯಾವನಿತೆಯರು ಮುಂತಾದವರನ್ನು ವರ್ಣಿಸುವಾಗ ಆ ಮೇಲ್ಮೆಯನ್ನು ಕಾಣಬಹುದು. ಸ್ವಯಂ ಸೀತಾದೇವಿಯ ಬಾಹ್ಯ ಸೌಂದರ್ಯದ ರೋಚಕ ವರ್ಣನೆಯನ್ನೂ ಒಂದೆಡೆ ನೀಡುತ್ತಾನೆ. ಅದು, ಸಂನ್ಯಾಸಿವೇಷಧಾರಿ ರಾವಣ ಮಾಡುವ ಅವಳ ವರ್ಣನೆ. ಅದನ್ನು ಯಾರಾದರೂ ಓದಿನೋಡಬಹುದು, ಎಷ್ಟು ಸಜೀವವಾಗಿದೆ, ಎಷ್ಟು ಸುಂದರವಾಗಿದೆ, ಹಾಗೂ ಎಷ್ಟು ಸಂಯಮ ಪೂರ್ಣವಾಗಿದೆ ಎಂಬುದನ್ನು ತಿಳಿಯ ಬಹುದು. ಇಲ್ಲಿ, ಪಾರ್ವತಿಯ ವರ್ಣನೆಯಲ್ಲಿ ಬಂದಿರುವ ಕೆಲವೆ ಕೆಲವು ಸೌಂದರ್ಯಾ ಭಾಸ ವರ್ಣನೆಗಳು ವಾಲ್ಮೀಕಿಯಲ್ಲಿ ಸುಂದರವಾಗಿಯೆ ಬಂದಿರುವುದನ್ನೂ ನೋಡ ಬಹುದು.

ಒಟ್ಟಿನಲ್ಲಿ ಹೆಣ್ಣನ್ನು ನೋಡುವ ದೃಷ್ಟಿ ಬೇರಾಯಿತು; ವರ್ಣನೆ ಬೇರಾಯಿತು. ಮೇಲಾಗಿ ಪ್ರತಿಭೆಯಲ್ಲಿ ತರತಮ ಅಂತರ ಉಂಟಾಯಿತು. ಮುಂದೆ ಬಂದ ಕವಿಗಳಿಗೆ ಕಾಳಿದಾಸನನ್ನು ಮೀರಿಸಬೇಕೆಂತ ದುಷ್ಟಚಪಲ ಬಂದಿತೆ ವಿನಾ ವಾಲ್ಮೀಕಿ ಯನ್ನು ಅನುಕರಿಸಬೇಕು ಎಂಬ ಆಸೆಯಾದರೂ ಬರಲಿಲ್ಲ. ಹೆಣ್ಣಿನ ವರ್ಣನೆ ಹಾಗಾಗಿ ವಿಷಯಾಗ್ನಿ ಕುಂಡದಲ್ಲಿ ಬಿತ್ತು. ಪಾಶ್ಚಾತ್ಯ ಕವಿಗಳಲ್ಲಿ ಸಾಧಾರಣ ನಾದವನೂ ಗಂಭೀರವಾಗಿ ಹೇಳುವ ವರ್ಣನೆಯನ್ನು ನಮ್ಮಲ್ಲಿ ಪ್ರಸಿದ್ಧ ಕವಿಗಳೂ ರುಚಿಗೊಂಡು ವರ್ಣಿಸತೊಡಗಿದರು. ಷೇಕ್‌ಸ್‌ಪಿಯರ್ ಮಹಾಕವಿ ಎಲ್ಲಾದರೂ ಹೆಣ್ಣಿನ ಸೌಂದರ್ಯವನ್ನು ಹಾಗೆ ವರ್ಣಿಸಿರುವನೆ, ನೋಡಿ ತಿಳಿದವರಿಗೆ ಅರ್ಥ ವಾದೀತು. ಅತ್ಯಂತ ವೈಷಯಿಕ ಸನ್ನಿವೇಶಗಳಲ್ಲೂ ಆತ ಹೆಣ್ಣನ್ನು, ಎಷ್ಟೇ ಜೀವಂತವಾಗಿ ಮುಷ್ಟಿಗ್ರಾಹ್ಯವಾಗಿ ವರ್ಣಿಸಿದರೂ, ಹೀಗೆ ನಮ್ಮ ಕವಿಗಳಂತೆ ನಾಭಿ, ಗೂಢನಾಭಿ, ರೋಮರಾಜಿಗಳಲ್ಲೆ ವಿಹರಿಸಹೋಗುವುದಿಲ್ಲ.

ಇಷ್ಟು ಮಾತಾದ ಮೇಲೆ ಹರಿಹರ ಹೇಗೆ ಪಾರ್ವತಿಯ ಜನನ ಬಾಲ್ಯ ಯೌವನಗಳನ್ನು ವರ್ಣಿಸಿದ್ದಾನೆ ನೋಡಬಹುದು. ಸಹಜವಾಗಿ ಹರಿಹರನ ದೃಷ್ಟಿಯೆ ಬೇರಾದುದರಿಂದ ಅವನ ಸೃಷ್ಟಿಯೂ ಬೇರಾಯಿತು. ಜತೆಗೆ ಪ್ರತಿಭಾ ಸಂಸ್ಕಾರಗಳ ಅಂತರವೂ ಸೇರಿತು. ಪಾರ್ವತಿಯ ಜನನ ಅವನ ದೃಷ್ಟಿಯಲ್ಲಿ ಅಘಟಿತವಲ್ಲ. ದಕ್ಷಯಜ್ಞದ ಅನಾಹುತವು ಅನಾಹುತ ಮಾತ್ರವೇ ಅಲ್ಲ, ಅದು ಭೂಮಿಯ ಬಯಕೆಯಿಂದಾಗಿ ವಿಭಿನ್ನಾರ್ಥವನ್ನು ಪಡೆಯುತ್ತದೆ. ಹಿಮಗಿರೀಂದ್ರನ ಸತಿಯಾದ ಮೇನಕೆಗೆ ಹೆಣ್ಣುಮಗುವನ್ನು ಅದರಲ್ಲೂ ಶಿವನನ್ನು **ತನ್ನ ಉಗ್ರ ತಪದಿಂದ** ಪತಿಯಾಗಿ ಪಡೆಯುವಂತಹ ಮಗಳನ್ನು ಪಡೆಯುವ ಬಯಕೆ.

"ಮೊಲೆಯುಣುತಳ್ಕಱಿಂ ನಗುವ ನಿಂದಿರುತಪ್ಪುವ ಪೊಂಗಿ ಹಿಗ್ಗುತುಂ
ಮುಲಿವ ಮರಳ್ವ ಕಣ್ಣಳನಲರ್ಚುವ ಮುಚ್ಚುವ ನೋಡುತಾಡುತುಂ
ನಲಿ ನಲಿದುರ್ಬತಂತೊಲೆಯುತಿಂತೊಲೆವಳ್ತಿಯ ಮುದ್ದಿನೊಪ್ಪದೊಳ್
ನೆಲಸಿದ ಪುತ್ರಿಯಂ ಬಯಸುತಿರ್ದಪುದೆನ್ನ ಮನಂ ಮನಃ ಪ್ರಿಯಾ

ಉಗ್ರತಪದಿಂದೆ ಅತುಳಸ
ಮುಗ್ರೆಯನಭವಂಗೆ ವಧುವೆನಿಪ್ಪಳನಾನ
ವ್ಯಗ್ರದೆ ಪಡೆವೆಂ.............. "

ಇದನ್ನು ಕೇಳಿದ ಗಿರಿರಾಜ ಪುಳಕಗೊಳ್ಳುತ್ತಾನೆ. ಸತಿಯ ಇಚ್ಛೆಯಂತೆ ಅವಳನ್ನು ಶಂಕರಿಯ ತಪಸ್ಸಿಗಾಗಿ ಕಳಿಸಿಕೊಡುತ್ತಾನೆ. 'ವರಪುತ್ರೀ ಸ್ಥಿರ ಭಾವಕಾಮ್ಯ ವಿಲಸತ್ ಸನ್ಮಾನ್ಯೆ'ಯೂ 'ಜ್ಞಾನೆ'ಯೂ 'ಪರಮಾನಂದ ತಪೋಭರೋತ್ಥಿತ ಮನಃ ಪ್ರಾಧೀನೆ'ಯೂ ಆದ ಆ ಮೇನೆ ರಮ್ಯಸ್ಥಳವೊಂದರಲ್ಲಿ ಏಕಪಾದಳಾಗಿ ನಿಂತು ತಪಸ್ಸು ಮಾಡುತ್ತಾಳೆ. 'ಮಹಾದೇವಿಯ ನಿರ್ಮಳ ರೂಪ'ವನ್ನು 'ಹೃದಯಕಮಲ'ದಲ್ಲಿ 'ತಿಳಿದು'ಕೊಂಡಿರುತ್ತಾಳೆ.

'ಮುಗಿದುವು ನಯನ ಸರೋಜಂ
ಮಿಗೆಯಲರ್ದುದು ಚಿತ್ತಕೈರವಂ ಮಿಕ್ಕೇಱಿ
ತ್ತು ಗಭೀರ ತಪೋವಾರಧಿ
ಬಗೆಯೊಳಗಾ ಧ್ಯಾನ ಚಂದ್ರನುದಯಿಸುವಾಗಳ್'

'ಇಂತು ತಪೋಬೀಜಂ ಚಿತ್ತ ಭೂಮಿಯೊಳ್ ಬೇರೂಱಿ, ಅಹಂಕಾರದೊಳಂಕುರಿಸಿ ಬುದ್ಧಿಯೊಳ್ ಪಲ್ಲವಿಸಿ, ಮನದೊಳ್ ನಿಮಿರ್ದು, ನಿಷ್ಠೆಯೊಳ್ ಕುಡಿವರಿದು, ಪರಿದು, ಪರ್ವಿ, ಪುರಹರನರಸಿಯ ಮೆಲ್ಲಡಿಗಳ್ಗೆ ನಿಲ್ಲದೆ ಧೀಂಕಿಡೆ, ಭವಾನಿ ಭೋಂಕನಱಿದು ಮೇನೆಯ ತಪಕ್ಕೆ ಮಿಗೆಮೆಚ್ಚಿ ಕರುಣಿಸಿ ಹರನಂ ಬೀಳ್ಕೊಂಡು ತಂದೆ ಮಾಡುವ ಯಾಗಮಂ ನೋಳ್ಪ ನೆವದಿಂ ಕೈಲಾಸಮಂ ಪೊಱಮಟ್ಟು ದಕ್ಷನ ಪುರಕ್ಕಭಿಮುಖಿಯಾಗಿ' ನಡೆದು ಅಲ್ಲಿ ಶಿವವಿರಹಿತವಾದ ಯೂಗದಲ್ಲಿ ಆದ ತನ್ನ ಪತಿಯ ಅವಹೇಳನವನ್ನು ಕೇಳಲಾರದೆ ವಿಮಳಯೋಗದಿಂದ ಮೇನಕೆಯತ್ತ ನಡೆದುಬರುತ್ತಾಳೆ. ಸುರತರುವಿಂದ ಬೀಜ, ದಿವ್ಯರತ್ನದಿಂದ ಕಾಂತಿ, ಪೂರ್ಣ ಶಶಿಯಿಂದ ಕಿರಣ ಬರುವಂತೆ ಬಂದು ಆ ಪರಾಶಕ್ತಿ ಮೇನೆಯ ಹೃತ್ಕಮಲದಲ್ಲಿ 'ಬೆಳಗಿನ ಬೆಳಗಾಗಿ' ನಿಲ್ಲುತ್ತಾಳೆ. ಇಲ್ಲಿ ಬರುವ ಉಪಮೆಗಳಂತೂ ಶ್ರೇಷ್ಠವಾಗಿವೆ. ಶಿವೆ ಭೂಮಿಗವತರಿಸಿದ ಮಾತ್ರದಿಂದ ಕೈಲಾಸದಲ್ಲಿ ಲಯವಾದಳೇನು ? ಕಲ್ಪವೃಕ್ಷ ಬೀಜವನ್ನು ನೀಡಿದ ಮಾತ್ರದಿಂದಲೆ ಲಯವಾಗುವುದೆ ? ಹಾಗೆ ಕಿರಣದ ಮೂಲಕ ಅವತರಿಸುವ ಪೂರ್ಣ ಶಶಿಕಾಂತಿ ಪೂರ್ಣ ಶಶಿಕಾಂತಿಯಾಗಿಯೆ ಉಳಿಯದೆ ? ಕಲ್ಪತರು ಅಲ್ಲೇ ಇರುತ್ತದೆ, ಬೀಜವೊಂದಿಲ್ಲಿ ಮಾತ್ರ ಅವತರಿಸುತ್ತದೆ. ಅದರ ಬೀಜ ಅನಂತ; ಅದರ ಪ್ರತಿ ಸೃಷ್ಟಿ ಅನಂತ. ಭೂಮಿಗೆ ಅವತರಿಸಿ ಗಿರಿಜೆಯಾಗಿ ಹುಟ್ಟಿದ ಆ ಶಕ್ತಿ ಮತ್ತಾರೂ ಅಲ್ಲ, ಆ ಪರಾಶಕ್ತಿಯೆ. ಹಾಗೂ, ದಾಕ್ಷಯಣಿ ತನ್ನ ತಂದೆ ದಕ್ಷನ ಯಜ್ಞದಲ್ಲಿ ಲೋಕವ್ಯಕ್ತವಾದಂತೆ ತನ್ನನ್ನು ತಾನು ವಿಮಳಯೋಗದಲ್ಲಿ ಲಯಗೊಳಿಸಿಕೊಂಡಳು ಎಂಬುದು ಹೇಗೆ ಎಂದರೆ ತನ್ನ ಜೀವಸಾರವನ್ನು ನೀಡಿ ಹೂವು ಹಣ್ಣು ಬೀಜವನ್ನು ಬೆಳಸಿದ ಕಲ್ಪವೃಕ್ಷ ಪುನಃಸೃಷ್ಟಿಕಾರಣಾರ್ಥವಾಗಿ ಅವುಗಳನ್ನು ತನ್ನಿಂದ ಬೇರ್ಪಡಿಸಿಕೊಳ್ಳುವಂತೆ, ಅಷ್ಟೆ.

ಮುಂದೆ, ಶಿವಾಣಿಯ ಆಶೀರ್ವಾಣಿಯನ್ನು ಹೃದಯದಲ್ಲಿ ಧರಿಸಿ ಬಂದು ಪತಿಗೆ ತಿಳಿಸುತ್ತಾಳೆ ಮೇನಕೆ, ಆ ಅಂತರಂಗ ಬಹಿರಂಗ ಸುಖಾನ್ವಿತೆ. ವರದೆಯಾದ ಶಿವೆಯ ಅವತಾರಕ್ಕೆ ಅವರು ಶುದ್ಧಾಂತರಂಗ ಬಹಿರಂಗರಾಗಿ ವ್ರತಗೊಳ್ಳುತ್ತಾರೆ. 'ಶುದ್ಧಸ್ನಾನಾಂಗೀಕೃತ ವಿಮಳ ಶ್ರೀನಿಧಿ' ಯಾದ ಮೇನೆ:

" ಬೆಳಗಿದ ಮಣಿಮುಕುರದವೋಲ್
ಜಳದಂಗಳಗಲ್ದ ಚಂದ್ರಕಳೆವೋಲ್ ಪುಟವಿ
ಟ್ಟಳವಟ್ಟ ಮಿಸುನಿವೋಲ್ ಮಂ
ಗಳ ನಿರ್ಮಳರುಚಿರರೂಪೆ ಒಪ್ಪುತ್ತಿರ್ದಳ್ "

ಹೀಗಿರುವ ಮೇನೆಯನ್ನು ಒಂದು ದಿನ ಗಿರಿರಾಜ ಪ್ರೀತಿಸಿ ಕೂಡುತ್ತಾನೆ. ಆ ಕೂಟ ಕೇವಲ ಬಾಹ್ಯವಲ್ಲ, ಕೇವಲ ಏಕಾಂಗಮಿತವಲ್ಲ :

' ಪ್ರಿಯದಿಂದೆ ಮನಂ ಮನದೊಳ್
ನಯನಂ ನಯನಂಗಳೊಳ್ ಮುಖಂ ಮುಖದೊಳಗಾ
ಸುಯಿ ಸುಯ್ಯೊಳ್ ಕೆಯ್ ಕೆಯ್ಯೊಳ್
ಮೆಯಿ ಮೆಯ್ಯೊಳ್ ಬೆರಸೆ ಬೆರಸಿದರ್ ದಂಪತಿಗಳ್ '

ಪ್ರೀತಿಯೆಂದ ಮಾತ್ರದಿಂದಲೆ ಅದು ಕಾಮಕ್ರೀಡಾ ವಿರಹಿತವೇನಲ್ಲ. ಹಾಗೆಂದ ಮಾತ್ರದಿಂದಲೆ ಅದು ಇಂದ್ರಿಯಮಿತವೂ ಅಲ್ಲ. ಶಿವಾಣಿಯ ಅವತಾರಕ್ಕೂ ಈ ಆಹ ಕೂಟ ನಡೆಯಲೆಬೇಕು. ಅದೂ ಅವಳ ಸೃಷ್ಟಿಯ ಲೀಲೆಯೆ. ಆದರೆ ಅದು ಎಷ್ಟರಮಟ್ಟಿಗೆ ಅಲೌಕಿಕವಾಗಬೇಕು ಹೇಗೆ ಸರ್ವಸ್ತರಕರ್ಷವಾಗಿರಬೇಕು ಎಂಬುದನ್ನು ಮಾತ್ರ ತಿಳಿದಿರಬೇಕು.

ಅದೂ ತನಕ ಮೇನೆಯ ಹೃದಯದಲ್ಲಿ ಮಾತ್ರ ನೆಲಸಿದ್ದ ಆ ದಿವ್ಯತೇಜಸ್ಸು, ಭವಾನಿಯ ತೇಜಸ್ಸು, ಆಗ ಇಳಿದುಬರುತ್ತದೆ ; ಅವಳ ಮಿಕ್ಕ ಶಕ್ತಿ ಸುಖದೊಂದಿಗೆ ಬೆರೆತು ಗರ್ಭವಾಗಿ ಬೆಳೆಯುತ್ತದೆ.

" ಪದೆಪಿಂ ಮೇನೆಯ ಹೃತ್ಕಮ
ಳದ ಬೆಳಗಿಳಿತಂದು ಮಿಕ್ಕ ಶಕ್ತಿ ಸುಖದ ಸಂ
ಗದೊಳೊಂದಿ ಬಳೆಯುತಿರ್ದುದು
ಸದಮಳ ರೂಪಿಂ ಭವಾನಿಯುಜ್ವಳ ತೇಜಂ"

ಈ ಕಲ್ಪನೆ ಅದ್ಭುತವಾಗಿದೆ. ತೇಜೋಮಾತ್ರವಾದ ಆ ಪರಾಜ್ಯೋತಿಯ ಅವತಾರಕ್ಕೆ ಶರೀರ ದಾನಮಾಡಲು ಈ ಶರೀರ ಸಂಗ ಸಂಪರ್ಕ ಆಗಲೇಬೇಕು. ಅದಿಲ್ಲದೆ ಇದ್ದರೆ ಆ ಶಕ್ತಿ ಅವತರಿಸಿದರೂ ಹೃದಯಸ್ಥ ಮಾತ್ರವಾಗಿಯೆ ಉಳಿದೀತು. ಆದರೆ ಹಾಗೆ ಕೃಪೆಯಿಟ್ಟು, ಇಳಿದುಬರುವ ಬೆಳಕು ನಮ್ಮ ಹೃದಯದಲ್ಲಿ ನೆಲಸಿದ್ದರೂ ಅದು ಶರೀರಧಾರಣಮಾಡಲು ನಾವು ಮತ್ತೂ ಶುದ್ಧರಾಗಬೇಕಾಗುತ್ತದೆ.

ಅರಿವಿನಕಣಿ ಮುಕ್ತಿಯ ಮಣಿ ಶಂಕರನ ಸೊಗದ ಮೊಳೆ ಮೇನೆಯ ಬಸಿರಿನಲ್ಲಿ ಬಳೆಯುತ್ತದೆ. ನವಮಾಸ ತುಂಬಿ ಬರುತ್ತದೆ. ಶಿವೆಯ ಆವಿರ್ಭಾವ

ಆಗುವುದನ್ನೆ ಎದುರುನೋಡುತ್ತ 'ಸುಮುಹೂರ್ತಂ ಕಾದಿರ್ದುವು ಭರದೊಳೆಮಗೆ ತಮಗೆನುತಾಗಳ್'; 'ಸುಪಥಂ ವೇದಿಸಿದುದು'. ಹೀಗಿರುವಾಗ ಗೌರಿ ಲೋಕಕ್ಕೆ ಅಡಿಯಿಟ್ಟು ಬರುತ್ತಾಳೆ—'ನಿಶ್ಚಲ ಪುರುಹೂತ ದಿಜ್ಮುಖದಿನೇಳ್ತರುತಿರ್ಪ ಮೃಗಾಂಕ ಬಿಂಬದಂತೆ'. ಆಗ ಮೇನೆಯ ಸುತ್ತಲು ಇಂದಿರೆ ಅನಸೂಯೆ ಸರಸ್ವತಿ ರತಿ ಸಾವಿತ್ರಿ ಶಚಿ ಮುಂತಾದವರೆಲ್ಲ ಬಂದುನಿಂತು ತಮ್ಮ ತಮ್ಮ ಕರ್ತವ್ಯವನ್ನು ಮಾಡುತ್ತಾರೆ. ಆದರಿಲ್ಲಿ ರಂಭೆ ಊರ್ವಶಿಯೆ ಮೊದಲಾದ ದೇವವಾರಾಂಗನೆಯರಾರೂ ಪುಣ್ಯವಶಾತ್ ಬಂದಿರುವುದಿಲ್ಲ.

ಇಂದಿರೆ ಬಂದಿರೆ ಕೆಲದೊಳ್
ನಿಂದಿರೆ ಅನಸೂಯೆ ಸಪ್ತಮಾತೃಕೆಯರ್ ತಾ—
ವೊಂದಿರೆ ರೋಹಿಣಿ ತಣ್ಪಂ
ತಂದಿರೆ ಗಿರಿಜಾತೆಯೋತು ಪೊಱಮಡುತಿರ್ದಳ್

ರತಿ ನೆಲನುಗ್ಗಡಿಸೆಯರುಂ
ದತಿ ಕೆಯ್ಗುಡೆ ಸುಖಮನೆಯ್ದೆ ಸಾವಿತ್ರಿ ಸರ
ಸ್ವತಿ ಪೊಗಳೆ ಶಚಿ ನಲಿಯೆ ಪಾ
ರ್ವತಿ ಮೇನೆಯ ಗರ್ಭನಿಳಯಮಂ ಪೊಱಮಟ್ಟಳ್

ಜಗನ್ಮಾತೆಯ ಜನನ ಮುಹೂರ್ತದಲ್ಲಿ ಲೋಕ ಋತಾಧಿಕಾರಿಗಳಾದ ಈ ಸಕಲ ಶಕ್ತಿಗಳೂ ತಮ್ಮ ತಮ್ಮ ಕರ್ತವ್ಯ ನಡೆಸುವುದು ಅರ್ಥಪೂರ್ಣವಾದುದೆ ಸರಿ, ಗೌರಿಯ ಜನನದಿಂದ ಆದ ಪರಿಣಾಮವಿದು.

ಇಳೆಯೊಳ್ ಪಾರ್ವತಿಯುದಯಿಸೆ
ಕಳೆಯೇಱಿದನಿಂದು ಜೊನ್ನಮಲರ್ದುದು ಕಾಮಂ
ತಳೆದಂ ನಿಜಭುಜ ಬಲಮಂ
ಪುಳಕಿತಮಾಯ್ತಿಂದುಧರನ ವರವಾಮಾಂಗಂ.

ಪುಣ್ಯದಂತೆ, ಕಂಪಿಡಿದ ಕಲ್ಪದ್ರುಮ ಪ್ರಸವದಂತೆ, ಪರಾಪರ ಮುಕ್ತಿಯಂತೆ. ಸಂಗಡಿಸಿದ ಕಾಮಧೇನುವಿನಂತೆ ಒಪ್ಪಿದ ಶ್ರೀಗೌರಿ ತಾನು ಮುಚ್ಚಿದ್ದ ಕಣ್ಣನ್ನು ತೆರೆದೆ ಇರಲಿಲ್ಲ. ಗುರುಗಳ ಹೇಳಿಕೆಯಂತೆ ಶಿವಲಿಂಗವನ್ನು ತೋರಿಸಲು ಆಗಮಾತ್ರ ಕಣ್ದೆರೆಯುತ್ತಾಳೆ. ಈ ಬಗೆಯ ಚಿತ್ರಣಕ್ಕೆ ಹರಿಹರನ ಯುಗಪ್ರಭಾವವೆ ಕಾರಣ. ಮತೀಯವೆಂಬಂತೆ ತೋರಬಹುದಾದ ಈ ದೃಷ್ಟಿಯ ಹಿಂದಿರುವ ಶಿವಾರ್ಥವನ್ನು ಮರೆಯಬಾರದು. ಹುಟ್ಟುವಾಗಲೆ ಶಿವದ ಮೂರ್ತಿಯನ್ನು ಕಣ್ಣುಗಳಲ್ಲಿ ತುಂಬಿಕೊಂಡು ಬಂದರೆ ಮುಂದೆ ಲೋಕದಲ್ಲಿ ಏನನ್ನು ಕಂಡರೂ ಅದು ಬಾಧಕವಾಗುವುದಿಲ್ಲ; ಮೇಲಾಗಿ ಅದಕ್ಕೂ ಶಿವದ ಬೆಳಕೆ ಸೇರಿಬರುತ್ತದೆ. ಗಿರಿಜೆಗೆ ಆ ಅಗತ್ಯವುಂಟೆ? ಹೌದು. ಕಾರಣ, ಶಿವ ಆಕೆಯ ಪರಾರ್ಥ, ಪರಾರ್ಥ; ಅವನನ್ನು ಎಂದೂ ಎಲ್ಲೂ ಮರೆಯುವಂತಿಲ್ಲ. ಕವಿ ಆ ಸನ್ನಿವೇಶದ ಚಿತ್ರವನ್ನು ದಿವ್ಯರಮಣೀಯವಾಗಿಯೆ ನೀಡುತ್ತಾನೆ:

ಅಮಮ ಪಯೋವಾರ್ಧಿಗೆ ಚಂ
ದ್ರಮನಂ ಪುಣ್ಯಕ್ಕೆ ಮುಕ್ತಿಯಂ ತೋರ್ಪಂತಾ
ವಿಮಳೆಗೆ ಗಿರಿಜೆಗೆ ಶಿವಲಿಂ
ಗಮನಧಿಕ ಮನಃಪ್ರಮೋದದಿಂ ತೋಱುವುದುಂ

ತೋಱಲೊಡಂ ಕಣ್ದೆಱೆದಳ್
ಪೇಱಿದಳೆರಡುಂ ಕರಂಗಳಂ ನೊಸಲೊಳ್ ಸೊಂ
ಪೇಱಿದಳಭವನೊಳಗೆ ಬೇ
ರೂಱಿದಳಂಕುರಿಸಿ ಪಲ್ಲವಿಸಿ ಫಲವಾದಳ್

ಇಂತಹ ಶಿಶುಜಗನ್ಮಾತೆಗೆ ಗಿರಿರಾಜ ಜಾತಕರ್ಮವನ್ನು ಮಾಡುತ್ತಾನೆ. ಆ ವರ್ಣನೆಯನ್ನು ಕವಿಯ ಮಾತಿನಿಂದಲೇ ಕೇಳಬೇಕು.

'ಮೂಡಿದ ಶೀತದೀಧಿತಿಗೆ ಕಾಲಪಿತಂ ಪ್ರಸವೋತ್ಸವಂಗಳಂ
ಮಾಡುವ ಮಾಳ್ಕೆಯಿಂದಮರಭೂರುಹದಿಂ ನೆಗೆದಂಕುರಕ್ಕೆ ಕೊಂ
ಡಾಡಿ ವಸಂತಕಂ ಜನನಕರ್ಮಮನೊಪ್ಪಿರೆ ಮಾಡುವಂದದಿಂ
ಮಾಡಿದನಳ್ಕಱಿಂದೆ ಗಿರಿರಾಜನಜಾತೆಗೆ ಜಾತಕರ್ಮಮಂ.'

ಹೀಗೆ ಕವಿ ತನ್ನ ವರ್ಣನೆಯಲ್ಲೆಲ್ಲಾ ಶಿಶುಶಿವಾಶಕ್ತಿಯ ಮಹಿಮೆಯನ್ನೆ ಧ್ವನಿಸುವಂತಹ ವಿಶ್ವೋಪಮಾನಗಳನ್ನೆ ನೀಡುತ್ತಾನೆ. ಸೂರ್ಯನಿಗೆ ಮಂಗಳಾರತಿಯೆತ್ತುವ ನಾವು ನಮ್ಮ ತುಪ್ಪ ಕರ್ಪೂರಗಳ ಶುದ್ಧಿಯನ್ನೂ ದಿವ್ಯರುಚಿಯನ್ನೂ ನೋಡಿಕೊಳ್ಳಬೇಕಲ್ಲ; ವ್ಯೋಮಸಾಗರಕೇಶನಿಗೆ ಅಭಿಷೇಕ ಮಾಡುವ ನಾವು ಬಿಂದೂದಕವನ್ನೆ ಎರೆದರೂ ಅದು ಅನಂತವನ್ನು ಹಿಂಗಿಸದಂತಹ ಭಂಗಿಸದಂತಹ ಸಾಂತ–ಅನಂತವಾದ ಶುಭ್ರಸ್ಫಟಿಕವಾದ ಬಿಂದುವಾಗಿರಲೆಂದು ಹಾರೈಸಬೇಕಲ್ಲವೆ? ಹರಿಹರಕವಿಗೆ ಈ ಎಚ್ಚರವಿದೆ.

ಜಗಕ್ಕೆ ತನ್ನುಂಗುಟವೆ ತಾಯ್ತೊಟ್ಟಿಲಾದ ಶಂಕರಿಯನ್ನು, ಲೀಲೆಯಿಂದ ಬಂದು ಭೂಮಿಯಲ್ಲಿ ಹುಟ್ಟಿದ ಅಪ್ರತಿಮೆಯನ್ನು, ಉಜ್ವಲಿಸುವ ನಿಜವನ್ನು, 'ಅಖಿಳ ಪ್ರಪಂಚವಾಡಿಪ ಶಿಶು'ವನ್ನು ಶಂಕನರ್ಘವನ್ನು ಕವರ್ದುಕೊಳ್ವ ಅತ್ಯಂತ ರೂಪಾನ್ವಿತೆಯನ್ನು ತೊಟ್ಟಿಲಲ್ಲಿಟ್ಟು ಆಡಿಸುತ್ತಾರೆ; ಲೋಕಸಮಸ್ತ ಮಾತೆಯರೂ ಆ ಮಗುವನ್ನು ಆಡಿಸುತ್ತಾರೆ; ತಮ್ಮ ಶ್ರೀಯಿಂದ ಆ ಶಿಶು ಪರಾಶ್ರೀಯನ್ನು ಸ್ಪರ್ಶಿಸುತ್ತಾರೆ:

"ಅಂತು ತೂಗುವ ಜೋಗುಳದ ರಾಗದೊಳಂ, ಮೊಲೆಯೂಡುವ ಮೇನೆಯ ಮಗ್ನುಲೊಳಂ, ಸಾಗಿಸುವ ಸಾವಿತ್ರಿಯ ಸೋಗಿಲೊಳಂ, ಎತ್ತುವನಸೂಯೆಯ ಹಸ್ತದೊಳಂ, ಅಪ್ಪುವರುಂಧತಿಯುರದೊಳಂ, ನೆಗಪುವ ಗಾಯತ್ರಿಯ ಸೊಗಸಿನೊಳಂ, ಮುಟ್ಟುವ ರೋಹಿಣಿಯ ತಣ್ಪಿನೊಳಂ, ಸೋಂಕುವ ಕಮಳೆಯ ಸಂಪದದೊಳಂ, ಮುದ್ದಾಡಿಸುವ ಸರಸ್ವತಿಯ ಮಧುರವಾಣಿಯೊಳಂ, ನೋಡುವ ಶಚಿಯ ಸಂತೋಷದೊಳಂ, ಪರಸುವ ಸಪ್ತಮಾತೃಕೆಯರ ಪರಕೆಯೊಳಂ, ಮಿಕ್ಕು ನಲಿವಚಲ

ಪತಿಯಳ್ಕರೊಳಂ, ಸಾಮರ್ಥ್ಯದ ಬಿಳ್ತಿನಂತೆ, ಸೌಂದರ್ಯದಂಕುರದಂತೆ, ಸೌಕುಮಾರ್ಯದ ಪಲ್ಲವದಂತೆ, ಸಾಹಿತ್ಯದ ಕುಸುಮದಂತೆ, **ಸತ್ಯದ ಫಲದಂತೆ,** ಭೂಮಿಯ ಬಿಣ್ಪಿನಂತೆ, ಸಲಿಲದ ತಣ್ಪಿನಂತೆ, ಗಗನದ ಪೆಂಪಿನಂತೆ, ಪಯೋನಿಧಿಯ ಗುಣ್ಪಿನಂತೆ, **ಪವಮಾನನುಸಿರಿನಂತೆ,** ಪಾವಕನ ತೇಜದಂತೆ, ಚಂದ್ರನ ಬಲದಂತೆ,ದಿವಸೇಂದ್ರನ ಕಿರಣದಂತೆ, **ಪರಮಾತ್ಮನ ಪರಿಣಾಮದಂತೆ,** ಲೋಕದಾಲೋಕದಂತೆ, ಸಲ್ಲಕ್ಷಣದ ಲಾವಣ್ಯದಂತೆ, **ಬೆಳ್ದಿಂಗಳ ಬಣ್ಣದಂತೆ,** ವಸಂತಕನ ವಶ್ಯದಂತೆ, ಮಲಯಾನಿಲನ ಮಹಿಮೆಯಂತೆ, ಮಕರಧ್ವಜನ ಮದದಂತೆ, ಕುಸುಮಬಾಣದ ಹೊಗರಿನಂತೆ, ಪುಣ್ಯದ ಜೀವದಂತೆ, **ಶಿವಜ್ಞಾನದ ದೇಹದಂತೆ, ಸಾಲ್ಕೋಕದ ಸವಿಯಂತೆ, ಸಾಮೀಪ್ಯದ ಸೀಮೆಯಂತೆ, ಸಾರೂಪ್ಯದ ಸುಧೆಯಂತೆ, ಸಾಯುಜ್ಯದ ನಿಲವಿನಂತೆ, ಶಿವನ ಸುಖದಂತೆ,** ಮುಕ್ತಿಯ ಮುಖದಂತೆ, ಕಾಂತಿಯ ಲತೆಯಂತೆ, ನಿರುಪಾಧಿಕ ಜ್ಯೋತಿಯಂತೆ, **ಸಕಲ ಜಗನ್ಮಾತೆಯಪ್ಪ ಗಿರಿಜಾತೆ ಶೈಶವಲೀಲೆ** ಯನೊಳಕೊಂಡು ತೊಳತೊಳಗಿ ಬೆಳಬೆಳಗಿ ನಳನಳಿಸಿ ಬೆಳೆಯುತಿರ್ದಳ್—"

ಈ ಮಹಾಪ್ರತಿಮೆಯನ್ನು ವಿಸ್ತಾರವಾಗಿ ವ್ಯಾಖ್ಯಾನ ಮಾಡುವುದು ಇಲ್ಲಿ ಅಸಾಧ್ಯ. ಆದರಿಷ್ಟು ಮಾತ್ರ ಹೇಳಲೆಬೇಕು. ಜಗನ್ಮಾತೆಯೆ ಶಿಶುವಾದಾಗ ಏನೆಂತಹ ಸಂಭ್ರಮವಿರುತ್ತದೆ ಎಂದಷ್ಟಾದರೂ ಭಾವಿಸಿದರೆ ಈ ಪ್ರತಿಮೆಯ ಧ್ವನಿತಾರ್ಥ ವೇದ್ಯವಾದೀತು. ಸಾಧಾರಣ ರಾಜರೆ ತಾವೇನಾದರೂ ಬಡವನಾದ ಆಪ್ತಮಿತ್ರನ ಮನೆಗೆ ಹೋದಾಗ ತಮ್ಮ ವೈಭವ ಪರಿಕರವನ್ನೆಲ್ಲ ತಾವು ಮೊದಲೆ ಕಳಿಸಿರುತ್ತಾರೆ. ಅದಿರಲಿ, ಅವರಿಗೇನಾದರೂ ಮಗುವಾದರೆ ರಾಜ್ಯದಲ್ಲಿ ದೊರೆಯುವ ಸಕಲ ಸುವಸ್ತುವೂ ಸಂಗ್ರಹವಾಗುತ್ತದೆ. ಇಲ್ಲಿ ಲೀಲಾರ್ಥವಾಗಿ ಜಗನ್ಮಾತೆಯೆ ಶಿಶುವಾಗಿರುವಾಗ, ತಂದೆ ತಾಯಿಗಳು ಬಂಧುಬಳಗದವರು ಪ್ರಜೆಗಳು ಮರೆತರೂ, ಸೃಷ್ಟಿಯ ಸಮಸ್ತ ಶಕ್ತಿಗಳು ಹೇಗೆತಾನೆ ಸುಮ್ಮನಿದ್ದಾರು? ಶಿಶುವನ್ನಂದು ಓಲೈಸುತ್ತಾರೆ, ಕಾಪಿಡುತ್ತಾರೆ.....................ಇಲ್ಲಿ ಹರಿಹರನ ಚಿತ್ರದಲ್ಲಿ ಹಾಗೆ ಬರುವ ಶಕ್ತಿಗಳಾದರೂ ಯಾರು: ಮುದ್ದಾಡಿಸುವವಳು ವಾಗ್ದೇವಿ, ಸೋಂಕುವವಳು ಸಂಪನ್ನಿಧಿಯಾದ ಕಮಳೆ, ತನ್ನ ಪವಿತ್ರ ವಕ್ಷಸ್ಥಲದಿಂದ ಅಪ್ಪಿಕೊಳ್ಳುವವಳು ಪತಿವ್ರತಾಮಾತೆಯಾದ ಅರುಂಧತೀದೇವಿ, ಹರಸುವವರು ಸಪ್ತಮಾತೃಕೆಯರು ಇತ್ಯಾದಿ ಇತ್ಯಾದಿ. ಆದರೆ ಎದೆಯೂಡುವ ಪುಣ್ಯಕರ್ತವ್ಯ ಮಾತ್ರ ಅವರು ಯಾರಿಗೂ ಇಲ್ಲ; ತಾಯಿ ಮೇನೆಗೆ ಮಾತ್ರ. ಉಳಿದೆಲ್ಲರು ಮೊದಲೂ ಹಾಗೆಯೆ ಓಲೈಸುತ್ತಿದ್ದರು. ಆದರೆ ಯಾರೂ ಹಾಲೂಡುತ್ತಿರಲಿಲ್ಲ. ಶಿಶುವಾಗಿ ಲೀಲಾರ್ಥವಾಗಿ ಬಂದ ಕಾರಣದಿಂದಾಗಿ ಯಾರಾದರೂ ಹಾಲೂಡಲೆಬೇಕಿದೆ. ಯಾರು ಮಗುವಾಗಿ ಬೇಡಿ ಪಡೆಯುವ ಪುಣ್ಯ ಮಾಡಿದರೊ ಅವರಿಗಲ್ಲದೆ ಮತ್ತಾರಿಗೆಬೇಕು ಆ ಭಾಗ್ಯ. ಆ ಭಾಗ್ಯಕ್ಕೆ ತಾನೆ ಮಗುವಾಗಲೆಂದು ಬಯಸಿದುದು. ವಿಶ್ವ

ಶಕ್ತಿಗಳಿಂದ ಓಲೈಸಲ್ಪಟ್ಟ ಶಿಶುವಿಶ್ವಮಾತೆಗೆ ಭೂಮಿಜಾತೆಯೊಬ್ಬಳು ಹಾಲೂಡುವ ಚಿತ್ರ ಭವ್ಯದಿವ್ಯ.

ಇಂಥ ಮಗು ಹೇಗೆ ಬೆಳೆಯಿತು ಎಂಬ ಚಿತ್ರವೂ ಅದ್ಭುತವಾಗಿದೆ: **ಪವಮಾನ ಸುಸಿರಿನಂತೆ! ಪರಮಾತ್ಮನ ಪರಿಣಾಮದಂತೆ!** ಇತ್ಯಾದಿ, ಮಾತ್ರವೆ ಅಲ್ಲ, ಮಕರಧ್ವಜನ ಮದದಂತೆಯೂ, ಕುಸುಮಬಾಣದ ಹೊಗರಿನಂತೆಯೂ ಬೆಳೆಯುತ್ತಾಳೆ. ಸೃಷ್ಟಿಯನ್ನಾಳಲು ನಿಯಂತ್ರಿತರಾಗಿರುವ ಮಹಾಶಕ್ತಿಗಳಲ್ಲಿ ಮನ್ಮಥನೂ ಒಬ್ಬ; ಅವನೆ ಸರ್ವಸ್ವವಲ್ಲ. ವಿಶ್ವಶಕ್ತಿಯನ್ನು ಓಲೈಸುವ ಕೋಟಿ ನಾಯಕ ಶಕ್ತಿಗಳಲ್ಲಿ ಅವನೂ ಒಬ್ಬ. ಕವಿಗೆ ಈ ದರ್ಶನವಿದೆ. ಆದ್ದರಿಂದ ಪಾರ್ವತಿಯನ್ನು ಕೇವಲ ಕುಸುಮಾಸ್ತ್ರ ಪರಿಕರಗಳಿಂದಲೆ ವರ್ಣಿಸಬೇಕಾದ ಕಾರಣವಿಲ್ಲ.

ಮುಂದೆ ಬರುವ ಈ ಶಿಶುಶಿವೆಯ ಬಾಲ್ಯ ಲೀಲೆಯ ವರ್ಣನೆ ಬಹು ಮನೋಹರವಾಗಿದೆ. ಆ ಮನೋಹರತೆಯಲ್ಲಿ ಶಿವತ್ವವೂ ಎಳೆಯೆಳೆಯಾಗಿ ಕಿರಣಕಿರಣವಾಗಿ ನೆಯ್ದುಕೊಂಡಿದೆ. ಮಗುವಿನ ಮೆಲ್ಲಡಿಗಳಿಗೆ ಧರಿತ್ರಿ ಮೃದುವಾಗುತ್ತದೆ; ಆ ಮಗುವಿನ ಬಾಯೊಳಗೆ ಮಧುರಾಕ್ಷರಗಳು ರಸನೆಯ ಸುಧಾರಸವನ್ನು ಸವಿದು ಸವಿದು ಮುಗ್ಧತೆಯಿಂದ ಹೊರಳುತ್ತವೆ; ಶಶಿಧರನ ಬಗೆ ಮಿಂಚಿ ಬಂದಂತೆ, ಅದರಿಂದ ತಾನು ಪುಲಕಗೊಂಡು ತನ್ನ ಅಂತಃಸ್ಥಲದಲ್ಲಿ ತನ್ನ ಪ್ರಿಯನನ್ನು ಕಾಣಲೆಳಸಿದಂತೆ ಆ ದೇವಿ ಕಣ್ಮುಚ್ಚುತ್ತಾಳೆ; ಅವಳ ಉಡಿಗೆಯ ಮೇಲೆ ಸುತ್ತಿದ ಉಡೆವಣಿ ಶಿವನ ಮನಸ್ಸನ್ನು ಅವಳು ಅಪ್ಪುವಂತಹ ರೀತಿಯಲ್ಲಿತ್ತು:

ಹೆಱೆಸೂಡಿದನ ಮನವನೀ
ತೆಱದಿಂ ಸುತ್ತುವಳ್ ಭವಾನಿಯೆನಿಪ್ಪಾ
ತೆಱನಂ ತೋಱುವ ತೆಱದಿಂ
ಮೆಱೆವುಡಿಗೆಯ ಮೇಲೆ ಸುತ್ತಿದುಡೆವಣಿ ತೋರ್ಕುಂ.

ಹೀಗೆ ಶೋಭಿಸುತ್ತ ಬೆಳೆಯುತ್ತ ಬಂದ ಶಿಶು 'ನಲಿವಳ್ ನಗುವಳ್ ರಾಗಿಪಳ್ ಉಲಿವಳ್ ಮುದ್ದಿಸುವಳ್ ಅಳುವಳ್ ಅಪ್ಪುವಳ್ ಅಂತಿಂತೊಲೆವಳ್ ನಿಲ್ವಳ್ **ಮೇನೆಯ ಮೊಲೆಯಂ ಮಱೆದು** ಅಭವನಾಟದೊಳ್ ಸಂದಿರ್ಪಳ್.' ಮತ್ತೂ ಸ್ವಲ್ಪ ಬೆಳೆದಮೇಲೆ ಗಿರಿಜೆ ಕೇಳೀವನಗಳಲ್ಲಿಗೆ ಹೋಗಿ ಶಿವನನ್ನು ಅರ್ಚಿಸತೊಡಗುತ್ತಾಳೆ. ಕಣ್ಣುಗಳಿಂದ ಅಶ್ರುಜಲ ಹೊಮ್ಮುತ್ತಿರಬೇಕಾದರೆ ಮೈತುಂಬ ರೋಮಾಂಚನ ಸಾಲುಗೊಂಡಿರಲು ನುಣ್ಮಳಲಿಂದ ಲಿಂಗವನ್ನು ರಚಿಸುತ್ತಾಳೆ.

ಆ ಮಗುವಿನ ಮೃದುಕರಾಂಗುಲಿ ಸ್ಪರ್ಶಸುಖವನ್ನು ಬಯಸುತ್ತ ಶರ್ವನೂ ಕೂಡ ಆ ಲಿಂಗದಲ್ಲಿ ಬಂದು ನಿಲ್ಲುತ್ತಾನೆ. ಆಗ ಬಗೆಬಗೆಯ ಹೂಗಳಿಂದ ಪೂಜಿಸುತ್ತಾಳೆ ಗಿರಿಜೆ:

" ಹಿಮಕರ ಕಿರಣಾವಳಿಗಳ್
ಕುಮುದದ ಸೋಂಕಿಂದೆ ಕಂಪನಪ್ಪಿದುವೆನೆ ವಿ
ಭ್ರಮ ಮಲ್ಲಿಕಾ ನಿಕಾಯದೆ
ಕಮಲಾನನೆ.........
ತರಣಿಯ ತರುಣಕಿರಣಮಂ
ಬುರುಹ ಪರಿಷ್ವಂಗದಿಂದೆ ಪರಿಮಳಮಂ ಪೊ
ತ್ತರಲ್ದಪುವೆನಿಸುವ ಸಂಪಗೆ
ಯರಲಿಂದಂ ಗಿರಿಜೆ ಹರನನೊಲಿದರ್ಚಿಸುವಳ್

ಆದರೆ ಈ ಹೂವುಗಳೂ ಕೂಡ ಮಲಿನವಾಗಿವೆ:

ತರಣಿಯ ಮಧುಕರನಿಕರದ
ಮರುತನ ಕಾಲ್ದುಳಿಯಿವೆಂದು ಪೂವಂ ಬಿಟ್ಟಾ
ಗಿರಿಸುತೆ ಮನಃಕುಸುಮದಿಂ
ಪರಮನನೇಕಾಂತಭೂಮಿಯೊಳ್ ಪೂಜಿಸುವಳ್

ಹೀಗೆ 'ಬಾಲಲೀಲೆ ಶಿವಲೀಲೆಯಾಗಿ' ಪರಿಣಾಮಗೊಳ್ಳುತ್ತದೆ. ಶಿವ ಲೀಲೆಯೂ ಈ ಬಾಲಲೀಲೆಯೇ ಆಗಿ ಅವತರಣಗೊಳ್ಳುತ್ತದೆ. ಆದರೆ ತಾಯಿ ತಂದೆಯರಿಗೆ ಈ ಅತಿಶಯಲೀಲೆ ಅರ್ಥವಾದರೂ ಅರ್ಥವಾಗದು. 'ಸುತ್ತಿದ ಪರಮಸ್ನೇಹ'ದಿಂದ ಮಗಳನ್ನು ಮುದ್ದಿಸುತ್ತಾರೆ. ಸದಾ ಲಿಂಗಪೂಜಾ ನಿಮಗ್ನೆ ಯಾಗಿದ್ದ ಅವಳನ್ನೆ ಕಂಡು ಆತಂಕಗೊಂಡು ಕರೆಯುತ್ತಾರೆ. ಆ ತಾಯಿ ತಂದೆ ಯರ 'ಸ್ನೇಹರಸಾರ್ದ್ರ ಮಧುರಾಕ್ಷರ ಸಮ್ಮಿಳಿತ'ವಾದ 'ಸಾತ್ವಿಕಸರ'ವನ್ನು ಕೇಳಿ ಈ ಶಿಶು ಗಿರಿಜಾದೇವಿ 'ಪುತ್ರೀಭಾವ'ವನ್ನು 'ನಟಿಸಲೆಂದು ಶಿವಲಿಂಗ'ವನ್ನು 'ಬೀಳ್ಕೊಂಡು' ತಾಯಿಯ ಬಳಿ ಹೋಗುತ್ತಾಳೆ. ತಾಯಿ ಮೊಲೆಯೂಡಿ ಪುಲಕ ಗೊಳ್ಳುತ್ತಾಳೆ; 'ಸಿಂಗರದ ಶಿಶು'ವನ್ನು 'ಮೊಗೆದಪ್ಪಿ ತೆಗೆದಪ್ಪಿ' ಗದ್ಗದಗೊಳ್ಳು ತ್ತಾಳೆ; ತಂದೆ ಗಿರಿರಾಜ 'ಕಣ್ ತೀವಿನೋಡಿ ಮೆಯ್ ತೀವಿ ಅಪ್ಪಿ ಮನಂ ತೀವಿ ನೆನಹಿನೊಳಿಟ್ಟು, ಶಶಿಕಲೆಯಂ ಸಲಹುವಂತೆ, ಸೌಕುಮಾರ್ಯಮಂ ಸುಯಿಧಾನಂ ಮಾಳ್ಪಂತೆ, ಸೊಬಗಂ ಸಂವರಿಸುವಂತೆ, **ಬೆಳ್ದಿಂಗಳಂ ಬಣ್ಣವಿಡುವಂತೆ,** ಭೋಗಮಂ ಸಾಗಿಸುವಂತೆ, ಚೆಲ್ವಂ ಚಮತ್ಕರಿಸುವಂತೆ, ಸಾಹಿತ್ಯಮಂ ಸಯ್ತಿಡು ವಂತೆ, ಪ್ರಾಣಮಂ ಪರಿರಕ್ಷಿಸುವಂತೆ, ಜ್ಞಾನಮಂ ಬಳೆಯಿಸುವಂತೆ, **ಶಾಂತಿಯಂ ಕಾಂತಿಯಿಡುವಂತೆ, ಸತ್ಯಮಂ ಸಂತವಿಡುವಂತೆ, ನಿತ್ಯಮಂ ಪ್ರತ್ಯಕ್ಷಮಂ ಮಾಳ್ಪಂತೆ,** ಪುಣ್ಯಮಂ ಪುಟವಿಡುವಂತೆ, ಮುಕ್ತಿಯಂ ಮೂರ್ತಿಗೊಳಿಸುವಂತೆ ಪಾರ್ವತಿಯಂ ಸಲಹುತ್ತ' ಇರುತ್ತಾನೆ.

ಮೇಲಿನ ಚಿತ್ರಮಾಲೆಯಲ್ಲಿ ಧ್ವನಿತವಾಗಿರುವುದೆಲ್ಲ ಆ ದಿವ್ಯಧ್ವನಿಯೆ: ಪಾರ್ವತಿಯನ್ನು ಸಲಹುವ ತಂದೆ ತಾಯಿಗಳು ಮಾಡಿದ ಕಾರ್ಯವೆಲ್ಲ ಬೆಳು ದಿಂಗಳಿಗೆ ಬಣ್ಣವಿಡುವ, ಮುಕ್ತಿಯನ್ನು ಮೂರ್ತಿಗೊಳಿಸುವ ಇತ್ಯಾದಿ ಕಾರ್ಯ.

" Your children are not your child because they come not from you but through you " ಎಂದ ಖಲೀಲ್ ಗಿಬ್ರಾನ್‌ನ ಮಾತು ಹೆಚ್ಚು ವೇದ್ಯವಾಗುವುದು ಇಂಥ ವೇಳೆಗಳಲ್ಲಿ ಮಾತ್ರವೆ.

ನಿಮಿತ್ತ ಮಾತ್ರ ಮಾತಾಪಿತೃಗಳಾದ ಗಿರಿರಾಜ ಮೇನಕೆಯರು ಶಿವಾಣಿಯನ್ನು ಹಾಗೆ ಸಲಹುತ್ತಾರೆ. ಹೀಗಿರುವಾಗ ಶಿಶುಗಿರಿಜಾ ಬಳೆಯುತ್ತಾಳೆ; ಬಾಲೆ ತರುಣಿಯಾಗುತ್ತಾಳೆ; ಲೀಲೆ ಲಜ್ಜೆಯಾಗುತ್ತದೆ. ಅದನ್ನು ಮೊದಲು ಗಮನಿಸಿದ ತಂದೆ ತಾಯಿಗಳು ತಮ್ಮ ತಮ್ಮಲ್ಲೆ ಮಾತನಾಡಿಕೊಳ್ಳುತ್ತಾರೆ:

" ನಗೆ ನಸುಲಜ್ಜೆಯೊಳ್ ತೊಡರಲಿರ್ದುದೆ ಬಲ್ಕಡೆ ಮಾಂದ್ಯಭಾವದೊಳ್
ಪುಗಲಿದೆ, ಬಾಸೆ ಸಾಲಱಿಪಲಿರ್ದುದೆ, ಸೂಸುವ ನೋಟವಾಸೆಯೊಳ್
ಮಿಗಲಿದೆ, ತತ್ಕುಚಂ ನಿಜಸೀಮೆಗೆ ರೇಖೆಯನೊತ್ತಿ ಲಜ್ಜಿಸಲ್
ಬಗೆದಿವೆ, ಯೌವನೋದಯಮೊ ಬಾಲ್ಯ ವಿಮೋಚನಮೋ ಭವಾನಿಯಾ

.................................ನುಡಿ ಮೌನ
ಪ್ರಾಂತಮನೊತ್ತುಗೊಳಲ್ಕಿದೆ
ಕಾಂತಿ ಶರೀರಮನಮರ್ಚಲಿದೆ ಪಾರ್ವತಿಯಾ "

ಎಷ್ಟು ಗಂಭೀರವಾಗಿದೆ ಈ ವರ್ಣನೆ. ಇಷ್ಟು ವರ್ಣಿಸುವುದೂ ಕವಿಯ ನಾಲಗೆಯಲ್ಲ; 'ವಯಃ ಪರಿಣತರಪ್ಪ ಮಾತಾಪಿತೃಗಳು', 'ಮಗಳ ವಯಃಸಂಧಿಯ'ನ್ನು ಕಂಡು ಆಡುವ ಮಾತು. ಒಂದು ಬಗೆಯ ತೃಪ್ತಿ ಮತ್ತೊಂದು ಬಗೆಯ ವಿಷಾದ ಸಹಜವಾಗಿಯೆ ಅಂದು ಅವರಲ್ಲಿ ಮೂಡಿದೆ. ಬಾಲೆ ತರುಣಿಯಾದಾಗ, ಹೂವು ಹಣ್ಣಾಗುತ್ತಿರುವಾಗ ಅಥವಾ ಸ್ನಿಗ್ಧ ಕುಟ್ಮಲ ತುಂಬಿ ಅರಳುತ್ತಿರುವಾಗ ಭಾವುಕನಿಗಾಗುವ ದ್ವೈಧೀಭಾವಗಳೆ ಉಂಟಾಗುತ್ತದೆ ಕಲ್ಪನಾಶೀಲರಾದ ತಂದೆತಾಯಿಯರಿಗೆ. 'ಯೌವನೋದಯಮೊ ಬಾಲ್ಯ ವಿಮೋಚನಮೋ ಭವಾನಿಯಾ' ಎಂಬ ಉದ್ಗಾರದಲ್ಲಿ ಆ ಪ್ರಸನ್ನ-ವಿಷಣ್ಣ ಭಾವವಿದೆ.

ಮುಂದೆ ಗಿರಿಜೆಯ ತಾರುಣ್ಯ ಸೌಂದರ್ಯವನ್ನು ವರ್ಣಿಸಬೇಕಲ್ಲ ; ಆಗ ಕವಿಗೆ ದಿವ್ಯ ವಿವೇಕವೊಂದು ಜಾಗೃತವಾಗುತ್ತದೆ :

' ಶರ್ವಾಣಿಯ ಸೌಂದರ್ಯಮ
ನೊರ್ವಂ ಬಣ್ಣಿಸುವೆನೆಂಬವಂ ಗಾಂಪಂ ಪ
ನ್ನಿರ್ವರ್ ಭಾರತಿಯರ್ ಸಾ
ಸಿರ್ವರ್ ಫಣಿರಾಜರಾದೊಡಂ ತೀರ್ದಪುದೇ '

ಅದು 'ಅತಿಮಧುರ', 'ಅತಿ ಮಂಗಳ', 'ಅತಿ ವಿಭ್ರಮ', 'ಅತ್ಯಾಶ್ಚರ್ಯ', 'ಅತ್ಯೂರ್ಜಿತ'...........ಆ ನವಯೌವನ "ವಸಂತನಂತೆ ರಾಗೋದಯಂ, ಮಕರಧ್ವಜನ ಮತ್ತಗಜದಂತೆ ಮಂದಯಾನಂ,...............**ವ್ಯೋಮದಂತೆ ಘನಚಿತ್ರಮ್** ಎನಿಸಿರ್ದುದು."

'ತೀವಿದ ಜವ್ವನಮಂ ಪರಿ
ಭಾವಿಸೆ ಮಾಧುರ್ಯಚರಿತಮೆಡೆಗೊಂಡುದು ಸದ್
ಭಾವಂ ಚಂದ್ರಾಭರಣನ
ಜೀವಂ ಬಣ್ಣಿಪ್ಪನಾವನವನೇ ದೇವಂ'

ಆಕೆ ಜಲಕ್ರೀಡೆಗೆಂದು ಹೊರಟರೆ:

'ವನಲಕ್ಷ್ಮಿ ಕೆಯ್ಗುಡುತ್ತಿರೆ
ಅನಸೂಯಾದೇವಿಯಾದಿಯಾದಂಗನೆಯರ್
ಜನನಿ ಜಗಜ್ಜೀವನೆ ಮೆ
ಲ್ಲನೆ ಪಾಯವಧಾರು ದೇವಿ· · · · · ·' ಎನುತ್ತಾರೆ.

ಆ ಕೊಳಕ್ಕೆ ಇಳಿದ ಚಿತ್ರವೂ ಅಷ್ಟೆ, ಕೇವಲ ಬಾಹ್ಯೇಂದ್ರಿಯ ರುಚಿ ದೂರವಾಗಿದೆ; ಮನೋಹರ ದಿವ್ಯವಾಗಿದೆ.

'ತೊಳಗುವ ವಿಮಳಾಕಾಶದೊ
ಳೆಳೆವೆಱೆ ಪುಗುವಂತೆ ಮುಂತೆ ನಿರ್ಮಲಶಶಿಮಂ
ಡಳದಧಿದೇವತೆ ಬೆಳ್ದಿಂ
ಗಳೊಳಗೆ ಪುಗುವಂತೆ ಪೊಕ್ಕಳಂಬಿಕೆ ಕೊಳನೊಳ್' |

ಆ ಅವಳ ದಿವ್ಯ ಸೌಂದರ್ಯವನ್ನು ಕಂಡ ಗೆಳತಿಯರು :

ಈ ರೂಪಿಂಗೀ ಯೌವನ
ಕೀ ರಮಣೀಯಾಂಗವತಿಗೆ ಮಿಗೆ ಸೌಂದರ್ಯ
ಕ್ಕೀ ರಾಜಿಪ ಗಿರಿಜೆಯ ವಿ
ಸ್ತಾರಕ್ಕೆ ವರನಸಿಂದುಧರನೇ ಬಲ್ಲಂ

ಎಂದು ಮುಗ್ಧವಾಗಿ ಅಂದುಕೊಳ್ಳುತ್ತಾರೆ. ತಾಯಿತಂದೆಯರಿಗೂ ಅದೇ ಪ್ರಶ್ನೆ; ಇಂತಹ ಸೌಂದರ್ಯಕ್ಕೆ ವರನಾರು? ಪಾಪ ಅವರಿಗೂ ಮರವು. ಅದು ಸೃಷ್ಟಿ ಸಮಸ್ತದ ಚೋದ್ಯ. 'ಶರ್ವಾಣಿಯ ರೂಪಾತಿಶಯಕ್ಕೆ ಬೆಱಗಾಗಿ ಮೇನೆಯ ತಪಕ್ಕೆ ದಾಕ್ಷಾಯಿಣಿ ಕರುಣಿಸಿ ಬಂದಳೆಂಬುದನತ್ಯಾಶ್ಚರ್ಯದಿಂ ಮಱೆದು' ಚಿಂತಿಸುತ್ತಿರಬೇಕಾದರೆ ಆಗ ಆಕಾಶದಿಂದ ನಾರದ ಮಹರ್ಷಿ ಬರುತ್ತಾರೆ:— 'ಅಮೃತಮಯೂಖಮಂಡಲದಿನೇಳ್ತರುತಿರ್ಪ ಶಶಾಂಕ ಮೂರ್ತಿಯಂತೆ' 'ಪ್ರಮುದಿತ ಶೈವಕೀರ್ತಿಯಂತೆ' 'ಅಮರ ನದೀ ಪ್ರವಾಹದೊಳಗಿಂದೊಗೆತರ್ಪ ವಿಶಾಲ ಪುಣ್ಯದಂತೆ' 'ಘನಶರದ್ಘನ ಸನ್ನಿಭ'ರಾದ ನಾರದ ಬರುತ್ತಾರೆ. ಗಿರಿರಾಜ ಅವರಿಗೆ ಉಚಿತವಾದ ಪೂಜ್ಯಭಾವದಿಂದ ಸತ್ಕಾರ ನೀಡುವ ವೇಳೆಗೆ ಅಲ್ಲಿಗೆ ಗೌರೀದೇವಿ ತನ್ನ ಸಖಿಯರೊಡಗೂಡಿ ಬರುತ್ತಾಳೆ. ಆಕೆ ಬರುವ ಚಿತ್ರವೂ ಬಹುರಮ್ಯವಾಗಿದೆ; ಅರ್ಥಪೂರ್ಣವಾಗಿದೆ. . . . . ಆ ದೇವಿಯನ್ನು ಕಂಡು ನಾರದರು ನಮಸ್ಕರಿಸುತ್ತಾರೆ. ಅದನ್ನು ಕಂಡ ಗಿರಿರಾಜನಿಗೆ ಆಶ್ಚರ್ಯ: ತನ್ನಿಂದ ನಮಸ್ಕೃತರಾದ ದೇವಋಷಿ ತನ್ನ ಮಗಳಿಗೆ ನಮಸ್ಕರಿಸುತ್ತಾರಲ್ಲ, ಎಂದು! ಆದರೆ ಆಕೆ ಲೋಕ

ಮಾತೆಯೆಂದು ಹರಿಬ್ರಹ್ಮಮಹೇಂದ್ರಾದಿಗಳಿಗೆ ತಿಳಿಯದು, ಹಾಗಿರುವಲ್ಲಿ ಅಂತಹ ವಿಮೋಹಕ್ಕೆ ಆಶ್ಚರ್ಯಪಡಬೇಕಾಗಿಲ್ಲ. ನಾರದರೆ ಹೇಳುತ್ತಾರೆ:

" ಸುರರಱಿಯರಿಂದ್ರನಱಿಯಂ
ಹರಿ ಕಮಲಜರಱಿಯರಖಿಲ ಮನುಗಳ್ ಮುನಿಗಳ್
ಕರಮಱಿಯರ್ ಎಂದೊಡಗಜೆಯ
ಚರಣಾಬ್ಜಕ್ಕೆಱಗಲಿಳೆಯೊಳಾನೆನಿತಱಿವಂ.

" ನೆವದಿಂದಂ ನಿಮ್ಮ ಪುಣ್ಯೋದರದೊಳೊಗೆದೊಡೀ ಬಾಲೆಯಂ ಪುತ್ರಿಯೆಂಬೊಂ
ದವಿಚಾರಂ ಬೇಡ ನೀವೇ ಜನನಿ ಜನಕರಲ್ಲಲ್ಲದಂತಿರ್ಕೆ ತಾಯೇ
ನವರತ್ನಕ್ಕಬ್ಧಿ ಚಿಂತಾಮಣಿಗೆ ಮೊರಡಿ ಮುತ್ತಿಂಗೆ ಸಿಂಪಿಂದುವಿಂಗಂ
ರವಿಗಂ ಪೂರ್ವಾಶೆ ಲಿಂಗಕ್ಕವನಿ ಸುಧೆಗೆ ದುಗ್ಧಾಬ್ಧಿ ಪದ್ಮಕ್ಕೆ ಪಂಕಂ

" ಅದು ಕಾರಣದಿಂ ಮುನ್ನಮೆ
ಮೊದಲಿಂ ಹರನರಸಿ ಗಿರಿಶನರ್ಧಾಂಗಿ ವರ
ಪ್ರದೆ ವರನೀಶ್ವರನೀಕೆಗೆ
ಮುದದಿಂ ಶಿವನಲ್ಲಿಗಿರದೆ ಕಳಿಪುವುದುಚಿತಂ

" ಗಿರಿಸುತೆ ಬಳೆವನ್ನೆವರಂ
ಹರನಿರ್ದಪನೊಲ್ದು ಹೇಮಕೂಟಸ್ಥಲದೊಳ್
ಪರಿಪೂರ್ಣ ಪರಂಜ್ಯೋತಿಃ
ಸ್ವರೂಪ ನಿಜಯೋಗ ಭೋಗ ರಾಗೋನ್ನತಿಯಿಂ"

ಎಂದ ಆ ನಾರದ ಮುನಿ ಗಿರಿಜೆಯ ಪರಮ ಲಾವಣ್ಯಾವಯವಗಳನ್ನು ಕಂಡು ನೋಡಲಾರದೆ ನಮಸ್ಕರಿಸಿ,

" ಈ ಗಿರಿಜೆಯ ನವಯೌವನ
ಮೀ ಗಿರಿಜೆಯ ರೂಪವಿಭವಮೀ ಗಿರಿಜೆಯ ಸೌ
ಖ್ಯಾಗಮವೀ ಗಿರಿಜೆಯ ನಿಜ
ರಾಗಂ ಶಂಕರನ ಚಿತ್ತಮಂ ಚಿಗುರಿಸದೇ"

ಎಂದುಕೊಳ್ಳುತ್ತಾರೆ*.

ಗಿರಿಜಾಕಲ್ಯಾಣದಲ್ಲಿ ಅತ್ಯಂತ ಮಹಾ ಅವಿವೇಕದ ಪ್ರಸಂಗವೊಂದು ಈಗ ಎದುರುಗೊಳ್ಳುತ್ತದೆ. ಅದಷ್ಟಕ್ಕೆ ಕವಿ ನಿಲ್ಲಿಸಿದ್ದರೆ ನಮಗೆ ಈ ತನಕ ಉಂಟಾಗಿದ್ದ ದಿವ್ಯ ಅನುಭವಗಳು ಹಾಗೆಯೆ ಚಿರನೂತನವಾಗಿರುತ್ತಿದ್ದವು. ಆದರೆ ದುರದೃಷ್ಟ. ಕವಿ ಮುಂದೆ ನಾರದರನ್ನು ವೇಶ್ಯಾವಾಟಕ್ಕೆ ಕರೆದುಕೊಂಡು ಹೋಗಿ ಕೈಲಾಸಾರೋಹಣ ಮನಸ್ಕನಾದ ಸಹೃದಯನನ್ನು ವಿನಾಕಾರಣ ನರಕಕೂಪ ಮೂಲಕ ಹಾಯ್ದು ಹೋಗುವಂತೆ ಮಾಡುತ್ತಾನೆ. ನರಕದರ್ಶನ ಅವಶ್ಯವೆ ಇದ್ದಿದ್ದರೆ ಒಪ್ಪಬಹುದಿತ್ತು. ಇದು ಹಾಗೇನೂ ಅಲ್ಲ. ಅಷ್ಟಾದರ್ಶವರ್ಣನೆಗಳ ಮಹಾ

*ಆದರೂ ಕವಿ ಅವರ ಬಾಯಿಯಲ್ಲೂ ಗಿರಿಜಾಸೌಂದರ್ಯದ ವರ್ಣನೆ ಮಾಡಿಸುತ್ತಾನೆ.

ಭೂತ ಹಿಡಿದು ಕವಿ ಆ ಪಾಪವನ್ನಿಲ್ಲಿ ತಂದಿದ್ದಾನೆ. ಇಂತಹ ದಿವ್ಯಭಾವ ಪ್ರಚೋದಿತನಾದ ಕ್ರಾಂತಿ ಶೀಲನಾದ ಭಕ್ತ ಕವಿಗೇಕೆ ಈ ಭೂತ ಹಿಡಿಯಿತೊ ತಿಳಿಯದು. ಗಿರಿಜೆಯನ್ನು ಕಂಡು ಧನ್ಯರಾದ ನಾರದರನ್ನು ಗಿರಿರಾಜ ವೇಶ್ಯಾವಾಟದರ್ಶನಾರ್ಥವಾಗಿ ಕರೆದೊಯ್ಯುವುದು !..........ಈ ಒಂದು ನರಕಕೂಪ ಸುಂದರವಾಗಿ ವರ್ಣಿತವಾಗಿದ್ದರೂ ಕಾವ್ಯ ಶರೀರಕ್ಕೆ ಮಹಾಮೃತ್ಯುವಾಗಿರುವುದರಿಂದ ನಾವದನ್ನು ಬಿಟ್ಟು ಮುಂದೆ ಹೋಗಬಹುದು.

ಈ ಮಧ್ಯೆ ಕಾಳಿದಾಸನಲ್ಲಿ ಈ ನಾರದಾಗಮನ ಚಿತ್ರ ಹೇಗೆ ನಡೆದಿದೆ ನೋಡಬಹುದು. ಮೊದಲು ತಿಳಿಸಿದಂತೆ ಗಿರಿಜೆಯ ವರ್ಣನೆಯನ್ನು ಮಾಡಿ ಆಯಾಸಗೊಂಡೊಡನೆಯೆ ನಾರದಾಗಮನವಾಗುತ್ತದೆ. ಒಂದೆ ಪದ್ಯದಲ್ಲಿ ಆ ಪ್ರಸಂಗವನ್ನು ನಿಭಾಯಿಸಿಕೊಂಡು ಮುಂದೆ ಹಾಯುತ್ತದೆ, ಕವಿಯ ಜಾಣ್ಮೆ. ಗಿರಿಜಾವರನ ವೃತ್ತಾಂತವನ್ನು ಕೇಳಿ ಅನ್ಯವರರಾಶೆಯನ್ನು ತೊರೆದ ಗಿರಿರಾಜ ಅಂದುಕೊಳ್ಳುತ್ತಾನೆ:

'ಅಗ್ನಿದೇವನನುಳಿದ ಅನ್ಯ ತೇಜೋರೂಪ
ಮಂತ್ರಪೂತಾಹುತಿಯನೀಯಲಹುದೆ ?

(ಋತೇ ಕೃಶಾನೋರ್ನ ಹಿ ಮನ್ತ್ರಪೂತಮರ್ಹನ್ತಿ ತೇಜಾಂಸ್ಯಪರಾಣಿ ಹವ್ಯಮ್)

ಉಪಮಾನ ಸೊಗಸಾಗಿದೆ. ಆದರೆ ಇದು ಎಷ್ಟು ಬಾರಿ ಕಾಳಿದಾಸನಲ್ಲಿ ಬಂದಿದೆ ? ಶಾಕುಂತಲದಲ್ಲೂ ಇದೇ ಹವಿಸ್ಸು ಇದೇ ಅಗ್ನಿ, ಇಲ್ಲೂ ಅದೆ............ ಅಷ್ಟೇ ಅಲ್ಲ, ಗಂಡು ಹೆಣ್ಣಿನ ಸಂಬಂಧವನ್ನು ಸೂಚಿಸಲು ಉಪನಿಷತ್ತು, ವಾಲ್ಮೀಕಿ ರಾಮಾಯಣಗಳಲ್ಲಿ ಇದೆ ಉಪಮಾನವೆಷ್ಟೊ ಬಾರಿ ಬಂದಿದೆ. ಹೊಸತೇನು ಬಂತು?

ಗಿರಿರಾಜನಿಗೆ ತನ್ನ ಅಳಿಯನ ಮಹಿಮೆ ತಿಳಿದಿದ್ದರೂ ಅವನ ಮಾನುಷ ಅಭಿಮಾನ ಹೇಗೆ ತಾನೆ ತಾನೇ ಮುಂದೆ ಹೋಗಿ ತನ್ನ ಮಗಳನ್ನು ಮದುವೆ ಮಾಡಿ ಕೊಡಲು ಒಪ್ಪುತ್ತದೆ.

'ದೇವ ದೇವನೆ ಬಂದು ಕನ್ಯೆಯನು ಬೇಡದಿರ
ಲೆಂತೀವನಣುಗಿಯನು ಹಿಮವಂತನು ?
ಬೇಡಿಕೆಯ ಭಂಗದಿಂದಳುಕುತಿಹ ಸಜ್ಜನರು
ತಮ್ಮೊಲವಿನಭಿಮತವನರಿಯಗೊಡರು !

ಈ ಅಭಿಮಾನವೇನೊ ಯೋಗ್ಯವೆ. ಆದರೆ ಶಿವವಿಚಾರವಾಗಿ ಗಿರಿರಾಜನಿಗೆ ಹೀಗೆ ಅನಿಸಿದರೆ ಅದರಲ್ಲಿ ಔಚಿತ್ಯವೆಷ್ಟಿದೆ ?

ಕಥೆ ಕಾಳಿದಾಸನಲ್ಲಿ ಮಿಂಚಿನಂತೆ ಸಂಚಲಿಸುತ್ತ ಹೋಗುತ್ತದೆ. ಗಿರಿರಾಜನಾಗಲೆ ತಪಸ್ವಿ ಶಿವನ ಬಳಿ ಬಂದು ಅರ್ಘ್ಯಾದಿಗಳಿಂದ ಅವನನ್ನು ಅರ್ಚಿಸಿ, ಸಖಿಯರಿಂದೊಡಗೂಡಿದ ತನ್ನ ಣುಗಿಯನ್ನು ಆತನಾರಾಧನೆಗೆ ನೇಮಿಸುತ್ತಾನೆ. ಗಿರಿಶನೂ ಅವಳನ್ನು 'ಒಪ್ಪಿದ'ನಂತೆ. ಚಿತ್ತವನ್ನು ಕಲಕುವ ನಿಮಿತ್ತವೆನಿತಿದ್ದರೂ ನಿರ್ವಿ

ಕಾರದಲ್ಲಿರುವಾತನೆ ಧೀರನಲ್ಲವೆ? ಎಂದು ಕವಿ ಹೇಳುತ್ತಾನೆ. ಸರಿ, ಆದರೆ ಶಿವ ಹಾಗೆ ಗಿರಿಜೆಯನ್ನು ಅನುಮತಿಸಬೇಕಾದರೆ ಕಣ್ತೆರೆದೇನಾದರೂ ನೋಡಿದನೆ? ಇಲ್ಲವೆ ಅವನ ಧ್ಯಾನಮುದ್ರೆಯೆ ಅದನ್ನು ಧ್ವನಿಸಿತೆ? ಎಂಬ ಪ್ರಶ್ನೆ ಮೂಡುತ್ತದೆ. ಆದರೆ ನಮಗೇಕೆ ಆ ಚಿಂತೆ. ಅಂತೂ ಅಂತಹ ಹರನನ್ನು ಪೂಜಿಸಿಕೊಂಡು ಅವನ ತಪಸ್ಸಿನ ವೇದಿಯನ್ನು ತೊಳೆಯುತ್ತ ಸೇವಿಸಿಕೊಂಡಿರುತ್ತಾಳೆ ಗಿರಿಜೆ, ತನಗಾದ ಆಯಾಸವನ್ನೆಲ್ಲ ಚಂದ್ರಶೇಖರನ ಚಂದ್ರಕಿರಣದಿಂದ ಪರಿಹರಿಸಿಕೊಳ್ಳುತ್ತ. ಇನ್ನು, ಆ ಗಿರಿಶನ ತಪಸ್ಸಿನ ವರ್ಣನೆ ಹೇಗಿದೆ ನೋಡಿಯೆ ತಿಳಿಯಬೇಕು:

‘ತನ್ನಷ್ಟಮೂರ್ತಿಗಳಲೊಂದಾದ ಅಗ್ನಿಯನು
ಅಲ್ಲಿ ಸಮಿಧೆಯನುರಿಸಿ ಜ್ವಲನಗೊಳಿಸಿ
ಭಕ್ತರೆಲ್ಲರ ತಪಕೆ ಫಲವನೀಯುವ ಹರನು
ಅವುದೋ ಕಾಮದಲಿ ತಪವಿರ್ದನು!’

ಪರಶಿವನ ತಪಸ್ಸಿನ ಪ್ರಥಮ ಚಿತ್ರವಿದು. ಮುಂದೆ ಇದನ್ನೆ ಕುರಿತು ಆಡಬೇಕಾದ ಮಾತುಗಳು ಇರುವುದರಿಂದ ಈಗ ಏನೊಂದೂ ಹೇಳಬೇಕಿಲ್ಲ. ಈ ಚಿತ್ರ ಹೀಗಿದೆ ಎಂದಷ್ಟು ತಿಳಿದಿದ್ದರೆ ಸರಿ.

ಈಗ ಹರಿಹರನಲ್ಲಿ ಅದೇ ಸನ್ನಿವೇಶದ ಚಿತ್ರವನ್ನು ನೋಡಬಹುದು. ನಾರದರು ಹೇಳಿದ ಮಾತನ್ನು ನೆನೆದು ಚಿಂತಿಸಿದ ಗಿರಿರಾಜ ಗಿರಿಜೆಯನ್ನು ಗಿರಿಶ ನೆಡೆಗೆ ಕರೆದೊಯ್ಯಲು ನಿರ್ಧಾರಗೊಳ್ಳುತ್ತಾನೆ. ತಂದೆಯ ಮಾತನ್ನು ಕೇಳಿದ ಗಿರಿಜೆ ತನ್ನ ಪ್ರಿಯನೆಡೆಗೆ ಹೊರಡಬೇಕಾದ ಮುಹೂರ್ತ ಬಂದಾಗ ‘ಪುಲಕಾಭರಣೆ’ ಆಗುತ್ತಾಳೆ. ಆದರೆ ಅವಳನ್ನು ಬಿಳ್ಕೊಡಬೇಕಾದರೆ ತಾಯಿಗೆ ದುಸ್ಸಹದುಃಖ. ದುಷ್ಟಪ್ರಾಣಿಗಳ ಮಧ್ಯಕ್ಕೆ ಕಳಿಸಿಕೊಡಬೇಕಲ್ಲ ತನ್ನ ತವನಿಧಿಯನ್ನ ಎಂಬ ಗೋಳು. ಅವಳ ದುಃಖವನ್ನು ಬುದ್ಧಿವಾದಗಳನ್ನು ಕಂಡು ಗಿರಿಜೆಗೆ ಒಳಗೊಳಗೆ ನಗು. ‘ಮನದೊಳ್ ನಗುತ್ತಂ ಮಾತೆಯ ಮಾತಿಗೊಡಂಬಟ್ಟು ವಿನಯ ವಿನಮಿತೆ’ ಯಾಗುತ್ತಾಳೆ ಪಾರ್ವತಿ. ಗಿರಿರಾಜ ಮಗಳನ್ನು ಪುಷ್ಪಕದಲ್ಲಿ ಕರೆದೊಯ್ಯುತ್ತಾನೆ, ದಕ್ಷಿಣದ ತುಂಗಭದ್ರಾತಟಿಯ ಹೇಮಕೂಟಕ್ಕೆ. ಪರಾಪರಸುಖನಿದ್ರೆಯಾದ ಆ ತುಂಗಭದ್ರೆಯ ಸನ್ನಿಧಿಯಲ್ಲಿ ತಪೋನಿರತರಾದವರನ್ನು ನೋಡುತ್ತ ನೋಡುತ್ತ ಹೋದಂತೆ ಅಲ್ಲೆ ಮುಂದೆ ಗಿರಿಶಿಖರ ಮುಖದ್ವಾರದಲ್ಲಿ ಭಕ್ತಿಯಿಂದ ಕಾಯುತ್ತಲಿದ್ದ ಸುರುಚಿರ ಸುಖಸಾಕಾರ ಸಾರನಾದ ಶ್ರೀನಂದೀಶನನ್ನು ಕಾಣುತ್ತಾರೆ. ಗಿರಿಜೆ ಯನ್ನು ಕಂಡೊಡನೆಯೆ ಆ ಧ್ಯಾನಲೀನ ನಂದಿನಾಥ ಆಕೆಗೆ ಎರಗುತಾನೆ. ಅವರೆಲ್ಲ ಮುಂದೆ ಧ್ಯಾನಸ್ಥ ಶಿವನ ಬಳಿಗೆ ನಡೆಯುತ್ತಾರೆ. **ತನ್ನನ್ನು ತಾನೆ ಜಾನಿಸುವ ಬಿನ್ನಾಣದಲ್ಲಿದ್ದ ನಿಜತೇಜೋವಿಲೀನ ಮಾನಸನಾದ ನಿಷ್ಕಂಪನಿವಾತ ಜ್ಯೋತಿರೂಪನಾದ ಶಿವನನ್ನು** ಕಾಣುತ್ತಾರೆ.

'ಪೊಱಗಂ ಬಳಸದ ಮಾಯೆಗೆ
ತೆಱಹಂಗುಡದಚ್ಚಬಚ್ಚಬಱಿಯಱಿವಿನ ಸೈ
ವೆಱಗಿನ ಮಱಹಿನ ಕುಱುಹಿನ
ಕಱಗೊರಲಂ ನಿಜಸಮಾಧಿಯೊಳ್‌ ಸಂದಿರ್ದಂ'

ಆ ದಿವ್ಯ ಸನ್ನಿಧಿಯನ್ನು ದರ್ಶಿಸಿದೊಡನೆಯೆ ಪುಲಕಗೊಂಡ ಗಿರಿಜೆ ತಂದೆಯ ಮಾತಿನಂತೆ ಶಿವನಿಗೆ ನಮಸ್ಕರಿಸುವ ಚಿತ್ರವನ್ನು ಕವಿಕೊಡುತ್ತಾನೆ:—"ಕೌತುಕರಸದೊಳಾನಂದಂ ಪುಟ್ಟಿ, ಭಯರಸದೊಳ್ ಭಕ್ತಿಯುಣ್ಮಿ, ಸ್ನೇಹರಸದೊಳ್ ತಾತ್ಪರ್ಯಂ ಪೊಣ್ಮಿ, ಶೃಂಗಾರರಸದೊಳ್ ಲಜ್ಜೆವೆರಸಿ, ಕಲ್ಪತರುವಿನ ಬೀಳಲ್ ಮಹಾನಿಧಾನಕ್ಕೆಱಗುವಂತೆ, ಮಂದಾನಿಲನ ಸೋಂಕಿಂದಂ ಪುಷ್ಪಮಾಲೆ ಬಳ್ಕುವಂತೆ, ಕುಸುಮಚಾಪಂ ಕಾಲ್ಗೆಱಗುವಂತೆ, ಪಂಚಬಾಣಂ ಹೊಡೆಗೆಡೆವಂತೆ, ಮುಂದೆ ನಿನ್ನ ವಾಮಭಾಗಮಂ ಸೂಱೆಗೊಳ್ವುದರ್ಕಿದೆ ಕುಱುಪೆಂಬಂತೆ, ಬಿಂಕದಿಂ ಕೊಂಕಿ ನಿಂದು ವಿಲಾಸದಿಂದೆಡದುಂಗುಟಮಂ ಲಲಾಟದಿಂ ಮುಟ್ಟಿ ಪೊಡೆಮಟ್ಟು ನಿಂದು,

'ಆನಿರ್ದಂತಿರದೇಕೆ ಬೇರೆ ತಪವೆಂದೆಂಬಂತಹಂಕಾರದಿಂ,
ನೀನೇ ಸದ್ಗತಿ ದೇವದೇವ ದಯೆಗೆಯ್ಯೆಂಬಂತೆ ಕಾರ್ಪಣ್ಯದಿಂ,
ಸಾನಂದಾತ್ಮಕನೆನ್ನನೇಕಜೀವನೆಂದೆಂಬಂತೆ ನಿರ್ವೇದದಿಂ,
ನಾನಾ ಭಾವದೊಳೆಂದು ಕೂಡಿದಪೆನೆಂಬಂತಾಸೆಯಿಂ ನೋಡಿದಳ್'

ಇಲ್ಲಿ ಚಿತ್ರಿತವಾಗಿರುವ ಭಾವದ ಸಂಕೀರ್ಣತೆಯನ್ನಾಗಲಿ, ವ್ಯಭಿಚಾರಿಯಲ್ಲದ ಸಂಕೀರ್ಣತಮವಾದ ಆ ನಾನಾ ಭಾವಗಳ ಘನತೆಯಾಗಲಿ ದಿವ್ಯತೆಯಾಗಲಿ, ಅವುಗಳನ್ನು ವರ್ಣಿಸಲು ಬಂದಿರುವ ಚಿತ್ರಗಳಾಗಲಿ ಎಷ್ಟು ಧ್ವನಿಪೂರ್ಣವಾಗಿವೆ! ವಿವರಣೆ ಬೇಕಿಲ್ಲ, ಸಪ್ಪೆ.

ಶಿವನೆ ತನ್ನ ಪತಿಯೆಂದು ಅರಿತುಕೊಂಡ ಮೇಲೆ ಗಿರಿಜೆ ತನ್ನ ತಂದೆಯನ್ನು ತೆರಳುವಂತೆ ಕೇಳಿಕೊಳ್ಳುತ್ತಾಳೆ:

"ಶಿವನೀತಂ, ನಿಜವಲ್ಲಭಂ, ಮಮ ಗುರು ಪ್ರಖ್ಯಾತನತ್ಯೂರ್ಜಿತಂ
ಭವನೆನ್ನಾಳ್ದನೆನಿಪ್ಪುದಂ ತಿಳಿದೆನಾಂ, ನೀಂ ಪೋಗು, ನಿತ್ಯಾರ್ಚನೋ
ತ್ಸವದಿಂ ಸಂತಸದಿಂ ಸದಾತುರತೆಯಿಂ ಸಾನಂದದಿಂದಿರ್ಪೆನ್"

ಮಗಳನ್ನು ಬಿಟ್ಟುಹೋಗಲಾರದೆ ಹೋಗುತ್ತಾನೆ ಗಿರಿರಾಜ. ಆಗ ಪಾರ್ವತಿಗೆ ಹೊಳೆಯುತ್ತದೆ: '**ಸಾತ್ತ್ವಿಕೆ ಶಿವಭಕ್ತಿಗಲ್ಲದಭವಂ** ಸಮಂತು ಸಿಲ್ಕಂ ನಿಲ್ಕಂ' ಎಂದು.

ಈ ಭಕ್ತಿ ಭಾವ ತುಂಬಿಕೊಂಡ ಗಿರಿಜೆ ಶಿವಾರ್ಚನೆಮಾಡಲು ಸಹಸ್ರಾರು ಬಗೆಯ ಹೂವುಗಳೆಲ್ಲವನ್ನು ತಿರಿದು ತರುವ ದೀರ್ಘವೂ ಸುಂದರವೂ ಆದ ಚಿತ್ರವನ್ನು ನೀಡುತ್ತಾನೆ ಕವಿ. ಓದಿಯೆ ತಿಳಿಯಬೇಕು ಅದರ ಸ್ವಾರಸ್ಯವನ್ನು. ತಾನು ತಿರಿದುತಂದ ಸುಮಗಳನ್ನು ತನ್ನ "ಕರಕಮಲದ ಲೋಚನ ಸರಸಿರುಹದ ವದನಾರವಿಂದದಾ ಪರಿಮಳದಿಂ ಪೊರೆಯುತ್ತುಂ ಪೊಸಪೂವಂ ಗಿರಿಜೆ **ಸುಖಂ ಮುಟ್ಟಿ**

ಮುಂಟ್ಟಿ ಕೆಟ್ಟಿ "ತ್ತಾಳೆ. ಮಾಲೆಮಾಡಿದ ಅವುಗಳನ್ನು ಶಿವನಿಗೆ ಸೂಡುವಾಗ ಅವಳಿಗಾದ ದಿವ್ಯರತಿಯ ಚಿತ್ರ ಬಹು ರಮ್ಯವಾಗಿದೆ.

'ಸಂದಣಿಸುವ ನವನವ ಪುಲ
ಕಂ ದಟ್ಟಯ್ಸುತ್ತೆ ನೆಗೆಯೆ ಶಶಿಮೌಳಿಗೆ ಪೂ
ರ್ಣೇಂದುಮುಖಿ ಪೊಡೆಮಡುತ್ತಾ
ನಂದಾಶ್ರುಗಳಿಂದೆ ಚರಣತಲಮಂ ತೊಳೆದಳ್'

'ತವತವಗೆ ಮುಂಚುವಿಂದ್ರಿಯ
ನಿವಹಮನೋವುತ್ತೆ ಗಿರಿಜೆ ಹರಕಂಧರದೊಳ್
ನವಕುಸುಮ ಮಾಲೆಯಂ ಸಾ
ರ್ಚುವ ನೆವದಿಂ ಸೊಂಕಿ ಸೊಂಕಿ ಪುಲಕಿಸುತಿರ್ದಳ್

'ಭರದಿಂ ನವಕುಸುಮಾ-
ಭರಣಂಗಳನಭವನಂಗದೊಳ್ ಸಿಂಗರಿಸು
ತ್ತರಳುತ್ತುರ್ಬುತೆ ಕೊರ್ಬುತೆ
ಗಿರಿಸುತೆ ನಱುಸುಯ್ಯ ಧೂಪಮಂ ಪದೆದಿತ್ತಳ್

'ಅಲರ್ದೊಂಗಲ ಪೊಸದುಡಿಗೆಯ-
ನಲಂಪಿನಿಂ ಶಂಕರಂಗೆ ಕೆಯ್ಗೊಳಿಸುತ್ತ
ಗ್ಗಲಿಸುತ್ತೆತ್ತಿದಳಂಬಿಕೆ
ನಲವಿಂ ನಗೆಮೊಗದ ಕಾಂತಿಯೆಸೆವಾರತಿಯಂ

'ಉತ್ತಮ ಗುಣ ವಿಭೂಷಣೆ
ಚಿತ್ತ ವಿಕಾಸಮನೆ ಪಡೆದು ಸಾತ್ತ್ವಿಕಭಾವೋ
ನ್ಮತ್ತೆ ನಗಪುತ್ರಿ ಮುದದಿಂ
ದಿತ್ತಳ್ ಶರ್ವಂಗೆ ಭಕ್ತಿಯಾರೋಗಣೆಯಂ

'ಇಂತು ಪಾರ್ವತಿ ಪಲವುಂ ಭೋಗಂಗಳಂ ರಾಗದಿಂ ರಾಜಮೌಳಿಗೊಲ್ದು ಪೂಜೆಯನೆವದಿಂ ನಿವೇದಿಸಿ ಸಂಪದಮನೋಲಗಿಪ ಸಿಂಗರದಂತೆ ಧರ್ಮಮಂ ಬಳೆಯಿಪ ಸಂಪದದಂತೆ ಪುಣ್ಯಮಂ ಸೇವಿಪ ಧರ್ಮದಂತೆ, ಭಕ್ತಿಯಂ ಬಯಸುವ ಪುಣ್ಯದಂತೆ ಶಿವಜ್ಞಾನಮನೆಳಸುವ ಭಕ್ತಿಯಂತೆ, ಮುಕ್ತಿಯಂ ನಿಶ್ಚಯಿಪ ಶಿವ ಜ್ಞಾನದಂತೆ, ಶಿವಸಂಗಮಂ ಬಯಸಿ ಮನ್ಮಥ ಮನೋರಥ ದುಲರ್ಭವಲ್ಲಭನಂ ನೋಡುವಾಗಳ್

'ಪೊಸ ಜಡೆಯೊಳ್ ತೊಡಂಕಿ ನೊಸಲೊಳ್ ನಡೆಪಾಡಿ ಕಪೋಲಭಾಗದೊಳ್
ಪಸರಿಸಿ ಲೋಚನಂಗಳೊಳಮರ್ಚಿ ತದಾಸ್ಯದೊಳೊಂದಿ ಕಂಠದೊಳ್
ಮಿಸುಗೆ ಭುಜಾಗ್ರದೊಳ್ ತೊಳಗಿ ವಕ್ಷದೊಳ್ ಅಳ್ದು ಕರಂಗಳೊಳ್ ವಿರಾ
ಜಿಸಿ ಪದದಲ್ಲಿ ಬಿಳ್ದುವು ಭವಾನಿಯ ಮಾನಿಯ ದೈನ್ಯದೃಷ್ಟಿಗಳ್

ಇಂತು ಶರ್ವನ ಸರ್ವಾಂಗದೊಳ್ ನೋಟಂ ಮುಸುಂಕಿ ನೋಡಿ,

“ ಬೆಮರ್ವಳ್, ಬೆರ್ಚುವಳ್, ಉರ್ಬುವಳ್
ಅಮರ್ವಳ್, ಪೆಱಸಾರ್ವಳ್, ಅಂಜಿ ನಿಲ್ವಳ್, ಸೊಂಕಲ್
ನಿಮಿರ್ವಳ್, ನೆನೆವಳ್, ಮುನಿವಳ್
ಸಮಸಲ್ವಳ್, ಗಿರಿಜೆ ಸೆಡೆದು ಸುಯ್ವಳ್ ಕಾಯ್ವಳ್

“ಚಾರುತರ ಕಾಂತಿಮಯ ಸುಕು
ಮಾರಾವಯವಂಗಳಂ ನಿರೀಕ್ಷಿಸಿ ನಲಿವಳ್
ತಾರಾಚಲನಾಥನ ಘನ
ವೈರಾಗ್ಯಕ್ಕಂಜಿ ನಡುಗಿ ಸಿಡಿಮಿಡಿಗೊಳ್ವಳ್

“ ಶಿವನಂ ನೋಡುತ್ತೆ ಮೇನಾಸುತೆ ಮದನಸುಖಾಸಕ್ತಿಯಿಂ ಸೊಂ
ಕುವಳ್ ಆನಂದಾಶ್ರುವಂ ಸೂಸುವಳ್ ಅನುವಿಸುವಳ್
ತತ್ತಪಕ್ಕಂಜಿ ಹಿಮ್ಮೆ
ಟ್ಟುವಳ್ ಅಂತಂತಳ್ಕುವಳ್ ಬಳ್ಕುವಳ್ ಅದಟಳಿವಳ್ ಕೋಡುವಳ್
ಬಾಡುವಳ್ ಕುಂ
ದುವಳ್ ಆರ್ತಂಗೆಟ್ಟು ನಿಲ್ವಳ್ ನೆನೆದುರವಣಿಪಳ್ ಮುಂದಳಲ್ವಳ್
ಬಳಲ್ವಳ್

“ನಗುವಳ್ ನಗೆಯೊಳ್ ಕೌತುಕ
ಮೊಗೆಯೆ ನಿರೀಕ್ಷಿಸುವಳ್ ಈಕ್ಷಣದೊಳಗೆ ದೈನ್ಯಂ
ಮಿಗೆ ಭಾವಿಸುವಳ್ ಭಾವದೊ
ಳಗೆ ದೇವನ ಚೆಲ್ವನಬಲೆ ಸಲೆ ನಿಲೆ ನೆನೆವಳ್ ”

ಈ ಮೇಲಿನ ದೀರ್ಘ ಸುಂದರವಾದ ಅನುಭಾವಚಿತ್ರಕ್ಕೆ ಸಮರ್ಪಕ ವ್ಯಾಖ್ಯಾನ ದುಸ್ತರವಾಗುತ್ತದೆ. ಉಚಿತವಾಗಬಹುದಾದ ಸಾಧ್ಯವಾದಷ್ಟು ಮಾತನ್ನು ಮಾತ್ರ ಹೇಳಬಹುದಿಲ್ಲಿ. ಪಾರ್ವತಿಯ ಶಿವಾನುರಾಗ ಹೇಗೆ ಶಕ್ತಿಯಾಗಿ ಭಕ್ತಿಯಾಗಿ ಶಿವಜ್ಞಾನವಾಗಿ ಮುಕ್ತಿ ನಿರ್ದೇಶಕವಾಗಿ ಪರಿಣಾಮಗೊಳ್ಳುತ್ತ ಹೋಗಿದೆ ಎಂಬುದನ್ನು ಕಾಣಬಹುದಿಲ್ಲಿ. ಅವಳ ಪ್ರಣಯಾರಾಧನೆ ಪ್ರಣವಾರಾಧನೆಯಾಗಿದೆ. ಅದನ್ನು ವರ್ಣಿಸಲು ಬಂದಿರುವ ಉಪಮಾಚಿತ್ರಗಳಂತೂ ದಿವ್ಯಸುಂದರ. ಅಕರ್ದಮವಾದ ಮರ್ತ್ಯಾಮರ್ತ್ಯ ಸಂಸ್ಪರ್ಶಿಯಾದ ಆ ವರ್ಣನಾವಿಧಾನ ಈ ಬಗೆಯ ಕವಿಗೆ ಮಾತ್ರ ಸಾಧ್ಯ. ಮೇಲಿನ ಪದ್ಯಗಳಲ್ಲಿ ಪಾರ್ವತಿಯ ಅನುರಾಗಾತಿಶಯದ ವರ್ಣನೆಯಿದ್ದರೆ ಆ ಮಧ್ಯೆ ಬಂದಿರುವ ಗದ್ಯಭಾಗದಲ್ಲಿ, ಶಿವಶಿವಾ ಅವಿಭಾಜ್ಯ ಸಂಬಂಧವನ್ನು ಸೂಚಿಸುವ ದಿವ್ಯರತಿಯ ಚಿತ್ರವಿದೆ. ಇದಿಷ್ಟೂ ಪಾರ್ವತಿಯ ಪ್ರಾರಂಭ ಪ್ರೇಮಾರಾಧನಾ ವಿಧಿ. ಮುಂದೆ ಅದು ಹೇಗೆ ಉಗ್ರ ತಪಸ್ಸಾಗುತ್ತದೆ ಎಂಬುದನ್ನು ಆಮೇಲೆ ಕಾಣಬಹುದು.

(ಮುಂದುವರಿಯುವುದು)

—ಸು

ಕವಿ ಪ್ರಾರ್ಥನೆ

ಯಾ ಸೃಷ್ಟಿಃ ಸ್ರಷ್ಟುರಾದ್ಯಾ ವಹತಿ ವಿಧಿಹುತಂ ಯಾ ಹವಿರ್ಯಾ ಚ ಹೋತ್ರೀ
ಯೇ ದ್ವೇ ಕಾಲಂ ವಿಧತ್ತಃ ಶ್ರುತಿವಿಷಯಗುಣಾ ಯಾ ಸ್ಥಿತಾ ವ್ಯಾಪ್ಯ ವಿಶ್ವಮ್
ಯಾಮಾಹುಃ ಸರ್ವಭೂತಪ್ರಕೃತಿರಿತಿ ಯಯಾ ಪ್ರಾಣಿನಃ ಪ್ರಾಣವಂತಃ
ಪ್ರತ್ಯಕ್ಷಾಭಿಃ ಪ್ರಪನ್ನಸ್ತನುಭಿರವತು ವಸ್ತಾಭಿರಷ್ಟಾಭಿರೀಶಃ ||

—ಶಾಕುಂತಲ

ಆವುದು ಧಾತೃಸೃಷ್ಟಿಗೆ ಮೊದಲ್ ಹುತಹವ್ಯಮನಾಂಪುದಾವುದಿ
ನ್ನಾವುದು ಹೋತೃಶಬ್ದಗುಣಮಾವುದವಾವುವು ಕಾಲಕರ್ತೃಗಳ್
ಆವುದುಸಿರ್ ಜಗಕ್ಕೆ ಉಸಿರ್ವರಾವುದ ಭೂತಕುಲಪ್ರಧಾನಮೆಂ
ದಾವೊಡಲೆಂಟರಿಂದೆ ಮೆರೆವೀಶನ್ ಒಡರ್ಚುಗೆ ನಿಮ್ಮಭೀಷ್ಟಮಂ

—ಅನು : ದಿ. ಬಸವಪ್ಪಶಾಸ್ತ್ರೀ

ಪ್ರವರ್ತತಾಂ ಪ್ರಕೃತಿಹಿತಾಯ ಪಾರ್ಥಿವಃ
ಸರಸ್ವತೀ ಶ್ರುತಿಮಹತಾಂ ಮಹೀಯತಾಮ್
ಮಮಾಪಿ ಚ ಕ್ಷಪಯತು ನೀಲಲೋಹಿತಃ
ಪುನರ್ಭವಂ ಪರಿಗತಶಕ್ತಿರಾತ್ಮಭೂಃ

—ಶಾಕುಂತಲ

ಧರಣಿಪಾಲರು ಜನರ ಹಿತದೊಳು ತೊಡಗಲಿ
ಶ್ರುತಿವಿದೋತ್ತಮರುಕ್ತಿ ಮನ್ನಣೆವಡೆಯಲಿ
ಶಕ್ತಿಯೊಡೆವೆರೆದಾ ಸ್ವಯಂಭು ಮಹೇಶನು
ತೊಡೆದು ಕಳೆಯಲಿ ನನಗುಮಾ ಮರುಹುಟ್ಟನು

—ಅನು : ಎಸ್. ವಿ. ಪರಮೇಶ್ವರಭಟ್ಟ

ಶಾಕುಂತಲ ನಾಟಕದಲ್ಲಿ ಉಂಗುರದ ಪ್ರತಿಮೆ

ತನ್ನ ಏಕೈಕ ಶ್ರೇಷ್ಠತಮ ಕೃತಿಯಾದ ಶಾಕುಂತಲ ನಾಟಕದಲ್ಲಿ ಕವಿ ಕಾಳಿದಾಸನು ತೋರಿರುವ ಪ್ರತಿಭೆಯು ಅನನ್ಯಸಾಧಾರಣವಾದುದು. ಸಹಜ ಪ್ರತಿಭೆಯೊಂದಿಗೆ ಸಾಧನಾಸಿದ್ಧವಾದ ಅಪ್ರಮಾದಶೀಲವಾದ ವಿವೇಕ ಕಲಾವಂತಿಕೆ ಪರಿಣತಿಗಳು ಅತಂತ್ಯ ಸುಮಧುರವಾಗಿ ಸಂಗಮವಾಗಿವೆ, ಅಲ್ಲಿ. ಒಮ್ಮೆ ಅವನ ಪ್ರಜ್ಞಾತೀತವಾದ ಪ್ರತಿಭೆ ಬೆರಗುಗೊಳಿಸಿದರೆ ಮತ್ತೊಮ್ಮೆ ಅವನ ಪ್ರಜ್ಞಾಜನ್ಯವಾದ ನಿರ್ಮಾಣಗಳು ಜಾಣ್ಮೆಗಳು ಚಮತ್ಕಾರಗಳು ಅಚ್ಚರಿಗೊಳಿಸುತ್ತವೆ. ಅಲ್ಲಿ ಅವನು ತೋರಿರುವ ವಾಕ್‌ಸಂಯಮ ರೂಪಕಸಂಯಮ ಭಾವಸಂಯಮಗಳೆಲ್ಲವೂ ಪ್ರತಿಭಾ ಸಹಜಸಂಯಮವಾಗಿ ಬಂದುವೆ ಹೊರತು ಅಶ್ರೀಮಂತಿಕೆಯಿಂದ ಬಂದ ಹೂಸಕದ ಬಿಗುಮಾನವಲ್ಲ. ಮಾತಿಗಿಂತಲೂ ಮೌನದಲ್ಲಿ ಉಪಮೆಗಳಿಗಿಂತಲೂ ಸನ್ನಿವೇಶ ಪ್ರತಿಮೆಗಳ ಮೂಲಕ ತನ್ನ ರಸಸಿದ್ಧಿಯನ್ನು ಕಂಡುಕೊಂಡಿದ್ದಾನೆ, ಕಂಡರಿಸಿದ್ದಾನೆ. 'ಉಪಮಾ ಕಾಳಿದಾಸಸ್ಯ' ಎಂಬ ಅತಿರೇಕದ ಮಾತು ಕಂಡುಕೊಂಡಿಲ್ಲದ ಪ್ರತಿಮಾಪ್ರತಿಭೆಯನ್ನು ಕಾಳಿದಾಸ ಈ ನಾಟಕದಲ್ಲಿ ಪ್ರದರ್ಶಿಸಿದ್ದಾನೆ. ಕಾಳಿದಾಸ ಉಪಮಾ ಚಕ್ರವರ್ತಿಯೆಂಬ ಭ್ರಮಾಜನ್ಯವಾದ ಅನ್ಯಕವಿಕಾವ್ಯಾಭ್ಯಾಸರಹಿತವಾದ ಭ್ರಾಮಕ ಭಾವನೆಗಳನ್ನು ಮೊದಲು ಬಿಟ್ಟುಬಿಟ್ಟು ಈ ಪ್ರತಿಮಾ ವಿವೇಚನೆಗೆ ಹೋಗುವುದು ಮೇಲು. ಅಂದರೆ ಕಾಳಿದಾಸನ ಉಪಮಾ ಸರ್ವೋತ್ಕೃಷ್ಟತೆಯನ್ನು ಹೊಗಳುವವರು ಉಳಿದ ಕವಿಗಳನ್ನು—ವ್ಯಾಸವಾಲ್ಮೀಕಿಗಳ ದಿವ್ಯಪ್ರತಿಭೆಯು ಸೃಜಿಸಿರುವ ಅಕೃತಕ ಪ್ರಾಕೃತಿಕ ಶುದ್ಧ ಉಪಮಾಪ್ರಪಂಚವನ್ನು, ಇಂಗ್ಲೆಂಡಿನ ಷೇಕ್‌ಸ್‌ಪಿಯರ್ ಮಹಾದೈತ್ಯ ಕವಿಯ ಅನೂಹ್ಯರೂಪಕ ಲೋಕವನ್ನು, ಕನ್ನಡದವರೇ ಆದ ಬಸವಣ್ಣ ಕುಮಾರವ್ಯಾಸರ ಅದ್ಭುತತಮವಾದ ದಿಗ್ಭ್ರಾಮಕ ರೂಪಕ ವಿಶ್ವವನ್ನು—ಕಂಡಿಲ್ಲ ಎಂದಷ್ಟೆ ಹೇಳಬೇಕು. ವಸ್ತುತಃ ಶಾಕುಂತಲದಲ್ಲಿ ಎಷ್ಟು ಅಪೂರ್ವವಾದ, ಅಂದರೆ ಕಾಳಿದಾಸನಲ್ಲೆ ಪುನರುಕ್ತ ಪೂರ್ವೋಕ್ತವಲ್ಲದ, ಅನ್ಯವಲ್ಲದ ಸುರಮ್ಯ ಉಪಮೆಗಳಿವೆ? ಎಷ್ಟೆ ಧಾರಾಳಬುದ್ಧಿಯಿಂದ ಲೆಕ್ಕ ಹಾಕಿದರೂ ಇಪ್ಪತ್ತಕ್ಕಿಂತ ಹೆಚ್ಚಿಲ್ಲ. ಆದ್ದರಿಂದ ಉಪಮೆಗಳನ್ನೆ ವ್ಯರ್ಥವಾಗಿ ಹುಡುಕುವುದಕ್ಕಿಂತ ಮಿಗಿಲಾದ ಹೆಚ್ಚು ರಸಪ್ರಯೋಜನಕಾರಿಯಾದ ಕವಿ ಪ್ರತಿಮಾಸೃಷ್ಟಿಯನ್ನು ಕಾಣಬಹುದು.

ಶಾಕುಂತಲ ನಾಟಕದಲ್ಲಿ ಬಂದಿರುವ ಉಪಮೆಗಳಿಗಿಂತಲೂ ಮಿಗಿಲಾಗಿ ಅತಿಶಯವಾಗಿ ಅಧಿಕ ಪರಿಣಾಮಕಾರಿಯಾಗಿ ಈ ಪ್ರತಿಮೆಗಳು ಬಂದಿವೆ. ನಾಟಕದ ಪ್ರಾರಂಭದ ಮೃಗಯಾಚಿತ್ರದಿಂದ ಹಿಡಿದು ಕೊನೆಯ ಅಂಕದ ಅಂಗುಲೀಕ ಪುನಃಪ್ರದಾನದವರೆಗೆ ಎಷ್ಟೆಲ್ಲ ಪ್ರತಿಮೆಗಳು ಬಂದಿಲ್ಲ. ಜಿಂಕೆಯ ಬೇಟೆ, ದೂಳೆಬ್ಬಿಸಿ

ಅಟ್ಟಿಕೊಂಡು ಬರುತ್ತಿರುವ ರಾಜರಥ, ಮಾಣ್ ಮಾಣ್ ಎನ್ನುತ್ತಿರುವ ತಪೋವನವಾಸಿಗಳ ವಾಣಿ, ಧರ್ಮಾರಣ್ಯದಲ್ಲಿ ಧರ್ಮವಿಘ್ನ ಪ್ರತಿರೂಪಿಯಾಗಿ ಬರುವ ಮದೇಭ, ಅನಸೂಯಾಪ್ರಿಯಂವದೆಯರು ದುಷ್ಯಂತ ತಮ್ಮ ಕೈಗಿಡುವ ಉಂಗುರವನ್ನು ಕುರಿತಾಡುವ ಮಾತು, ದುರ್ವಾಸ ಶಾಪಪ್ರಸಂಗ, ಕಣ್ವರು ಮೊದಲ ಬಾರಿಗೆ ಶಕುಂತಲೆಯ ಪ್ರೀತಿ ವೃತ್ತಾಂತ ತಿಳಿದೊಡನೆಯೆ ಆಡಿದ—ಹೊಗೆಯಿಂದ ಕಣ್ಣು ಮುಚ್ಚಿಹೋದರೂ ಹವಿಸ್ಸು ಯಜ್ಞಾಗ್ನಿಗೆ ಬಿದ್ದಿತು ಎನ್ನುವಮಾತು, ರಾಜನಿಗೆ ಅವರು ಹೇಳಿಕಳಿಸುವ ಮಾತಿನ ಧಾಟಿ, ಐದನೆಯ ಅಂಕದ ಪ್ರಾರಂಭದಲ್ಲಿ ಬರುವ ಆ ಹೃದಯ ವಿದ್ರಾವಕವಾದ ಗೀತೆ, ರಾಜಮಂದಿರವನ್ನು ಪ್ರಥಮಬಾರಿಗೆ ಕಂಡ ಋಷಿಕುಮಾರರು ಆಡುವ ಮಾತು, ಮುಂದೆ ಆರನೆಯ ಅಂಕದಲ್ಲಿ ಉಂಗುರ ದೊರೆಯುವ ಪ್ರಸಂಗ, ದೊರೆಯ ವಿಷಾದ ಪ್ರಸಂಗ, ಅಪೂರ್ಣ ವರ್ಣಚಿತ್ರದ ಮಾತು, ದೇವಲೋಕದಿಂದ ಇಳಿದು ಧೂಳೀರಹಿತವಾಗಿ ಹರಿದು ಬರುವ ರಥ, ಮೊದಲ ಅಂಕದ ನೆನಪನ್ನೆ ತಂದುಕೊಡುವ ಆದರೂ ಯುಗಾಂತರವನ್ನು ಕಾಣಿಸುತ್ತಿರುವ ಆ ತಪೋವನ ಪ್ರವೇಶ, ಶಕುಂತಲಾ ಸಮಾಗಮ–ಇತ್ಯಾದಿ ನೂರಾರು ಕಾವ್ಯಪ್ರತಿಮೆಗಳು, ನೂರಾರು ಅರ್ಥಪರಿವೇಷದ ನೂರಾರು ವರ್ಗದ ಪ್ರತಿಮೆಗಳು ನಾಟಕದ ತುಂಬ ಇಡಕರಿಸುತ್ತವೆ.

ಈಗ ನಮ್ಮ ಸದ್ಯವಿಚಾರವಿವೇಚನೆಗೆ ಬೇಕಾದುದು ಉಂಗುರದ ವೃತ್ತಾಂತ, ಅಂಗುಲೀಕ ಪ್ರತಿಮೆ. ಪ್ರತಿಮೆಯೆಂದು ಅರ್ಥವಾಗದಿದ್ದರೂ ಈ ಉಂಗುರ ವೃತ್ತಾಂತದ ವಾಚ್ಯಾರ್ಥವೆ ತರಂಗಾರ್ಥವೆ ಅಷ್ಟು ಮೋಹಕವಾಗಿದೆ. ಅದರ ಅಂತರಂಗದ ಅಂತರಾರ್ಥ ಪ್ರತಿಮಾರ್ಥ ಹೊಳೆದಾಗಲಂತೂ ಅದರ ಮಹತ್ತು, ಹಾಗೂ ನಾಟಕದ ಪ್ರಭಾಮಂಡಲ ಮತ್ತೂ ಕಾಂತಿಮಯವಾಗುತ್ತದೆ, ವಿಸ್ತಾರವಾಗುತ್ತದೆ. ಈ ಉಂಗುರದ ವಾಚ್ಯಮಿತಿಯಷ್ಟರಲ್ಲೆ ಮೊದಲು ವ್ಯವಹರಿಸಿ ಅದರ ಪ್ರತಿಮಾಧ್ವನಿಯತ್ತ ಆಮೇಲೆ ಸಾಗಬಹುದು.

ಈ ಉಂಗುರ ನಾಟಕವನ್ನೆಲ್ಲ ಒಂದಲ್ಲ ಒಂದು ವಿಧವಾಗಿ ಆವರಿಸಿ ಪ್ರಭುತ್ವ ನಡೆಸಿದೆ. ಎರಡು ಮೂರನೆಯ ಅಂಕವನ್ನು ಬಿಟ್ಟು ಉಳಿದ ಐದಂಕಗಳಲ್ಲೂ ಈ ವಾಮನಮೂರ್ತಿಯ ಅವಾಂತರವೆ ಅವಾಂತರ. ಪ್ರಜ್ಞಾಶೀಲನಾದ ಕವಿ ಆ ಕಾರಣದಿಂದಲೆ ಏನೊ ಅದಕ್ಕೆ ಬರಿ ಶಾಕುಂತಲ ಎಂದೊ ದುಷ್ಯಂತ ಶಾಕುಂತಲ ಎಂದೊ ಹೆಸರಿಡದೆ ಅಭಿಜ್ಞಾನ ಶಾಕುಂತಲ ಎಂದು ಧ್ವನಿಪೂರ್ವಕವಾದ ಹೆಸರಿಟ್ಟಿದ್ದಾನೆ. ಅನಂತರ ಇದರ ಔಚಿತ್ಯ ಮತ್ತೂ ಸುವೇದ್ಯವಾಗಬಹುದು.

ಮೊದಲ ಅಂಕದಲ್ಲಿ ಉಂಗುರದ ಪ್ರಥಮ ಸಂದರ್ಶನವಾಗುವ ಸನ್ನಿವೇಶ ಹೀಗಿದೆ: ಕೋಮಲ ಕನ್ಯೆ ಶಕುಂತಲೆಯ ಪಾಲಿನ ನೀರನ್ನು ಗಿಡಗಳಿಗೆ ತಾನೆ ಎರೆಯುತ್ತೇನೆ ಎಂದು ಮುಂದೆ ಬಂದ ದುಷ್ಯಂತ ತನ್ನ ಕೈಬೆರಳ ಉಂಗುರವನ್ನು ಕಾರಣಾರ್ಥವಾಗಿಯೆ ಸಖಿಯರ ಕೈಯಲ್ಲಿ ಕೊಡುತ್ತಾನೆ. ಆ ಸನ್ನಿವೇಶದಲ್ಲಿ

ಅವನು ತನ್ನ ನಿಜವೃತ್ತಾಂತವನ್ನಿನ್ನೂ ಹೇಳಿಕೊಂಡಿರುವುದಿಲ್ಲ. ಅದಿರಲಿ, ತನ್ನನ್ನು ಗೊತ್ತುಮಾಡಿಕೊಳ್ಳಬಾರದೆಂದೆ ತನ್ನ ವೃತ್ತಾಂತವನ್ನು ಕೇಳಿದ ಶಕುಂತಲೆಯ ಸಖಿಯರಿಗೆ ಉತ್ತರಕೊಡುವ ಮುನ್ನ ತನ್ನಲ್ಲಿ ತಾನು "ಈಗ ನನ್ನ ನಿಜಸ್ಥಿತಿಯನ್ನು ಹೇಗೆ ತಿಳಿಸಲಿಸಿ! ಹೇಗೆ ತಾನೆ ಆತ್ಮವಂಚನೆ ಮಾಡಲಿ! ಒಳ್ಳೇದು; ಈಕೆಗೆ ಹೀಗೆ ಹೇಳುವೆನು" ಎಂದುಕೊಂಡು ಆಮೇಲೆ ಅವರಿಗೆ "ಪುರುಕುಲದ ಅರಸರಿಂದ ಧರ್ಮಾಧಿಕಾರದಲ್ಲಿ ನಿಯುಕ್ತನಾದ ನಾನು, ಆಶ್ರಮವಾಸಿಗಳ ನಿರ್ವಿಘ್ನ ವಾದ ಕ್ರಿಯೆಯನ್ನು ತಿಳಿಯುವುದಕ್ಕೆ ಈ ಧರ್ಮಾರಣ್ಯಕ್ಕೆ ಬಂದಿರುವೆನು" ಎಂದು ಹೇಳುತ್ತಾನೆ. ಆದ್ದರಿಂದ ತನ್ನ ಹೆಸರನ್ನು ಕೆತ್ತಿರುವ ಆ ಉಂಗುರವನ್ನು ಕೊಟ್ಟಾಗ ಅದನ್ನು ನೋಡಿ ಮಾತನಾಡಿಕೊಳ್ಳುತ್ತಿದ್ದ ಸಖಿಯರಿಗೆ ತನ್ನ ನಿಜಸ್ಥಿತಿ ತಿಳಿದೀತಲ್ಲ ಎಂದು ಯೋಚಿಸಿ ದುಷ್ಯಂತ "ಈ ಉಂಗುರದ ದೆಸೆಯಿಂದ ಬೇರೆಯೆಣಿಸಬೇಡಿರಿ; ನಾನು ರಾಜ ಸಂಬಂಧಿಯಾದ ಪುರುಷನು," ಎಂದು ಎರಡನೆಯ ಬಾರಿಗೆ ಅದೇ ಸುಳ್ಳನ್ನು ಮುಂದುವರಿಸಬೇಕಾಗುತ್ತದೆ. ಅನ್ಯಕಾರಣಗಳಿಂದಲೊ ನಿಷ್ಕಾರಣ ವಾಗಿಯೊ ಆತ ಒಮ್ಮೆ ಆಡಿದ ಸುಳ್ಳಿಗೆ ಮುಂದೆ ನಾಲ್ಕಾರು ಸುಳ್ಳು ಬರುತ್ತವೆ, ಅನೂಹ್ಯ ಅಘೋರದುಃಖದ ಬೇಹುಗಾರರಾಗಿ. ಈ ಸಣ್ಣ ಸುಳ್ಳು ಹೇಳುವ ಬುದ್ಧಿಯ ಹಿಂದೆ ಯಾವ ಸ್ವಭಾವ ಇದ್ದೀತು ಎಂಬುದನ್ನು ಪ್ರತ್ಯೇಕವಾಗಿ ಮುಂದೆ ವಿವೇಚಿಸಬಹುದು. ಆದರಿಲ್ಲಿ ದುಷ್ಯಂತ ಹಾಗೆಂದೊಡನೆಯೆ ಅವನಿಗೆ ದೊರೆತ ಉತ್ತರ ಅವನ ಬಯಕೆಯನ್ನು ಹತ್ತಿಕ್ಕತಕ್ಕಂಥದಾಗಿತ್ತು: "ಹಾಗಿದ್ದರೆ ಈ ಉಂಗರವು ಆರ್ಯನ ಅಂಗುಲಿಯನ್ನು ಅಗಲಕೂಡದು." ಪಾಪ! ಗಡಿಗೆಯ ನೀರನ್ನು ಶಕುಂತಲೆಗೋಸ್ಕರವಾಗಿ ತಾನು ಸೇದುವ ಕಾರ್ಯವನ್ನು ಮಾಡುವುದಕ್ಕೆ ಮುನ್ನುಗ್ಗಿದ ಅವನ ಪ್ರಣಯಪ್ರಾರಂಭ ಹಾಗಾಗ ಬೇಕೆ! ಅಯಾಚಿತವಾಗಿ ತಾನೆ ಮುಂದೆ ಬಂದ ಅವನು ಉಂಗುರವನ್ನು ಕಳಚಿಕೊಟ್ಟುದರಲ್ಲಿ ಅರ್ಥವಿದೆ. ಒಂದು, ಗಡಿಗೆ ಹಿಡಿಯುವಾಗ ಅದು ಎಲ್ಲಿಯಾದರೂ ಬಿದ್ದೀತು ಅಥವಾ ಬಣ್ಣಗೆಟ್ಟೀತು ಎಂಬ ತೋರಿಕೆಯ ಕಾರಣ. ಅದರ ಇಂಗಿತ, ಹಾಗೆ ತನ್ನ ಉಂಗುರವನ್ನು ಕೊಡುವುದರ ಮೂಲಕ ತನ್ನ ಪ್ರಣಯ ವಾಹಕನನ್ನು ಆ ಸಖಿಯರ ಮೂಲಕ ತನ್ನ ಪ್ರೇಯಸಿಗೆ ತಲಪಿಸಿದಂತಾಗುತ್ತದೆ, ಎಂಬುದು. ಅದೃಷ್ಟ, ಅವನು ತಾನೆ ನೇರವಾಗಿ ಆ ಉಂಗುರವನ್ನು ಮೊದಲ ಕಾರಣದಿಂದಲೆ ಆದರೂ ಶಕುಂತಲೆಯ ಕೈಯಲ್ಲಿ ಕೊಡು ವುದಿಲ್ಲ, ಸಖಿಯರ ಕೈಯಲ್ಲಿತ್ತ; ಅದು ಹಾಗಾಯಿತು. ಅವನ ನಿರೀಕ್ಷೆಗೆ ವಿರುದ್ಧ ವಾದ ಪರಿಣಾಮವಾಯಿತು. ಕಾರಣ ಅವನು ತನ್ನ ಪ್ರಾರಂಭ ಪರಿಚಯದಲ್ಲೆ ನಿರ್ಭೀತಿಯನ್ನು ಪ್ರಾಮಾಣಿಕತೆಯನ್ನು ವ್ಯಕ್ತಗೊಳಿಸಲಿಲ್ಲ. ಆಯಿತು; ಸಖಿಯರು ಹಾಗೆನ್ನುತ್ತಾರೆ. ಪ್ರಣಯಪತ್ರ ವಿಳಾಸಕ್ಕೆ ತಲಪುವ ಮುನ್ನವೆ ಅಂಚೆಕಚೇರಿ ಯಿಂದಲೆ ಹಿಂದಕ್ಕೆ ಬಂತು. ಅಚ್ಚಿದ್ದ ಸ್ಟಾಂಪಿನಲ್ಲೇನೊ ದೋಷವಿದ್ದಂತೆ ಕಾಣು ತ್ತದೆ, ವಿಳಾಸವನ್ನು ಸ್ಪಷ್ಟವಾಗಿ ಬರೆದಿದ್ದರೂ. ಅಥವಾ ಪತ್ರದ ಭಾರಕ್ಕೆ ಅಚ್ಚಿಟ್ಟ

ಸ್ಟಾಂಪು ಸಮವಾಗಿರಲಿಲ್ಲವೇನೊ. ಮತ್ತೆ ಈ ಪತ್ರವನ್ನು ಕಳಿಸುತ್ತಾನೆ. ಅದು ತಲಪುವುದು ಪ್ರಣಯಿಗಳು ಮುಖತಃ ಸಂಧಿಸಿ ಸಮಾಗಮಗೊಂಡ ಮೇಲೆ ಪ್ರಣಯದ ಹರಿಕಾರನಾಗಿ ಹೊರಟು ವಿಫಲಗೊಂಡು ಹಿಂದೆ ಬಂದ ಆ ಉಂಗುರ–ಪತ್ರ ಆಮೇಲೆ ಪ್ರಣಯಮುದ್ರೆಯಾಗಿ ಹೋಗುತ್ತದೆ. ಕಡಿಮೆ ಚೀಟಿ ಅಚ್ಚಿದ ಕಾಗದಕ್ಕೆ ಆಮೇಲೆ ಶಕುಂತಲೆಯೆ ಬಹು ಬೆಲೆಕೊಟ್ಟು ಕೊಳ್ಳುತ್ತಾಳೆ. ಪಡೆದದ್ದು ಏನು?

ಅದಿರಲಿ, ಪ್ರಿಯಂವದೆಯಾಡುವ ಮೇಲೆ ಹೇಳಿದ "ಹಾಗಾದರೆ **ಈ ಉಂಗುರವು ಆರ್ಯನ ಅಂಗುಲಿಯನ್ನು ಅಗಲಕೊಡದು**" ಎನ್ನುವ ಸ್ಪಷ್ಟ ನಿರ್ದೇಶಕ ವಾಣಿಯ ಹಿಂದೆ ಇದ್ದಿರಬಹುದಾದ ಪ್ರತಿನಾರ್ಥ ನಮಗೆ ತಿಳಿಯು ವುದು ನಾಟಕಾಂತ್ಯದಲ್ಲಿ ಮಾತ್ರವೆ. ನಾಟಕವನ್ನು ಓದಿದ ಮೇಲೆ ಮತ್ತೆ ಈ ಮಾತುಗಳನ್ನು ಓದಿದಾಗ ಆಗಬಹುದಾದ ಅನುಭವವೆ ಬೇರೆ. ಅದನ್ನು ಮುಂದೆ ನೋಡೋಣ.

ನಾಲ್ಕನೆಯ ಅಂಕದಲ್ಲಿ ಅದರ ಪಾತ್ರಪ್ರಭಾವವಂತೂ ಅತಿಶಯವಾಗುತ್ತದೆ. ಅದಕ್ಕೆ ಸಾಧಾರಣ ಪ್ರಣಯಪತ್ರದ ಸಂಕೇತದ ಬೆಲೆ ಮಾತ್ರವಲ್ಲದೆ ಸಾಲಪತ್ರದ ಬೆಲೆಯೂ ದೊರೆಯುತ್ತದೆ. ದೂರ್ವಾಸ ಶಾಪದಿಂದಾಗಿ ಅದರ ಮಧುರ ಮೌಲ್ಯದ ಕೂಡೆ ರುದ್ರಮುದ್ರೆಯೂ ಸೇರಿಕೊಳ್ಳುತ್ತದೆ. ಅದೆ ಉಳಿಸುವ ಮಂತ್ರವಾಗಿಯೂ ಬಿಡುತ್ತದೆ. ಆ ಪ್ರಸಂಗ ಹೀಗಿದೆ: ದೂರ್ವಾಸ ಶಾಪ ಎರಗಿ ಅದರ ಹಿಂದೆಯೆ ವಿಶಾಪವೂ ದೊರೆಯುತ್ತದೆ. "ನಮ್ಮ ವಚನವು ತಪ್ಪತಕ್ಕದಲ್ಲ, ಆದರೆ ಅಭಿಜ್ಞಾನಾ ಭರಣದರ್ಶನದಿಂದ ಶಾಪವಿಮೋಚನೆಯಾಗುವುದು", ಎಂದು ಆ ಕೋಪಿಷ್ಠ ಋಷಿ ನುಡಿದುಹೋಗುತ್ತಾರೆ. ಅದನ್ನು ಕೇಳಿದ ಅನಸೂಯೆ ಹೇಳುತ್ತಾಳೆ: "**ಈಗ ನೆಮ್ಮದಿಯಾಯಿತು.** ಆ ರಾಜಋಷಿಯು ಪಟ್ಟಣಕ್ಕೆ ಹೊರಡುವಾಗ ತನ್ನ ನಾಮಾಂಕಿತದ ಮುದ್ರಿಕೆಯನ್ನು ಸ್ಮರಣೆಯನ್ನುಂಟುಮಾಡತಕ್ಕದ್ದೆಂದು ತಾನೆ ಶಕುಂತಲೆಯ ಬೆರಳಲಿಟ್ಟು ಹೋದನು. **ಅದರಿಂದ ಶಕುಂತಲೆಗೆ ಉಪಾಯವು ಸ್ವಾಧೀನವಾಗಿರುವುದು.** ನಡೆ, ಇನ್ನು ದೇವಕಾರ್ಯವನ್ನು ನೆರವೇರಿಸೋಣ." ಪಾಪ, ಅವಳಿಗಾಗುವ ನೆಮ್ಮದಿ ದುರಂತಪೂರ್ವದಲ್ಲಿ ಎಷ್ಟೋ ಬಾರಿ ದೊರೆಯ ಬಹುದಾದ ಭ್ರಾಮಕತೃಪ್ತಿ, ತರ್ಕಮೂಲಕವಾದ ವಂಚನೆ. ಅದರ ಜತೆಗೆ 'ಉಪಾಯ ಶಕುಂತಲೆಗೆ ಸ್ವಾಧೀನವಾಗಿರುವುದು' ಎಂದುಕೊಳ್ಳುವ ತೃಪ್ತಿಯ ದಿಗ್ವಿಜಯ ಸಂತೃಪ್ತಿಯ ಮಾತಂತೂ ದುರಂತ ಕಟಕಿಯೆ ಸರಿ. ಉಪಾಯ ಸ್ವಾಧೀನ ವಾಗಿದೆ ಎನ್ನುವುದು ಅಷ್ಟೇನು ಸುಲಭವೆ? ವಿಶಾಪದಲ್ಲಿ ನಂಬಿಕೆ ಇಟ್ಟವರು ಶಾಪದ ಮಹಿಮೆಯನ್ನು ಮರತೆಬಿಡುತ್ತಾರೆ. ಶಾಪ ತನ್ನ ಪ್ರಭಾವವನ್ನು ತೋರಿಸದೆಯೆ ವಿಶಾಪದ ಪ್ರಭಾವ ಹೇಗೆ ತಾನೆ ವ್ಯಕ್ತವಾದೀತು. "ನಿನಗೆ ಅಮಂಗಳಗಳಿಲ್ಲ

ಪರಿಹಾರವಾಗಲಿ " ಎಂದು ಹಿರಿಯ ದ್ರಷ್ಟಾರರು ಆಶೀರ್ವದಿಸಿದಾಗ ಅವರ ವಾಣಿಯಲ್ಲಿ ಎರಡಂಶಗಳು ಧ್ವನಿತವಾಗಿರುತ್ತದೆ. ಒಂದು ಅಮಂಗಳಗಳು ಮುಂದೆ ಕಾದಿವೆ ಎಂದು ; ಮತ್ತೊಂದು ಅವುಗಳು ನಿವಾರಣಗೊಳ್ಳುತ್ತವೆ ಎಂದು. ಅಷ್ಟಲ್ಲದೆ ಅಮಂಗಳಗಳೆ ಬರುವುದಿಲ್ಲವೆಂದರ್ಥವಲ್ಲ. ಇಲ್ಲಿ ಋಷಿಯ ಶಾಪ ಸ್ಪಷ್ಟವಾಗಿ ತನ್ನ ಕೆಲಸವನ್ನು ಮಾಡಿಯೆಬಿಟ್ಟಿದೆ. ವಿಶಾಪ ಬಂದ ಮಾತ್ರದಿಂದ ಶಾಪದ ಅಸ್ತಿತ್ವ ಇಲ್ಲವಾದಂತಾಗುವುದಿಲ್ಲ. ಶಾಪ ಎಂದೂ ಅಷ್ಟು ದುರ್ಬಲವಲ್ಲ, ತನ್ನ ಅಧಿಕಾರ ಕ್ಷಣಜೀವಿಯಾದರೂ ಸರಿಯೆ. ಆ ವೇಳೆಯಲ್ಲೆ ಅದು ತನ್ನ ಕಾರುಭಾರನ್ನು ನಡೆಸೇಬಿಡುತ್ತದೆ. ನಾಟಕದಲ್ಲಿ ಆ ಅನಸೂಯೆ ಆಡುವ ಮಾತು : "ಪ್ರಿಯಂವದೆ, ಈ ವೃತ್ತಾಂತ ನಮ್ಮಿಬ್ಬರ ಮುಖದಲ್ಲೇ ಇರಲಿ ಕಂಡೆಯಾ ; ಸ್ವಭಾವ ಕೋಮಲೆಯಾದ **ಸಖಿಯನ್ನು ರಕ್ಷಿಸಬೇಕಲ್ಲವೆ ?** " ಎಂಬ ಆ ಮಾತುಗಳೆ ಶಾಪ ತನ್ನ ಪ್ರಭುತ್ವವು ಅಸ್ತಿತ್ವಕ್ಕೆ ಬರುವಂತೆ ಮಾಡಲು ಮಾಡಿದ ಪ್ರಥಮ ಸಾಮೋಪಾಯ. ಉಪಾಯವೇಷದಲ್ಲಿ ಹೋಗುತ್ತದೆ ಅಪಾಯ ಅಲ್ಲಿಗೆ. ಅದಕ್ಕೆ ಪ್ರಿಯಂವದೆಯ ಪುಷ್ಟೀಕಾರವೂ ದೊರೆತಮೇಲೆ ? "ಯಾರುತಾನೇ ಮಲ್ಲಿಗೆ ಬಳ್ಳಿಗೆ ಬಿಸಿನೀರನ್ನೆರೆಯುವರು ? " ಶೀತವಾದ ಮಾದಕವನ್ನು ತೈಲೋದಕವನ್ನು ಗಿಡಕ್ಕೆ ಎರೆಯುವ ಬದಲು ಬಿಸಿ ನೀರನ್ನೆ ಎರೆಯುವ ಸಾಹಸ ಮಾಡಬಾರದಿತ್ತೆ ? ಮುಂದೆ ಒದಗಲಿರುವ ಅಗ್ನಿಜಲ ಸ್ನಾನಕ್ಕೆಂದೆ ಬಿಸಿನೀರಿನ ಎರೆತವನ್ನು ಪರಿಚಯ ಮಾಡಿ ಕೊಟ್ಟು ಆಘಾತ ನಿರೋಧಕ ರಕ್ಷೆಯನ್ನು ಕಟ್ಟಬಾರದಿತ್ತೆ ? ಎಂತಹ ವಿಸ್ಮೃತಿ ! ಬುದ್ಧಿಬದ್ಧವಾದ ಅವಿವೇಕ !

ಇದೆಲ್ಲ ಘಟನೆಯ ಇಂಗಿತಾರ್ಥವೇನು ? ಉಂಗುರವೆ ಇದ್ದೂ ಅಪಾಯ ಆಗಲೆ ಬೇಕಾದ ಕಾರಣವೇನು. ಮುಂದೆ ನೋಡೋಣ. . . ಕೆಲವಾರು ದಿನಗಳು ಕಳೆಯುತ್ತವೆ. ಆ ವೇಳೆಗಾಗಲೆ ಸಖಿಯರಿಗೆ **ರಾಜರ್ಷಿ** ದುಷ್ಯಂತನ ವಿಷಯವಾಗಿ ಅಸಮಾಧಾನ ಅತೃಪ್ತಿ ಆಕ್ರೋಶಗಳು ಮೂಡಿಕೊಳ್ಳುತ್ತವೆ. "ಅಃ ಸತ್ಯಸಂಧನಲ್ಲದ ದುಷ್ಯಂತನಲ್ಲಿ ಕಪಟವನ್ನರಿಯದ ಶಕುಂತಲೆಯನ್ನು ಸೇರಿಸಿದ ಕಾಮನು ಈಗ ತನ್ನ ಇಷ್ಟಾರ್ಥವನ್ನು ಪಡೆಯಲಿ ; " ಆದರೆ ಒಂದೆ ಸಮಾಧಾನ : " ಒಂದು ವೇಳೆ ದೂರ್ವಾಸ ಶಾಪ ಹೀಗೆ ಮಾಡಿದ್ದೀತು ; ಹಾಗಿಲ್ಲದಿದ್ದರೆ ಆ ರಾಜಋಷಿಯು ಆ ರೀತಿ ಹೇಳಿಹೋಗಿ ಇಷ್ಟು ದಿವಸಗಳಾದಾಗ್ಯೂ ಒಂದು ಪತ್ರಿಕೆಯನ್ನಾದರೂ ಕಳಿಸದಿರುವನೆ ? ". ಆದರೇತಕ್ಕೆ ಆತನಿಗೆ ತಾವೆ ನೆನಪುಂಟು ಮಾಡುವಂತೆ ಉಂಗುರವನ್ನು ಕಳಿಸಿಯೊ ಪ್ರಣಯಪತ್ರ ವ್ಯವಹಾರವನ್ನು ಮುಂದುವರಿಸಿಯೋ ವಿಸ್ಮೃತಿನಿವಾರಣೆ ಮಾಡಬಾರದು ? ಅದಕ್ಕೆ **ಅವರ ಕಾರಣವಿದು :** " ಆದುದರಿಂದ ಸ್ಮೃತಿಯನ್ನು ಕೊಡುವುದಕ್ಕೆ ಇಲ್ಲಿಂದ ಉಂಗುರವನ್ನು ಕಳಿಸಿಕೊಡುತ್ತೇವೆ ; ಆ ದುಃಖಶೀಲವಾದ ತಪಸ್ವಿ ಜನರನ್ನು ಯಾರುತಾನೆ ಪ್ರಾರ್ಥಿಸುವರು ". ಮತ್ತೆ ಶಾಪವೆ ಗೆದ್ದಿತು, ಈ ಕೊನೆಯ ಮಾತಿನ ಸಂಚನ್ನು ಹೂಡಿ.

ಉಂಗುರದ ಮಾತು ಮತ್ತೆ ಈ ದೃಶ್ಯದಲ್ಲಿ ಬರುವುದು ಕಡೆಯಲ್ಲಿ, ಶಕುಂತಲೆ ಪತಿಗೃಹಕ್ಕೆ ಹೊರಡುವ ವೇಳೆಯಲ್ಲಿ ಸಖಿಯರಿಬ್ಬರೂ ನುಡಿಯುವ ಸಂದರ್ಭದಲ್ಲಿ. ಆ ಉಂಗುರದ ಮಾತನ್ನು ನಾಲ್ಕೈದು ತಿಂಗಳಿಂದಲೂ ಗೋಪ್ಯವಾಗಿಯೆ ಇಟ್ಟಿರುತ್ತಾರೆ. ಅದನ್ನು ಹೇಗೆ ಹೇಳುವುದು, ಎಂದು ಹೇಳುವುದು ಎಂದು ಅವರೆಷ್ಟು ಬಾರಿ ಯೋಚಿಸಿದ್ದರೊ ತಿಳಿಯದು. ಆಗ ಅತ್ಯನಿವಾರ್ಯ ಪರಿಸ್ಥಿತಿಯುಂಟಾದುದರಿಂದ ಹೇಳಲೆಬೇಕಾಗಿ ಬಂದಾಗ ಆ ಉಂಗುರರಕ್ಷೆಯ ವಿಷಯವನ್ನು ಯಾರೊಬ್ಬರೆ ಹೇಳಲಾಗಲಿಲ್ಲ. ಇಬ್ಬರೂ ಏಕಕಂಠದಿಂದ ನುಡಿಯುತ್ತಾರೆ, ವಿಷಯದ ಘನತೆ ಅತಿಶಯವಾಗಿದ್ದುದರಿಂದ: "ಎಲೆ ಸಖಿ, ಆ ರಾಜನು ನಿನ್ನ ಮರೆತುದೇ ಆದರೆ ಆಗ ಆತನಿಗೆ ಅವನ ನಾಮಾಂಕಿತವಾದ ಈ ಉಂಗುರವನ್ನು ತೋರಿಸು." ಅದನ್ನು ಕೇಳಿದೊಡನೆಯೆ ಅವಳಿಗೆ, ಸದಾ ಸರ್ಪಭೀತನಾಗಿಯೆ ಇದ್ದವನ ಮೇಲೆ ಹಾವೆರಗಿದಂತಾಗುತ್ತದೆ: "ಎಲೌ ಸಖಿಯರೆ, ನಿಮ್ಮಾ ಸಂದೇಹದಿಂದ ಕಂಪಿತೆಯಾದೆನು". ಸಖಿಯ ವ್ಯಕ್ತಭೀತಿಯನ್ನು ನಿವಾರಿಸಲು ಮತ್ತೆ ಅವರಿಬ್ಬರೂ ನುಡಿಯುತ್ತಾರೆ: "ಮಾ ಭೈಷೀಃ! ಅತಿಸ್ನೇಹಃ ಪಾಪಶಂಕೀ". ಎಂತಹ ಎಚ್ಚರಿಕೆ, ಎಂತಹ ಸಮಾಧಾನ, ಏನೆಂಥ ಮುನ್ಸೂಚನೆ ಅವರ ಬಾಯಲ್ಲಿ ತಿಳಿಯದೆಯೆ ಬಂದುಬಿಡುತ್ತದೆ.

ಹೀಗೆ, ನಾಲ್ಕನೆಯ ಅಂಕದ ಪ್ರಾರಂಭದ ಋಷಿಭಯಂಕರ ದರ್ಶನವಾಗಿ ಹೋಗಿ ಕಣ್ವಶಂಕರ ಸನ್ನಿಧಿಯಲ್ಲಿದ್ದಾಗಲೂ, ಆ ಹೃತ್ಸ್ಪರ್ಶಿಯಾದ ಬೀಳ್ಕೊಡಿಗೆಯ ಸಮಯದಲ್ಲೂ, ಈ ಉಂಗುರ ಸೌಮ್ಯವಾಗಿ ತೋರದೆ ಶಾಪತಾಪಸಿಂಚಿತವಾದಂತೆಯೆ ಜ್ವಲಿಸುತ್ತದೆ. ಮುಂದೆ ಐದನೆಯ ಅಂಕದಲ್ಲಿ ಅದು ತನ್ನ ಪ್ರಭಾವವನ್ನು ತೋರಿಸಿಯೆ ತೋರಿಸಿ ಬಿಡುತ್ತದೆ. ಶಕುಂತಲೆಯ ರಕ್ಷಕನಾಗಬೇಕಾಗಿದ್ದ ಆ ಮುದ್ರೆ ಶಾಪ ಪಕ್ಷವನ್ನು ವಹಿಸಿಬಿಡುತ್ತದೆ. ಋಷಿಯ ವೃತ್ತಾಂತಕ್ಕೆ ಶಾಪ ವಿಶಾಪಗಳ ಎರಡು ಮುಖವಿರುವಂತೆಯೆ ಉಂಗುರ ವೃತ್ತಾಂತಕ್ಕೂ ಎರಡು ಮುಖವಿದೆ, ಎರಡು ಪಾತ್ರಗಳನ್ನು ವಹಿಸಬೇಕಾಗುತ್ತದೆ ಅದು. . ಅದು ಶಕುಂತಲೆಯ ಬೆರಳಲ್ಲಿದ್ದರೂ ಋಷಿ ನಿರ್ದೇಶಿತ. ಹಾಗಾಗಿ ಅವಳ ಕೈಯಲ್ಲಿದ್ದ ಮಾತ್ರದಿಂದಲೆ ಉಪಾಯ ಅವಳ ಅಧೀನವಾಗಿರಲಿಲ್ಲ. ಮೊದಲು ಋಷಿಯ ಶಾಪದ ಬೇಹುಗಾರನಾಗಿ ವರ್ತಿಸುತ್ತದೆ, ಆಮೇಲೆ ವಿಶಾಪದ ಮುನ್ಸೂಚಣಿಯು ಘಟನಾಗುತ್ತದೆ.

ಈಗ ಅದರ ಮೊದಲ ಪಾತ್ರಾಭಿನಯ ಸನ್ನಿವೇಶವನ್ನು ಕಾಣಬಹುದು. ರಾಜಾಸ್ಥಾನದಲ್ಲಿ ಶಕುಂತಲೆಯ ಅಗ್ನಿಪರೀಕ್ಷೆ ನಡೆಯುತ್ತಿದೆ. ಆ ವೇಳೆಯಲ್ಲಿ ಅಗ್ನಿರಕ್ಷಾ ಮಂತ್ರವಾಗಬೇಕಿದ್ದ ಈ ಉಂಗುರ ಜಾರಿ ಹೋಗಿರುತ್ತದೆ, ಮುಂದೆ ಅಗ್ನಿವ್ರಣಾಪಹಾರಿ ಸಂಜೀವಿನಿಯಾಗಿ ಬರಲು. "ನನ್ನನ್ನು ಪರಸ್ತ್ರೀಯೆಂದು ತಿಳಿದಿರುವುದರಿಂದ ನೀನು ಹೀಗಾಗಿರುವೆ. ಈ ಅಭಿಜ್ಞಾನಾಭರಣದಿಂದ ನಿನ್ನ ಸಂದೇಹವನ್ನು ಹೋಗಲಾಡಿಸುವೆ—" ಎಂದು ಶಕುಂತಲೆ ಹೇಳಿ ತನ್ನ ಕೈ ಬೆರಳನ್ನು

ಸವರಿಕೊಳ್ಳುತ್ತಾಳೆ. 'ಹಾ! ಬೆರಳಿನಲ್ಲಿ ಉಂಗುರವಿಲ್ಲವಲ್ಲ' ಎಂದು ಅವಳೊಡನೆ ನಾವೂ ಕಿಟ್ಟನ್ನೆ ಕಿರಚಿಕೊಳ್ಳುತ್ತೇವೆ, ಯಾರಿಗೂ ಕೇಳದಂತೆ. ಗೌತಮಿಯ ಕಡೆಗೆ ಶಕುಂತಲೆ ದುಃಖ ನೇತ್ರೆಯಾಗಿ ನೋಡುತ್ತಾಳೆ. "ಎಲೆ ಮಗಳೆ, ನೀನು ಶಕ್ರಾವತಾರದಲ್ಲಿ ನಿಂದು ಶಚೀತೀರ್ಥವನ್ನು ವಂದಿಸುತ್ತಿರುವಾಗ ನಿನ್ನ ಉಂಗುರವು ಬೆರಳಿನಿಂದ ಜಾರಿ ಬಿದ್ದಿರಬಹುದು," ಎನ್ನುವ ಅವಳ ಮಾತು ಹಾಳಾದ ಉಂಗುರಕ್ಕೆ ರಾಜನಿಗೆ ಅವಳು ನೀಡುವ ವಿವರಣೆಯಾಗಿದ್ದರೂ, ನಮಗೆ, ಶಕುಂತಲೆಗೆ, ಅವು ನಿರಾಶೆಯ ಅತಲ ಸಾಗರತಲದಲ್ಲದ್ದುವಂತಹ ಮಾತಾಗಿ ತೋರುತ್ತವೆ. ಕಳೆದುಹೋದ ಉಂಗುರ ಮತ್ತೆ ಸಿಗುವ ಯಾವೊಂದು ಪ್ರತ್ಯಾಶೆಯೂ ಉಳಿಯುವುದಿಲ್ಲ. ಆಗ, ಆ ಸಖಿಯರ ಮಾತು. 'ಉಪಾಯವು ಶಕುಂತಲೆಗೆ ಸ್ವಾಧೀನವು' ಎನ್ನುವ ಮಾತು, ಅವಹೇಳನಕಾರಿಯಾಗಿ ಕಾಣುತ್ತದೆ. ರಾಜಸಭೆಯ ಬಹಿರಂಗ ದುರಂತಾಗ್ನಿಯನ್ನು ಎದುರಿಸಬೇಕಾದ ಈ ಮುಗ್ಧೆಗೆ ಅವರು ಆಗಲೆ ಏಕೆ ಬಿಸಿನೀರನ್ನು ಎರೆದು ಹದಗೊಳಿಸಿರ ಬಾರದಿತ್ತೊ, ಎಂದು ಮರುಗುತ್ತೇವೆ. ಆದರೆ ಆಗುವುದೆಲ್ಲ ಆಯಿತು; ಮುಂದೇನು ಗತಿ? ಅಗತಿಯೆ? ಅಭಿಜ್ಞಾನವಿಲ್ಲದೆ ಸಮಾಗಮವಿಲ್ಲ. ಅಭಿಜ್ಞಾನ ಶಚೀತೀರ್ಥದ ಯಾವ ಸುಳಿಯಲ್ಲಿ ಸಿಲುಕಿದೆಯೊ? ಹಾಗಾದರೆ ಸಮಾಗಮ ಆ ಶಚೀತೀರ್ಥದ ತಲದಲ್ಲಿ ಏನು? ಎದೆ ದಸಕ್ಕೆನ್ನುತ್ತದೆ. ಋಷಿಯ ಶಾಪವೇನೊ ಸತ್ಯವಾಯಿತು. ವಿಶಾಪವೂ ಸತ್ಯವಾಗಬೇಕಲ್ಲ. ಆದರೆ ವಿಶಾಪ ಹರಿದು ರಥ ಅಭಿಜ್ಞಾನ ಪಥವೆ ಪತನವಾಗಿದೆಯಲ್ಲ. ಬೇರೆ ಯಾವ ದಾರಿಯೂ ಇಲ್ಲವಲ್ಲ. ಶಾಪ ತನ್ನ ಚಿರಪ್ರಭುತ್ವಕ್ಕೋಸ್ಕರವಾಗಿ ವಿಶಾಪಯಂತ್ರವನ್ನೆ ವಂಚಿಸಿ ಅದನ್ನೂ ತನ್ನ ಮಂತ್ರಿಮಂಡಲದಲ್ಲೆ ಸೇರಿಸಿಕೊಂಡು ಬಿಡುತ್ತದಲ್ಲ! ಎಂತಹ ಶೂನ್ಯಾವರಣದಲ್ಲಿ ಕವಿ ನಮ್ಮ ಯಾನವನ್ನು ಮುಂದುವರಿಸುವಂತೆ ಮಾಡುತ್ತಾನೆ! ಅದೆ ಅವನ ಅಪೂರ್ವವಾದ ಅಸದೃಶ ಪ್ರತಿಭೆ.

ಈಗ ಇಲ್ಲಿ ನಿಂತುಕೊಂಡು ಒಂದು ವಿಚಾರವನ್ನು ಸ್ಪಷ್ಟಪಡಿಸಿಕೊಳ್ಳಬೇಕಾಗುತ್ತದೆ. ಅದು, ಉಂಗುರ ಶಕುಂತಲೆಯ ಬೆರಳಿಂದ ಜಾರಿಹೋದ ಘಟನೆ. ತನ್ನ ಸಖಿಯರು ಹೇಳಿದಮೇಲೂ, ಅವರು ಹೇಳಿಕಳಿಸಿ ಇನ್ನೂ ಕೆಲವು ಹೊತ್ತಾಗಿಲ್ಲ, ಆಗಲೆ ಅವಳು ಅದನ್ನು ಕಳೆದುಕೊಳ್ಳುವುದೆಂದರೆ? ಇದಕ್ಕೆ ಒಬ್ಬರ ಕಲ್ಪನೆ ಒಂದೊಂದು ಬಗೆಯಾಗಿ ಹರಿದಿದೆ. ಉಂಗುರ ದುಷ್ಯಂತನದಾಗಿದ್ದುದರಿಂದ ಶಕುಂತಲೆಯ ಬೆರಳಿಗೆ ದೊಡ್ಡದಾಗಿತ್ತು, ಅದರಿಂದ ಅದು ಜಾರುವುದು ಸಾಧ್ಯವಾಯಿತು. ಆಕೆ ಅದನ್ನು ಮತ್ತೆ ಮತ್ತೆ ಕಳಚಿ ನೋಡುತ್ತಿದ್ದಳು; ಆದ್ದರಿಂದ ಅದು ಕಳೆದುಹೋಗಲು ಅನುವಾಯಿತು, ಇತ್ಯಾದಿ ಇತ್ಯಾದಿ ಭಾವಗೋಪುರಗಳೆಲ್ಲ ಕಟ್ಟಿಕೊಂಡಿವೆ.* ಆದರೆ ವಾಸ್ತವಾಂಶಕ್ಕೆ ಈ ಅಂಶಗಳು ಉಪಷ್ಟಂಭಕಗಳಾಗಿ

* ಶ್ರೀ ಎಸ್. ವಿ. ರಂಗಣ್ಣನವರ 'ಶಾಕುಂತಲ ನಾಟಕದ ವಿಮರ್ಶೆ'—ನೋಡಿ.

ಬಂದಾವೆಯೆ ಹೊರತು ತಾವೆ ಪ್ರಧಾನಾಂಶವಾಗಲಾರವು. ಹಾಗಾದರೆ ಅದಾವ ಕಾರಣ?. . . ದುಷ್ಯಂತ ಶಕುಂತಲೆಗೆ ಕೊಟ್ಟುಹೋದ ಉಂಗುರದ ವಿಚಾರ ಸಖಿಯರಿಗೆ ತಿಳಿದಿದ್ದರೂ ಅವನು ಆಕೆಗೇ ಹೇಳಿಹೋದ ಮಾತಿನ ನಿಜಶೈಲಿ ಅವರಿಗೂ ತಿಳಿದಿರಲಿಲ್ಲ. ಅಂದರೆ, ನಾಲ್ಕನೆಯ ಅಂಕದಲ್ಲಿ ದೂರ್ವಾಸ ಶಾಪಾನಂತರದಲ್ಲಿ ಅನಸೂಯೆ ಉಂಗುರವನ್ನು ಕುರಿತು ಆಡುವ ಮಾತನ್ನೂ ಆರನೆಯ ಅಂಕದಲ್ಲಿ ದುಷ್ಯಂತ ತಾನು ತನ್ನ ಸಖಿಗೆ ಉಂಗುರವಿತ್ತು ಬಂದ ಸನ್ನಿವೇಶದ ನಿರೂಪಣೆ ಮಾಡಿದ ಕ್ರಮವನ್ನು ನೋಡಿದರೆ ಈ ಅಂಶ ವ್ಯಕ್ತವಾಗುತ್ತದೆ. ಇಲ್ಲಿ ಅನಸೂಯೆ ಆಡುವ ಮಾತು: "ಆ ರಾಜಋಷಿಯು ಪಟ್ಟಣಕ್ಕೆ ಹೊರಡುವಾಗ ತನ್ನ ನಾಮಾಂಕಿತ ಮುದ್ರಿಕೆಯನ್ನು ಸ್ಮರಣೆಯನ್ನುಂಟುಮಾಡತಕ್ಕದ್ದೆಂದು ತಾನೇ ಶಕುಂತಲೆಯ ಬೆರಳಿಗಿಟ್ಟುಹೋದನು". ಆರನೇ ಅಂಕದಲ್ಲಿ ರಾಜ ಹೀಗೆ ಹೇಳುತ್ತಾನೆ: "ಆಮೇಲೆ ಈ ಮುದ್ರಿಕೆಯನ್ನು ನಾನು ಆಕೆಯ ಬೆರಳಲ್ಲಿಟ್ಟು ಹೀಗೆ ಹೇಳಿದೆನು:

" ಅನುದಿನಮೊಂದೊಂದಾಗೆಣಿ
ಸಿನಿಯಳೆ ಮನ್ನಾಮುದಕ್ಷರಂಗಳ ಕೊನೆ ಸಾ
ರ್ದನಿತರೊಳಿರ್ಕುಂ ನಿನ್ನಯ
ಸನಿಯದೊಳೆನ್ನಂತವುರವನೊಂದಿಪ್ಪ ಜನಂ "

ಈ ಎರಡೂ ವಿವರಣೆಗಳಲ್ಲಿ ಬಹಳ ವ್ಯತ್ಯಾಸವಿದೆ, ಉಂಗುರವನ್ನು ಕೊಟ್ಟುಹೋದ ಎಂಬ ಸ್ಥೂಲಾರ್ಥ ಸಾದೃಶಮಾತ್ರವನ್ನುಳಿದು. ಅನಸೂಯೆ ರಾಜನು ಇನ್ನು ಮೂರು ದಿನಗಳಲ್ಲಿ ತನ್ನ ಸಖಿಯನ್ನು ಕರೆಸಿಕೊಳ್ಳುತ್ತಾನೆಂದು ಎಲ್ಲೂ ಹೇಳುವುದಿಲ್ಲ. ದುಷ್ಯಂತನಿಂದ ಏನೊಂದೂ ಪತ್ರವು ಬಹುದಿನಗಳತನಕವೂ ಬರದಿರಲು ಅವಳು ಅದಕ್ಕೆ ಆಡುವ ಮಾತೆ ಬೇರೆ: "ರಾಜ ಋಷಿಯು **ಆ ರೀತಿಯಲ್ಲಿ ಹೋಗಿ** ಇಷ್ಟು ದಿವಸಗಳಾದಾಗ್ಯೂ ಒಂದು ಪತ್ರಿಕೆಯನ್ನಾದರೂ ಕಳಿಸದಿರುವನೆ? " ಎಂದಷ್ಟೆ ಹೇಳುತ್ತಾಳೆ. ವಸ್ತುತಃ ಅವಳಿಗೆ ದುಷ್ಯಂತ ಶಕುಂತಲೆಗೆ ಹೇಳಿದ್ದ ಏಕಾಂತೋಕ್ತಿ ಸ್ಪಷ್ಟವಾಗಿ ತಿಳಿದಿದ್ದಿರಲಾರದು. ಅದು ಹೇಗಾದರೂ ಇರಲಿ, ಮುಖ್ಯವಾದ ವಿಚಾರವೆಂದರೆ ಶಕುಂತಲೆಯ ಪರಿಸ್ಥಿತಿ. ಆಕೆಗೆ ತನ್ನ ಪತಿ ಹೇಳಿದ್ದ ಮಾತುಗಳೆ ವೇದಪ್ರಿಯ ವಾಕ್ಯಗಳಾಗಿದ್ದುವು. ಅವೆ ತನ್ನನ್ನು ಉದ್ಧರಿಸುವ ಪ್ರಿಯತಾರಕಮಂತ್ರಗಳಾಗಿದ್ದುವು. ಮೂರು ದಿನಗಳಲ್ಲಿ ತನ್ನ ಇನಿಯನ ಪರಿಜನರು ಬಂದು ತನ್ನನ್ನು ಅವನ ಅಂತಃಪುರಕ್ಕೆ ಸೇರಿಸುತ್ತಾರೆ, ಎಂಬ ಮಾತು! ಆ ಮೂರು ದಿನಗಳು ಮೂರು ಯುಗಗಳೆ ಸರಿ. ಹಾಗಿದ್ದರೂ ಅವುಗಳನ್ನು ಎಣಿಸಲು ದೊರೆತಿರುವ ಮಾಧ್ಯಮವಾದರೂ ಅತ್ಯಂತ ಪ್ರಿಯಕರವಾದದ್ದು. 'ದುಷ್ಯಂತ' ಎಂಬ ನಾಮಾಕ್ಷರಗಳನ್ನು ದಿನಕ್ಕೊಂದರಂತೆ ಎಣಿಸುವುದು! ಅದನ್ನವಳು ತನ್ನೊಳಗೆ ಎಷ್ಟು ಲಕ್ಷ ಬಾರಿ ಉಚ್ಚರಿಸಿಕೊಂಡಿದ್ದಿರಬೇಕೊ, ಆ ಮೂರು ದಿನಗಳ ಅವಧಿಯಲ್ಲಿ. ತನ್ನ ಇನಿಯನ ಹೆಸರು ಮತ್ತೂ ಪುಟ್ಟದಾಗಿ ಒಂದಕ್ಕರದ್ದಾಗಿ ಕೊನೆಗೆ ಬಿಂದು ಮಾತ್ರವಾದುದಾಗಿ

ಇದ್ದಿದ್ದಿರಬಾರದಿತ್ತೇ ಎಂದು ಎಷ್ಟುಬಾರಿ ಅಂದುಕೊಂಡಳೊ. ಅಂತೂ ಅದು ಹಾಗೆಯೆ ಉಳಿಯಿತು. ಮೊದಲದಿನ ಮೊದಲಬಾರಿ ಅದನ್ನು ಉಚ್ಚರಿಸಿದಾಗ ಎಷ್ಟು ಹೊಂಪುಳಿ ಹೋದಳೊ. ಮತ್ತೆ ಮತ್ತೆ ಉಚ್ಚರಿಸಿ ಕಾಲದ ಭಾರವನ್ನು ಮರೆತ ಹೇಗೆ ಸುಖಿಸಿದಳೊ. ಮೂರನೆಯ ದಿನದ ಕೊನೆ ಬಂದಂತೆಲ್ಲ ಅವಳ ಹೃದಯ ಸ್ಪಂದನ ಅತ್ಯಧಿಕತರವಾಯಿತೇನು ? ಅದಕ್ಕನುಗುಣವಾಗಿ ಅವಳ ಆ ದುಷ್ಯಂತ ನಾಮೋಚ್ಚರಣ ಗತಿಯೂ ಕೂಡ ವೇಗತರವಾಯಿತೇನು. ಆಗ ಆ ಉಂಗುರ ವನ್ನು ಎದೆಯೊಳಗೆ ಬೈತಿಟ್ಟು ಅಪ್ಪಿಕೊಂಡು ಚುಂಬಿಸಿದಳೇನು. ಆದರೆ ಎಂದು ಮೂರನೆಯ ದಿನ ಕಳೆದು ನಾಲ್ಕಾಗಿ ಐದಾಗಿ ಕೊನೆಗೆ ತಿಂಗಳು ತಿಂಗಳಾಗ ತೊಡ ಗಿತೊ ಅಂದಿನಿಂದ ಅವಳ ಕನಸೆಲ್ಲ ಮಧುರಪ್ರಲಯದಲ್ಲಿ ಘೂರ್ಮಿಸತೊಡಗಿತು. ಆ ಉಂಗುರ ಮೊದಲೆಷ್ಟು ಪ್ರಿಯಕರವಾಗಿತ್ತೊ ಅಷ್ಟೆ ಅನಿಷ್ಟವಾಗತೊಡಗಿತು. ವಂಚಕನಾಗಿ ತೋರತೊಡಗಿತು. ಕೊನೆಕೊನೆಗೆ ಅದನ್ನು ನೋಡುವುದೇ ಒಂದು ಬೇನೆಯಾಗಿ ಪರಿಣಮಿಸಿದ್ದಿರಬೇಕು. ಅದನ್ನು ನೆನೆದರೆ ತನ್ನ ಪತಿಕೊಟ್ಟ ಆಶ್ವಾಸ ನೆನಪಿಗೆ ಬರುತ್ತದೆ. ಅದರೊಡನೆಯೆ ಅದರ ಭಂಗ ನೆನಪಿಗೆ ಬಂದು ನೋವಾಗುತ್ತದೆ. ನೋವನ್ನು ಮರೆಯಲಾದರೂ, ತನಗಾಗಿರುವ ದುಃಸ್ಥಿತಿಯನ್ನು ಪ್ರಜ್ಞಾಪೂರ್ವಕ ವಾಗಿಯೂ ಮರೆತು ಸ್ವಯಂಕೃತ ಮೂರ್ಛಾವಸ್ಥೆಯಲ್ಲಿ ಉಳಿದು ಮೂಕ ಶೋಕವ ನ್ನನುಭವಿಸಲಾದರೂ ಆಕೆ ಆ ಉಂಗುರವನ್ನು ನೋಡುವುದನ್ನೆ ಬಿಟ್ಟಿರಬೇಕು. ಅವಳ ಸುಪ್ತಚಿತ್ತದಲ್ಲಾದರೂ ಅದರ ವಿಷಯವಾದ ತಿರಸ್ಕಾರ ಅವಿಶ್ವಾಸ ಇದ್ದಿರಬೇಕು. ಅವಳಿಗೆ ಹಾಗಾಗಿದ್ದರೆ ಅವಳ ಸಖಿಯರಿಗೆ ಅದರ ವಿಷಯವಾಗಿ ತಾರಕ ಭಾವ ಬೆಳೆದು ಬರುತ್ತದೆ. ಪತಿಮಂದಿರಕ್ಕೆ ನಡೆಯುವಾಗ ಸಖಿಯರಿಬ್ಬರೂ ಹೇಳುವ ಮಾತನ್ನು ಕೇಳಿದೊಡನೆಯೆ ಶಕುಂತಲೆಗೆ ತನ್ನೊಳಗಿನ ಸುಪ್ತ ಭೀತಿಗೆ ಆಕಾರ ದೊರೆತಂತಾ ಯಿತು. ಯಾರ ಪ್ರೀತಿಯ ವಿಷಯವಾಗಿ ಅವಳಿಗೆ ಅಪ್ರಜ್ಞಾಸ್ಥಿತಿಯಲ್ಲಾದರೂ ಅವಿಶ್ವಾಸ ಮೂಡಿತ್ತೊ ಅವರನ್ನು ಕುರಿತೆ ತನ್ನ ಸಖಿಯರಿಂದು ಶಂಕೆ ವ್ಯಕ್ತಗೊಳಿ ಸುತ್ತಾರಲ್ಲ. " ನಿಮ್ಮಾ ಸಂದೇಹದಿಂದ ನಾನು ಕಂಪಿತೆಯಾದೆನು ". . . ಸಖಿಯರು ಎಚ್ಚರವಿತ್ತ ಮೇಲಾದರೂ ಅವಳು ಉಂಗುರವನ್ನು ಭದ್ರವಾಗಿಟ್ಟುಕೊಂಡಿದ್ದಿರ ಬೇಕಲ್ಲ. ಆದರೆ ಅವಳ ಸುಪ್ತ ಅವಜ್ಞೆ ತನ್ನ ಕೈತೋರಿಸಿಯೆ ಬಿಡುತ್ತದೆ. ಋಷಿ ಶಾಪವೆ ಬಂದು ಅದನ್ನು ಕೆಡವಿಸಲಿಲ್ಲ. ಅದರ ಪ್ರಭಾವವಿಲ್ಲವೆಂದಲ್ಲ. ಇದ್ದರೂ ಅದು ತನ್ನ ಕಾರ್ಯವನ್ನು ಈಯೊಂದು ವ್ಯಕ್ತಿಗತವಾದ, ಶಕುಂತಲೆಯಲ್ಲಿ ಉಂಗುರದ ವಿಚಾರವಾಗಿ ಬೆಳೆದು ಬಂದಿದ್ದ, ಭಾವನೆಯ ಮೂಲಕವೆ ಅದನ್ನು ನಡೆಸಿಕೊಳ್ಳು ತ್ತದೆ.

ಮತ್ತೊಂದು ಮಾತು; ಈ ಉಂಗುರ ಕೊನೆಕೊನೆಗೆ ಎಷ್ಟೆ ದುರ್ಭರವಾಗಿ ತೋರುತ್ತ ಬಂದಿದ್ದರೂ ಶಕುಂತಲೆಯನ್ನು ರಕ್ಷಿಸುವ ಕವಚವಾಗಿಯೆ ಉಳಿದಿತ್ತು. ಅವಳ ಪ್ರೀತಿ ಸಖಿಯರಿಬ್ಬರನ್ನು ಬಿಟ್ಟರೆ ಉಳಿದವರಿಗೆ ತಿಳಿದೆ ಇರಲಾರದು.

ತಿಂಗಳಾದ ಮೇಲೆ ಬರುವ ಕಣ್ವರಿಗೆ ತಿಳಿಸದೆ ಇದ್ದರೆ ಆಗುವುದೆ ಇಲ್ಲ. ಹಾಗೆಂದು ಉಳಿದವರಿಗೆಲ್ಲ ತಿಳಿಸುತ್ತ ಹೋಗುವಂತಿಲ್ಲ. ಅಂತಹ ಪರಿಸ್ಥಿತಿಯಲ್ಲಿ ಆಶ್ರಮ ವಾಸಿಗಳು ಶಕುಂತಲೆಯ ನಿಜವೃತ್ತಾಂತವನ್ನು ತಿಳಿಯದೆ, ಅವಳ ನಡೆ ನುಡಿ ಬೆಳವಣಿಗೆಗಳಲ್ಲಿ ಸಹಜವಾಗಿಯೆ ವ್ಯತ್ಯಾಸಗಳನ್ನು ಗುರುತಿಸುತ್ತಾರೆ. ಒಂದಲ್ಲ ಒಂದು ದಿನ ಅವರ ಸಂಶಯ ಪ್ರಸ್ಫೋಟವಾಗಬಹುದು. (ಆದರೆ ಆ ಮುನ್ನವೆ ಕಣ್ವರು ಬಂದುಬಿಡುತ್ತಾರೆ.) ಅಂತಹ ವೇಳೆಯಲ್ಲಿ ಅವಳನ್ನು ನೀಚಾಪರಾಧಗಳ ಆರೋಪಣೆಯಿಂದ ಉಳಿಸಬಹುದಿದ್ದ ಒಂದೆ ವಸ್ತು ಆ ಉಂಗುರ, ಸಖಿಯರಿದ್ದರೂ ಕೂಡ. ಆದ್ದರಿಂದಲೇ ಅದು ನಿವಾರ್ಯವಾದುದಾಗಲಿಲ್ಲ. ಹಾಗೆಂದು ಅದನ್ನು ಬೆರಳಲ್ಲಿ ತೊಟ್ಟುಕೊಂಡಿದ್ದರೆ ಕಣ್ವರು ಬರುವ ಮುನ್ನ, ವೃತ್ತಾಂತ ತಿಳಿಯದ ಆಶ್ರಮವಾಸಿಗಳು ಒಂದಲ್ಲ ಒಂದು ಬಗೆಯಿಂದ ಆ ಉಂಗುರವನ್ನು ಕಂಡು ಕೇಳಿ ಗುಟ್ಟನ್ನು ಹೊರಹಾಕಬಹುದಲ್ಲ. ಆದ್ದರಿಂದ ಅದನ್ನು ಗೋಪನಮಾಡಲೇಬೇಕು. . . . . . ಹೀಗೆ ಅಸ್ಪಷ್ಟ ಅವಿಶ್ವಾಸ, ಆಶ್ವಾಸ, ಭೀತಿಭಾವಗಳ ಪ್ರತೀಕವಾಗಿ ಶಕುಂತಲೆಗೆ ಆ ಉಂಗುರ ತೋರತೊಡಗುತ್ತದೆ. ಅದು ಜಟಿಲತಮ ಸೂಕ್ಷ್ಮಭಾವ ಜಾಲವಾಗಿದೆ. ಅದನ್ನು ಬಿಡಿಸಹೋಗುವುದು ಇಲ್ಲಿ ಇನ್ನು ಸಾಕು.

ಆರನೆಯ ಅಂಕ ಪ್ರಾರಂಭವಾಗುತ್ತಿರುವಂತೆಯೆ ಈ ಉಂಗುರದ ಆಟ ಮೊದ ಲಾಗುತ್ತದೆ. ಇದನ್ನು ನಾವು ನಿರೀಕ್ಷಿಸಿಕೊಳ್ಳುವುದೆ ಸಾಧ್ಯವಾಗಿರುವುದಿಲ್ಲ; ವಿಸ್ಮಯ ಕಾರಿಯಾಗಿ ನಡೆಯ ತೊಡಗುತ್ತದೆ. ಹಿಂದಿನ ಅಂಕದಲ್ಲಿ ಭಗ್ನಸ್ವಪ್ನವಾದ ಪ್ರತ್ಯಾಶೆ ಗಳೆಲ್ಲವೂ ವಿಶಾಪಗೊಂಡು ಪುನಃಚೇತಗೊಳ್ಳಲು ಪ್ರಾರಂಭಿಸುತ್ತವೆ. ಕಳೆದು ಹೋದ ಉಂಗುರ ಏನೆಂಥ ಕಲ್ಲೋಲಮಾಡಿತು; ಉಂಗುರ ದೊರೆತು ಮತ್ತೇನು ಮಂಥನವೆಸಗುತ್ತದೆಯೊ. ಅಂದು ಎರಗಿದ ಋಷಿಯ ಶಾಪಕ್ಕೂ ಆಮೇಲೆ ದೊರೆತ ವಿಶಾಪಕ್ಕೂ ಕಾಲದ ಅಂತರ ಕೆಲವೊಂದು ನಿಮಿಷ ಮಾತ್ರ. ಆದರಿಲ್ಲಿ ಉಂಗುರ ಕಳೆದುಹೋದುದಕ್ಕೂ ದೊರೆತುದಕ್ಕೂ ಎಷ್ಟೋ ವರ್ಷ ಕಳೆದಿರುತ್ತದೆ. ಅಲ್ಲಿನ ಸೂಕ್ಷ್ಮಕ್ಷಣಚಿತ್ರವಿಲ್ಲಿ ವಾಸ್ತವಲೋಕದ ರಜತಪರದೆಯ ಮೇಲೆ ಎಷ್ಟು ಬೃಹತ್ತಾಗಿ ದೂರಾಂತರವುಳ್ಳುದಾಗಿ ಕಾಣುತ್ತದೆ. ಅದೆಲ್ಲವನ್ನು ಈ ಆರನೆಯ ಅಂಕದಲ್ಲಿ ಕಾಣಬಹುದು.

ಉಂಗುರವನ್ನು ಕಂಡುಹಿಡಿದ ಭಾವಮಿಶ್ರ ಅಂಬಿಗನನ್ನು ಕರೆದು ಕೊಂಡು ಬರುವ ದೃಶ್ಯದಿಂದ ಆರನೆ ಅಂಕದ ಪ್ರವೇಶಕ ಪ್ರಾರಂಭವಾಗುತ್ತದೆ. ಅದನ್ನು ತಂದ ಮೀಂಗುಲಿಗನಿಗೆ ಪ್ರಾಣಭೀತಿಯಾಗುತ್ತಿದ್ದರೂ ನಮಗೆ ಓದುಗರಿಗೆ ಪ್ರೇಕ್ಷಕರಿಗೆ ಮಾತ್ರ ಅಪೂರ್ವಧೈರ್ಯೋನ್ಮೀಲನವಾಗುತ್ತದೆ. ಕೆಲವೊಂದು ಘಳಿಗೆ ಯಲ್ಲೆ ಮರಣಭೀತ ಅಂಬಿಗ ಸನ್ಮಾನಿತನಾಗಿ ಹೊರಬರುತ್ತಾನೆ. ಆದರೆ ಆ ಅಂಬಿಗನ ಮರಣಭೀತಿ ಉಂಗುರದೊಡನೆಯೆ ದೊರೆಯನ್ನು ಸೇರಿಕೊಂಡು ಅವನನ್ನು ಸಾಯಿಸದೆ ಬದುಕಿಸದೆ ನರಳಿಸಿಬಿಡುತ್ತದೆ. ಅದರ ಸೂಚನೆಯನ್ನು

ಆ ಪ್ರವೇಶಕದ ಕೊನೆಯಲ್ಲಿ ಕಾಣುತ್ತೇವೆ. ಉಂಗುರವನ್ನು ಕಂಡ ದುಷ್ಯಂತ "ಸ್ವಲ್ಪ ಹೊತ್ತು ಕಣ್ಣಿನಲ್ಲಿ ನೀರು ತಂದನು." ಆ ಸನ್ನಿವೇಶ ಚಿತ್ರವಂತೂ ಮರ್ಮಭೇದಿಯಾಗಿದೆ. ಮುಂದೆ ಅವನ ಕಣ್ಣೀರು ಕೋಡಿವರಿಯುವುದನ್ನು, ನಿಟ್ಟುಸಿರು ಗೋಳಾಗುವುದನ್ನು ಆರನೆ ಅಂಕದ ಮಧ್ಯಭಾಗದಲ್ಲಿ ಕಾಣುತ್ತೇವೆ.

ತನ್ನ ಅಪಾರ ದುಃಖದ ಅತೀರಗತಿಯನ್ನು ಕಂಡು ಒಳಸೋರಿದ್ದ ರಾಜನನ್ನು ಕಂಡು ವಿದೂಷಕ ಧೈರ್ಯಗೊಡುತ್ತಾನೆ: "ಹೀಗೆನ್ನಬೇಡ, ಮುಂದೆ ಆಕೆಯ ಸಮಾಗಮವು ತಪ್ಪದೇ ಆಗುವುದೆಂಬುದಕ್ಕೆ ಈ ಉಂಗುರವೇ ನಿದರ್ಶನವಲ್ಲವೆ?" ಎಂದು ಹೇಳುವಮಾತು ಋಷಿಯ ಶಾಪ ವಿಶಾಪವನ್ನು ತಿಳಿಯದೆಯೆ ಆಡಿರುವ ಮಾತು. ಶಾಪವಿಲ್ಲದಿದ್ದರೂ ಶಂಕುತಲಾ ತಿರಸ್ಕಾರವು ಈಗ ಆಗಿರುವಂತೆಯೆ ಪ್ರಕಟವಾಗಿ ಅಲ್ಲದಿದ್ದರೂ ಸ್ವಲ್ಪ ಗಂಭೀರವಾಗಿ ಆಗುತ್ತಿದ್ದಿತು ಎಂಬುದಕ್ಕೆ ಇಂತಹ ಸನ್ನಿವೇಶಗಳು ಪೋಷಕವಾಗುತ್ತವೆ. ಅದರ ಚರ್ಚೆ ಮುಂದೆ ಬರಲಿರುವುದರಿಂದ ಇಲ್ಲಿ ಸದ್ಯದ ಮಾತನ್ನಷ್ಟೆ ಆಡಬಹುದು . . . ಬರಿಯ ವಿಲಾಪದಲ್ಲೆ ಮೈಮರೆತಿದ್ದ ದುಷ್ಯಂತನನ್ನು ವಿದೂಷಕನ ಮೇಲಿನ ಮಾತುಗಳು ಎಚ್ಚರಿಸಿ ದುರ್ಭರ ದುಃಖ ಪ್ರವಾಹದಲ್ಲಿ ನೂಕಿಬಿಡುತ್ತವೆ. "ಅಯ್ಯೋ, ಸುಲಭವಲ್ಲದ ಸ್ಥಾನವನ್ನು ಹೊಂದಿ ಜಾರಿದುದರಿಂದ ಈ ಉಂಗುರವು ದುಃಖಪಡಿಸತಕ್ಕುದಾಗಿದೆ.

"ಪರಿಭಾವಿಪ್ಪೆನ್ನವೊಲ್ ಉಂಗುರ ನಿನ್ನಂ, ಫಲದಿನಲ್ಪಪುಣ್ಯಮೆನುತ್ತುಂ
ಹರಿಣಾಕ್ಷಿಯರುಣ ನಖಭಾಸುರಮಾದಂಗುಳಿಯ ಸೇರಿ ಜಾರಿದ ಕತದಿಂ"

ತನ್ನನ್ನೂ ಉಂಗುರವನ್ನೂ ಸಮಾನಪುಣ್ಯರೆಂದು ಕರೆದುಕೊಳ್ಳುವ ರಾಜನ ಈ ಮಾತುಗಳು ದುಃಖಾತಿರೇಕದಲ್ಲಿ ಬಂದ ಮಾತುಗಳಾಗಿದ್ದರೂ ಸತ್ಯದೂರವಾದು ವಾಗಿಲ್ಲ. ವಾಸ್ತವವಾಗಿ ದುಷ್ಯಂತ ಸುಲ್ಲಭವಲ್ಲದ ಸ್ಥಾನವನ್ನು ಸುಲಭವಾಗಿ ಆಕ್ರಮಿಸಿಕೊಂಡ. ಕಣ್ವರು ಬರುವ ದಿನವನ್ನೂ ಕಾಯದೆ ಶಕುಂತಲೆಯನ್ನು ಮೋಹಿಸಿ ಗಾಂಧರ್ವ ವಿವಾಹ ಮೂಲಕ ಸ್ವೀಕರಿಸಿಬಿಟ್ಟ. ಕಣ್ವರು ಬರುವತನಕ ವಾದರೂ ಇದ್ದು ತನ್ನ ಹೊಸ ಸಂಬಂಧವನ್ನು ಅವರಿಗೆ ಒಪ್ಪಿಸಿ ಅವರ ಆಶೀರ್ವಾದ ವನ್ನು ಪಡೆಯುವ ಧೈರ್ಯಮಾಡಲಿಲ್ಲ. (ಈ ಮಾತು ಮುಂದೆ ದೀರ್ಘವಾಗಿ ವಿಮರ್ಶೆ ಗೊಳ್ಳುವುದರಿಂದ ಈ ಸೂಚನೆ ಇಷ್ಟೆ ಸಾಕು.) ಆದ್ದರಿಂದಲೆ ಸುಲಭವಲ್ಲದುದು ಸುಲಭ್ಯವಾದಂತೆ ಭಾಸವಾದರೂ ದುರ್ಲಭ್ಯವಾಗುತ್ತದೆ. ಉಂಗುರಕ್ಕೆ ಬಂದ ಗತಿ ಅವನಿಗೆ ಬಂದ ಗತಿಯ ಪ್ರತಿಯಷ್ಟೆ . . . . ಅದು ಜಾರಿಹೋದರೂ ಮತ್ತಾರ ಕೈಗೂ ಸಿಗದೆ ದೊರೆಗೆ ದೊರೆಯಿತಲ್ಲ ಎಂದು ಅದೃಶ್ಯೆಯಾದ ಸಾನುಮತಿ ಪ್ರೇಕ್ಷರು ಹೇಳಬಹುದಾದ ಮಾತನ್ನೆ ಆಡುತ್ತಾಳೆ. ಆದರೆ ಒಂದು ಧೈರ್ಯ, ಅದು ಯಾರ ಕೈಗೆ ಹೋದರೂ ಹಿಂತಿರುಗಿಯೆ ಬರಬೇಕು. ತನ್ನ ವಿಳಾಸವನ್ನೆ ಬರೆದ ಯಾವ ಕಾಗದ ವನ್ನು ಅಂಚೆಯ ಗೊಟ್ಟಕ್ಕೆ ಹಾಕಿದರೂ ಅದು ತನಗೇ ಬಂದೀತು, Dead letter office ಗೆ ಹೋದರೂ ಕೂಡ ಶಕುಂತಲೆಯನ್ನೇ ತಲಪದ ಆ ಉಂಗುರ ಮೀನನ್ನು

ಸೇರಿ ಅದನ್ನು ಕೊಲ್ಲಿಸಿತು. ಅಂಬಿಗನನ್ನು ಸೇರಿ ಹೆದರಿಸಿತು; ದೊರೆಯನ್ನು ಹಿಂತಿರುಗಿ ಬಂದು ಸೇರಿ ಅಳಲಿಸಿತು.

ಮುಂದೆ ಆ ಉಂಗುರ ಹೇಗೆ ಶಕುಂತಲೆಯ ಬೆರಳನ್ನಡರಿತು ಎಂಬ ಕಥೆಯನ್ನು ದೊರೆ ಹೇಳುತ್ತಾನೆ. ಸಾನುಮತಿ ವಿದೂಷಕರಂತೆಯೇ ಪ್ರೇಕ್ಷಕರೂ ಕುತೂಹಲ ದಿಂದಲೇ ಕೇಳುತ್ತಾರೆ. ಅದಕ್ಕೆ ದೊರೆ: "ಕೇಳು, ಇನ್ನೆಷ್ಟು ಕಾಲ ವಿಳಂಬವಾಗಿ ನಿನ್ನ ಪ್ರಾಪ್ತಿಯನ್ನುಂಟುಮಾಡುವೆಯೆಂದು ನಾನು ಪಟ್ಟಣಕ್ಕೆ ಹೊರಟ ಕಾಲದಲ್ಲಿ ಪ್ರಿಯೆ ಕಣ್ಣೀರಿಂದ ಕೂಡಿ ಹೇಳಿದಳು . . . ಆಮೇಲೆ ಆ ಮುದ್ರಿಕೆಯನ್ನು ನಾನು ಆಕೆಯ ಬೆರಳಲ್ಲಿಟ್ಟು ಹೀಗೆ ಹೇಳಿದೆನು:

"ಅನುದಿನಮೊಂದೊಂದಾಗೆಣಿಸಿನಿಯಳೆ ಮನ್ನಾಮದಕ್ಷರಂಗಳ ಕೊನೆ ಸಾ
ರ್ವನಿತರೊಳಿರ್ಕುಂ ನಿನ್ನಯ ಸನಿಯದೊಳೆನ್ನಂತವುರವನೊಂದಿಪ್ಪ ಜನಂ |

ಇದನ್ನು ಕೇಳಿದ ನಾವೂ ಕೂಡ ಸಾನುಮತಿಯೊಂದಿಗೆ "ಗಡುವೇನೋ ರಮಣೀಯವಾದುದೇ. ಆದರೆ ವಿಧಿ ತಪ್ಪಿಸಿತು" ಎಂದು ಹೇಳುತ್ತೇವೆ. (ಈ ಮಾತಿನ ಉತ್ತರಾರ್ಧವು ಎಷ್ಟು ಮಾತ್ರ ಒಪ್ಪುತ್ತದೆಂಬುದನ್ನು ಆ ಮೇಲೆ ವಿವೇಚಿಸುವ). ಆದರೆ ಮುಂದೆ ಅದೇ ಸಾನುಮತಿ ಆಡುವ ಮಾತನ್ನು, ಅದರಲ್ಲೂ ಅದರ ಉತ್ತರಾರ್ಧವನ್ನು ಸರ್ವಾತ್ಮನಾ ಒಪ್ಪುತ್ತೇವೆ: "ಆದುದರಿಂದ ದುಃಖಿತೆ ಯಾದ ಶಕುಂತಲೆಯಲ್ಲಿ ಅಧರ್ಮಭೀರುವಾದ ಈ ರಾಜಋಷಿಗೆ ಮದುವೆಯಲ್ಲಿ ಸಂದೇಹವುಂಟಾಯಿತು; ಅಥವಾ **ಇಂತಹ ಅನುರಾಗಕ್ಕೆ ಅಭಿಜ್ಞಾನವನ್ನ -ಪೇಕ್ಷಿಸುವ ನಿಮಿತ್ತವೇನು?** ಎಂತೊ!" ಆಕೆಯ ಆ ಕೊನೆಯ ಮಾತನ್ನು ವಿಮರ್ಶಕರು, ದುಷ್ಯಂತನನ್ನು ಕೇವಲ ರಾಜರ್ಷಿಯೆಂದೆ ಪೂಜಿಸಿ ತಮ್ಮ ನಾಟಕ ವಿಮರ್ಶೆಗೆ ತೊಡಗುವ ವಿಮರ್ಶಕರು, ದುರದೃಷ್ಟವಶಾತ್ ಮರೆಯುತ್ತಾರೆ. ಅವರಿಗೂ ಎಂತುದೊ ವಿಮೋಹ-ವಿಸ್ಮೃತಿ. ಅದನ್ನು ಕಂಡು ನಾವೂ ಕೂಡ "ಎಂತೊ!" ಎಂಬ ಆ ಅರ್ಥಪೂರ್ಣವಾದ ಮಾತನ್ನೆ ಆಡಬೇಕಾಗುತ್ತದೆ. ಸದ್ಯಕ್ಕೆ ಈ ಮಾತಿಷ್ಟಕ್ಕೆ ಇರಲಿ.

ರಾಜನ ಉನ್ಮಾದ ಹೆಚ್ಚುತ್ತದೆ. "ನಾನು ಈ ಉಂಗುರವನ್ನು ನಿಂದಿಸ ಬೇಕು." . . . "ನಳನಳಿಪ ಬೆರಳ್ಗಳಿಂದಂ ತೊಳಪಾ ಕಯ್ಯ್ಯುಳಿದದೆಂತು ಮುಳುಗಿದೆ ನೀರೊಳ್? "ಪಳಿಯನ್ ಅಚೇತನವೆಂದು ಇದನ್, ಎಳೆಯಳ ಕೈವಿಡಿದು ನಾನೆ ತೊರೆದುದರಿಂದಂ". ಈ ಮಾತುಗಳಲ್ಲಿ ಉತ್ತರಭಾಗವೆ ಅರ್ಥವತ್ತಾಗಿದೆ. ಉಂಗುರ ಜಾರಿ ಹೋದುದಕ್ಕೆ ಏನು ಕಾರಣ? ಶಾಪವೆಷ್ಟು ಕಾರಣ, ಮತ್ತೇನಾದರೂ ಎಷ್ಟು ಕಾರಣ; ಅಷ್ಟೇ ಶಕುಂತಲೆಯನ್ನು ದುಷ್ಯಂತ ಮರೆಯುವುದಕ್ಕೆ ಶಾಪ ಕಾರಣ ವಾಗುತ್ತದೆ.

ಆರನೆ ಅಂಕದ ಈ ಉಂಗುರ ಪ್ರಸ್ತಾಪ ಇಷ್ಟಕ್ಕೆ ನಿಲ್ಲುತ್ತದೆ. ಏಳನೆ ಅಂಕದಲ್ಲಿ ಅದರ ಪ್ರಸ್ತಾಪ ಬರುವ ವೇಳೆಗೆ ನಾವು ನಾಟಕದ ಕೊನೆಯನ್ನು ಮುಟ್ಟಿರುತ್ತೇವೆ. ದೇವಲೋಕದಿಂದಿಳಿದು ಮಾತಲಿಯೊಡನೆ ಮಾರೀಚಾಶ್ರಮಕ್ಕೆ ಬಂದ ದುಷ್ಯಂತ ಪುಣ್ಯವಶಾತ್ ಶಕುಂತಲೆಯನ್ನು ಸಂಧಿಸುತ್ತಾನೆ. ಆ ಸನ್ನಿವೇಶ ಚಿತ್ರಣವಂತೂ ಈ ನಾಟಕದಲ್ಲಿ ಸುರಮ್ಯವಾಗಿ ಬಂದಿದೆ. ಅಲ್ಲಿ ಈ ಉಂಗುರ ಪ್ರಸ್ತಾಪ ಬಹು ಸಹಜವಾಗಿ ಧ್ವನಿಪೂರ್ಣವಾಗಿ ಬರುತ್ತದೆ. ದುಷ್ಯಂತ ತನ್ನ ವಿಸ್ಮೃತಿಯಿಂದ ಶಕುಂತಲೆಗಾದ ಸಂಕಷ್ಟಗಳಿಗಾಗಿ ಎಷ್ಟು ಮರುಗಿದ್ದನೋ. ಆದರೂ ಅವನಿಗೆ ಹೃದಯ ಹಗುರಗೊಂಡಿರಲಿಲ್ಲ. ತನ್ನ ಪುತ್ರನನ್ನು ಸತಿಯನ್ನು ಕಂಡು ಸಂತೋಷಗೊಂಡಿದ್ದರೂ ತನ್ನ ಪ್ರಮಾದವನ್ನು ತನ್ನ ದೇವಿಯ ಮುಂದೆ ಒಪ್ಪಿಕೊಂಡು ಕ್ಷಮಾಯಾಚನೆ ಮಾಡುತ್ತಾನೆ; ಆಕೆಯ ಕಾಲಿಗೆರಗುತ್ತಾನೆ. ಅನಿರೀಕ್ಷಿತ ವರ್ತನೆಯನ್ನು ಎದುರಿಸಬೇಕಾದ ಶಕುಂತಲೆ ಆನಂದದುಃಖ, ವಿಸ್ಮಯ-ಖೇದಗಳನ್ನೊಮ್ಮೆಲೆ ಅನುಭವಿಸುತ್ತಾಳೆ. ಕಾಲಿಗೆರಗಿದ ಗಂಡನನ್ನು ಏಳೆಂದು ಕೇಳಿಕೊಳ್ಳುತ್ತಾಳೆ. ತನ್ನ ದುಃಖ ಶಲ್ಯವನ್ನು ಹೊರ ತೆಗೆಯುತ್ತ ದುಷ್ಯಂತ :

" ಅರಸೀ ಮರವೆಯೊಳಾನ್ ಅಂದೊರಸಲ್ ಅನಾದರಣೆಗೈದ ನಿನ್ನಯ ಪಕ್ಷ್ಮಾಂ
ತರಲಗ್ನ ಬಾಷ್ಪಬಿಂದುವನೊರಸುತುಮಿಂದೆನ್ನ ದುಗುಡವಂ ಪರಿಹರಿಪೆಂ "

ಎಂದು ಹೇಳಿ ಆಕೆಯ ಕಣ್ಣಂಚಿನ ಮಿಂಚ ಹನಿಗಳನ್ನು ಒರಸುತ್ತಾನೆ. ಶಕುಂತಲೆಗೆ ಆಗಾದ ದುಃಖಮೋಕ್ಷಾನುಭವ ಎಂತುದೊ! ಅಂತಹ ಘಳಿಗೆಯಲ್ಲಿ ಆ ದುಸ್ವಪ್ನ ರೂಪಿಯಾಗಿದ್ದ ಉಂಗುರ ತನ್ನ ಪತಿಯ ಬೆರಳಿನಲ್ಲಿರುವುದು ಕಾಣುತ್ತದೆ. ಪತಿಯ ಬೆರಳು ತನ್ನ ಕಣ್ಣೀರನ್ನು ಒರಸಿದಾಗ ಉಂಟಾದ ಹಗುರಭಾವ ಆ ಬೆರಳ ಉಂಗುರದ ಹೊಳಹನ್ನು ಕಂಡದ್ದರಿಂದ ಅರ್ಧಭಂಗವಾಗುತ್ತದೆ.

" ಆರ್ಯಪುತ್ರ ಇದು ಆ ಉಂಗುರವೆ ಅಲ್ಲವೆ? " ಎನ್ನುವ ಆ ಅವಳ ಮಾತಿನಲ್ಲಿ ಏನೆಲ್ಲ ಭೀತಿ ನೋವು ಸಂಕಟ ಹಾಗೂ ಮಾರ್ಮಿಕವಾದ ಅವಹೇಳನಗಳಿಲ್ಲ. ದುಷ್ಯಂತನಿಗೆ ಅವಳಿಗಾದ ಅನುಭವವೆಲ್ಲಿ ತಾನೆ ಆಗಬೇಕು. ಬಹುಶಃ ಅದಕ್ಕೆ ವಿರುದ್ಧವಾದ ಭಾವನೆ ಅವನಲ್ಲಿ ಅಂದು ಆಗುತ್ತಿದ್ದಿರಬೇಕು. " ಅದು ದೊರೆತಮೇಲೇ ನೆನಪು ಉಕ್ಕಿತು " ಎನ್ನುವ ಅವನ ಮಾತಿನಲ್ಲಿ ಉಂಗುರದ ವಿಷಯವಾಗಿ ಅಗಾಧವಾದ ರಕ್ಷಕ ಭಾವವಿದೆ. ಎಂತಹ ವಿಧಿ ಇದು. ಒಂದೆ ಉಂಗುರ ಇಬ್ಬರ ನಡುವೆಯೂ ಆಟವಾಡುತ್ತಿದೆ; ಆದರೂ ಇಬ್ಬರಲ್ಲೂ ಪರಸ್ಪರ ವಿಭಿನ್ನ ಭಾವಗಳನ್ನು ಉಕ್ಕಿಸುತ್ತಿದೆಯಲ್ಲ. ಶಕುಂತಲೆ ತಟಕ್ಕನೆ ಹೇಳುತ್ತಾಳೆ, ತನ್ನ ಮಾತು ತನ್ನ ಇನಿಯನ ಮಧುರ ಭಾವವನ್ನು ಭಂಗಗೊಳಿಸೀತು ಎಂಬ ಅರಿವನ್ನೂ ಮೆಟ್ಟಿಕ್ಕಿ : " ಕೆಟ್ಟ ಉಂಗುರ; ಆರ್ಯಪುತ್ರನಿಗೆ ನಂಬಿಕೆ ಉಂಟು ಮಾಡುವ ಸಂದರ್ಭದಲ್ಲಿ ಇದು ದೊರೆಯದೆ ನನಗೆ ಕೆಡಕುಮಾಡಿತು." ಎಂದು ಅಬ್ಬ! ಇಷ್ಟೂ ದಿನ ಆಸ್ಫೋಟಗೊಳ್ಳದೆ ಮೆಟ್ಟಿಕ್ಕಲ್ಪಟ್ಟಿದ ಆ ತಿರಸ್ಕಾರ ಭಾವ ಈಗ ಸಿಡಿದೆದ್ದಿತಲ್ಲ

ಇದು ಉಂಗುರ ಕಳೆದ ಮೇಲೆ ಮಾತ್ರ ಮೂಡಿದ ಭಾವವೊ, ಅಥವಾ ಉಂಗುರವನ್ನು ದುಷ್ಯಂತ ಕೊಟ್ಟುಹೋದ **ಮೂರನೆಯ** ದಿನದಿಂದ ಅಸ್ಪಷ್ಟವಾಗಿ ಮೂಡಿ ಬೆಳೆದುಬಂದ ಭಾವವೊ? ಮತ್ತೆ ಪ್ರಸ್ತಾಪಿಸಬೇಕಿಲ್ಲ. ಆದರಿಲ್ಲಿ ಇಷ್ಟು ಮಾತ್ರ ತಿಳಿಸಬಹುದು. ಈ ಉಂಗುರ ದೊರೆತುದು, ಆಮೇಲೆ ಅದರಿಂದಾಗಿ ದೊರೆ ಅತೀವ ಯಾತನೆಗೆ ಒಳಗಾದುದು ಎಲ್ಲವೂ ಸಾನುಮತಿಯ ಮೂಲಕವಾಗಲಿ ಶಕುಂತಲೆಗೆ ತಿಳಿದೆ ಇತ್ತು. ಹಾಗಿದ್ದುದರಿಂದ ಉಂಗುರದ ವಿಷಯವನ್ನು ಆಕೆ ಆಗ ತಾನೆ ಮೊದಲ ಬಾರಿಗೆ ತನ್ನ ಪತಿಯ ಮೂಲಕವೆ ತಿಳಿದುಕೊಂಡಂತಾಗಲಿಲ್ಲ. ತನ್ನ ಸಖಿ ಹೇಳಿರುತ್ತಾಳೆ, ಅದು ದೊರೆತ ಮೇಲೇ ದೊರೆಗೆ ಸಂಸ್ಮೃತಿ ಉಂಟಾದುದು ಎಂದು. ಆ ಕಾರಣದಿಂದಲಾದರೂ ಕೂಡ ಅವಳಿಗೆ ಆ ಉಂಗುರದ ವಿಚಾರವಾಗಿ ಮೊದಲಿದ್ದ 'ವಂಚಕ ಭಾವ' ಹೋಗಿ ಸ್ವಲ್ಪವಾದರೂ ಕೃತಾರ್ಥಭಾವ, ರಕ್ಷಕಭಾವ ಉಂಟಾಗಬೇಕಿತ್ತು. ಈ ಯಾವ ಭಾವವೂ ಉಂಟಾಗಲಿಲ್ಲವೆಂದಲ್ಲ. ಹಾಗಿದ್ದರೂ ಆ ಎಲ್ಲ ಪ್ರಿಯಭಾವಗಳನ್ನೂ ನುಂಗಿಕೊಳ್ಳುವಂತಹ ಅಸಿತಭಾವ ಅದರ ವಿಷಯವಾಗಿ ಅವಳಲ್ಲಿ ಬೆಳೆದುಹೋಗಿತ್ತಷ್ಟೆ. "ಕೆಟ್ಟ ಉಂಗುರ" ಎನ್ನುವ ಮೊದಲಮಾತೆ ಸಾಕು ಅದೆಲ್ಲವನ್ನೂ ವಿವರಿಸುತ್ತದೆ. ಪಾಪ, ಶಕುಂತಲೆ ಇಷ್ಟೆಲ್ಲ ವ್ಯಕ್ತವಾಗಿ ತನ್ನ ಭಾವವನ್ನು ತೋರಿಸಿಕೊಂಡಿದ್ದರೂ ದುಷ್ಯಂತ ಅದರ ವಿಷಯವಾಗಿದ್ದ ತನ್ನ ಕೃತಜ್ಞತಾಭಾವವನ್ನು ತೋರಿಸಿಕೊಳ್ಳುತ್ತಾನೆ. "ಹಾಗಾದರೆ ಪುನಶ್ಚ ಋತುಸಂಬಂಧಕ್ಕೆ ಗುರುತಾಗಿ ಬಳ್ಳಿಯು ಹೂತೊಡುವಂತೆ ನೀನೂ ಈ ಉಂಗುರವನ್ನು ತೊಡು", ಎನುತ್ತಾನೆ, ಅಷ್ಟು ದಿನಗಳಾದ ಮೇಲೂ, ಅಷ್ಟೆಲ್ಲ ಯಾತನೆಯಿಂದ ಮೆದುವಾಗಿ ಸತೀಹೃದಯ ಸಹಾನುಕಂಪೆಯನ್ನು ಪಡೆದಿದ್ದರೂ ಆ ದುಷ್ಯಂತ ತನ್ನಿನಿಯಳ ಆ ಒಂದು ಭಾವವನ್ನು ಅರಿಯಲಾಗಲಿಲ್ಲವಲ್ಲ! ಶಕುಂತಲೆಯೆ ತನ್ನ ಪತಿಗೆ ಅದನ್ನು ಎಚ್ಚರ ಮಾಡಿಕೊಡುತ್ತಾಳೆ: **"ನನಗೆ ಇದರಲ್ಲಿ ನಂಬಿಕೆಯಿಲ್ಲ. ಆರ್ಯಪುತ್ರನೆ ಇದನ್ನು ಧರಿಸಿಕೊಳ್ಳಬೇಕು".** ಎಷ್ಟು ಸ್ಪಷ್ಟ, ಎಷ್ಟು ನಿರ್ದಾಕ್ಷಿಣ್ಯ, ಎಷ್ಟು ಮರ್ಮಭೇದಿ! ಆಗ ದುಷ್ಯಂತನ ಅವಸ್ಥೆಯೇನಾಗಿದ್ದಿರಬೇಕು! ಆದರೆ ಮಾತಲಿಯಾದ ಅವನನ್ನು ಮಾತಲಿ ಬಂದು ಉಳಿಸುತ್ತಾನೆ.

ಪುನಸ್ಸಮಾಗಮದಲ್ಲಿ ಹಾಗಾಗಬೇಕೆ? ಹೂವುದುರಿಸಿದ ಬಳ್ಳಿ ಋತು ಪುನರಾಗಮನದಲ್ಲಿ ಮತ್ತೆ ಹೂವನ್ನೆ ಧರಿಸಲಿ ಎಂಬುದು ಅವನ ಆಶಯ. ಆದರೆ, ಹಾಗೆ ಬಂದ ಹೂವು ಮತ್ತೆ ಉದುರಿಹೋದೀತೆಂಬ ಭಯ ಆ ಸತಿಗೆ. ಸಾಕು ಈ ಹೂತೊಡುವಾಟ, ಹೂಬಿಡುವಾಟ. ಬಿಟ್ಟು ಉದುರಿಹೋದ ಹೂವೆ ಕಾಯಾಗಿ ಹಣ್ಣಾದರೆ ಸಾಕಾಗಿದೆ. ತೊಟ್ಟು ಜಾರಿಹೋಗುವ ಅಂಗುಲೀಗತವಾದ ಪ್ರೀತಿ ಸಾಕಾಗಿದೆ. ಅದು ಅಂತರ್ನಿಹಿತವಾಗಿ ಶಾಶ್ವತವಾಗಿ ಉಳಿಯಬೇಕಾಗಿದೆ. ಅಭಿಜ್ಞಾನ ಎಷ್ಟಿದ್ದರೂ ಅಭಿಜ್ಞಾನವೆ; ಜ್ಞಾನವಲ್ಲ. ಅಭಿಜ್ಞಾನದಲ್ಲೆ ನಿಂತರೆ ಜ್ಞಾನೋದಯವೆಲ್ಲಿ ಬಂತು?

ಎಣ್ಣೆಯೊಳಗಿನ ಸುಪ್ತಾಗ್ನಿಯನ್ನು ಎಚ್ಚರಿಸಲೇನೊ ಬೆಂಕಿಯಕಡ್ಡಿ ಬೇಕು. ಆದರೆ ದೀಪ ಹೊತ್ತಿಸಿದ ಮೇಲೂ ಬೆಂಕಿಯಕಡ್ಡಿಯನ್ನು ಬಯಸುತ್ತಲೆ ಇರಬೇಕೆ? ಗೀರುತ್ತಲೆ ಇರಬೇಕೆ? ಕಡ್ಡಿಯನ್ನೆ ಗೀರಿ ಬೆಳಕು ಪಡೆದು ಸಂತೃಪ್ತವಾಗುವುದಾದರೆ ಎಣ್ಣೆ ತನ್ನನ್ನು ತಾನು ಏಕೆ ಸುಟ್ಟುಕೊಳ್ಳಬೇಕು, ತನ್ನೊಳಗಿನ ಬೆಳಕನ್ನು ಅದು ಪಡೆಯದಿದ್ದ ಮೇಲೆ? ಆದರೆ ಕಡ್ಡಿ ಬೇಡ ಎಂದಲ್ಲ. ಕಾರಣ, ಯಾವಾಗ ಕುಡಿ ಆರಿಹೋದೀತೋ. ಹಾಗಾಗದಿದ್ದರೂ ಕಿಟ್ಟ ಕಟ್ಟಬಹುದಲ್ಲ. ಅದನ್ನು ಕೆಡವಿ ಕುಡಿಯನ್ನು 'ರಜ' ಗೊಳಿಸಲಾದರೂ ಆ ಗೀರೆಸೆದ ಕಡ್ಡಿ ಬೇಕು. ಉಂಗುರದ ಪಾತ್ರವಿಂದು ಅಷ್ಟೆ. ಅದು ಪ್ರೀತಿ ಉದಯಾನಂತರದಲ್ಲಿ ಆ ಪ್ರೀತಿಯ ಚಿಹ್ನೆಯಾಗಿ ಕೊಡುಗೆಯಾಗಿ ಬಂದಿತು, ಆಮೇಲೆ ಆ ಪ್ರೀತಿಯ ಅಭಿಜ್ಞಾನವಾಗಿ ನಿಂತುಕೊಂಡಿತು. ಅದೂ ಆದ ಮೇಲೆ ಮತ್ತಾವ ಪಾತ್ರವಹಿಸಬೇಕು ಅದು? ಹಣತೆಯಲ್ಲಿಡುವ ಬೆಂಕಿಕಡ್ಡಿಯಪಾತ್ರ. ಆದ್ದರಿಂದಲೆ ಮತ್ತೆ ದುಷ್ಯಂತನ ಅಂಗುಲಿಯನ್ನೆ ರಾರಾಜಿಸಬೇಕಾಯಿತು ಆ ಅಂಗುಲೀಕ.

ಈಗ ಮೊದಲ ಅಂಕದಲ್ಲಿ ಬರುವ ಆ ಅನಸೂಯೆಯ ಮಾತನ್ನು ನೆನೆದುಕೊಳ್ಳಿರಿ: "ಹಾಗಾದರೆ ಈ ಉಂಗುರವು ಆರ್ಯನ ಅಂಗುಲಿಯನ್ನು ಅಗಲಕೂಡದು." ಆ ಮಾತನ್ನು ಆಕೆ ತನ್ನ ದೃಷ್ಟಿಯಲ್ಲಿ ಆಡಿದ್ದರೂ ಅದರ ಅರ್ಥ ಸನ್ನಿವೇಶಾತಿಕ್ರಾಂತವಾದುದು. ಆ ಮಾತಿನ ವಾಚ್ಯಾರ್ಥ ಧ್ವನ್ಯಾರ್ಥಗಳೆರಡೂ ತತ್ಕಾಲೀನ ಮಾತ್ರವಾದುವಲ್ಲ. ಅನಸೂಯೆಯ ಈ ಮಾತಿಗಾಗಲಿ ಶಕುಂತಲೆಯ ಮೇಲೆ ಹೇಳಿದ ಕೊನೆಯ ಮಾತಿಗಾಗಲಿ ಒಟ್ಟು ತಾತ್ಪರ್ಯಾರ್ಥವೇನು? ಈ ಉಂಗುರದಲ್ಲಿ ನಂಬಿಕೆಯಿಲ್ಲ, ಈ ಉಂಗುರ ರಾಜನನ್ನು ಅಗಲಬಾರದು ಎಂಬ ಮಾತುಗಳ ಭಾವಾರ್ಥವೇನು? ಈಗ ವಿವೇಚಿಸೋಣ.

ಶ್ರೀ ವಾಲ್ಮೀಕಿ ಮಹರ್ಷಿಗಳ ರಾಮಾಯಣದ ಸುಂದರಕಾಂಡದಲ್ಲಿ ಒಂದು ಅತ್ಯಂತ ಹೃದಯಸ್ಪರ್ಶಿಯಾದ ಧ್ವನಿಪೂರ್ವಕವಾದ ಹಾಗೂ ನಮ್ಮ ಸದ್ಯಃ ಪ್ರಸಂಗಕ್ಕೆ ಪೋಷಕವಾಗುವಂತಹ ಒಂದು ಸನ್ನಿವೇಶವಿದೆ. ಆಂಜನೇಯನಿತ್ತ ಶ್ರೀರಾಮನ ಅಂಗುಲೀ ಮುದ್ರಿಕೆಯನ್ನು ಸೀತಾದೇವಿ ಕಂಡೊಡನೆಯೆ ಆಕೆಗಾದ ಸುಂದರತಮವಾದ ಅನುಭವವನ್ನು ಶ್ರೀ ವಾಲ್ಮೀಕಿ ಎರಡು ಮೂರು ಶ್ಲೋಕಗಳಲ್ಲಿ ಹಾಡುತ್ತಾರೆ. ಲೇಖನದ ಕೊನೆಯಲ್ಲಿ ಆ ಶ್ಲೋಕಗಳನ್ನು ಕೊಟ್ಟಿದೆ.

ಶ್ರೀರಾಮನ ಆ ಉಂಗುರವನ್ನು ಕಂಡೊಡನೆಯೆ ಆಕೆಗೆ ಆತನ ಸಾನಿಧ್ಯಾನುಭವವಾಗಿ ಆತನನ್ನು ಪಡೆದಂತಾಗಿ ಕಣ್ಣುಗಳಲ್ಲಿ ನೀರುತುಂಬಿಕೊಳ್ಳುತ್ತದೆಯಂತೆ. ಆ ಉಂಗುರ, ತನ್ನಿನಿಯನ ಕರಾಂಗುಲಿ ವಿಭೂಷಣವಾದ ಉಂಗುರ, ಅಂತಹ ಅನುಭವವನ್ನು ತಂದುದಕ್ಕಾಗಿ ಅವಳಿಗೆ ಅಪಾರ ಆನಂದವುಂಟಾಗುತ್ತದೆ. ಇಲ್ಲಿ ನಮ್ಮ ಗಮನಹರಿಯಬೇಕಾದುದು ಆ ಉಂಗುರ ತಂದುಕೊಟ್ಟ ಅನುಭವದತ್ತವಲ್ಲ;

ಅದು ಎಂಥ ಉಂಗುರ ಎಂಬುದಷ್ಟೆ. ಶ್ರೀರಾಮ ಕರವಿಭೂಷಣವಾದ ಉಂಗುರ! ಮದುವೆಯಾಗಿ ಸುಮಾರು ಇಪತ್ತಾರು ವರ್ಷವಾಗಿದೆ. (ಮದುವೆಯಾದ ಮೇಲೆ ಅಯೋಧ್ಯೆಯಲ್ಲಿ ಹನ್ನೆರಡು ವರ್ಷ ಇದ್ದರಂತೆ; ಆಮೇಲೆ ಕಾಡಿಗೆ ಬಂದೆ ೧೪ ವರ್ಷವಾಗುತ್ತ ಬಂದಿತ್ತು.) ಸ್ವನಾಮಾಂಕಿತವಾದ ಆ ಉಂಗುರವನ್ನು ಶ್ರೀರಾಮ ಬೇರೆ ಯಾರಿಗೂ ಕಳಚಿಕೊಟ್ಟಿರಲೆ ಇಲ್ಲ. ಕಾಡಿನಲ್ಲೂ, ತಾನು ಜಟಾವಲ್ಕಲ ವಸ್ತ್ರ ಧಾರಿಯಾಗಿ ಬರುವಾಗಲೂ ಅದನ್ನು ತೊಟ್ಟುಕೊಂಡೆ ಬಂದಿರುತ್ತಾನೆ. ಅದನ್ನು ಆತ ಅಗಲಿದುದು ಬಹುಶಃ ಅಂದೆ ಮೊದಲಬಾರಿ. ಅದೂ ಯಾವಕಾರಣಕ್ಕಾಗಿ; ಸೀತೆಗೆ ಗುರುತಾಗಿ ಕಳಿಸಲಿಕ್ಕಾಗಿ. ಅದನ್ನು ಕಳಿಸಿಕೊಟ್ಟದ್ದಾದರೂ ಯಜ್ಞಾಗ್ನಿ ಸಮಾನನಾದ ಆಂಜನೇಯನಕೈಯಲ್ಲಿ. ಆದರೆ ಈ ದುಷ್ಯಂತ ತಾನು ಮೊದಲು ತೊಟ್ಟ ಉಂಗುರವೆಲ್ಲಿ? ಮಾವಂದಿರೆಷ್ಟು ಜನವೊ? ಬಂದ ಉಂಗುರವೆಷ್ಟೊ, ಹೋದ ದ್ದೆಷ್ಟೊ. ಅವನು ತನ್ನ ಉಂಗುರವನ್ನು, ಅದೂ ತನ್ನ ರಾಜಮುದ್ರಿಕೆಯನ್ನು ಎಷ್ಟು ಸುಲಭವಾಗಿ ಅನಸೂಯಾ ಪ್ರಿಯಂವದೆಯರ ಕೈಯಲಿಡುತ್ತಾನೆ. ಅನಸೂಯೆ ಎಚ್ಚ ರಿಸಬೇಕಾಗುತ್ತದೆ ಆಗ: ' ಈ ಉಂಗುರವು ಆರ್ಯನನ್ನು ಅಗಲಕೂಡದು ' ಎಂದು. ಅವನಿಗೆ ಯಾರಾದರೂ ಮೊದಲು ಆ ಎಚ್ಚರವನ್ನಿತ್ತಿದ್ದರೆ? ಹೋಗಲಿ ಆಗಲಾದರೂ ಅರ್ಥವಾಯಿತೆ? ದುಃಖಾನುಭವವಾದ ಮೇಲೆ ಅರಿವಾಗಬೇಕಾಯಿತಲ್ಲ. ಹಾಗೆ ಕಳಚಿ ಯಾರಿಗಾದರೂ ಕೊಡುವ ಉಂಗುರದಲ್ಲೇನು ತಾನೆ ಬೆಲೆಯುಂಟು? ಇದಲ್ಲದೆ, ಮತ್ತೊಂದು ಮಾತುಂಟು. ಉಂಗುರ ಆಭರಣವಾಯಿತೆ ವಿನಾ ಮಾಂಗಲ್ಯ ವಾಗಲಿಲ್ಲ. ಆಭರಣಗಳನ್ನು ಎಷ್ಟುಬೇಕಾದರೂ ತೊಡಲಿ; ದಿನಕ್ಕೊಮ್ಮೆ ಬದಲಿ ಸುತ್ತಾ ಹೋಗಲಿ. ಅವೆಲ್ಲ ಶ್ರೀಮಂತಿಕೆಯ ಗುರುತುಗಳೆ ಆಗುತ್ತವೆ. ಆದರೆ ಮಾಂಗಲ್ಯವನ್ನು ಹಾಗೆ ಮಾಡುತ್ತ ಹೋದರೆ? ಶ್ರೀರಾಮನಿಗೆ ತಾನು ತೊಟ್ಟ ಉಂಗುರ ಮಾಂಗಲ್ಯವಾಯಿತು. ಆದರೀ ದುಷ್ಯಂತನಿಗೆ ತೊಡವಾಯಿತು; ಕೊಡ ವಾಯಿತು. ಶ್ರೀರಾಮ ದುಷ್ಯಂತರು ತಮ್ಮ ತಮ್ಮ ಉಂಗುರದ ವಿಚಾರವಾಗಿ ಇಟ್ಟು ಕೊಂಡಿದ್ದ ಸಂಬಂಧ ಭೇದ ಅವರವರಿಗಿರುವ ವ್ಯಕ್ತಿ ಭೇದವನ್ನು ಸೂಚಿಸುತ್ತದೆ.

ಯಾವಾಗ ಶಕುಂತಲೆ ಆ ಉಂಗುರ ಆರ್ಯಪುತ್ರನ ಬೆರಳನ್ನೆ ಅಲಂಕರಿಸಿರಲಿ ಎಂದಳೊ ಅಂದೆ ದುಷ್ಯಂತನ ಪ್ರಣಯಜೀವನ ಅನ್ಯಾಪೇಕ್ಷೆಯಾಗಿ ಬೇರೆಡೆ ಹರಿಯದಂತಾಯಿತು. ಅದು ಅವನ ಕಾಮಜೀವನದ ' ಕಾಮ ' ಮಾತ್ರವಾಗದೆ ಪೂರ್ಣವಿರಾಮವಾಯಿತು. ದುಷ್ಯಂತ ತನ್ನ ಇಡೀ ಬಾಳಿನಲ್ಲಿ ಮತ್ತೆಂದೂ ಆ ಉಂಗುರವನ್ನು ಅಗಲಿರಲಾರ; ಮತ್ತಾರಿಗೂ ಕೊಟ್ಟಿರಲಾರ; ಮತ್ತಾರನ್ನೂ ನೆನೆದಿರಲಾರ.

ಆದ್ದರಿಂದಲೆ ಈ ಉಂಗುರ, ನಾಟಕ ಪ್ರಾರಂಭದಲ್ಲಿ ಆಭರಣ ಮಾತ್ರವಾದು ದಾಗಿದ್ದು ನಾಟಕ ಮಧ್ಯೆದಲ್ಲಿ ಅಭಿಜ್ಞಾನವಾಗಿ ಕೊನೆಗೆ ಮಾಂಗಲ್ಯ ಸದೃಶ

ಬಂಧಿಯಾಗಿ ಪರಿಣಾಮಗೊಳ್ಳುತ್ತದೆ. ಅದರ ಬೆಲೆ ಬೆಳೆದಂತೆ, ಮೌಲ್ಯ ಪರಿಣಾಮಗೊಂಡಂತೆ ಪ್ರೀತಿಯ ಸ್ವರೂಪವೂ **ಪರಿಣಾಮಗೊಳ್ಳುತ್ತದೆ.** ಆಗಲೆ, ಚಾಂಚಲ್ಯ ಶಾಶ್ವತವಾಯಿತು; ರುಚಿಸ್ಮಿತ ಶುಚಿಸ್ಮಿತವಾಯಿತು; ಕಾಮಪ್ರೇರಿತ ಪ್ರಣಯ, ರಾಗೋದ್ರಿಕ್ತ ಅನುರಾಗ ಅನುತಾಪೋದ್ದೀಪ್ತ ಪ್ರೇಮವಾಗಿ, ಪ್ರೀತಿನಿಷ್ಠ ಪ್ರಣಯವಾಗಿ ಪರಿಣಾಮಗೊಂಡಿತು ಎಂದು ಹೇಳುವುದು ಸಾಧ್ಯ. ಶಾಕುಂತಲ ನಾಟಕದಲ್ಲಿ ಹೂವನ್ನು ಕಾಣುತ್ತೇವೆ; ಹೂವು ದಳಉದುರಿಸಿಕೊಂಡು ನೋವುಂಟು ಮಾಡುವುದನ್ನು ಕಾಣುತ್ತೇವೆ; ಉದುರಿದ ದಳ ಕಾಯಿ ಹಣ್ಣಿಗೆ ತೆರಪುಮಾಡಿ ಕೊಡುವುದನ್ನು ಕಾಣುತ್ತೇವೆ. ಆದ್ದರಿಂದಲೆ ಗಯಟೆ ಹೇಳಿದುದು "

ಈ ಮಾತಿನಲ್ಲಿ ಕವಿಯ ಭಾವಾತಿಶಯತೆ ಉಂಟೆ ವಿನಾ ಭಾವೋದ್ರೇಕವಿಲ್ಲ; ಭಾವಾತಿಸಾರ ಗುಣವಿಲ್ಲ.

ಈಗ ದೊಡ್ಡ ಸಮಸ್ಯೆ ತಲೆಎತ್ತಿ ನಿಲ್ಲುತ್ತದೆ: ಹಾಗೆಂದರೇನು, ದುಷ್ಯಂತ ಶಕುಂತಲೆಯರ ಪ್ರೇಮ ಮೊದಲೂ ಶುದ್ಧವೇ ಆಗಿತ್ತು, ಕೊನೆಯಲ್ಲೂ ಹಾಗೆಯೆ ಇದೆ; ಅದರಲ್ಲಿ ಕುಂದುಕರೆಯಿಲ್ಲ; ಹಾಗಿರುವಾಗ ಎಲ್ಲಿತಾನೆ ಬಂತು ಪ್ರೀತಿಯ ಪರಿಣಾಮ ಎಂಬೆಲ್ಲ ಮಾತು—ಎಂದು. ಈ ಮಾತನ್ನು ಒಪ್ಪತಕ್ಕದ್ದೇ ಅಲ್ಲ. ಹೀಗೆಂದು ವಾದಿಸುವುದು ಸುಲಭ. ಆದರೆ ಕಾಳಿದಾಸನಿಗೆ ಅಪಚಾರ ಬಗೆದಂತಾಗುತ್ತದೆ ಅಷ್ಟೆ. ನಾಟಕ ಇಷ್ಟುದ್ದವೇತಕ್ಕೆ ಬೆಳೆಯಬೇಕಿತ್ತು ಬರಿದೆ?

ಮೊದಲಂಕದ ದುಷ್ಯಂತ ಶಕುಂತಲೆಯರೂ ಕಡೆಯ ಅಂಕದಲ್ಲಿ ಬರುವವರೂ ಒಂದೇ ಏನು? ಮೊದಲ ಅನುರಾಗ ಕೊನೆಯ ಪ್ರೀತಿ ಎರಡೂ ಒಂದೇ ಏನು? ಹಾಗಾದರೆ ಮಧ್ಯೆ ಬಂದ ಕರಕಷ್ಟದ ಅರ್ಥವೇನು? ಅದಿರಲಿ, ನಾಟಕದ ಪ್ರಾರಂಭ ನಾಟಕದ ಕೊನೆ ಎಂದೂ ಒಂದಲ್ಲವೆ ಅಲ್ಲ. ಶಾಕುಂತಲದಲ್ಲಂತೂ ಅದು ಸಾಧ್ಯವೆ ಇಲ್ಲ. ಇಲ್ಲಿ ಹಾಗೆ ತಪ್ಪು ಭಾವಿಸಲು ಎಡೆ ಇದ್ದರೂ ಹಾಗಲ್ಲವೇ ಅಲ್ಲ. ಮೊದಲ ಅಂಕ ಕಡೆಯ ಅಂಕದಲ್ಲಿ ಪುನರಭಿನಯಗೊಂಡಂತೆ ಕಂಡರೂ ಅವುಗಳ ಮಧ್ಯೆ ಎಷ್ಟುಂತರವಿದೆ. ನಾಟಕದ ಪ್ರಾರಂಭದಲ್ಲಿ ರಥಯಾನ ಬರುತ್ತದೆ; ಕೊನೆಯಲ್ಲೂ ರಥ ಬರುತ್ತದೆ. ಇಲ್ಲೂ ತಪೋವನ; ಅಲ್ಲೂ ತಪೋವನ; ಇಲ್ಲೂ ಬಲಭುಜ ಅದುರುತ್ತೆ, ಅಲ್ಲೂ ಬಲಭುಜ ಅದುರುತ್ತದೆ; ಆದರಲ್ಲಿ ತನ್ನ ಮನಸ್ಸು ಹರಿದದ್ದೆ ಲೋಕಮಾನ್ಯ ಪಥವಾಗಿ ತೋರಿದರೆ ಇಲ್ಲಿ ಲೋಕಧರ್ಮ ಪಥದಲ್ಲೆ ತಾನಿದ್ದರೂ ತನ್ನ ದಾರಿ ಸರಿಯೊ ತಪ್ಪೊ ಎಂಬ ಶಂಕೆ ಮತ್ತೆ ಮತ್ತೆ ತಲೆದೋರುತ್ತದೆ. ಅಲ್ಲಿನ ರಥ ದೂಳೆಬ್ಬಿಸಿಕೊಂಡು ಹೋಗುತ್ತದೆ; ಜಿಂಕೆಯನ್ನಟ್ಟಿಕೊಂಡು ಹೋಗುತ್ತದೆ. ಇಲ್ಲಿನ ರಥ ನೆಲದ ಮೇಲೆ ಹರಿಯುವುದಿಲ್ಲ; ವ್ಯೋಮಗಂಗಾಶೀಕರ ಸ್ನಾತವಾಗಿ ಹರಿದುಬರುವ ಈ ರಥ ಭೂಮಿಯನ್ನು ಸಾಕ್ಷಿಯಾಗಿ ನೋಡುತ್ತ ಬರುತ್ತದೆ. ಭೂಮಿಗೆ ಇಳಿದು ಬಂದಾಗಲೂ ನೆಲ ತಾಕದೆ ಹಾಗೆಯೆ ಮೇಲೆ ಉಳಿದುಕೊಳ್ಳುತ್ತದೆ.

ಇದಿಷ್ಟೆ ಏನು, ನಾಟಕದ ಪೂರ್ವೋತ್ತರಾರ್ಧಗಳು ಹೆಚ್ಚುಕಡಿಮೆ ಎದುರು ಬದರು ನಿಂತಂತೆ ಕಾಣುತ್ತವೆ. ಆರೋಹಣದಲ್ಲಿ ಬರುವ ಸ್ವರಗಳೆ ಅವರೋಹಣಕ್ರಮದಲ್ಲಿ ಬಂದರೂ ಅವುಗಳ ಅರ್ಥವೆ ಬೇರೆ. ಇವು ವಾದಿಸ್ವರ ಸಂವಾದಿ ಸ್ವರಗಳಾಗಿ ಬರುತ್ತಿವೆಯೆ ವಿನಾ ವಾದಿ-ಪ್ರತಿವಾದಿಸ್ವರಗಳಾಗಿ ಅಲ್ಲ. ರಾಗ ಪೂರ್ಣತೆಗೆ ಈ ಎರಡೂ ಅನಿವಾರ್ಯ. ಅದಿಲ್ಲದೆ ಆರೋಹಣ ಸ್ವರಗಳಲ್ಲೆ ನಿಂತರೆ ಯಾವ ರಾಗವೂ ಪೂರ್ಣವಾಗುವುದಿಲ್ಲ.

ನಾಟಕ ಪ್ರಾರಂಭದ ದುಷ್ಯಂತನೆಲ್ಲಿ ನಾಟಕಾಂತ್ಯದವನೆಲ್ಲಿ. ನಾಟಕಾರಂಭದಲ್ಲಿ (ಎರಡನೆ ಅಂಕದಲ್ಲಿ) ಶಕುಂತಲೆಯನ್ನು ಕಂಡು ಅತಿ ಮೋಹಿತನಾಗಿದ್ದ ಆ ರಾಜರ್ಷಿ ಕಣ್ವರನ್ನು ಕುರಿತು ಆಡುವ ಮಾತು ಎಂತಹವು! ಋಷಿಗಳು ಎಷ್ಟೆ ಶಾಂತರಾದರೂ ಅಂತರ್ಗತ ತೇಜರಾಗಿರುತ್ತಾರೆ; ಪ್ರತಿ ತೇಜಸ್ಸು ತಗುಲಿದರೆ ಆಗ ತಮ್ಮೊಳಗಿನ ಬೆಳಕನ್ನು ತೋರುತ್ತಾರೆ—ಸ್ಪರ್ಶಾನುಕೂಲ ರವಿಕಾಂತದಂತೆ, ಎಂದು ಒಂದು ಘಳಿಗೆಯ ಹಿಂದೆ ಮಾತನಾಡಿದ ಈ ರಾಜಋಷಿ ಮುಂದೆ ಶಕುಂತಲೆಯ ಮಾತು ಬಂದಾಗ ಹೇಳುಮಾತಾದರೂ ಎಂತಹದು? ಕೌಶಿಕ ಪುತ್ರಿಯಾದ ಈಕೆ, ದೇವಾಂಗನಾ ಶಿಶುವಾದ ಈಕೆ, ಕಣ್ವರನ್ನು ಸೇರಿದಳಲ್ಲ! ಎಕ್ಕದಗಿಡದ ಮೇಲೆ ಜಗುಳಿಬಿದ್ದ ಮಾಲತಿಯಂತೆ ಎನ್ನುತ್ತಾನೆ! ಅಬ್ಬ! ಕಾಲೇಜು ಹುಡುಗರು ತಮ್ಮ ಪ್ರೇಯಸಿರ ಮುದಿ ತಂದೆಯರನ್ನು ತಮ್ಮ ಸ್ವಚ್ಛಂದತೆಗೆ ಅವರ ಅಡ್ಡಿ ಬರುವರೆಂಬ ಭೀತಿ ತಿರಸ್ಕಾರಗಳಿಂದ–ಹಾಗೆ ಹೋಲಿಸುವುದುಂಟು. ಅಂತಹವರು ದುಷ್ಯಂತನಿಗಿಂತಲೂ ಹೇಗೆತಾನೆ ನಿಃಕೃಷ್ಟರು? ಕಣ್ವರನ್ನು, ಅದೂ ಅವರ ಆಶ್ರಮದಲ್ಲೆ ಇದ್ದುಕೊಂಡು, ಹಾಗೂ ಋಷಿಗಳ ಮಹಿಮೆಯನ್ನು ಆಗತಾನೆ ಪ್ರಶಂಸಿಸಿ ಹಾಗೆನ್ನಬೇಕಾದರೆ, ಅವನಿಗಿದ್ದ ಶಕುಂತಲಾಮೋಹ ಎಷ್ಟು ಅಂಧವಾದುದೆನ್ನಬೇಕು. ಆದರೆ ಇದೆ ದುಷ್ಯಂತ ಆರನೆಯ ಅಂಕದಲ್ಲಿ ಆಡುವ ಮಾತನ್ನು ನೋಡಿ. ಶಕುಂತಲೆಯನ್ನು ನೆನೆದು ನೆನೆದು ಅತಿರೇಕ ದುಃಖನಾಗಿದ್ದ ವೇಳೆಯಲ್ಲಿ ಶಕುಂತಲೆಯ ಚಿತ್ರಪಟವನ್ನು ನೋಡತೊಡಗುತ್ತಾನೆ. ತಾನೆ ಬರೆದ ಚಿತ್ರಪಟದಲ್ಲಿ ಮೂರು ಜನರಿರುತ್ತಾರೆ. ತನ್ನ ಪ್ರಿಯೆ ಶಕುಂತಲೆ ಮತ್ತೆ ಆಕೆಯ ಪ್ರಿಯಸಖಿಯರಾದ ಅನಸೂಯಾ ಪ್ರಿಯಂವದೆಯರು. ಅದಷ್ಟೆ ಸಾಕಾಗಿದ್ದಿತು. ಆದರೆ ಅವನು ಆ ಚಿತ್ರವೂ ಕೂಡ ಅಪೂರ್ಣ ಎನ್ನುತ್ತಾನೆ. ಕಾರಣ ಅದರಲ್ಲಿ ಇನ್ನೂ ಬರೆಯಬೇಕಾದ ಚಿತ್ರಗಳಿವೆಯಂತೆ. ಏನನ್ನು ಬರೆಯಬಹುದೆಂದು ನಾವೂ ಯೋಚಿಸುತ್ತೇವೆ. ಹೊಳೆಯುವುದೇ ಇಲ್ಲ. ಏನಾದರೂ ಹೊಳೆದರೆ ಅದು ಆ ವಿದೂಷಕನಿಗೆ ಅನಿಸಿದ ವಿಚಿತ್ರ ಕಲ್ಪನೆಗಿಂತ ಬಹು ಬೇರೆಯೇನೂ ಆಗಿದ್ದಿರಲಾರದು. ಆದರೆ ರಾಜನೆ ಆ ಸುಂದರತಮವಾದ ಚಿತ್ರವನ್ನು ಕೊಡುತ್ತಾನೆ:

" ಕಾರ್ಯಾ ಸೈಕತಲೀನ ಹಂಸಮಿಥುನಾ ಸ್ರೋತೋವಹಾ ಮಾಲಿನೀ
'ಪಾದಾಸ್ತಾಮಭಿತೋ ನಿಷಣ್ಣಹರಿಣಾ ಗೌರೀಗುರೋಃ ಪಾವನಾಃ |
ಶಾಖಾಲಂಬಿತ ವಲ್ಕಲಸ್ಯ ಚ ತರೋರ್ನಿರ್ಮಾತುಮಿಚ್ಛಾಮ್ಯಧಃ
ಶೃಂಗೇ ಕೃಷ್ಣಮೃಗಸ್ಯ ವಾಮನಯನಂ ಕಂಡೂಯಮಾನಾಂ ಮೃಗೀಂ"
(ಮರಲೊಳಗಾಡುವಂಚೆಗಳಿನೊಪ್ಪುವ ಮಾಲಿನಿಯಂ ಮೃಗಾಳಿ ಪ
ಟ್ಟಿರೆ ಕರಮೊಪ್ಪುತಿರ್ಪ್ಪ ತುಹಿನಾದ್ರಿಯ ತಪ್ಪಲನಾರ್ದ್ರ ವಲ್ಕ ಬಂ
ಧುರ ತರುಮೂಲದೊಳ್ ಹರಿಣ ಶೃಂಗದೆ ತನ್ನಯ ವಾಮನೇತ್ರಮಂ
ತುರಿಸುತಮಿರ್ಪ ಪೆಣ್ಮೃಗಮಂ ಬರೆಯಲ್ಕಿದರಲ್ಲಿ ವಾಂಛಿಪೆಂ.)

ಎಷ್ಟು ಸುಂದರವಾಗಿದೆ ಈ ಚಿತ್ರ ; ಎಷ್ಟು ಧ್ವನಿಪೂರ್ಣವಾಗಿದೆ. ಮಾಲಿನಿಯ ತೀರದ ಮರಲೊಳಗೆ ಕರಗಿದಂತೆ ತೋರುತ್ತಿರುವ ಹಂಸಮಿಥುವೊಂದು, ನಿದ್ರಿಸುತ್ತಿರುವ ಹರಿಣಗಳ ಹಿಂಡಿರುವ ಗೌರೀಗುರುವಾದ ಹಿಮಾಲಯದ ತಪ್ಪಲೊಂದು, ಕೊಂಬೆಗಳ ಮೇಲೆ ಆರಬಿಟ್ಟಿರುವ ನಾರುಡೆಗಳ ಅಡಿಯಲ್ಲಿ ತನ್ನ ಎಡಗಣ್ಣಿನ ನವೆಯನ್ನು ತನ್ನ ಇನಿಮಿಗದ ಕೋಡಿನಿಂದ ತುರಿಸಿಕೊಳ್ಳುತ್ತಿರುವ ಹೆಣ್ಮೃಗವೊಂದು, ಇವಿಷ್ಟನ್ನು ಆ ಚಿತ್ರದಲ್ಲಿ ಬರೆಯಬೇಕೆಂಬಾಸೆ, ಅವನಿಗೆ. ಅಲ್ಲಿಯತನಕ ಆ ಚಿತ್ರ ಅಪೂರ್ಣ. ಮೇಲಿನ ಆ ಚಿತ್ರವೆ ಬಹಳ ಅರ್ಥಪೂರ್ಣವಾಗಿದೆ. ಆ ಎಲ್ಲ ಚಿತ್ರಗಳಲ್ಲೂ ಮಿಥುನಗಳೆ ಇದ್ದರೂ ಯಾವೂ ಉದ್ರಿಕ್ತ ಕಾಮವಲ್ಲ; ಮಾಗಿದ ಪ್ರಶಾಂತವಾದ ದಾಂಪತ್ಯ ಪ್ರಣಯವುಳ್ಳವು. ನಾರುಡೆಯ ಅಡಿಯಲ್ಲೆ ಹಾಗೆ ಮಲಗಿವೆ. ನಾರುಡೆಯ ಪ್ರಭಾವ ಅವುಗಳ ಮೇಲೂ ಆಗಿದ್ದಿರಬೇಕು. ಅವುಗಳಿರುವುದರಿಂದ ನಾರುಡೆಗಳಿಗೇನೂ ಭಂಗವಾಗುವುದಿಲ್ಲ. ಇದಿಷ್ಟೂ ಒಂದರ್ಥ. ಮತ್ತೊಂದರ್ಥ ಮತ್ತೂ ವ್ಯಾಪಕವಾಗಿರುವುದುಂಟು. ನಾಟಕದ ಮೊದಲ ಭಾಗದಲ್ಲಿ ದುಷ್ಯಂತ ಶಕುಂತಲೆಯನ್ನು ತಪೋವನದಿಂದ ಬೇರ್ಪಡಿಸಿ ಪಡೆಯಬಯಸುತ್ತಾನೆ; ನೋಡಲೆಳಸುತ್ತಾನೆ. ಹಾಗಿದ್ದುದರಿಂದಲೇ ಕಣ್ವಸಹಿತಳಾದ ಶಕುಂತಲೆಯನ್ನು ಅವರಿಂದ ಬೇರ್ಪಡಿಸುವ ಆಶಯವನ್ನು ತೋರುತ್ತಾನೆ. ಅವರಿಬ್ಬರೂ ಒಂದೆಡೆ ಇರಬಾರದು. ಎಕ್ಕ ಮಲ್ಲಿಗೆಗಳಂತೆ! ಯಾವ ಕಣ್ವರ ಕೃಪೆಯಿಲ್ಲದಿದ್ದರೆ ಅವಳು ಮೃತಜೀವಿ ಆಗಿರುತ್ತಿದ್ದಳೊ, ಜೀವಿಸಿದ್ದರೂ ಕಾಡಬೇಡರ ಮಕ್ಕಳಿಗಿಂತಲೂ ಹೆಚ್ಚೇನೊ ಮುಂದೆಬರುತ್ತಿರಲಿಲ್ಲವೊ ಅಂಥ ಆ ಋಷಿಯನ್ನೆ ಕಕ್ಕೆಯ ಗಿಡವೆಂದು ಭಾವಿಸಿತು ಪ್ರಾರಂಭದ ಅವನ ಉದ್ರಿಕ್ತ ಕಾಮಭಾವ. ಅಂದರೆ ಶಕುಂತಲೆ ಮಾತ್ರ, ತಪೋವನ ವಿವಕ್ತಳಾದ ಹೆಣ್ಣೊಂದು ಮಾತ್ರ ಬೇಕಾಗಿದ್ದಿತು. ಆದರೆ ಇಂದು, ಶಕುಂತಲೆಯೊಡನೆ ಅವಳ ಸಖಿಯರಿದ್ದರೂ, ಆ ಮೇಲಿನ ಚಿತ್ರ ಅಪೂರ್ಣವಾಗಿಯೆ ತೋರುತ್ತದೆ ಅವನಿಗೆ. ಋಷಿ ಪ್ರತಿನಿಧಿಯಾಗಿ ವಲ್ಕಲವಿದೆ (ಕಣ್ವರನ್ನೇಕೆ ತರಬಾರದಿತ್ತು ಎಂದು ಕುಚೇಷ್ಟೆ ಮಾಡಬಹುದು. ಆ ಚಿತ್ರದ ರಸಪ್ರಪಂಚಕ್ಕೆ ಯಾವ ಗಂಡಸೂ ಬರಕೂಡದು, ದುಷ್ಯಂತ ಸಹಿತವಾಗಿ!) ಆದ್ದರಿಂದ ದುಷ್ಯಂತನಿಂದು ಶಕುಂತಲೆಯನ್ನಷ್ಟನ್ನೆ ಅಪಹರಿಸುತ್ತಿಲ್ಲ. ಅವಳನ್ನು, ಅವಳಿರುವ ಸಮಗ್ರ

ಆವರಣವನ್ನೂ ಪ್ರೀತಿಸುತ್ತಾನೆ. ಅವಳನ್ನು ಅವಳಿರುವ ಆವರಣದಿಂದ ವಿವಿಕ್ತಗೊಳಿಸದೆ ಅಲ್ಲೆ ಬೆಳೆಯ ಬಿಟ್ಟು ಅಲ್ಲೆ ಹಾಗೆಯೆ ಪ್ರೀತಿಸುತ್ತಾನೆ. ವ್ಯಕ್ತಿಮಿತವಾಗಿದ್ದ ರಾಗೋದ್ರೇಕ ಸಮಗ್ರಾವರಣ ವ್ಯಾಪ್ತವಾದ ಪ್ರಶಮಿತ ಅನುರಾಗವಾಗುತ್ತದೆ. ಮೊದಲ ದುಷ್ಯಂತನಿಗೂ ಇಂದಿನ ದುಷ್ಯಂತನಿಗೂ ಇರುವ ವ್ಯತ್ಯಾಸವನ್ನು ತಿಳಿಸುವುದಕ್ಕೆ ಈ ಸನ್ನಿವೇಶಕ್ಕಿಂತ ಬೇರೆ ನಿದರ್ಶನ ಬೇಕೆ?

ಹಾಗಾದರೆ ನೋಡೋಣವಂತೆ. ದುಷ್ಯಂತ ಶಕುಂತಲೆಯರ ಪ್ರಾರಂಭ ಪ್ರಣಯ ವಿಧಾನವೆ ಶುಭಸೂಚಕವಾಗಿದ್ದಂತೆ ತೋರುವುದಿಲ್ಲ. ಯಾರು ಎಷ್ಟೆ ಹೇಳಬಹುದು—ದುಷ್ಯಂತನಿಗೆ ಅಂದು ಉದಿಸಿದ ರಾಗ ಶುದ್ಧ ಪ್ರೇಮವೆಂದೇ ಹೇಳಬಹುದು—ಆದರೂ ಅದು ತಾನಾಗಿರುವುದೆ ಆಗಿರುತ್ತದೆ. ಮುಖಬೆಲೆಗೆ ಅವನ ಅಂದಿನ ಮಾತನ್ನು ಕೊಂಡುಕೊಳ್ಳುವುದಾದರೆ ಅದರ ಒಳಬೆಲೆ ತಿಳಿದಾಗ ನಿರಾಶರಾಗ ಬೇಕಾದೀತು. ಅನುರಕ್ತ ಘಳಿಗೆಯಲ್ಲಿ ಲೋಕದ ಯಾರೂ ಹಾಗಲ್ಲದೆ ಮತ್ತೆಂತೂ ಹೇಳುವುದಿಲ್ಲ. ಹೋಗಲಿ, ದುಷ್ಯಂತ ಒಂದು ಎರಡನೆಯ ಅಂಕಗಳಲ್ಲಿ ಬರಿದೆಯೆ ಆಡಿದ ಸುಳ್ಳು ಮಾತುಗಳಿಗೆ ಲೆಕ್ಕವುಂಟೆ? ಮೊದಲ ಸುಳ್ಳು ತಾನು ರಾಜನ ಕಡೆಯವನು ಎಂದದ್ದು (ಅದೂ ಕೂಡ ಬಹಳ ಯೋಚಿಸಿದ ಮೇಲೆ ಹೇಳುವುದು); ಎರಡನೆಯದು ಉಂಗುರ ಕೊಡುವಾಗ ಗುರುತು ತಿಳಿದೀತಲ್ಲ ಎಂದಾಡುವ ಸುಳ್ಳು; ಮೂರನೆಯ ಭಯಂಕರ ಅಸತ್ಯ ಮಾಢವ್ಯನಿಗೆ ಹೇಳುವ ಸುಳ್ಳು. ಅದೂ ಎಂತಹದು! ಅಬ್ಬ! ಶಕುಂತಲೆಯನ್ನು ಅಷ್ಟೆಲ್ಲ ದೀರ್ಘವಾಗಿ ವರ್ಣಿಸಿ, ಕಣ್ವರನ್ನು ಬೈದು ಎಲ್ಲಾ ಆದಮೇಲೆ, ಒಂದು ಕಾರಣಕ್ಕಾಗಿ, ಎಲ್ಲಿ ಈ ಮಾಢವ್ಯ ಊರಿಗೆ ಹೋದಮೇಲೆ ತನ್ನ ನವೀನ ಪ್ರಣಯವನ್ನು ಗುಲ್ಲೆಬ್ಬಿಸುತ್ತಾನೊ ಎಂದುಆಡುವ ಸುಳ್ಳು ಮಾತು: " ಎಲೈ ಮಿತ್ರನೆ. . . **ತಪಸ್ವಿ ಕನ್ಯೆಯಾದ ಶಕುಂತಳೆಯಲ್ಲಿ ನಿಜವಾಗಿಯೂ ನನಗೆ ಅನುರಾಗವಿಲ್ಲ,**

ಹರಿಣಗಳೊಡನೆ ಕಾಮನ ಪರಿಯರಿಯದೆ ಬಳೆದಳೆಲ್ಲಿ ನಾವೆಲ್ಲಿ ಕರಂ
ಪರಿಹಾಸಕುಸಿರ್ದುದಂ ನೀಂ ಪರಮಾರ್ಥಮಿದೆಂದು ಬಗೆಯ ಬೇಡೈ ಮಿತ್ರಾ!"

ಭಯಂಕರವಿದು. ನಗ್ನ ಹತ್ಯೆಯಿದು. ತಾನೊಲಿದ ಯಾರನ್ನಾದರೂ ಹಾಗೆ ಅನ್ನುತ್ತಾರೇನು? ಅನ್ನಬಹುದು; ಯಾರಮುಂದೆ, ಯಾವಕಾರಣಕ್ಕಾಗಿ. ತನ್ನ ನರ್ಮಸಚಿವನ ಮುಂದೆಯೆ? ಅದೂ ಅಪವಾದ ಭೀತಿಗಾಗಿಯೆ? ಗುಟ್ಟು ಗೊತ್ತಾಗುತ್ತದಲ್ಲಾ ಎಂದು ಇಂದು ಸುಳ್ಳು ಹೇಳಿದ ವ್ಯಕ್ತಿ ಗುಟ್ಟಿನ ಮೊಟ್ಟೆಯಾದ ಪ್ರೀತಿಯನ್ನೆ ಏಕೆ ನಿಂದಿಸಲಾರಮುಂದೆ. " Before the cock crows twice you will deny me thrice " ಎಂದು ಕ್ರಿಸ್ತ ಭಗವಾನ್ ತನ್ನ ಶಿಷ್ಯಶ್ರೇಷ್ಠನಿಗೇ ಹೇಳಿದ. ಅದು ಸತ್ಯವೇ ಆಯಿತು. ಇಲ್ಲೂ ಅಷ್ಟೆ. ಎಂದಿದ್ದರೂ ರಾಣೀ ವಾಸಕ್ಕೆ ತನ್ನ ಹೊಸ ಗೆಳತಿಯನ್ನು ಕರೆಸಿಕೊಳ್ಳಲೆ ಬೇಕೆಂಬ ಹಟವಿದ್ದಿದ್ದರೆ ಈ ಗುಟ್ಟುರಟ್ಟಿಗೆ ಸುಳ್ಳು ಹೇಳ ಬೇಕೆ? ಮೊದಲೆ ಸುದ್ದಿ ಹರಡಿದ್ದು ತಾನು ಊರಿಗೆ ಹೋಗುವ ವೇಳೆಗೆ, ಆಮೇಲೆ

ಶಕುಂತಲೆಯನ್ನು ಅಂತಃಪುರಕ್ಕೆ ಕರೆಸಿಕೊಳ್ಳುವ ವೇಳೆಗೆ, ಅಲ್ಲಿನ ಅವಾಂತರ ಕಡಿಮೆಯಾಗುತ್ತಿತ್ತು ಎಂಬ ವಿವೇಕವಿರಲಿಲ್ಲವೆ? ಇದ್ದೂ ಕೂಡ ಅನ್ಯೋದ್ದೇಶವೇನಾದರೂ ಇತ್ತೊ? ಈಗಲೆ, ಇಷ್ಟು ಹೆದರಿ ಅದೂ ಮಾಢವ್ಯನ ಬಳಿ ಸುಳ್ಳು ಹೇಳಿದ ಮೇಲೆ ಮುಂದೆ ತನ್ನ ಮಾತಿನಂತೆ ಶಕುಂತಲೆಯನ್ನು ದಿನ ಮೂರರಲ್ಲಿ ಅಂತಃಪುರಕ್ಕೆ ಕರೆಸಿಕೊಳ್ಳುವ ನೈತಿಕ ಧೈರ್ಯವಿದೆಯೆ ಆ ಚಪಲಧೀರನಿಗೆ? ಇದೇ ಪರಿಹಾಸವೊ? ಅದೇ ಪರಿಹಾಸವೋ? ಇಂತಹ ಅರ್ಥವಂಚನೆಗಳನ್ನು ನೈತಿಕಧೈರ್ಯ ದಾರಿದ್ರ್ಯಜನ್ಯವಾದ ಛದ್ಮವಂಚನೆಗಳನ್ನು ತಿದ್ದಲು ವಿಧಿಯೂ ಕೂಡ **ಪರಿಹಾಸ ಮಾಡಬೇಕುತಾನೆ?** ಹಾಗಿಲ್ಲದೆ ಬಿಟ್ಟರೆ ಅಂಥವರ ಕೈಗೆ ಸಿಲುಕಿದ ಮುಗ್ಧರಾದವರ ಪಾಡೇನು. ಅವರನ್ನು ಇನ್ನೆಂತೂ ಬಿಡಿಸಿತರುವಂತಿಲ್ಲ; ಉಳಿಸಬೇಕಷ್ಟೆ. ಅದು ಹೇಗೆ? ಇಂಥವರನ್ನು ಬೆಂಕಿಯಲ್ಲಿಟ್ಟು ತಿದ್ದುವ ಮೂಲಕ; ಅಷ್ಟೆ. ಇದು ಹೋಗಲಿ, ಈ ಸುಳ್ಳಿನ ಜತೆಗೆ ಮುಂದೆಷ್ಟು ಸುಳ್ಳು ಬರುತ್ತವೆ ನೋಡಿ:

ಸಖಿಯರ ಮುಂದೆ ಶಕುಂತಲೆಯನ್ನು ಸ್ವೀಕರಿಸಿಕೊಳ್ಳುವಾಗ ಅವನು ಮಾಡುವ ಪ್ರತಿಜ್ಞೆ ಎಂತುದು:

" ಪಲವರಸಿಯರ್ ಎನಗಿರ್ದುಂ ಕುಲದುತ್ಕರ್ಷಾಸ್ಪದಂಗಳ್ ಎನಿಸುಗುಮಿರ್ವರ್
ಜಲನಿಧಿರಶನಾಂಚಿತೆಯಾದಿಳೆಯುಂ ನಿಮ್ಮಿರ್ವರಿಷ್ಟ ಸಖಿಯಾದಿವಳುಂ | "

ಈ ಮಾತಿಗೆ ಎಷ್ಟೆ ಬೆಲೆಕೊಟ್ಟರೂ ಅದೆಲ್ಲವೂ ತತ್ಕಾಲೀನ ಪ್ರಯೋಜನಕ್ಕಾಗಿ ಬೆಲೆ ಪಡೆಯುವ ಕಾಗದದ ನೋಟಿನಂತೆ, ಹೆಚ್ಚೆಂದರೆ ಬಣ್ಣದ ನಾಣ್ಯದಂತೆಯೆ ವಿನಾ ಚಿನ್ನದ ನಾಣ್ಯದಂತಾಗುವುದಿಲ್ಲ. ಚಲಾವಣೆಯೇನೋ ಸಿಕ್ಕುತ್ತದೆ. ಆದರೆ ಯಾರಿಗೆಗೊತ್ತು ನಾಣ್ಯ ಕೊಟ್ಟ ಸರ್ಕಾರವೆ ತಾ ಕೊಟ್ಟ ನಾಣ್ಯವನ್ನೆ ಕೋಟಾ ನಾಣ್ಯ ಎನ್ನುವ ಘಳಿಗೆ ಬಾರದೆಂದು? ಹೋಗಲಿ, ಮೇಲಿನ ಮಾತಿನ ವಾಚ್ಯಾರ್ಥವೆ ಆಗಲಿ ಅದು ಸತ್ಯವಾಗುವ ಪಕ್ಷಕ್ಕೆ ಅಂತಃಪುರದ ರಾಣಿಯರ ಬಾಯಿಗೆ ಮಣ್ಣು ಬೀಳುವುದೆ? ಇದೆ ನಿಜದ ಪ್ರೀತಿ? ಅವರಿಗೇನಾದರೂ ಈ ಮಾತು, ಯಾರಾದರು ಅದನ್ನು ಟೇಪ್‌ರೆಕಾರ್ಡ್ ಮಾಡಿಕೊಂಡು ಹೋಗಿ ತೋರಿದ್ದರೆ, ಕೇಳಿಸಿದ್ದರೆ ಅವರೇನನ್ನುತ್ತಿದ್ದರು. ಒಮ್ಮೆ ತಮಗೂ ಇದೆ ಮಾತು ಹೇಳಿದ್ದ ಎನ್ನುತ್ತಿದ್ದರೋ, ಅಥವಾ ತಮ್ಮ ಗತಿ ಹಾಳಾಯಿತೆಂದು ಗೋಳಿಡುತ್ತಿದ್ದರೊ? ಆದರೆ, ಆರನೆಯ ಅಂಕದ ರಾಜ ದುಷ್ಯಂತ ವರ್ತಿಸುವ ಬಗೆನೋಡಿ. ದುಃಖಗೊಂಡು ಶಕುಂತಲೆಯ ಚಿತ್ರಪಟದೊಡನೆ ಸಲ್ಲಾಪಿಸುತ್ತಿರುವಾಗ ಮತ್ತೊಬ್ಬರಾಣಿ ವಸುಮತೀದೇವಿ ಬರುವ ಸದ್ದು ಕೇಳಿದೊಡನೆಯೆ ಚಿತ್ರಪಟವನ್ನು ರಕ್ಷಿಸಿಕೋ ಎಂದು ಅವನು ಮಾಢವ್ಯನಿಗೆ ಸೂಚಿಸುತ್ತಾನೆ. ಅದನ್ನು ಕಂಡು ಅಗೋಚರೆಯಾದ ಸಾನುಮತಿ ಆಡುವ ಮಾತೇನು: " ಈತನು ಮತ್ತೊಬ್ಬಳಲ್ಲಿ ಮನಸ್ಸುಳ್ಳವನಾಗಿದ್ದರೂ ಮೊದಲನೆಯವಳ ಪುರಸ್ಕಾರವನ್ನು ಇಚ್ಛೈಸುವನು. **ಆದುದರಿಂದ ಇವನ ಮೈತ್ರಿಯು ಸ್ಥಿರವಾದುದು.** " ಅದೇ ಮಾತನ್ನು ಮೂರನೆಯ ಅಂಕಕ್ಕೆ ಅನ್ವಯಿಸುವುದಾದರೆ

ಮೇಲಿನ ಕೊನೆಯ ಮಾತು ತಾನಾಗಿಯೆ ಹಿಂದು ಮುಂದಾಗುತ್ತದೆ: "ಆದುದರಿಂದ ಇವನ ಮೈತ್ರಿಯು ಸ್ಥಿರವಾದುದಲ್ಲ." ಅದು ತಿಳಿಯಬಾರದಿತ್ತೆ ಸಖಿಯರಿಗೆ? ಪಾಪ ತಪೋವನಜೀವಿಗಳು, ನಾಗರಿಕರ ವರ್ತನೆ ತಿಳಿಯದು. ಅಲ್ಲೊಬ್ಬ ಸಾನುಮತಿ ಇದ್ದಿರಬೇಕಾಗಿದ್ದಿತು. (ಆಕೆಯಿದ್ದರೂ, ಆಕೆಯಾಡುವ ಮಾತು ಬೇರೆಯವರಿಗೆ ಕೇಳುತ್ತಲೆ ಇರಲಿಲ್ಲವೇನೊ!)

ಐದನೆಯ ಅಂಕದಲ್ಲಿ ಬರುವ ಮತ್ತೊಂದು ಘಟನೆಯನ್ನು ವಿವರಿಸಬಹುದು. ಗರ್ಭಚಿಹ್ನೆ ತೋರುತ್ತಿರುವ ಶಕುಂತಲೆಯನ್ನು ತಾನೆಂತು ಸ್ವೀಕರಿಸುವುದು ಎಂದು ಪ್ರಶ್ನಿಸುತ್ತಾನೆ ದುಷ್ಯಂತ. ಯಾರೂ ತಪ್ಪು ಭಾವಿಸಬಾರದು: ದುಷ್ಯಂತನಿಗಿದ್ದುದು ಪರಸತೀ ಪರಿಗ್ರಹಣಭೀತಿಯೋ ಅಥವಾ ಅನ್ಯ ಅಂತರ್ವರ್ತ್ನೀ ಸ್ವೀಕಾರ ಭೀತಿಯೊ? ಶಾಂತಂ ಪಾಪಂ ಎನ್ನಬಹುದು. ಆದರೆ ಇದ್ದಿರಬಹುದಾದ ಪಾಪವನ್ನು ಕಾಣದಿರುವುದರಿಂದ, ಅದನ್ನೆ ಪುಣ್ಯ ಎಂದು ಭ್ರಮಿಸುವುದರಿಂದ 'ಶಾಂತಂ ಪಾಪಂ' ಎಂಬ ಮಾತು ಸಿದ್ಧಸಿದಂತಾಗುವುದಿಲ್ಲ. ಮತ್ತೊಂದು ಅಂಶವನ್ನಿಲ್ಲಿ ಕಾಣಬೇಕು. ಪುರೋಹಿತರು ರಾಜನಿಗೆ ಕೊಡುವ ಸಲಹೆಯನ್ನಿಲ್ಲಿ ವಿವೇಚಿಸಬಹುದು: "ಪೂಜ್ಯೆಯಾದ ಈಕೆಯು ಹೆರುವವರೆಗೂ **ನನ್ನ ಮನೆಯಲ್ಲಿ** ಇರಲಿ; ಹೀಗೇತಕ್ಕೆ ಹೇಳುವಿರೆಂದರೆ, ಮೊದಲಲ್ಲಿ ಚಕ್ರವರ್ತಿ ಲಕ್ಷಣವುಳ್ಳ ಪುತ್ರನು ಉದಿಸುವನೆಂದು ಋಷಿಗಳು ಹೇಳಿಯೆ ಇರುವರು; ಹಾಗೆ ಈ ಮುನಿಪುತ್ರಿಯಲ್ಲಿ ಹುಟ್ಟುವ ಮಗನು ಚಕ್ರವರ್ತಿ ಲಕ್ಷಣದಿಂದ ಕೂಡಿರುವನೆಂದಾದರೆ ಆಮೇಲೆ ಅಭಿನಂದಿಸಿ ಈಕೆಯನ್ನು ನಿನ್ನ ರಾಣಿವಾಸಕ್ಕೆ ಸೇರಿಸು; ಹಾಗೆ ಆಗದೆ ಇರುವ ಪಕ್ಷಕ್ಕೆ ಈಕೆಯನ್ನು ತಂದೆಯ ಬಳಿಗೆ ಕಳುಹಿಸುವುದು ಸಿದ್ಧವಾಗಿರುವುದು." ಈ ಮಾತುಗಳನ್ನು ಎಚ್ಚರದಿಂದ ನೋಡಬೇಕಷ್ಟೆ. ಮೊದಲನೆಯ ಅಂಶ, ರಾಜಪುರೋಹಿತನು ತಾನೆ ಶಕುಂತಲೆಯನ್ನು ತನ್ನ ಮನೆಯಲ್ಲಿ ಆಕೆ ಪ್ರಸವಿಸುವ ತನಕ ಇಟ್ಟುಕೊಳ್ಳುವುದಾಗಿ ಹೇಳುತ್ತಾನೆ. ಸಲಹೆ ಕೊಟ್ಟು ಮಾತ್ರ ವಿರಮಿಸದೆ ಅದನ್ನು ಕಾರ್ಯಗತಮಾಡಲು ತಾನೆ ಮುಂದು ಬರುತ್ತಾನೆ. ಒಂದು ವೇಳೆ ಏನಾದರೂ ಆತನಿಗೆ ಶಕುಂತಲೆಯ ವಿಷಯವಾಗಿ ಸಂಶವಿದ್ದಿದ್ದರಾಗಲಿ ದುಷ್ಯಂತ ತಾನು ಮದುವೆಯಾದ ಹೆಣ್ಣನ್ನು ಎಂದೂ ಮರೆಯಲಾರ ಎಂಬ ವಿಷಯವಾಗಿ ವಿಶ್ವಾಸವಿದ್ದಿದ್ದರಾಗಲಿ ಹಾಗೆ ರಾಜ ಪರಿತ್ಯಕ್ತೆಯಾದ ಹೆಣ್ಣನ್ನು ತಾನೆ ಕಾಪಾಡುತ್ತೇನೆ ಎಂದು ಎಂದೂ ಮುಂದೆ ಬರುತ್ತಿದ್ದಿರಲಿಲ್ಲ. ಒಂದು ವೇಳೆ, ಶಕುಂತಲೆಯು ಪ್ರಸವಿಸುವ ತನಕ ಇರಲಿ ನೋಡೋಣ ಎಂದು ತಾನೆ ಸಲಹೆ ಕೊಟ್ಟಿದ್ದರೂ ಆಕೆಯನ್ನು ಆ ತನಕ ರಕ್ಷಿಸುವ ಭಾರವನ್ನು ತಾನೆಂದೂ ಹೊರುತ್ತಿರಲಿಲ್ಲ. ತಾನೇಕೆ ಬರಿದೆ ಲೋಕಾಪವಾದಕ್ಕೆ ಗುರಿಯಾಗಬೇಕು ಎಂದು ಸುಮ್ಮನಿರುತ್ತಿದ್ದ. ಮತ್ತೊಂದು ಅಂಶ, ಆಕೆಯಲ್ಲೇನಾದರೂ ಚಕ್ರವರ್ತಿ ಚಿಹ್ನೆಯಿರುವ ಮಗ ಜನಿಸಿದರೆ ರಾಜ ಆಕೆಯನ್ನು ಸ್ವೀಕರಿಸಬೇಕು ಎಂದು ಅವನಾಡುವ

ಮಾತು. ಋಷಿಗಳ ಮಾತಿನಲ್ಲಿ ನಂಬಿಕೆ ಇಟ್ಟಿರುವುದು ಹಾಗಿರಲಂತೆ; ಒಂದುವೇಳೆ, ರಾಜನೆಂದೂ ಮದುವೆಯಾದ ಹೆಂಡತಿಯನ್ನು ಮರೆಯನೆಂಬುದರಲ್ಲಿ ಅಚಲ ವಿಶ್ವಾಸವಿದ್ದಿದ್ದರೆ ಹಾಗೆ ಅವನು ಆ ಸಲಹೆಯನ್ನಾದರೂ ತಾನೆ ಹೇಗೆ ನೀಡುತ್ತಿದ್ದ. "ಅಪರಾಧ ತಿರಸ್ಕಾರ ಸಾಧ್ಯವಿಲ್ಲ. ಆದರೆ ಸಾಕ್ಷಿ ದೊರೆಯುವತನಕ ಅಪರಾಧವನ್ನು ತಿರಸ್ಕರಿಸದೆ ಹಾಗೆ ಒತ್ತಟ್ಟಿಗಿಟ್ಟಿರೋಣ", ಎನ್ನುವ ನ್ಯಾಯಾಲಯದ ತೀರ್ಪಿನಂತಿದೆ ಅವನ ಸಲಹೆ. ರಾಜನ ನೈತಿಕ ಚಾರಿತ್ರ್ಯದಲ್ಲಿ ಕೇವಲ ವಿಶ್ವಾಶವಿದ್ದಿದರೆ ಅದರ ಆಧಾರದ ಮೇಲೆಯೆ ಸ್ಪಷ್ಟವಾದ ಕೊನೆಯ ಮಾತನ್ನಾಡಬೇಕಾಗಿತ್ತು. ಅದೇ ಅನಿಶ್ಚಿತ; ಅದರಿಂದಲೆ ಸಾಕ್ಷಿ ಬೇಕಾಯಿತು. ರಾಜಪುರೋಹಿತನಿಗೆ ರಾಜನ ಜಾತಕ ಚೆನ್ನಾಗಿ ತಿಳಿದಿದೆ. ಅವನ ಬದುಕಿನ ಪರಿಚಯವಿದೆ. ಅವನು ಹೇಗೆತಾನೆ ಶಕುಂತಲೆಯನ್ನು ತ್ಯಜಿಸಲು ಸಲಹೆಮಾಡಿಯಾನು? ಇದೇ ಐದನೆಯ ಅಂಕದ ಪ್ರಾರಂಭದ ಗೀತೆ ಪ್ರೇಕ್ಷಕರಿಗೆ ಮೊದಲಬಾರಿಗೆ ಮಾತ್ರ ಕೇಳಿಸಿದ್ದರೆ ಅಂತಹ ಗೀತೆಗಳೆಷ್ಟು ಎಷ್ಟುಬಾರಿ ಆ ಪುರೋಹಿತನ ಕಿವಿಗೆ ಬಿದ್ದಿಲ್ಲ. ಎಷ್ಟು ನತದೃಷ್ಟರಾಣಿಯರನ್ನು ಸಮಾಧಾನ ಪಡಿಸಬೇಕಾದ ಅವಕಾಶ ಬಂದಿದ್ದಿರಲಾರದು. ಅರಮನೆಯ ಸಹಜತೆ ಅವನಿಗೆ ತಿಳಿದಿರುವಂತೆ ಮತ್ತಾರಿಗೂ ತಿಳಿದಿದ್ದಿರಲಾರದು.

ಹಂಸ ಪದಿಕೆಯ ಹೃದಯ ವಿದ್ರಾವಕ ಗೀತೆಯನ್ನು ತೇಲಿಸಿ ಹಾರಿಸುವ ವಿಮರ್ಶಕರು ರಾಜ ಪಕ್ಷಪಾತಿಗಳಾಗಿ ಏನೇನೊ ಹೇಳುವುದುಂಟು. ರಾಜನ ನೂರಾರು ಕಾರ್ಯ ಗೊಂದಲದಲ್ಲಿ ಎಲ್ಲೊ ಒಮ್ಮೆ ಪ್ರೀತಿ ಪಡೆಯಲಾಗದ ಯಾವಳೊ ಹೆಣ್ಣು ಹಾಡಿದ ಗೀತೆ ಅದು ಎನ್ನುವ ವಿಮರ್ಶೆ ನಿಜದೂರವಾದುದಷ್ಟೆ. ಆ ಹಾಡನ್ನು ಮತ್ತೆ ಕೇಳಿರಿ :

> "ಪೊಸತಪ್ಪ ಮಧುವ ಬಯಸುತೆ ರಸಾಲ ಮಂಜರಿಯನಂತು ಚುಂಬಿಸಿ ನೀಂ ಸಾ
> ರಸ ವಾಸ ಮಾತ್ರದಿಂ ಸಂತಸವಾಂತದನೆಂತು ಮರೆದೆಯೆಲೆ ಮಧುಕರನೇ"

ಇದನ್ನು ಕೇಳಿದ ವಿಮರ್ಶಕರು ಹೇಗಾದರೂ ವಾದಿಸಲಿ. ಸಂಬಂಧಪಟ್ಟ ಅಪರಾಧಿಯನ್ನೆ ಕೇಳಿ : "**ಒಂದಾವೃತ್ತಿ ಪ್ರೀತಿಸಿದವಳೀಕೆ.** ಆದ್ದರಿಂದ ಈ ಹಾಡಿನಲ್ಲಿ ವಸುಮತಿಯನ್ನು ಕುರಿತಾದ ಅವಹೇಳನವೊಂದನ್ನು ಹುದುಗಿಸಿರುವಳೆಂದು ಭಾವಿಸುತ್ತೇನೆ. ಮಿತ್ರ, ಮಾಢವ್ಯ! ಬಹು ಜಾಣ್ಮೆಯಿಂದ ಏಳಿಸಿದ್ದೀಯೆ ಎಂದು ನಾನು ಹೇಳಿದುದಾಗಿ ಹಂಸಪದಿಕೆಗೆ ತಿಳಿಸು.' ಒಂದು ಬಾರಿ ಪ್ರೀತಿಸಲ್ಪಟ್ಟವಳು, (ಮದುವೆನಿಂದವಳೂ ಅಲ್ಲವೊ ತಿಳಿಯದು,) ಆಮೇಲೆ ಮರೆಯಲ್ಪಟ್ಟವಳು. ಎಷ್ಟು ಜನ ಅವನ ಅರಮನೆಯಲ್ಲಿ ಅಂಥವರಿದ್ದರೊ ಯಾರುಬಲ್ಲರು; ಎಷ್ಟು ಜನ ಅರ್ಧ ಶಕುಂತಲೆಯರು, ಉಂಗುರವನ್ನು ಮಾತ್ರ ಪಡೆದುಕೊಂಡು ಮರೆಯಲ್ಪಟ್ಟಿದ್ದಾರೊ. ಅದಿರಲಿ, ಅವನು ಕೊಡುವ ಉತ್ತರವಾದರೂ ಎಷ್ಟು ಬಿಗುಮಾನದ ಮಾತಾಗಿದೆ. ಗೂಢವೂ ಗಂಭೀರವೂ ಆದುದಾಗಿದೆ ಸರಿ. ಆದರೆ ಅದರ ಹಿಂದಿರುವ ಮನೋಧರ್ಮ, ತಾನು ಮಾಡಿರುವ ತಪ್ಪಿಗೆ ಮರುಗದೆ, ತನ್ನಿಂದ ವಂಚಿತಳಾದವಳ ದುಃಖಕ್ಕೆ

ಅನುಕಂಪೆದೋರದೆ 'ಬಹುಪತ್ನೀವ್ರತಧರ್ಮ' ರಕ್ಷಿತನಾಗಿ ದಿವಾಕಿನಿಂದಲೆ ಆಡುವ ಪಶ್ಚಾತ್ತಾಪರಹಿತವಾದ ಮಾತುಗಳು ಅವು. ಪ್ರೀತಿ ಬೇಡಿ ಪಡೆಯಬೇಕಾದುದಲ್ಲ, ಭಿಕ್ಷೆಯಾಗಿ ಆಗಲಿ, ಕೃಪೆ ಕರುಣೆ ದಯೆಗಳಾಗಿ ಆಗಲಿ ಪಡೆಯಬೇಕಾದುದಲ್ಲ; ಅದು ಯಾವುದೂ ಪ್ರೀತಿಯಲ್ಲ. ಅಯಾಚಿತವಾಗಿ ಅಂತಃಸ್ಫೂರ್ತಿಜನ್ಯವಾಗಿ ಬರುವುದು ಅದು. ಆ ಆದರ್ಶಕ್ಕೆ ಎಷ್ಟು ದೂರವಿದೆ ಐದನೆ ಅಂಕದ ದುಷ್ಯಂತನ ಸ್ವಭಾವ.

ದುಷ್ಯಂತನೊಬ್ಬನೆ ಯಾತನಾದಗ್ಧನಾಗುವುದಿಲ್ಲ, ಆಗ ಬೇಕಾದವನಾಗಿರಲಿಲ್ಲ. ಅವನೊಡನೆ ಉಚಿತ ಪ್ರಮಾಣದಲ್ಲಿ ಉಳಿದವರೂ ದುಃಖವಶರಾಗುತ್ತಾರೆ. ಕಾರಣ ನಿಷ್ಕಾರಣವಲ್ಲ. ಅವರೂ ಒಂದಲ್ಲ ಒಂದು ರೀತಿ ತಪ್ಪೆಸಗಿದ್ದಾರೆ. ತಪ್ಪೆಂದರೆ ತಪ್ಪಲ್ಲ; ಅಲ್ಲವೆಂದರೂ ಸಲ್ಲ. ಮೊದಲನೆಯ ತಪ್ಪು ಆ ರಹಸ್ಯ ಪ್ರಣಯಾನುಮತಿ. ಗಾಂಧರ್ವ ವಿವಾಹ ಸರ್ವಸಮ್ಮತವೆಂದು ಒಪ್ಪುತ್ತೇವೆ. ಆದರೆ ಗಾಂಧರ್ವ ವಿವಾಹ ಆತುರದಲ್ಲಿ ಮಾಡಿ ಬೇಗ ಮರೆಯುವುದಲ್ಲ. ಮಂತ್ರ ಪೂತವಾದ ತಪೋವನದಲ್ಲಿ ನಿರ್ಮಂತ್ರ ಜಾತವಾದ ಗಾಂಧರ್ವ ವಿವಾಹ ನಡೆಯಬಾರದು ಎಂದೂ ಅಲ್ಲ; ನಡೆಯಲಿ. ಆದರೆ, ಅದಕ್ಕೆ ಬಂದ ಗತಿ ಸರಿಯಾದುದಲ್ಲ. ಆ ವಿಷಯವಾದ ಅಭಿಪ್ರಾಯವನ್ನು ಒಬ್ಬೊಬ್ಬರದಾಗಿ ಇಲ್ಲಿ ಕೇಳಬಹುದು. ಮೊದಲು ಸ್ವಯಂ ಅನಸೂಯೆಯ ಮಾತನ್ನೆ ಲಾಲಿಸಿರಿ. ಇನ್ನೂ ಗಾಂಧರ್ವ ವಿವಾಹ ನಡೆದು ಬಹಳ ದಿನವಾಗಿಲ್ಲ. ಕಣ್ವರೂ ಆಶ್ರಮಕ್ಕೆ ಬಂದಿಲ್ಲ. ಆಗ ಆಡುವ ಮಾತಿದು: " **ನಾನು ಸಖಿಯ ತಪ್ಪೆಂದು ನಿರ್ಣಯಿಸಿದರೂ** ಸೋಮತೀರ್ಥದಿಂದ ಬಂದ ತಂದೆಯಾದ ಕಣ್ವರಿಗೆ ದುಷ್ಯಂತನನ್ನು ವರಿಸಿ ಶಕುಂತಳೆ ಗರ್ಭಿಣಿಯಾಗಿರುವಳೆಂದು ಹೇಗೆ ತಿಳಿಸಲಿ?" ಇದಕ್ಕೆ ವ್ಯಾಖ್ಯಾನ ಬೇಡ. ಮುಂದೆ ಐದನೆಯ ಅಂಕದಲ್ಲಿ ಗೌತಮಿ ಹಾಗೂ ತಪಸ್ವಿ ಕುಮಾರರು ಆಡುವ ಮಾತನ್ನು ನೋಡಿ:

" ಗುರಜನವನಪೇಕ್ಷಿಸದಾದರದಿಂದಂ ಬಂಧು ಜನವ ಕೇಳದೆ ನೀವಿ
ರ್ವರೆ ನೇಹದೊಳೊಡಗೂಡಿದ ಪರಿಯುಂ ನೋಡಲ್ಕೆ ನಿಮ್ಮೊಳಾರ್ಗೆಂದೊರೆವೆಂ!"

ಗೌತಮಿ ತಾನೆಷ್ಟು ದಿನದಿಂದ ತಡೆದಿಟ್ಟುಕೊಂಡಿದ್ದ ಭಾವನೆಯೊ ಇದು. ಆದರೂ ಎಷ್ಟು ತಡೆದು ತಡೆದು ಮಾರ್ಮಿಕವಾಗಿ ಹೇಳುತ್ತಾಳೆ. ಇವಳ ಮಾತು ಹೀಗಿದ್ದರೆ ಆ ಹುಳಿ ಮುರಿಯದ ತರುಣ ತಪಸ್ವಿಕುಮಾರರು ಇನ್ನೂ ಒರಟುಒರಟಾಗಿ ಉಗ್ರವಾಗಿಯೆ ಹೇಳುತ್ತಾರೆ. " **ಹೀಗೆ ತಾನಾಗಿ ಮಾಡಿಕೊಂಡ ಚಾಪಲ್ಯವು ತನ್ನನ್ನು ಬಿಡದೆ ಸುಡುವುದು.**

ಅದರಿಂ ಮಿಗೆ ಪರಿಕಿಸಿ ಮಾಳ್ಪುದು ತಾನೇಕಾಂತಸಂಗಮುವನಲ್ಲದಿರಲ್
ಹೃದಯುವನಣಮರಿಯದೆ ಮಾಡಿದ ಸೌಹೃದಮಿಂತು ಜಗದೊಳ್ ಅಹಿತಮೆನಿಕ್ಕುಂ"

ಇದು ಎಷ್ಟೆ ನಗ್ನವಾಗಿದ್ದರೂ ಉಜ್ವಲ ಸತ್ಯವೆ. ಪ್ರೀತಿಸುತ್ತೇನೆ ಎಂದೊಡನೆಯೆ ಪ್ರೀತಿಯ ಸತ್ತ್ವವನ್ನಾಗಲಿ ತತ್ತ್ವ ಶುದ್ಧಿಯನ್ನಾಗಲಿ ತೋರ್ಪಡಿಸಿದಂತಾಗಲಿಲ್ಲ.

ಅದು ನಾಲ್ಕು ದಿನ ಹಾಗೇ ಅತೃಪ್ತವಾಗಿಯೆ ಉಳಿದಿರಲು ಶಕ್ತವಾದರೆ ಮಾತ್ರ ಸತ್ತ್ವ ಪರೀಕ್ಷೆಯಲ್ಲಿ ತೇರ್ಗಡೆಗೊಳ್ಳಬಲ್ಲದು. ವಿಷಮ ಸನ್ನಿವೇಶಗಳನ್ನು ಹಾಯ್ದು ಅಖಿಲವಾಗಿ ಉಳಿದಾಗ ಮಾತ್ರ ಶುದ್ಧ ಸತ್ತ್ವವಾಗುತ್ತದೆ. ಅದಿಲ್ಲದೆ ಹೊಸಕದ ಪ್ರೀತಿಗೆ ಮಾತಿಗೆ ಬೆಲೆ ಎಲ್ಲಿ. ನಾಲ್ಕು ಜನರ ಕಣ್ಣಿಗೆ ಬೀಳಲೂ ಅಂಜುವಂತಹ ಪ್ರೀತಿ ಪ್ರೀತಿ ಏನು ? ಶುದ್ಧವೇನು ? ಎಲ್ಲಿ ಶುದ್ಧಿದೋಷವಿರುತ್ತದೊ ಅಲ್ಲಿ ಧೈರ್ಯ-ದೌರ್ಬಲ್ಯವಿರುತ್ತದೆ. ಹಾಗಿದ್ದಾಗಲೆ ಗೋಪನಾಕಾಂಕ್ಷೆ ಉದಿಸುತ್ತದೆ. ರಾಜ ತನ್ನ ಪ್ರೀತಿಯನ್ನು ಗೋಪನಮಾಡಲು ಮಾಢವ್ಯನಿಗೂ ಸುಳ್ಳು ಹೇಳುತ್ತಾನೆ. ತಪೋವನದವರಾಗೂ ಕಾಣದಂತೆ ತನ್ನ ಆಸೆಯನ್ನು ತೀರಿಸಿಕೊಳ್ಳುವ ಹೊಂಚು ಹಾಕುತ್ತಾನೆ. ಮಾಢವ್ಯನಿಗೆ ಎರಡನೆಯ ಅಂಕದಲ್ಲಿ ಹೇಳುವುದನ್ನು ನೋಡಿ: "ನಾನಿಲ್ಲಿರುವುದನ್ನು **ಕೆಲವು ತಪಸ್ವಿಗಳು ಬಲ್ಲರು**; ಯೋಚಿಸು; **ಯಾವ ನೆವ ದಿಂದ** ಪುನಃ ಆಶ್ರಮಕ್ಕೆ ಹೋಗಲಿ?". ಅದಷ್ಟೆ ಅಲ್ಲ, ಶಕುಂತಲೆಯನ್ನು ಗಾಂಧರ್ವ ವಿಧಿಯಿಂದ ಸ್ವೀಕರಿಸಿ ಆಶ್ರಮದಲ್ಲಿ ಕೆಲವು ದಿನ ಇದ್ದಾಗಲೂ ಅವನು ಅಲ್ಲಿಯ ಯಾರೊಬ್ಬರಿಗೂ ತೋರಿಸಿಕೊಂಡಿಲ್ಲ. ಅದಿರಲಿ, ಕುಲಪತಿಗಳಾದ ಕಣ್ವರು ಬರುವನಕ ಇದ್ದು ಅವರನ್ನೆದುರಿಸುವ, ಅವರಿಗೆ ತಮ್ಮ ಪ್ರಿತಿಯನ್ನೊಪ್ಪಿಸುವ ಮುಗ್ಧಶುದ್ಧ ಧೈರ್ಯವನ್ನೆ ಪ್ರದರ್ಶಿಸುವುದಿಲ್ಲ. ರಾಜಕಾರ್ಯಭಾರವಿರುವಾಗ ಕಣ್ವರು ಬರುವನಕ ಹೇಗೆತಾನೆ ಕಾದುಕೊಂಡಿರುವುದು ಎಂದಾರಾದರೂ ಅಭಿಪ್ರಾಯಪಡ ಬಹುದು. ಆದರೆ ಆ ವಿವೇಕ ಅವನಿಗೆ ಶಕುಂತಲಾ ಪ್ರೀತಿ ಲಭಿಸುವ ಮುನ್ನವೆ ಏಕೆ ಬರಬಾರದಿತ್ತು; ತಾಯಿಯಿಂದ ಸುದ್ದಿ ಬಂದರೂ ಹೊಸಕದ ನೆಪಗಳನ್ನು ನೀಡಿ ಮಾಢವ್ಯನನ್ನೆ ತಳ್ಳುತ್ತಾನೆ. ಅಬ್ಬ! ಕಾರಣವಿಷ್ಟೆ; ತಾನು ಮಾಡಿದುದು ಆದಷ್ಟೂ ರಹಸ್ಯವಾಗಿರಬೇಕು. ರಹಸ್ಯ ಎಂದೊಡನೆಯೆ ಅದರಲ್ಲಿ ಎಷ್ಟು ಶುದ್ಧಿ ಇದೆ, ಧೈರ್ಯವಿದೆ ನೋಡಬಹುದು. ಗುಟ್ಟಾಗಿ ಸಾಲಮಾಡಿಕೊಂಡೆ ವ್ಯಾಪಾರ ನಡೆಸುವ ಶ್ರೀಮಂತರು ತಾವು ಒಂದು ಕಡೆ ಸಾಲಮಾಡುವುದು ಮತ್ತೊಂದು ಬ್ಯಾಂಕಿನವರಿಗೆ ತಿಳಿಯದಂತೆ ನೋಡಿಕೊಳ್ಳುತ್ತಾ ಹೋಗುತ್ತಾರೆ. ದುಷ್ಯಂತ, ಅದುತನಕ ಪ್ರಣಯ ವ್ಯಾಪಾರಿ, ಸಟ್ಟಾ ವ್ಯಾಪಾರಿ, ತನ್ನ ನರ್ಮಸಚಿ-ಮಾಢವ್ಯ-ದಳ್ಳಾಳಿಗೂ ತಿಳಿಯದಂತೆ ಕೆಲವೊಮ್ಮೆ ಸಾಲವ್ಯಾಪಾರ ಮಾಡುವ ಘನ ಪುಡಾರಿ, ಆಗಿದ್ದ. ಯಾರೂ ಕೋಪಿಸಿಕೊಳ್ಳಬೇಕಿಲ್ಲ ಈ ಮಾತಿನ ಧಾಟಿಗೆ. ಅದು ಹೋಗಲಿ, ಸಖಿಯರೂ ಅದನ್ನು ಗೋಪನ ಮಾಡಲು ಅನೇಕ ಸಾಹಸ ಕೈಗೊಳ್ಳುತ್ತಾರೆ: **"ನಮ್ಮ ಸಖಿಯ ಮನೋರಥವನ್ನು ಶೀಘ್ರವಾಗಿಯೂ ಗುಟ್ಟಾಗಿಯೂ ನೆರವೇರಿಸುವುದಕ್ಕೆ ತಕ್ಕಉಪಾಯ ಯಾವುದು?....ಗುಟ್ಟಾಗಿ ನೆರವೇರಿಸುವುದು ತಾನೇ ಯೋಚಿಸತಕ್ಕುದಾಗಿದೆ; ಶೀಘ್ರವಾಗಿ ನೆರವೇರಿಸು ವುದೇನೂ ಕಷ್ಟವಲ್ಲ!"** ಇದಕ್ಕೇನೂ ವ್ಯಾಖ್ಯಾನ ಬೇಕಿಲ್ಲ.

ಮುಂದೆ ಕಣ್ವರು ಶಕುಂತಲೆಯ ಪ್ರಣಯ ವೃತ್ತಾಂತವನ್ನು ಕೇಳಿದೊಡನೆಯೆ

ಹೇಳುವಮಾತೆ ವಿಮರ್ಶಾರ್ಹವಾಗಿದೆ: "ಯಜಮಾನನು ಹೊಗೆಯಿಂದ ಕಣ್ಣು ಗಳನ್ನು ತೆರೆಯದಿದ್ದರೂ ಆತನ ಕೈಯಿಂದ ಆಹುತಿಯು ದೈವಯೋಗದಿಂದ ಅಗ್ನಿಯಲ್ಲಿ ಬಿದ್ದಿತು." ಈ ಮಾತನ್ನು ಬಳಸಿಕೊಂಡೆ ದುಷ್ಯಂತನನ್ನು ತಲೆಯ ಮೇಲೆ ಕುಳ್ಳರಿಸಿಕೊಳ್ಳುವವರುಂಟು. ಆದರೆ ಆ ಮಾತಿನ ಒಳಹೊಕ್ಕಾಗ ನಿಜ ತಿಳಿದೀತು. ಯಜಮಾನನಿದ್ದಾನೆ, ಹವಿಸನ್ನು ಹಿಡಿದಿದ್ದಾನೆ; ಹೊಗೆಯಿಂದ ಕಣ್ಣು ಕಾಣುತ್ತಿಲ್ಲ; ಆಗ ಕೈಜಾರಿದ ಹವಿಸ್ಸು ಅದೆ ಅಗ್ನಿಯಲ್ಲಿಯೆ ಬಿದ್ದಿತು. ಬೆಂಕಿಯಲ್ಲೆ ಬಿದ್ದಿತು ಸರಿ. **ಮಂತ್ರೋಚ್ಚಾರಣೆಯಿಲ್ಲ** ಆದ ಮೇಲೆ **ಸಮನಃಪೂರ್ವಕ ವಾಗಿ** ಆ ಹವಿಸ್ಸು **ಸುಮುಹೂರ್ತದಲ್ಲಿ** ಅಗ್ನಿಗೆ **ಅರ್ಪಿತವಾಯಿತೇನು?** ಅದು ಬಿದ್ದಿತಷ್ಟೆ. ತೃಪ್ತಿಯೇನೆಂದರೆ ಅದು ಮತ್ತೆಲ್ಲೂ ಬೀಳಲಿಲ್ಲವಲ್ಲ ಎಂದು, ಅಷ್ಟೆ. ಕಾಲ ಪೂರ್ವದಲ್ಲೆ ಹವಿಸ್ಸು ಬೆಂಕಿಗೆ ಬಿತ್ತು. ಹಾಗಾಗಿ ಅದಕ್ಕೆ ಮಂತ್ರದ ಪೂರ್ಣ ರಕ್ಷೆ ದೊರೆಯಲಿಲ್ಲ. ಬೆಂಕಿಯೂ ತಾನು ನಿರ್ಧೂಮವಾಗಿ ಹುತವಾಹನವಾಗಿ ರಾರಾಜಿಸದೆ ಹೊಗೆ ಕಾರಿತು. ಆ ಹೊಗೆಯಿಂದಲೆ ಕಣ್ಣು ಕಾಣಲಿಲ್ಲ. ಕಣ್ವರು, ಮುಂದೆ ತಮ್ಮ ಮಗಳನ್ನು ದುಷ್ಯಂತನಿಗೇ ಮದುವೆ ಮಾಡಬೇಕೆಂದು ನಿರ್ಧರಿಸಿದ್ದ ರೆಂಬುದರಲ್ಲಿ ಸಂದೇಹವಿಲ್ಲ. ಆದರೆ ಆ ದುಷ್ಯಂತ ಕಾಲಪೂರ್ವದಲ್ಲೆ ಅವರಿಲ್ಲದ ವೇಳೆಯಲ್ಲೆ ಹೊಗೆಗೊಂಡ ಬೆಂಕಿಯಂತೆ ಹವಿಸ್ಸನ್ನು ಅಪಹರಿಸುತ್ತಾನೆ. ಇದನ್ನು ಅವರು ನಿರೀಕ್ಷಿಸಿದ್ದಿರಲಾರರು. ಅದಕ್ಕಾಗಿಯೆ ಆ ಪ್ರಾಯಶ್ಚಿತ್ತ. ಯಜಮಾನನೂ, ಹವಿಸ್ಸೂ, ಹುತವಾಹನನೂ ಎಲ್ಲರೂ ಆ ಹವಿರ್ಭಾಗರಾದ ದೇವತೆಗಳ ಅಸಮಾಧಾನಕ್ಕೆ ಗುರಿಯಾಗುತ್ತಾರೆ ಆ ಕಾರಣದಿಂದಲೇ.

ಮುಂದೆ ಕಣ್ವರು ದೊರೆಗೆ ಹೇಳಿಕಳಿಸಿಕೊಡುವ ಮಾತಿನಲ್ಲಿ ಒಂದು ಗಂಭೀರ ವಾದ ಎಚ್ಚರಿಕೆಯ ಮಾತನ್ನಾಡಿ ಕಳಿಸಿರುತ್ತಾರೆ:

"ಅಸ್ಮಾನ್ ಸಾಧು ವಿಚಿಂತ್ಯ ಸಂಯಮಧನಾನುಚ್ಚೈಃ ಕುಲಂ ಚಾತ್ಮನಃ
ತ್ವಯ್ಯಸ್ಯಾಃ **ಕಥಮಪ್ಯಬಾಂಧವ ಕೃತಾಂ ಸ್ನೇಹಪ್ರವೃತ್ತಿಂ** ಚ ತಾಮ್
ಸಾಮಾನ್ಯ ಪ್ರತಿಪತ್ತಿಪೂರ್ವಕಮಿಯಂ ದಾರೇಷು ದೃಶ್ಯಾ ತ್ವಯಾ
ಭಾಗ್ಯಾಯತ್ತಮತಃ ಪರಂ ನ ಖಲು **ತದ್ವಾಚ್ಯಂ ವಧೂ ಬಂಧುಭಿಃ ।**

ಕಣ್ವರ ಮಾತಿನ ಧಾಟಿ ಬಹಳ ಅರ್ಥವತ್ತಾದುದು: "ನಾವು ಸಾಧುಗಳು, ಸಂಯಮ ಧನರು; ನೀನೋ ಉಚ್ಚಕುಲಸಂಪನ್ನ; ಈ ಎರಡನ್ನೂ ಗಮನಿಸು. ಹಾಗೂ ಈಕೆಯ ಪ್ರೀತಿಯನ್ನು, 'ಅಬಾಂಧವಕೃತಾಂ ಸ್ನೇಹಪ್ರವೃತ್ತಿಂ'—ಬಂಧುಗಳು ಮಾಡದೆ ಆದ ಈಕೆಯ ಸ್ನೇಹ ಪ್ರವೃತ್ತಿಯನ್ನು—ಗಮನಿಸು. ನಿನ್ನ ಹೆಂಡಿರಲ್ಲಿ ಈಕೆಯನ್ನು ಸರಿಗಾಣು. ಉಳಿದಂತೆ ಎಲ್ಲವೂ ಭಾಗ್ಯಾಧೀನವಾದುದು; ಅದನ್ನೆಲ್ಲ ವಧೂ ಬಂಧುಗಳು ವಾಚ್ಯಮಾಡಬಾರದು." ಸದ್ಯಕ್ಕೆ ನಮಗೆ ಬೇಕಾದುದು ಇಷ್ಟೆ: 'ಅಬಾಂಧವ ಕೃತಾಂ ಸ್ನೇಹಪ್ರವೃತ್ತಿಂ'. ಸಖಿ ಅನಸೂಯೆ, ಗೌತಮಿ, ಶಾರ್ಙ್ಗರವರೆಲ್ಲ ಆಡಿದ ಅಭಿಪ್ರಾಯವನ್ನೆ ತಮಗೆ ಸಹಜವಾದ ಸಂಯದಿಂದ

(ತಾವೆ ಹೇಳಿದ್ದಾರೆ ಆಗಲೆ, ಸಂಯಮಧನರು ತಾವೆಂದು) ಹೇಳುತ್ತಾರೆ. 'ನಖಲು ವಾಚ್ಯಂ ಸಂಯಮಧನಾನ್ !'

ಈ 'ಅಬಾಂಧವ ಕೃತಾಂ ಸ್ನೇಹ ಪ್ರವೃತ್ತಿಂ' ಎನ್ನುವ ಮಾತಿಗೆ ಅರ್ಥವಿಲ್ಲ ಎನ್ನುವವರು ಶ್ರೀಮದ್ ವಾಲ್ಮೀಕಿ ರಾಮಾಯಣದ ಮಾತನ್ನು ನೋಡಲಿ. ಸೀತಾದೇವಿ ಶ್ರೀರಾಮಚಂದ್ರರು ಪರಸ್ಪರ ದೇಹಹೃದಯ ಆತ್ಮ ಸಮಾನಾನುರಾಗರಾಗಿ ಪ್ರೀತಿಸುತ್ತಾರೆ. ಹೀಗಿರುವಾಗ ಸೀತಾದೇವಿ ಶ್ರೀರಾಮನನ್ನು ತನ್ನ ಆತ್ಮದ ಪ್ರತಿಮೆಯಂತೆ ಪ್ರೀತಿಸುತ್ತಾಳೆ. ಹಾಗೂ ಆ ಶ್ರೀರಾಮನಿಗೆ ತಾನು 'ಪಿತೃಕೃತ' ಭಾರ್ಯೆಯಾಗಿದ್ದ ಕಾರಣದಿಂದ ಅತಿಶಯವಾಗಿ ಪ್ರೀತಿಸುತ್ತಾಳಂತೆ.

" ಪ್ರಿಯಾತು ಸೀತಾ ರಾಮಸ್ಯ ದಾರಾಃ ಪಿತೃಕೃತಾ ಇತಿ
ಗುಣಾದ್ರೂಪಗುಣಾಚ್ಚಾಪಿ ಪ್ರೀತಿರ್ಭೂಯೋಭ್ಯವರ್ಧತ."

ತನ್ನ ಪ್ರೀತಿಸಂಬಂಧ ಸ್ವಕೃತ ಮಾತ್ರವಾದಾಗ ಆಗುವ ಆನಂದ ಉಲ್ಲಾಸಗಳಿಗೂ ಸ್ವಪ್ರೀತಿಯುತವಾಗಿಯೂ 'ಪಿತೃಕೃತ' ವಾದುದಾದಾಗ ಉಂಟಾಗುವ ಅತಿಶಯವಾದ ಧರ್ಮರುಚಿರ ಆನಂದೋಲ್ಲಾಸಗಳಿಗೂ ಅಂತರವಿದೆ. ಅದು ಹೇಗಾದರೂ ಇರಲಿ ಕಣ್ವರ ಆ ಮಾತಿನಲ್ಲಿ ಏನರ್ಥವಿದೆಯೆಂದು ಈಗಲಾದರೂ ಕಾಣಬಹುದು.

ಯಾರು ಎಷ್ಟೆ ಹೇಳಲಿ ಶಕುಂತಲಾ ದುಷ್ಯಂತರ ಪ್ರಣಯ ಅಂದಿನ ನೀತಿಗೆ ಬದ್ಧವಾಗಿದ್ದಿದ್ದರೂ ಅದು ಸಕಾಲ ಪೂರ್ವವಾದುದು; ಗೋಪ್ಯವಾಗಿ ದುರ್ಬಲಗೊಂಡುದು; ಆದ್ದರಿಂದಲೆ ಅದಕ್ಕೆ ಶುದ್ಧಿ ಶಕ್ತಿಯನ್ನು, ಧೈರ್ಯವನ್ನು ಲೋಕಪೂಜ್ಯತೆಯನ್ನು ನೀಡಲೆಂದೆ ಶಾಪರಕ್ಷೆ ಒದಗಬೇಕಾಯಿತು. ಏನೋ ಅಮಂಗಳ ಒದಗುತ್ತದೆಂಬುದನ್ನು ಮುನ್‌ಕಂಡ ಕಣ್ವರಿಗೆ ಶಾಪ ವಿಶಾಪಗಳ ಘಟನಾಸೃಷ್ಟಿ ಕ್ರಿಯೆಯ ಸ್ಪಷ್ಟದರ್ಶನವಾಗಿರುತ್ತದೆ.*

ಶಾಪ ಒದಗದೆ ಇದ್ದಿದ್ದರೆ ಶಕುಂತಲೆಗೆ ಒದಗುತ್ತಿದ್ದ ಗತಿ ಸ್ವಯಂವೇದ್ಯವಾದುದು. ಒಂದು ವೇಳೆ ಆ ಅರಮನೆಯಲ್ಲಿ ನೆಲಸಿದ್ದರೂ ದುಷ್ಯಂತನಿಗೂ ಶಕುಂತಲೆಗೂ ಸಂಸ್ಕಾರಭೇದವಿದ್ದುದರಿಂದ ಅವರಲ್ಲಿ ಪೂರ್ಣ ಸಾಮರಸ್ಯ ಉಂಟಾಗುತ್ತಿರಲಿಲ್ಲ. ಶಕುಂತಲೆ ಬಹುಸುಂದರಿ, ಇತ್ಯಾದಿ ಎಂದೆಲ್ಲಾ ಮಾತನ್ನಾಡಿದರು ಆಕೆ ಕಾಡಹುಡುಗಿ ಎಂಬ ಭಾವ ದುಷ್ಯಂತನಲ್ಲಿ ಅವ್ಯಕ್ತವಾಗಿಯೆ ಇತ್ತು. ಎರಡನೆಯ ಅಂಕದಲ್ಲಿ ಮಾಧವ್ಯನಿಗೆ ಅವನಾಡುವ ಮಾತಿನಲ್ಲಿ ಆ ಗತ್ತಿದೆ. ಹಾಗೂ ಏಕಾಂತದಲ್ಲಿ ಶಕುಂತಲೆಯೊಡನಿದ್ದಾಗ ಅವನಾಡಿದ ಮಾತಿನಲ್ಲಿ—ಐದನೆ ಅಂಕದಲ್ಲಿ ಶಕುಂತಲೆ ವಿವರಿಸುವ ಘಟನೆಯಲ್ಲಿ—ಆ ಭಾವವಿದೆ. ಶಕುಂತಲೆ ದುಷ್ಯಂತರು ಏಕಾಂತದಲ್ಲಿದ್ದಾಗ ಜಿಂಕೆಯೊಂದು ಬರುತ್ತದೆ; ಅದನ್ನು ದುಷ್ಯಂತ ಕರೆದು ತಾವರೆಎಲೆಯ

* ಶ್ರೀ ಕುವೆಂಪು ಅವರ 'ತಪೋನಂದನ'ದಲ್ಲಿನ "ಕಾವ್ಯ ವಿಮರ್ಶೆಯಲ್ಲಿ ಪೂರ್ಣ ದೃಷ್ಟಿ" ಎಂಬ ಲೇಖನವನ್ನು ನೋಡಿ.

ಬಟ್ಟಲಲ್ಲಿ ನೀರನ್ನು ನೀಡಲು ಹೋದಾಗ ಅದು ಬರಲಿಲ್ಲ. ಶಕುಂತಲೆ ಕರೆದರೆ ಬರುತ್ತದೆ. ಅದನ್ನು ಕಂಡ ಅವನಾಡುವ ಮಾತಿದು: "ಸರ್ವಃ ಸಗಂಧೇಷು ವಿಶ್ವಸಿತಿ" ಎಂದು. 'ಸಂಗಧ' ಎನ್ನು ಮಾತು ಎಷ್ಟು ಅರ್ಥಪೂರ್ಣ, ವ್ಯಂಗ್ಯ. ಹರಿಣ ಹರಿಣಾಕ್ಷಿಯರು ಸಂಗಧರು, ಕಾಡುಮಕ್ಕಳು. ಆದ್ದರಿಂದಲೆ ಅವರಲ್ಲಿ ಪರಸ್ಪರ ವಿಶ್ವಾಸವಿದೆ. ತಾನೊ ನಾಗರಿಕ, ಆಕೆಯೊ ಜಿಂಕೆಯಂತೆ ಆರಣ್ಯಕಳು, ಸಂಗಧಳಲ್ಲ; ವಿಶ್ವಾಸವಿಲ್ಲ. ಹೀಗೆಂದು ಅರ್ಥವಾಗದೇನು?

ಆದ್ದರಿಂದಲೆ ಈ ಎಲ್ಲ ದೌರ್ಬಲ್ಯವನ್ನೂ ದುರ್ಗತಿಯನ್ನೂ ದೋಷವನ್ನೂ ತಿದ್ದಿ ಶುದ್ಧಿಗೊಳಿಸಲು ಶಾಪಬಂತು. ಅದಿಲ್ಲದಿದ್ದರೆ ನಾಟಕ ಸ್ವರೂಪವೇ ಬೇರಾಗುತ್ತಿತ್ತು. ತಮ್ಮ ದೋಷದಿಂದಲೆ ಆದ ಅಗಲಿಕೆಯನ್ನು ಆಮೇಲೆ ಇಬ್ಬರೂ ಸೇರಿದಾಗ ಶಾಪಕೃತವಾದುದೆಂದು ಭಾವಿಸಿ ಹಗುರವಾಗುತ್ತಾರೆ.* ಹೇಗಾದರೊ ಸರಿ, ಆಗುವ ಪರಿಣಾಮ ಆಗಿಯೆ ಆಯಿತು. ಶಸ್ತ್ರಚಿಕಿತ್ಸೆಗೆ ಅನೆಸ್ತೆಸಿಯ ಬರುವಂತೆ ಬಂತು ಶಾಪ.

---

*ಇಲ್ಲಿ ಒಂದು ಮಾತು ಹೇಳಬೇಕು. ಉಂಗುರ ದೊರೆತಮೇಲೇ ದುಷ್ಯಂತನಿಗೆ ಶಕುಂತಲೆಯ ನೆನಪು ಬಂದುದಾದರೂ ಕೂಡ ಅತನಿಗೆ ತಾನು ಆಕೆಯನ್ನು ಮತ್ತೆ ಪಡೆದೇನೆ, ಕೊನೆಗೆ ಕಂಡೇನೆ ಎಂಬ ದುರ್ಬಲ ಆಸೆ ಕೂಡ ಇರಲು ಸಾಧ್ಯವಿಗಲಿಲ್ಲ. ಆದರೆ ಶಕುಂತಲೆಗೆ ತಾನು ಎಂದಾದರೊ ತನ್ನ ಪತಿಯನ್ನು ಪಡೆದೇ ಪಣೆಯುವ ಧೈರ್ಯವಿತ್ತು. ಕಾರಣ, ಆಕೆಯಿದ್ದ ತಪೋವನದ ಕುಲಪತಿಗಳ ಅವ್ಯಕ್ತ ಆಶ್ವಾಸನೆ; ಮೇಲಾಗಿ ಸಾನುಮತಿಯ ವಾರ್ತಾಲಾಪ. ಸಾನುಮತಿಯ ಮೂಲಕ ಆಕೆಗೆ ತನ್ನ ಪತಿಗೆ ಅಗಿದ್ದ ವಿಸ್ಮೃತಿ, ಪುನಃಸ್ಮೃತಿ, ಹಾಗೂ ಆ ಮೂಲಕವಾದ ಅಗಾಧ ಪಶ್ಚಾತ್ತಾಪ ಎಲ್ಲವೂ ತಿಳಿದು ಅವಳಿಗೆ ಆ ಆಗಲಿಕೆಯ ನೋವು ಸ್ವಲ್ಪ ಹಗುರವಾಗಿತ್ತು. ಆದರೂ ಅವಳು ಸಂತೋಷವಾಗಿಲ್ಲದಿರುವುದಕ್ಕೆ ಕಾರಣವೇನು? ತನ್ನ ಪತಿಯನ್ನು ಮತ್ತೆ ಪಡೆದೇನೆ ಎಂಬ ಸಂಶಯವಲ್ಲ; ತನ್ನ ಪತಿ ತನ್ನನ್ನು ಅಂದು ಮರೆತುದಕ್ಕೆ ಅವನಿಂದು ಮರುಗುತ್ತಿಲ್ಲ ಎಂದಲ್ಲ. ಆದರೆ ಅವನು, ತನ್ನನ್ನು ಅಂದು ಅಷ್ಟು ಮೋಹಿಸಿ ನಂಬಿಸಿ ಪ್ರೀತಿಸಿದ ಅವನೂ, ಮರೆತನಲ್ಲ! ಅದಾವ ಕಾರಣದಿಂದ? ಯಾವ ಅಪೌರುಷೇಯ ಕಾರಣವೂ ಅವಳ ಅರಿವಿಗೆ ಬಾರದು. ತನ್ನ ಪತಿಯೆ ಕಾರಣವೆಂಬಂತೆ ಕಾಣುತ್ತದೆ. ಹಾಗಾಗಿ ದುಃಖ ಅತ್ಯಧಿಕವಾಗುತ್ತದೆ. ಅಂಥ ವಿಶ್ವಾಸಾರ್ಹವ್ಯಕ್ತಿಯೆ ಹಾಗೆ ಸುಳ್ಳಬಹುದೆ, ಮರೆಯಬಹುದೆ? ಮಾನುಷ ಪ್ರೀತಿಯೆಲ್ಲ ಇಷ್ಟೇ ಏನು? ಆ ಮಹಾವಿಷಾದ ವಿಸ್ಮಯದತ್ತ ಅವಳ ಚಿತ್ತ ಹರಿಯುತ್ತದೆ. ಹಾಗಾಗಿ ಅವಳು ಅಶಾಂತಳಾಗಿದ್ದಾಳೆ-ತಾನು ದುಷ್ಯಂತನನ್ನು ಪಡೆಯುವುದು, ಖಚಿತವಾಗಿ ತಿಳಿದೂ, ಹಾಗೂ ತನ್ನನ್ನು ಬಿಟ್ಟುದಕ್ಕಾಗಿ ಆತ ಪಶ್ಚಾತ್ತಾಪ ಪಡುತ್ತಿದ್ದಾನೆ ಎಂಬ ಹಿತಕರ ವೃತ್ತಾಂತವನ್ನೂ ತಿಳಿದು ಕೂಡ ಕೊನೆಯಲ್ಲಿ ಪುನಃ ಸಮಾಗಮವಾದಮೇಲೂ ಆ ಒಂದು ಅರೆಕರೆ ಅವಳ ಎದೆಯ ಆಳದಲ್ಲಿ ಉಳಿದುಕೊಂಡೆ ಉಳಿದುಕೊಂಡಿರುತ್ತಿತ್ತು. ಹಾಗಾಗಿದ್ದರೆ ಏನಾಗುತ್ತಿತ್ತು? ರೋಗ ವಾಸಿಯಾಯಿತು. ಆದರೆ ಔಷಧಿಯ ಕಹಿ, ಶಸ್ತ್ರಚಿಕಿತ್ಸೆಯ ಭೀಕರ ಪರಿಣಾಮ ಮಾಯದೆ ಉಳಿದುಕೊಂಡಿವೆ ಎಂಬಂತಾಗುತ್ತಿತ್ತು. ಆದರಿಂದಲೆ ಶಾಪದ ವೃತ್ತಾಂತ ಬಂತು. ಆದ ಘಟನೆಯೆಲ್ಲ ಅವ್ಯಕ್ತಿಕೃತವಲ್ಲ; ಶಾಪಕೃತವೆಂದು ತಿಳಿದಾಗ ಇಬ್ಬರಿಗೂ, ಆದರಲ್ಲೂ ಶಕುಂತಲೆಗೆ ಅಪಾರ ಉಲ್ಲಾಸ.

ಆದ್ದರಿಂದ ಉಂಗುರ ಈ ಪ್ರಣಯ ಪರಿಣಾಮದ ಸಂಕೇತವಾಗಿ ಪ್ರತಿಮೆಯಾಗಿ ರಾರಾಜಿಸುತ್ತದೆ. ನಾಟಕಕ್ಕೆ ಬರಿ 'ಅಭಿಜ್ಞಾನ' ಎಂದಷ್ಟೆ ಹೆಸರಿಟ್ಟಿದ್ದರೂ ಒಪ್ಪುತ್ತಿತ್ತು. ಅದಿರಲಿ, ಈ ನಾಟಕದಿಂದಾಗಿ ಧನ್ಯ ಕಾಳಿದಾಸ, ನಾವು ಧನ್ಯ !

ವಾನರೋऽಹಂ ಮಹಾಭಾಗೇ ದೂತೋ ರಾಮಸ್ಯ ಧೀಮತಃ
ರಾಮನಾಮಾಂಕಿತಂ ಚೇದಂ ಪಶ್ಯಂ ದೇವ್ಯಂಗುಲೀಯಕಂ ||

ಪ್ರತ್ಯಯಾರ್ಥಂ ತವಾನೀತಂ ತೇನ ದತ್ತಂ ಮಹಾತ್ಮನಾ
ಸಮಾಶ್ವಸಿಹಿ ಭದ್ರಂ ತೇ ಕ್ಷೀಣದುಃಖಫಲಾಹ್ಯಸಿ ||

ಗೃಹೀತ್ವಾ ಪ್ರೇಕ್ಷಮಾಣಾ ಸಾ ಭರ್ತುಃ ಕರವಿಭೂಷಣಂ
ಭರ್ತಾರಮಿವ ಸಂಪ್ರಾಪ್ತಂ ಜಾನಕೀ ಮುದಿತಾ ಭವತ್ ||

ಚಾರು ತದ್ವದನಂ ತಸ್ಯಾಸ್ ತಾಮ್ರಶುಕ್ಲಾಯತೇಕ್ಷಣಂ
ಬಭೂವ ಹರ್ಷೋದಗ್ರಂ ಚ ರಾಹು ಮುಕ್ತ ಇವೋಡುರಾಟ್ ||

ಶ್ರೀಮದ್ ವಾಲ್ಮೀಕಿ ರಾಮಾಯಣ, ಸುಂದರಕಾಂಡ: ಸರ್ಗ ೩೬–ಶ್ಲೋಕ ೨–೫.

ರಾಮನ ಬೆರಳನ್ನು ಶೋಭಿಸುತ್ತಿದ್ದು ಜನಕ ಪುತ್ರಿ ಸೀತೆಗೆ ಪರಿಚಿತವಾಗಿದ್ದ ಆ ರಾಮ ನಾಮಾಂಕಿತವಾದ ಉಂಗುರ ಹಳೆಯದೆ ಇದ್ದಿರಬೇಕು. ಕೆಲವು ವ್ಯಾಖ್ಯಾನಕಾರರು ಅದನ್ನು ಮಾವ ಜನಕನೆ ಕೊಟ್ಟುದು ಎಂದೂ ಕಲ್ಪಿಸಿದ್ದಾರೆ. ಅದೇನಾದರೂ ಸತ್ಯವಾದರೆ ಈ ಸನ್ನಿವೇಶದ ಅರ್ಥ ಮತ್ತೂ ಸ್ವಾರಸ್ಯಮಯವಾಗುತ್ತದೆ. ಹೇಗಾದರೂ ಆಗಲಿ, ಆ ಉಂಗುರಕ್ಕೆ ೧೪ ವರ್ಷಕ್ಕಿಂತ ಹೆಚ್ಚಾದರೂ ವಯಸ್ಸಾಗಿದ್ದಿರಬೇಕು.

ವಾಗರ್ಥಾವಿವ ಸಂಪೃಕ್ತೌ ವಾಗರ್ಥಪ್ರತಿಪತ್ತಯೇ ।
ಜಗತಃಪಿತರೌ ವಂದೇ ಪಾರ್ವತೀ ಪರಮೇಶ್ವರೌ ॥

—ರಘುವಂಶ.

ವಾಗರ್ಥದಂತನಿಶಮೊಡವೆರೆದು ಶೋಭಿಸುವ ಜಗದ ತಾಯ್‌ತಂದೆಯರನು
ಪಾರ್ವತೀಪರಮೇಶ್ವರರ್ಕಳನು ವಾಗರ್ಥದರಿವಿಗೆಂದೆರಗಿದಪೆನು.

—ಅನು: ಎಸ್. ವಿ. ಪರಮೇಶ್ವರ ಭಟ್ಟ.

ಕಮ್ಮಟದ ಕಿಡಿಗಳು

೪. ' **ಕಾರೋಹಣದ ಪಟ್ಟೆ** '

ಶ್ರೀಮತಿ-ವಜ್ರಜಂಘರ ವಿವಾಹಮಂಗಳದ ಒಸಗೆಯಲ್ಲಿ ವಧುವಿನ ತಾಯಿ ಲಕ್ಷ್ಮೀಮತಿ ಮಹಾದೇವಿಯೂ ವರನ ತಾಯಿ ವಸುಂಧರಾ ಸೌಂದರಿಯೂ ಪಟ್ಟಣದ ಸ್ತ್ರೀಸಮೂಹಕ್ಕೆ ಬಾಗಿನಗಳನ್ನು ಬೀರಿ ವಸ್ತ್ರದಾನ ಮಾಡಿದ್ದನ್ನು ವರ್ಣಿಸುತ್ತ ಪಂಪನು

" ಸಾಹಿಯಾಣದ (ಸುಯಿಯಾಣದ) ಚಿನ್ನದ (ಚೀನದ) ನವದಿದ ಭರ್ಮದ (ಧವಳ ವಟ್ಟದ) ಜೊಂಗದ ದೇವಾಂಗದ ಸಕಳಪಟ್ಟೆಗಳುಮಂ ಮೆಟ್ಟುವೆಡೆಗಳೊಳೆಲ್ಲಂ ಪಾಸಿ **ಕಾರೋಹಣದ** ಕಕ್ಕರವಟ್ಟೆಯಿಗೆಯ ಚಿತ್ರಾವಟ್ಟೆಯ ಪಟ್ಟೆಯ ತುಟ್ಟೆಯ (ಪಟ್ಟೆವೆಡೆಯ ತುಟ್ಟೆವೆಡೆಯ) ನೆಟ್ಟಲ ಪಾಣೆಯ ಬಣ್ಣದ ಕಣದ ಬಣ್ಣವಣ್ಣಿಗೆಯ ಜವಳಿಗಳನೆ ಮೊಗಂನೋಡಡೆ ಸೂಸಿದಾಗಳ್ " (೪–೩೪ ಗ)

ಎಂದು ಹಲವು ತೆರನಾದ ವಸ್ತ್ರಗಳ ಹೆಸರುಗಳನ್ನು ಹೇಳಿದ್ದಾನೆ. ಕೆಲವಕ್ಕೆ ಪಾಠಾಂತರಗಳಿವೆ. ಎಲ್ಲ ಹೆಸರುಗಳ ಸರಿಯಾದ ರೂಪಗಳನ್ನಾಗಲಿ ಅವುಗಳಿಂದ ನಿರ್ದಿಷ್ಟವಾಗಿರುವ ವಸ್ತುವಿಶೇಷವನ್ನಾಗಲಿ ಕಂಡು ಹಿಡಿಯುವುದು ಪ್ರಕೃತದ ಉದ್ದೇಶವಲ್ಲ. ' ಕಾರೋಹಣ ' ಎಂಬ ಒಂದು ಶಬ್ದಕ್ಕೆ ಮಾತ್ರ ಇಲ್ಲಿ ಟಿಪ್ಪಣಿಯನ್ನು ಬರೆದಿದೆ. ಈ ಶಬ್ದಕ್ಕೆ ಯಾವ ಪಾಠಾಂತರವೂ ಇಲ್ಲದಿರುವುದರಿಂದ ಇದರ ರೂಪವಿಚಾರದಲ್ಲಿ ಸಂಶಯಕ್ಕೆ ಎಡೆಯಿಲ್ಲವೆಂದು ಹೇಳಬಹುದು.

ಪಂಪನ ಹಾಗೆಯೇ ಶಾಂತಿನಾಥನು ತನ್ನ ' ಸುಕುಮಾರಚರಿತೆ ' ಯಲ್ಲಿ ಸುಕುಮಾರ ಸ್ವಾಮಿಯ ಮದುವೆಯನ್ನು ವರ್ಣನೆ ಮಾಡುವಾಗ ಅವನ ತಾಯಿ ಯಶೋಭದ್ರೆ ಮಾಡಿದ ವಸ್ತ್ರದಾನವನ್ನು

" ಜೊಂಗದ ನಾರಂಗದ ದೇ
ವಾಂಗದ ಪಲತೆಱದ ಸಕಳವಟ್ಟೆಗಳಂ ಗೇ
ಹಾಂಗಣದೊಳ್ ಮೆಟ್ಟುವ ತಾ
ಣಂಗಳೊಳೋರಂತೆ ಪಾಸಿ ತದನಂತರದೊಳ್ ||

ಬಿಡುಮುತ್ತಿನ ಪೇಱುಗಳಂ
ತಡೆಯದೆ ಕರ್ಪೂರದ ಪಿರಿಯ ಮಳವೆಗಳಂ ತಂ
ದಿಡು ಮಾಣಿಕ ಭಂಡಾರದ
ಪುಡಿಕೆಗಳಂ ಮಂಗಳಕ್ಕೆ ತಕ್ಕುಡುಕೆಗಳಂ ||

ಎಂದು **ಕಾಲೋಹಣದ** ಸಾಹಿಯಾಣದ ಚೀನದ ಮಹಾಚೀನದ ಪಟ್ಟೆಯ ಚಿತ್ರಾವಟ್ಟೆಯ ಪಟ್ಟಾವಟ್ಟೆಯ ಪಟ್ಟಸೂತ್ರದ ಚಿತ್ರಸೂತ್ರದ ನೇತ್ರವಟ್ಟಣಿಗೆಯ ಪುಟ್ಟಿಗೆಗಳನೊಟ್ಟೆ ಬೆಟ್ಟಾಗಿ ಪುಂಜಿಸಿ " (೧೦–೯೦, ೯೧, ಗ)

ಎಂದು ವರ್ಣಿಸಿದ್ದಾನೆ. ಶಾಂತಿನಾಥನು ಪಂಪನನ್ನು ಎಷ್ಟರಮಟ್ಟಿಗೆ ಅನುಕರಿಸಿದ್ದಾನೆಂಬ ವಿಷಯ ಎರಡು ವರ್ಣನೆಗಳನ್ನೂ ಹೋಲಿಸಿ ನೋಡಿದರೆ ಸ್ಪಷ್ಟವಾಗಿ ತಿಳಿಯುತ್ತದೆ. ಇಬ್ಬರೂ ಒಂದೇ ತೆರನಾದ ವಸ್ತ್ರನಾಮಗಳನ್ನು ಹೇಳಿದ್ದಾರೆ. ಕೆಲವನ್ನು ಶಾಂತಿನಾಥನು ಹೆಚ್ಚಾಗಿ ಸೇರಿಸಿದ್ದಾನೆ. 'ಕಾರೋಹಣ' ಶಬ್ದದ ಇನ್ನೊಂದು ರೂಪ 'ಕಾಲೋಹಣ' ಎಂದಿತ್ತೆಂದು ಇದರಿಂದ ತಿಳಿಯುತ್ತದೆ. ಇದರ ಅರ್ಥವೇನೆಂದು ವಿಚಾರಮಾಡಬೇಕಾಗಿದೆ.

ಕೆಲವು ವಸ್ತುಗಳಿಗೆ ಅವು ಎಲ್ಲಿ ಸಮೃದ್ಧವಾಗಿ ಬೆಳೆಯುತ್ತವೊ, ಎಲ್ಲಿ ಅವು ತಯಾರಾಗುತ್ತವೋ ಆ ಊರಿನ ಅಥವಾ ಪ್ರದೇಶದ ಹೆಸರು ಅವುಗಳ ವೈಶಿಷ್ಟ್ಯವನ್ನು ತೋರಿಸುವುದಕ್ಕಾಗಿ ಅವುಗಳ ಜೊತೆಯಲ್ಲಿ ಬರುವುದು ರೂಢಿಯಲ್ಲಿದೆ. "ನೆಲವತ್ತಿಯಡಕೆಯ ಪೋಟ್ಗಳುಮಂ" ಎಂಬುದು ಒಂದು ಉದಾಹರಣೆ.೧ ನೆಲವತ್ತಿಯಲ್ಲಿ ಬೆಳೆದ ಅಡಕೆಯ ಹೋಳುಗಳು ಎಂದು ಇದರ ಅರ್ಥ. ನೆಲವತ್ತಿ ಶಿವಮೊಗ್ಗೆಗೆ ಸಮೀಪದಲ್ಲಿದ್ದ ಒಂದು ಊರಿನ ಹೆಸರಾಗಿತ್ತು.೨ ಆ ಊರಿನ ಅಡಕೆ 'ವಡ್ಡಾರಾಧನೆ' ರಚಿತವಾದ ಕಾಲದಲ್ಲಿ ಪ್ರಸಿದ್ಧವಾಗಿತ್ತೆಂದು ತೋರುತ್ತದೆ. 'ಜೋನೆಗವಟಿ' ಎಂಬುದು ಮತ್ತೊಂದು ಉದಾಹರಣೆ. ಇದು ಒಂದು ವಸ್ತ್ರ ವಿಶೇಷದ ಹೆಸರು. ಈ ಶಬ್ದವನ್ನು ಕಿಟ್ಟೆಲ್ ಅವರು ತಮ್ಮ ಕನ್ನಡ ಕೋಶದಲ್ಲಿ ಗುರುತಿಸಿ ಅದಕ್ಕೆ Turkish Cloth ಎಂದು ಅರ್ಥವನ್ನು ಹೇಳಿದ್ದಾರೆ. ಈ ಪದದ ಮೊದಲ ಭಾಗ 'ಜೋನೆಗ' ಎಂಬುದು 'ಯವನಕ' ಎಂಬುದರ ತದ್ಭವವೆಂದೂ An Indian, a Turk, an Arab (ತುರುಕ, ತುರುಷ್ಕ, ಯವನ) ಎಂದು ಅದರ ಅರ್ಥವೆಂದೂ 'ಮಂಗರಾಜ ನಿಘಂಟು'ವಿನ ಆಧಾರದ ಮೇಲೆ ಹೇಳಿ ತಮಿಳು ಮಲಯಾಳಗಳಲ್ಲಿ ಜೋನಗ, ತೆಲುಗಿನಲ್ಲಿ ಜೋನಂಗಿ ಎಂಬ ಸಮಾನ ಶಬ್ದಗಳಿರುವುದನ್ನೂ ತಿಳಿಸಿದ್ದಾರೆ. ಯವನದೇಶದಲ್ಲಿ ತಯಾರಾದ ಬಟ್ಟೆಗೆ 'ಜೋನೆಗವಟಿ' ಎಂಬ ಹೆಸರನ್ನು ಕನ್ನಡಿಗರು ಕೊಟ್ಟಿದ್ದರೆಂದು ವಿಶದವಾಗಿದೆ. ಹೀಗೆಯೇ 'ಕಾರೋಹಣ' ಎಂಬುದೂ ಒಂದು ಊರಿನ ಅಥವಾ ಪ್ರದೇಶದ ಹೆಸರಾಗಿರಬಹುದು.

ಪಾಶುಪತ ಧರ್ಮದ ಸ್ಥಾಪಕನಾದ ಲಕುಲೀಶನು ಶಿವನ ಅವತಾರವೆಂದೂ ಅವನು ಲಾಟದೇಶದ ಕಾರೋಹಣದಲ್ಲಿ ವಾಸಮಾಡುತ್ತಿದ್ದನೆಂದೂ ಚಿಂತ್ರ ಪ್ರಶಸ್ತಿ

---

೧. ವಡ್ಡಾರಾಧನೆ ೭೮–೨೩.

೨. "ನೆಲ್ಲವತ್ತಿಯ ಜಿನಭವನಂ ಋತುವಿಮಾನಮುಂ ಪೋಲ್ತಿರ್ಕುಂ"; ಆ ನೆಲವತ್ತಿಯ ತಟ್ಟಿಯ ಕೆಱೆಯೆರಡೂ ಬಸದಿಯುಮಂ.E.C. VII, Part I, Shimoga 10.

ಯೆಂಬ ಹೆಸರಿನ ಒಂದು ಶಾಸನದಿಂದ ತಿಳಿದು ಬರುತ್ತದೆ[೩]. ಕಾಯಾವತಾರ ಅಥವಾ ಕಾಯಾವರೋಹಣ ಎಂಬ ಊರಿನ ಶ್ಮಶಾನದಲ್ಲಿದ್ದ ಹೆಣದ ಮೈಯಲ್ಲಿ ಶಿವನು ಪ್ರವೇಶಿಸಿ ಲಕುಲೀಶನಾದನೆಂದೂ ಆ ಊರಿಗೆ ಇಂದಿನ ಹೆಸರು 'ಕರ್ವಾನ್' ಎಂದೂ ತಿಳಿದು ಬರುತ್ತದೆ.[೪] ಆದ್ದರಿಂದ 'ಕಾರೋಹಣದ ಪಟಿ' ಎಂದರೆ ಕಾರೋಹಣವೆಂಬ ಊರಿನಲ್ಲಿ ತಯಾರಾದ ವಸ್ತ್ರವೆಂಬ ಅರ್ಥವನ್ನು ಹೇಳಬಹುದು.

ಲಾಟದೇಶ ಕನ್ನಡಿಗರಿಗೆ ಅಪರಿಚಿತವಾದ ಪ್ರದೇಶವಾಗಿರಲಿಲ್ಲ. ರಾಷ್ಟ್ರಕೂಟ ಮುಮ್ಮಡಿ ಕೃಷ್ಣನ ಕಾಲದಲ್ಲಿ, ಎಂದರೆ ಪಂಪನ ಕಾಲದಲ್ಲಿ, ಆ ಚಕ್ರವರ್ತಿಯ ಸಾಮ್ರಾಜ್ಯದ ಉತ್ತರ ಸೀಮಾಪ್ರದೇಶದಲ್ಲಿ ಘೂರ್ಜರ ಲಾಟದೇಶಗಳಿದ್ದುವು. ಕನ್ನಡ ಸೈನಿಕರ ಪ್ರತಾಪದ ಸೆಕೆ ಆ ದೇಶಗಳಿಗೆ ತಟ್ಟಿತ್ತು. ತನ್ನ ಪೋಷಕ ಇಮ್ಮಡಿ ಅರಿಕೇಸರಿಯ ತಂದೆ ನರಸಿಂಹನು ಲಾಟದೇಶದ ಮೇಲೆ ದಂಡೆತ್ತಿ ಹೋಗಿದ್ದನೆಂದು ಪಂಪನು ಹೇಳಿದ್ದಾನೆ. "ತಱಿಸಂದು ಲಾಟರೊಳ್ ತಳ್ತಱಿದೇಱಿಂ ಪೇೞಿ ಕೇಳ್ವ ಮಂಡಲಮಿನ್ನುಂ ತಿಱುನೀರಿಕ್ಕುವುದು" ಎಂಬ ಪದ್ಯವನ್ನು ನೆನೆದುಕೊಳ್ಳಬಹುದು[೫]. ಆದ್ದರಿಂದ ಕಾರೋಹಣ ಎಂಬ ಊರಿನ ಹೆಸರೂ ಅಲ್ಲಿ ನೇಯುತ್ತಿದ್ದ ವಸ್ತ್ರಗಳೂ ಪಂಪನ ಕಾಲದ ಕನ್ನಡಿಗರಿಗೆ ಚಿರಪರಿಚಿತವಾಗಿದ್ದುವೆಂಬುದರಲ್ಲಿ ಅಚ್ಚರಿಯೇನೂ ಇಲ್ಲ. ಆ ಬಟ್ಟೆಗಳ ಮಾರಾಟ ಕನ್ನಡ ನಾಡಿನಲ್ಲಿ ನಡೆಯುತ್ತಿದ್ದಿರಬೇಕು.

—ಡಿ. ಎಲ್. ಎನ್.

---

೩. There is another inscription usually called the Cintra Prasasti which states that Siva became incarnate in the form of Bhattaraka Lakulisa and dwelt at Karohana in the Lata country" R. G. Bhandarkar, Collected works IV–p. 168.

೪. Siva entered a dead body in the cremation ground of Kāyāvatāra or Kāyāvarōhaṇa (modern Karwan in the Kathiawar peninsula) as Lakulisa who wrote a work called Panchartha Vidyā". K. A. Nilakantha Sastry, Comprehensive History of India, Vol. I, p. 397–398.

೫. ಪಂಪಭಾರತ: ೧–೩೩.

ಕನ್ಮ್ರಟದ ಕಿಡಿಗಳು ೫

ಕನ್ನಡದ ಆಡುಮಾತಿನಲ್ಲಿ ಬಳಕೆಯಾಗುವ ಈ ಇಪ್ಪತ್ತೈದು ಪದಗಳನ್ನು ನೋಡಿ: ಕಲಾಯಿ, ಬಜಾರು, ಸಲಾಮು, ಸವಾರಿ, ಸಮಾಧಿ; ಗಲೀಜು, ಸಲೀಸು, ರಸೀತಿ, ಅವಿಾನ, ಬನೀನು; ಪಿತೂರಿ, ಮಜೂರಿ, ಕಸೂತಿ, ಬೆಲೂನು, ಕುರೂಪಿ; ಕಚೇರಿ, ಜಿಲೇಬಿ, ವಿವೇಕ, ವಿಶೇಷ, ನಿಷೇಕ; ಪಕೋಡ, ದರೋಡೆ, ಚಿರೋಟಿ, ಪರೋಟಿ, ಸರೋಡು. ಈ ಪದಗಳಿಗೆಲ್ಲಾ ಸಾಮಾನ್ಯವಾದ ಅಂಶವೆಂದರೆ, ಇವುಗಳ ವರ್ಣವಿನ್ಯಾಸ. (ವ್ಯಂಜನ)-ಹ್ರಸ್ವಸ್ವರ-ವ್ಯಂಜನ–ದೀರ್ಘಸ್ವರ-ವ್ಯಂಜನ-ಹ್ರಸ್ವಸ್ವರ–ಈ ವರ್ಣವಿನ್ಯಾಸವುಳ್ಳ ಪದಗಳು ಕನ್ನಡದ ಆಡುಮಾತಿನಲ್ಲಿ ಸಾಕಷ್ಟು ದೊರೆಯುತ್ತವೆ; ಎರಡನೆಯ ಸ್ವರ ಆ ಆಗಿರುವ ಪದಗಳು ಹೆಚ್ಚು ಸಂಖ್ಯೆಯಲ್ಲೂ, ಎರಡನೆಯ ಸ್ವರ ಓ ಆಗಿರುವ ಪದಗಳು ಕಡಿಮೆ ಸಂಖ್ಯೆಯಲ್ಲೂ ದೊರೆಯುತ್ತವೆ.

ಮೇಲೆ ಕೊಟ್ಟಿರುವ ಪದಗಳಿಗೆಲ್ಲಾ ಸಾಮಾನ್ಯವಾದ ಮತ್ತೊಂದು ಅಂಶವೆಂದರೆ, ಅವುಗಳೆಲ್ಲಾ ಎರವಲು ಪದಗಳು; ಹಿಂದೂಸ್ತಾನಿ, ಇಂಗ್ಲೀಷು, ಸಂಸ್ಕೃತ ಮುಂತಾದ ಭಾಷೆಗಳಿಂದ ಕನ್ನಡ ಎರವಲು ಪಡೆದ ಪದಗಳು.

ಈ ಎರಡು ಸಾಮಾನ್ಯಾಂಶಗಳಿಗೂ ಏನಾದರೂ ಸಂಬಂಧವುಂಟೇ? ಎಂದರೆ, ಮೇಲೆ ಸೂಚಿಸಿದ ವರ್ಣವಿನ್ಯಾಸವುಳ್ಳ ಕನ್ನಡ ಪದಗಳೆಲ್ಲಾ ಎರವಲು ಎಂದು ಖಚಿತವಾಗಿ ಹೇಳಬಹುದೇ? ಈ ರೀತಿಯ ಪದಗಳನ್ನೆಲ್ಲಾ ಒಟ್ಟು ಹಾಕಿ ನೋಡಿದಾಗ, ಅವುಗಳಲ್ಲಿ ಬಹು ಪಾಲು ಎರವಲು ಎಂಬುದು ಸಿದ್ಧವಾಗುತ್ತದೆ. ಈ ಮಾತಿನ ತಥ್ಯತೆಯನ್ನು ಈ ಟಿಪ್ಪಣಿಯ ಓದುಗರೇ ನಿರ್ಧರಿಸಿಕೊಳ್ಳಬಹುದು. ಈ ಮಾತಿಗೆ ಅಪವಾದವಾಗಿ ಕಾಣುವ ಕೆಲವು ಪದಗಳಲ್ಲಿ ಬೇರೆಯೇನಾದರೂ ವಿಶೇಷಾಂಶವಿದ್ದು, ಅದರ ದೃಷ್ಟಿಯಿಂದ ಮೇಲೆ ಸೂಚಿಸಿದ 'ನಿಯಮ'ವನ್ನು ಮಾರ್ಪಡಿಸಿ, ಅದನ್ನು ಮತ್ತಷ್ಟು ನಿಷ್ಕೃಷ್ಟಗೊಳಿಸುವುದು ಸಾಧ್ಯವೇ ನೋಡೋಣ.

ಈ ಉದಾಹರಣೆಗಳನ್ನು ನೋಡಿ: ಮರಾನ, ಬರೀತು, ಕುಡೀತು, ನಡೀತು, ತಲೇಲಿ, ಒಲೇಲಿ, ಕೊನೇಲಿ, ಹೊಸೂರು, ಕರೂದು ಇತ್ಯಾದಿ. ಈ ಪದಗಳ ವರ್ಣವಿನ್ಯಾಸಕ್ಕೂ ಮೊದಲಿನಲ್ಲಿ ಕೊಟ್ಟ ಪದಗಳ ವರ್ಣವಿನ್ಯಾಸಕ್ಕೂ ವ್ಯತ್ಯಾಸ ವೇನೂ ಇಲ್ಲ. ಆದರೆ ಈ ಪದಗಳು ಅಚ್ಚಗನ್ನಡ ಪದಗಳು. ಹಾಗಾದರೆ, ಮೇಲೆ ಹೇಳಿದ 'ನಿಯಮ'ವೇ ತಪ್ಪೇ? ಅಥವಾ ಬೇರೆ ಯಾವುದಾದರೂ ಮುಖ್ಯಾಂಶ ನಮ್ಮ ಗಮನಕ್ಕೆ ಬಂದಿಲ್ಲವೇ?

ಮೊದಲ ಪಟ್ಟಿಯಲ್ಲಿ ಕೊಟ್ಟ ಪದಗಳು ಅಖಂಡವಾದ ಪದಗಳು (ಕನ್ನಡದ ದೃಷ್ಟಿಯಿಂದ). ಅವುಗಳನ್ನು ಬೇರೆ ಬೇರೆ ಪ್ರಕೃತಿಗಳಾಗಿಯಾಗಲಿ, ಪ್ರಕೃತಿ ಪ್ರತ್ಯಯಗಳಾಗಿಯಾಗಲಿ ಒಡೆಯಲು ಸಾಧ್ಯವಿಲ್ಲ. ಎರಡನೆಯ ಪಟ್ಟಿಯಲ್ಲಿ ಕೊಟ್ಟ

ಪದಗಳನ್ನು ಹಾಗೆ ಒಡೆಯಲು ಸಾಧ್ಯ. ಆದುದರಿಂದ, ನಮ್ಮ 'ನಿಯಮ' ದಲ್ಲಿ ಈ ಅಖಂಡತೆಯ ಅಂಶವನ್ನೂ ಸೇರಿಸಿದರೆ, ಅದು ಉಳಿದುಕೊಳ್ಳಬಹುದೆಂದು ತೋರುತ್ತದೆ. ಎಂದರೆ, ಕನ್ನಡದ ಆಡುಮಾತಿನಲ್ಲಿ ಬಳಕೆಯಾಗುವ, ಮೂರಕ್ಷರದ ಪದಗಳಲ್ಲಿ (trisyllabic words) ಮಧ್ಯಾಕ್ಷರದ ಸ್ವರ ಮಾತ್ರ ದೀರ್ಘವಾಗಿದ್ದು, ಅವುಗಳು ಅಖಂಡವೂ ಆಗಿದ್ದರೆ, ಅಂಥ ಪದಗಳನ್ನು ಎರವಲು ಎಂದು ಹೇಳಬಹುದು. ಈ 'ನಿಯಮ' ವನ್ನು ಮೀರುವ ಕನ್ನಡ ಪದಗಳು ಇವೆಯೇ? ಇದ್ದರೆ, ಈ 'ನಿಯಮ' ವನ್ನು ಮತ್ತಷ್ಟು ನಿಷ್ಕೃಷ್ಟಗೊಳಿಸಲು ಸಾಧ್ಯವಿದೆಯೇ ಅಥವಾ ಸಾಧ್ಯವಿಲ್ಲವೇ? ಕನ್ನಡ ಭಾಷಾವಿಜ್ಞಾನದಲ್ಲಿ ನುರಿತ ವಿದ್ವಾಂಸರು ದಯವಿಟ್ಟು ಉತ್ತರಕೊಡಬೇಕು.

(ಈ 'ನಿಯಮ'ವನ್ನು ಮತ್ತೊಂದು ರೀತಿಯಲ್ಲಿ ಬದಲಾಯಿಸಬಹುದೇನೋ. ಕೇವಲ ಹೊಸಗನ್ನಡ ಗ್ರಾಂಥಿಕ ಭಾಷೆಗೆ ಮಾತ್ರ ಅದನ್ನು ಅನ್ವಯಿಸಿದರೆ, ಆಗ ಎರಡನೆಯ ಪಟ್ಟಿಯ ಪದಗಳೇ ಇರುವುದಿಲ್ಲ! ಮೂರಕ್ಷರದ ಪದವಾಗಿದ್ದು, ಮಧ್ಯಾಕ್ಷರದ ಸ್ವರ ಮಾತ್ರ ದೀರ್ಘವಾಗಿದ್ದರೆ ಸಾಕು, ಅಖಂಡವಾಗಿರಲಿ ಖಂಡವಾಗಿರಲಿ, ಅಂಥ ಪದಗಳು ಎರವಲು ಎಂದು ಹೇಳಬಹುದೇನೋ! ಆದರೆ ಈ ದಿಕ್ಕಿನಲ್ಲಿ ಯೋಚನೆಯನ್ನು ಹರಿಯಬಿಡುವುದು ಈ ಟಿಪ್ಪಣಿಕಾರನ ಉದ್ದೇಶವಲ್ಲ. ಕೇವಲ ಆಡುಮಾತಿಗೆ ಅನ್ವಯಿಸುವ 'ನಿಯಮ'ಗಳನ್ನು ಕುರಿತದ್ದು ಈ ಟಿಪ್ಪಣಿ.)

ಮುಂದಿನ ಮಾತುಗಳನ್ನು ಬರೆಯುವ ಮುನ್ನ, ಒಂದು ಸ್ಪಷ್ಟೀಕರಣ ಅಗತ್ಯ. ಮೇಲೆ ಹೇಳಿದ ವರ್ಣವಿನ್ಯಾಸವುಳ್ಳ ಅಖಂಡಪದಗಳೆಲ್ಲಾ ಎರವಲು ಎಂದರೆ, ಆ ವರ್ಣವಿನ್ಯಾಸವಿಲ್ಲದ ಪದಗಳೊಂದೂ ಎರವಲಲ್ಲ ಎಂದಾಗಲಿ, ಕನ್ನಡದಲ್ಲಿ ಕಂಡುಬರುವ ಎರವಲು ಪದಗಳೆಲ್ಲಾ ಇದೇ ರೀತಿಯ ವರ್ಣವಿನ್ಯಾಸ ಪಡೆದಿವೆಯೆಂದಾಗಲಿ ಅರ್ಥವಲ್ಲ.

ಮೇಲೆ ಪ್ರತಿಪಾದಿಸಿದ 'ನಿಯಮ' ದಂಥ ಬೇರೆ 'ನಿಯಮ' ಗಳನ್ನು ಮಾಡಲು ಸಾಧ್ಯವೇ? ಬೇರೆ ರೀತಿಯ ವರ್ಣವಿನ್ಯಾಸವುಳ್ಳ ಎರವಲು ಪದಗಳಿಗೂ ಅನ್ವಯಿಸುವ 'ನಿಯಮ' ಗಳಿವೆಯೇ? ಅಂಥ ಕೆಲವು 'ನಿಯಮ' ಗಳ ದಿಗ್ದರ್ಶನವನ್ನು ಮಾತ್ರ ಇಲ್ಲಿ ಕೊಡಬಹುದು.

(1) ಕನ್ನಡದ ಆಡುಮಾತಿನಲ್ಲಿ ಬಳಕೆಯಾಗುವ ಪದಗಳು (ಕನ್ನಡದ ದೃಷ್ಟಿಯಿಂದ)ಅಖಂಡವೂ 'ಜಗಣ' ವಿನ್ಯಾಸವನ್ನು ಪಡೆದವೂ ಆಗಿದ್ದರೆ ಅವುಗಳು ಎರವಲು ಎಂದು ಹೇಳಬಹುದು. ಉದಾ: ಪ್ರಸಂಗ, ಕನಿಷ್ಠ, ಇತ್ಯಾದಿ. ಮರಕ್ಕೆ, ಅದಕ್ಕೆ ಎಂಬವುಗಳು ಅಖಂಡವಲ್ಲ, ಆದುದರಿಂದ ಈ 'ನಿಯಮ' ಅವುಗಳಿಗೆ ಅನ್ವಯಿಸುವುದಿಲ್ಲ. ಮೇಲೆ ಹೇಳಿದ 'ನಿಯಮ' ವನ್ನೂ ಇದು ಒಳಗೊಳ್ಳುತ್ತದೆ.

(2) 'ಜಗಣ' ವಿನ್ಯಾಸವುಳ್ಳ ಪದಗಳಲ್ಲಿ ಮಧ್ಯಾಕ್ಷರವು ದೀರ್ಘಸ್ವರ

ಸಹಿತವಾಗಿದ್ದು ವ್ಯಂಜನಾಂತವಾಗಿದ್ದರೆ (closed syllable), ಅಂಥ ಪದಗಳು, ಅಖಂಡವಾಗಿರಲಿ, ಇಲ್ಲದಿರಲಿ, ಎರವಲು ಎಂದು ಹೇಳಬಹುದು.

ಉದಾ: ಜಮಾವ್ಣೆ, ಚುನಾವ್ಣೆ, ಬಡಾವ್ಣೆ, ಇತ್ಯಾದಿ.

(3) ಕನ್ನಡದ ಆಡುಮಾತಿನಲ್ಲಿ ಬಳಕೆಯಾಗುವ ನಾಲ್ಕು ಅಕ್ಷರಗಳ ಪದಗಳಲ್ಲಿ ಮೊದಲನೆಯ ಅಕ್ಷರ ಲಘುವಾಗಿದ್ದು, ಎರಡನೆಯ ಅಕ್ಷರ ಗುರುವಾಗಿದ್ದರೆ, ಅಂಥ ಪದಗಳೆಲ್ಲಾ ಎರವಲು ಎಂದು ಹೇಳಬಹುದು. ಉದಾ: ಕಲಾಪತ್ತು, ಕಳೇಬರ, ತಿರಸ್ಕಾರ, ಅಹಂಕಾರ, ಸರಂಜಾಮು, ಅಮಲ್ದಾರ, ಇತ್ಯಾದಿ.

ಕನ್ನಡ ಪದಗಳ ರಚನೆಯ (Structure) ಆಧಾರದಿಂದಲೇ, ಎರವಲು ಪದಗಳನ್ನು ಕಂಡು ಹಿಡಿಯಲು ಯತ್ನಿಸುವ ಮೇಲಿನ ಊಹೆಗಳಲ್ಲಿ ಏನಾದರೂ ತಥ್ಯಾಂಶಗಳಿವೆಯೇ? ಈ ದಿಕ್ಕಿನಲ್ಲಿ ಮುಂದುವರಿದರೆ ಒಂದೆರಡು 'ನಿಯಮ'ಗಳನ್ನಾದರೂ ಕಂಡುಹಿಡಿಯಲು ಸಾಧ್ಯವೇ? ವಿದ್ವಾಂಸರು ದಯವಿಟ್ಟು ತಿಳಿಸಬೇಕು.

—ಬಿಳಿಗಿರಿ.

ಕಾವ್ಯಾವಲೋಕನ

ಹಂಪೆಯ ಹರಿಹರದೇವ ವಿರಚಿತ ಶತಕದ್ವಯ: ಸಂ. ಪಂಡಿತ ಶ್ರೀ ಸ. ಹಾ. ಶಿವಮೂರ್ತಿ ಸ್ವಾಮಿಗಳು; ಮಾರಾಟಗಾರರು, ಮ. ಪರಮೇಶ್ವರಯ್ಯ ಸಹೋದರರು ಹಿರೇಮಠ, ಬಾಳಗಲ' ಎಸ್ಟೇಟ್', ಮತಿಘಟ್ಟ (ಕಡೂರು ತಾಲ್ಲೂಕು): ಡೆಮ್ಮಿ ಅಕ್ಟೇವೊ, ಪು. ೪+Lvi+೧೦೭; ಬೆಲೆ, ರೂ. ೨. ೫೦.

ಈ ಗ್ರಂಥದಲ್ಲಿ ಹರಿಹರನ ರಕ್ಷಾಶತಕ, ಪಂಪಾಶತಕ ಮತ್ತು ಸಂಸಾರ ವ್ಯಾಮೋಹ ನಿರಸನರಗಳೆ ಎಂಬ ಕೃತಿಗಳಿವೆ. ಸಂಪಾದಕರಾದ ಶ್ರಿ. ಸ. ಹಾ. ಶಿವಮೂರ್ತಿ ಸ್ವಾಮಿಗಳು ೬೧ ಪುಟಗಳಷ್ಟು ದೀರ್ಘ ಪೀಠಿಕೆಯನ್ನು ಬರೆದಿರುತ್ತಾರೆ.

ಹರಿಹರನ ಕೃತಿಗಳು ಮೇಲಿಂದ ಮೇಲೆ ಮುದ್ರಣವಾಗುತ್ತಿರುವುದು ಸಂತೋಷದ ಸಂಗತಿಯೇ ಸರಿ. ಸಂಪಾದಕರು ಸೂಚಿಸಿರುವಂತೆ ರಕ್ಷಾಶತಕ ಮತ್ತು ಪಂಪಾಶತಕಗಳು ಈಗಾಗಲೇ ಎರಡು ಬಾರಿ ಪ್ರಕಟವಾಗಿರುತ್ತವೆ. ಆ ಹಿಂದಿನ ಮುದ್ರಣದ ಪ್ರತಿಗಳನ್ನೂ, ತಮಗೆ ದೊರೆತ ಓಲೆಯ ಪ್ರತಿಯೊಂದನ್ನೂ ಅವಲಂಬಿಸಿ ಈಗಿನ ಮುದ್ರಣದ ಪ್ರತಿಯನ್ನು ಸಿದ್ಧಪಡಿಸಿರುತ್ತಾರೆ. ಈ ರೀತಿಯಾದ ಸಂಸ್ಕರಣದ ಕಾರ್ಯವನ್ನು ಕೈಕೊಳ್ಳುವಾಗ ಕೆಲವು ನಿಯಮಗಳನ್ನು ಗಮನಿಸ ಬೇಕಾಗುತ್ತದೆ. ಸಾಧ್ಯವಾದಷ್ಟು ಮಟ್ಟಿಗೆ ಹಳೆಯದೂ ಉತ್ತಮವೂ ಆದ ಪ್ರತಿಯನ್ನು ಆಧಾರವಾಗಿಟ್ಟುಕೊಂಡು, ಉಳಿದ ಪ್ರತಿಗಳ ಪಾಠಾಂತರಗಳನ್ನು ಸೂಚಿಸಬೇಕು. ಪ್ರಕೃತದಲ್ಲಿ ಸಂಪಾದಕರು ತಮ್ಮ ಓಲೆಯ ಪ್ರತಿಯೇ "ಹೆಚ್ಚು ಶುದ್ಧವಾಗಿ ಕಂಡುಬಂದಿತು" ಎಂದು ಹೇಳಿರುತ್ತಾರೆ. ಇದಕ್ಕೆ ಕಾರಣವೇನು ಎಂಬುದನ್ನೂ, ಇತರ ಪ್ರತಿಗಳ ಕೊರತೆಗಳೇನು ಎಂಬುದನ್ನೂ ಪರಿಚಯಮಾಡಿ ಕೊಡಬೇಕಾಗಿತ್ತು. ಸಾಲದ್ದಕ್ಕೆ "ಕೆಲವು ಸ್ಥಳದಲ್ಲಿ ೧ ನೆಯ ಪ್ರತಿಯಲ್ಲಿರುವ (ಓಲೆಯ ಪ್ರತಿ) ಪಾಠವೇ ಶುದ್ಧವೆಂದು ಕಂಡಾಗ, ಅನುಚಿತವಾಗಿ ಕಾಣುವ ಇತರ ಪ್ರತಿಗಳ ಪಾಠ ಭೇದವನ್ನು ನಿರ್ದೇಶಿಸಿಲ್ಲ (ಪೀಠಿಕೆ. ಪು. ೨)" ಎಂದು ಹೇಳಿರುತ್ತಾರೆ. ಈ ಕ್ರಮ ಅಷ್ಟೇನೂ ಸೂಕ್ತವಾದುದಲ್ಲ. ಆದಷ್ಟು ಮಟ್ಟಿಗೆ ಪಾಠಾಂತರ ಗಳನ್ನು ಸೂಚಿಸುವುದು ಲೇಸು. ಕಡೆಯದಾಗಿ, ಪಾಠಾಂತರಗಳನ್ನು ಸೂಚಿಸು ವಾಗ ಪ್ರತಿಗಳ ಸಂಕೇತಗಳನ್ನೇ ಗುರುತಿಸದಿರುವುದು ಸೋಜಿಗವಾಗಿದೆ. ಈ ರೀತಿ, ನಮ್ಮ ಎದುರಿನಲ್ಲಿರುವುದು ಪರಿಷ್ಕರಣಗೊಂಡ ಹರಿಹರನ ರಚನೆಯನ್ನುವುದಕ್ಕಿಂತ, ಸಂಪಾದಕರು ಶ್ರಮ ವಹಿಸಿ ದೊರೆಕಿಸಿಕೊಟ್ಟಿರುವ ಮತ್ತೊಂದು ಪ್ರತಿ ಎಂದು ಭಾವಿಸಬಹುದು.

ಸಂಪಾದಕರು ತಮ್ಮ ಸುದೀರ್ಘವಾದ ಪೀಠಿಕೆಯಲ್ಲಿ ಕವಿಯ ಪರಿಚಯ, ಕಾಲ ನಿರ್ಣಯ, ಮೂರು ಕೃತಿಗಳ ವಿಷಯ ಸಂಗ್ರಹ, ಶತಕಗಳಲ್ಲಿರುವ ಮತತತ್ತ್ವ ನಿರೂಪಣೆ ಮತ್ತು ವಿಮರ್ಶೆಗಳನ್ನು ಕೊಟ್ಟಿರುತ್ತಾರೆ. ಈ ಸಂದರ್ಭದಲ್ಲಿ ಹಲವಾರು

ಅಂಶಗಳು ಮನನೀಯವೂ ವಿಚಾರಣೀಯವೂ ಆಗಿವೆ. ಇಲ್ಲಿ ಕೆಲವನ್ನು ಮಾತ್ರ ಪರಿಶೀಲಿಸಬಹುದು. ಹರಿಹರನನ್ನು ಕುರಿತು, "ಹರಿದೇವನು ಸತ್ಕವೀಶ್ವರ, ಈ ಬಿರುದು ಅಕ್ಷರಶಃ ಅವನಿಗೆ ಸಲ್ಲುವಂತೆ ಅನ್ವರ್ಥವಾಗುವಂತೆ, ಇನ್ನುಳಿದ ಕನ್ನಡ ಕವಿಗಳಿಗೆ ಶೋಭಿಸಲಾರದು; ಸಾರ್ಥಕವೂ ಆಗಲಾರದು (ಪೀಠಿಕೆ, ಪು. iii)" ಎಂದು ಅಭಿಪ್ರಾಯ ಪಟ್ಟಿರುತ್ತಾರೆ. ಹರಿಹರನ ಬಗ್ಗೆ ಯಾವ ಕನ್ನಡಿಗನೇ ಆಗಲಿ ಹೆಮ್ಮೆ ಪಡಬೇಕಾದುದೇ ಸರಿ. ಎಂದ ಮಾತ್ರಕ್ಕೆ ಈ ಬಗ್ಗೆ ಯಾರೂ ಅಂಧಾಭಿಮಾನಿಗಳಾಗಬೇಕಾಗಿಲ್ಲ. ನಮ್ಮ ಸಾಹಿತ್ಯದಲ್ಲಿ ಹೆಸರು ಹೇಳಬಹುದಾದ ಕವಿಗಳ ಸಂಖ್ಯೆ ಅತಿಯಾಗಿಲ್ಲದಿದ್ದರೂ ಸಾಕಷ್ಟು ಇವೆ ಎಂದು ಹೇಳಲು ಹಿಂದೆಗೆಯ ಬೇಕಾಗಿಲ್ಲ. ಕೇವಲ ಸಾಹಿತ್ಯದ ದೃಷ್ಟಿಯಿಂದ ಸತ್ಕವೀಶ್ವರರನ್ನು ಗಣಿಸುವಾಗ ಪಂಪ, ಕುಮಾರವ್ಯಾಸರನ್ನು ನೆನೆಯದಿರಲು ಸಾಧ್ಯವಾದೀತೆ? ಆದ್ದರಿಂದ, ಸಂಪಾದಕರ ಮೇಲಿನ ಹೇಳಿಕೆ ಅತಿಶಯೋಕ್ತಿಯಾಯಿತೆಂದು ನಮ್ಮ ಅಭಿಪ್ರಾಯ.

ಕಾಲ ನಿರ್ಣಯವನ್ನು ವಿಚಾರಿಸುವಲ್ಲಿ ಶ್ರೀಯುತರು ಸಾಕಷ್ಟು ವಿವರ ಗಳನ್ನು ಸಂಗ್ರಹಿಸಿಲ್ಲವೆನ್ನಿಸುತ್ತದೆ. ಹರಿಹರನ ಬಗ್ಗೆ ಇತರ ವಿದ್ವಾಂಸರ ಅಭಿ ಪ್ರಾಯಗಳನ್ನು ಸಂಕ್ಷಿಪ್ತವಾಗಿಯಾದರೂ ಸೂಚಿಸಿ, ಬಳಿಕ ತಮ್ಮ ನಿಲುವನ್ನು ವ್ಯಕ್ತಪಡಿಸಿದ್ದರೆ ಚೆನ್ನಾಗಿರುತ್ತಿತ್ತು. ಅವುಗಳನ್ನು ಅನಾವಶ್ಯಕವೆಂದು ಕೈಬಿಟ್ಟು, ಉದ್ಭಟ ಕಾವ್ಯದ ಕರ್ತೃವಾದ ಸೋಮರಾಜನ ಹೇಳಿಕೆಯೊಂದನ್ನೇ ಆಧಾರ ವಾಗಿಟ್ಟುಕೊಂಡು ಹರಿಹರನ ಕಾಲ ನಿರ್ಣಯವನ್ನು ಮಾಡತೊಡಗಿರುತ್ತಾರೆ. ಸೋಮರಾಜನ ಕಾಲದ ಬಗ್ಗೆಯೇ ಭಿನ್ನಾಭಿಪ್ರಾಯಗಳು ಇರಬೇಕಾದರೆ ಇದೊಂದನ್ನೇ ಬಲವಾಗಿ ನೆಚ್ಚುವುದು ಸಮಂಜಸವಾಗಲಾರದು. "ನೂಱಿಂ ಸಂದ" ಎನ್ನುವುದನ್ನು ಸಪ್ತಮ್ಯರ್ಥದ ತೃತೀಯೆಯಾಗಿ ಗ್ರಹಿಸಬೇಕೆಂದು ಶ್ರೀಯುತರು ಹೇಳಿರುತ್ತಾರೆ. (ಪೀಠಿಕೆ, v). ತಮ್ಮ ಅಭಿಪ್ರಾಯ ಸಮರ್ಥನೆಗಾಗಿ ಕೊಟ್ಟಿರುವ ಕೇಶಿರಾಜನ "ಶಬ್ದಮಣಿ ದರ್ಪಣ"ದ ಉದಾಹರಣೆಗಳಾದರೋ ತೃತೀಯಾರ್ಥದ ಸಪ್ತಮೀಪ್ರಯೋಗಗಳಾಗುವುವೇ ವಿನಾ ಸಪ್ತಮ್ಯರ್ಥದ ತೃತೀಯೆ ಯಾಗುವುದಿಲ್ಲ. ಕೇಶಿರಾಜನು ಸಪ್ತಮ್ಯರ್ಥದಲ್ಲಿ ಷಷ್ಠಿ ಮತ್ತು ಚತುರ್ಥಿಗಳನ್ನು ಸೂಚಿಸಿರುವನೇ ಹೊರತು ತೃತೀಯೆಯನ್ನು ಕೊಟ್ಟಿಲ್ಲ. ಆದ್ದರಿಂದ, ಸೋಮರಾಜನ ಪ್ರಯೋಗದಲ್ಲಿ ವ್ಯಾಕರಣದ ಕ್ಲೇಶ ಬಗೆ ಹರಿಯದಂತಾಗಿ ನಿಲ್ಲುತ್ತದೆ. ಶ್ರೀಯುತರು ಕೊಟ್ಟಿರುವ ಇತರ ಆಂತರಿಕ ಕಾರಣಗಳೂ ಚರ್ಚಾಸ್ಪದವಾದುವು. ಉದಾಹರಣೆಗೆ, ಸೋಮರಾಜನು ತನ್ನ ಕಾವ್ಯವನ್ನು "ಅಲ್ಲಮಂಗರ್ಪಿತಂ" ಎಂದು ಹೇಳಿರುವುದರಿಂದ, ಆತನು ಅಲ್ಲಮನ "ಸಮ ಸಾಮೀಪ್ಯ ಕಾಲ" ದವನಿರ ಬೇಕೆಂಬ ಊಹೆ ದೃಢವಾಗಲಾರದು. ಇಷ್ಟ ದೇವತೆಯನ್ನಾಗಲಿ, ಪೂರ್ವ ಕವಿಗಳನ್ನಾಗಲಿ ಸ್ತುತಿಸುವಂತೆ ಕವಿಯು ತನ್ನ ಇಷ್ಟ ಗುರುವನ್ನು ನೆನೆಯಲು ಆತನು ತೀರ ಸಮೀಪಕಾಲದವನೇ ಆಗಬೇಕಾಗಿಲ್ಲ. ಅದರಲ್ಲಿಯೂ ಪ್ರಭು

ದೇವರನ್ನು ಸ್ಮರಿಸುವುದಕ್ಕೆ ಈ ನಿರ್ಬಂಧದ ಅಗತ್ಯವಿಲ್ಲ. ಆದ್ದರಿಂದ, ಡಾ|| ರಂ. ಶ್ರೀ. ಮುಗಳಿ ಅವರು, ತಮ್ಮ "ಕನ್ನಡ ಸಾಹಿತ್ಯ ಚರಿತ್ರೆ" ಯಲ್ಲಿ ಸೂಚಿಸಿರುವಂತೆ "ಹರಿಹರನ ಕಾಲವಿಚಾರದಲ್ಲಿ ವಾದಗ್ರಸ್ತವಾದ ಸೋಮರಾಜನ ಕಾಲವನ್ನು ಗಣನೆಗೆ ತೆಗೆದುಕೊಳ್ಳದೆ ಇರುವುದು ಒಳ್ಳೆಯದು (ಮೊದಲನೆಯ ಮುದ್ರಣ, ಪು. ೧೪೪)."

ಸಂಪಾದಕರು ಪಂಪಾಶತಕವು ಬಸವೇಶ್ವರನು ಪ್ರಾಶಸ್ತ್ಯಕ್ಕೆ ಬರುವುದಕ್ಕಿಂತ ಮುಂಚೆ ಬರೆದುದಾಗಿರಬೇಕೆಂದೂ, ಅದರಲ್ಲಿ ನೂತನರ ಹೆಸರನ್ನು ಉಲ್ಲೇಖಿಸದಿರುವುದೇ ಇದಕ್ಕೆ ನಿದರ್ಶನವೆಂದೂ ಭಾವಿಸಿರುತ್ತಾರೆ. (ಪೀಠಿಕೆ, ಪು. ix). ಈ ಅಭಿಪ್ರಾಯವೂ ಸಹ ವಿಚಾರ ಯೋಗ್ಯವಾದುದು. ಹರಿಹರನ ಕಥಾ ನಿರೂಪಣೆಗಳಲ್ಲಿ ಕಂಡುಬರುವ ಕುತೂಹಲ ಜನಕವಾದ ಬದಲಾವಣೆಗಳಂತೆಯೇ ಇದೂ ಸಹ ವಿಸ್ಮಯಕಾರಿಯಾಗಿದೆ. ಪಂಪಾಶತಕ ಮತ್ತು ರಕ್ಷಾ ಶತಕಗಳು ಬಹುಮಟ್ಟಿಗೆ ಅವನ ಪ್ರಾರಂಭದ ಕೃತಿಗಳಾಗಿರಬೇಕೆಂದು ತೋರಿಬರುವುದರಿಂದ ಆತನ ದೃಷ್ಟಿ ವಾಸ್ತವಿಕವಾಗಿ ಕೇವಲ ಪುರಾತನರ ಕಡೆಗೆ ಹರಿದಿರಬಹುದು. ಅವನ ಶೈಲಿ ಪರಿಪಕ್ವವಾದಂತೆಲ್ಲ ನೂತನರ ಕ್ರಾಂತಿ ಜೀವನದ ಕಡೆಗೆ ಒಲಿದಿದ್ದಿರಬಹುದು. ಆತನ ರಗಳೆಗಳನ್ನು ಪರಿಶೀಲಿಸಿದರೆ ಈ ಮಾರ್ಪಾಟು ವ್ಯಕ್ತವಾಗುತ್ತದೆ. ಆದ್ದರಿಂದ, ಸಂಪಾದಕರು ಎಣಿಸಿರುವಂತೆ ಹೀಗಾಗಲು ಕಾಲಗಣನೆವೊಂದೇ ಪ್ರಧಾನವಾಗಲಾರದು. ಏಕಾಂತ ರಾಮಯ್ಯನ ಜೀವನವನ್ನು ಕುರಿತು ಬರೆದಿರುವ ಹರಿಹರನು ಆ ಶಿವಶರಣನಿಂದೀಚೆಗೆ ಇದ್ದಿರಬೇಕೆಂಬ ಶ್ರೀ. ಡಿ. ಎಲ್. ನರಸಿಂಹಾಚಾರ್ಯರ ಸೂಚನೆ ಗ್ರಾಹ್ಯವಾಗಿದೆ (ಹಂಪೆಯ ಹರಿಹರ, ಪ್ರಚಾರ ಪುಸ್ತಕ ಮಾಲೆ, ೭, ಮೊದಲನೆಯ ಮುದ್ರಣ, ಪು. ೬೫-೬೬). ಈ ಶಿವಭಕ್ತನನ್ನು ಸನ್ಮಾನಿಸಿದ ಪ್ರಸಂಗವೊಂದು ಅಬ್ಲಲೂರಿನ ಶಾಸನದಲ್ಲಿ ಉಕ್ತವಾಗಿರುವುದರಿಂದ, ಆ ಶಾಸನದ ಕಾಲವಾದ ಕ್ರಿ. ಶ. ಸು. ೧೧೯೫ ನ್ನು ಹರಿಹರನ ಕಾಲನಿರ್ಣಯಕ್ಕೆ ಒಂದು ಗಡುವನ್ನಾಗಿ ಇಟ್ಟುಕೊಳ್ಳಬಹುದು. ಸಂಪಾದಕರು ಎಣಿಸಿರುವಂತೆ ಇದು ಹರಿಹರನ ಜೀವನದ ಪರಮಾವಧಿ ಎಂದು ಹೇಳುವುದು ಕಷ್ಟ. ಹರಿಹರನ ಬಗ್ಗೆ ಇನ್ನೂ ಚರ್ಚೆ ಸಾಗುತ್ತಲೇ ಇದೆ. ಅಗೆದಷ್ಟೂ ಅದು ಆಳವಾಗುತ್ತಿದೆ. ನೆಲೆ ಸಿಗುವತನಕ ಒಬ್ಬೊಬ್ಬರ ಪ್ರಯತ್ನವೂ ಪ್ರಶಂಸನೀಯವಾದುದೇ ಸರಿ. ಈ ದೃಷ್ಟಿಯಿಂದ ಪ್ರಕೃತ ಸಂಪಾದಕರ ಈ ವಿಚಾರ ಧಾರೆಯನ್ನು ಸಂತೋಷವಾಗಿ ಸ್ವಾಗತಿಸಬಹುದು.

ಶ್ರೀಯುತರು ರಕ್ಷಾಶತಕ, ಪಂಪಾಶತಕ ಮತ್ತು ಸಂಸಾರ ವ್ಯಾಮೋಹ ನಿರಸನ ರಗಳೆಗಳನ್ನು ಅವಲಂಬಿಸಿ ಹರಿಹರನ ಜೀವನವನ್ನು ಚಿತ್ರಿಸಲು ಮಾಡಿರುವ ಪ್ರಯತ್ನವು ಮೆಚ್ಚತಕ್ಕುದಾಗಿದೆ. ಹರಿಹರನ ರಗಳೆಗಳು ಆತನ ಆತ್ಮ ಚರಿತ್ರೆಯೇ ವಿನಾ ಪರೋಪದೇಶಕ್ಕಾಗಿ ನಿರ್ಮಿತವಾದ ರಚನೆಗಳಲ್ಲ ಎಂಬ ಅಭಿಪ್ರಾಯವು ಒಪ್ಪತಕ್ಕದ್ದು. ಎಲ್ಲಕ್ಕಿಂತಲೂ ಹೆಚ್ಚಾಗಿ, ಶ್ರೀಯುತರು ಹರಿಹರನ ಶತಕಗಳಲ್ಲಿ

ಕಂಡುಬರುವ ಕೆಲವು ಪದ್ಯಗಳನ್ನು ಆರಿಸಿಕೊಂಡು ಅವುಗಳಲ್ಲಿ ಅಡಕವಾಗಿರುವ ತತ್ತ್ವಾಂಶಗಳನ್ನು ವಿವರಿಸಿರುವ ಕಾರ್ಯ ತುಂಬ ಉಪಯುಕ್ತವಾಗಿದೆ. ಈ ದಿಶೆಯಲ್ಲಿ ಸಂಪಾದಕರು ತೋರಿಸಿರುವ ಪಾಂಡಿತ್ಯ ಶ್ಲಾಘನೀಯವಾದದ್ದು.

ಶತಕಗಳನ್ನು ಸಂಸ್ಕರಿಸುವಾಗ ಮತ್ತೊಂದು ಮುಖ್ಯಾಂಶವನ್ನು ಈ ವರೆಗಿನ ಸಂಪಾದಕರೆಲ್ಲರೂ ಕೈಬಿಟ್ಟಿರುವುದು ಕಂಡುಬರುತ್ತದೆ. ಹರಿಹರನು ಉದಾಹರಿಸಿರುವ ಶಿವಭಕ್ತರ ಜೀವನ ಚರಿತ್ರೆಗಳನ್ನು ಸಂಗ್ರಹವಾಗಿ ಕೊಡುವುದು ಅತ್ಯಗತ್ಯವೆನ್ನಿಸುತ್ತದೆ. ಶಿವಶರಣರ ಜೀವನ ಮಹತ್ವವನ್ನು ಸಂಕ್ಷಿಪ್ತವಾಗಿ ತಿಳಿಸುವ ಒಂದು ಕೋಶದ ರಚನೆ ಆಗಬೇಕಾಗಿದೆ.

ಇನ್ನು ಶತಕಗಳಲ್ಲಿ ಕಂಡುಬರುವ ಪಾಠಗಳನ್ನು ಕುರಿತು ಒಂದೆರಡು ಮಾತುಗಳನ್ನು ಹೇಳಬಹುದು. ಹರಿಹರನು ಶಕಟರೇಫ (ಱ) ಮತ್ತು ರಳಕಾರ (ೞ)ಗಳಲ್ಲಿ ಯಾವು ಯಾವುದನ್ನು ಬಳಸಿದ್ದನೆಂಬ ಪ್ರಶ್ನೆಯೊಂದು ಪ್ರಕೃತ ಸಂಪಾದಕರಿಗೆ ಉಂಟಾಗಿದೆ. ತಾವು ನೋಡಿರುವ ಪ್ರತಿಯಲ್ಲಿ ಈ ಎರಡೂ ಇದ್ದದ್ದರಿಂದ ಅವುಗಳನ್ನು ಕವಿಯೇ ಬಳಸಿರಬಹುದೆಂದೆಣಿಸಿ ಇಟ್ಟುಕೊಂಡಿರುತ್ತಾರೆ. ಹರಿಹರನು ಶಕಟರೇಫ ಪ್ರಯೋಗದ ಬಗ್ಗೆ ಏನನ್ನೂ ಹೇಳದಿದ್ದರೂ "ೞ" ಕಾರವನ್ನು ತಾನೇ ಕಂಠೋಕ್ತವಾಗಿ ಖಂಡಿಸಿರುವ "ಗಿರಿಜಾಕಲ್ಯಾಣ"ದ ಪದ್ಯವಂತೂ ಸುಪ್ರಸಿದ್ಧವಾಗಿದೆ. ಶತಕಗಳನ್ನು "ಗಿರಿಜಾಕಲ್ಯಾಣ"ಕ್ಕಿಂತಲೂ ಮುಂಚೆಯೇ ಬರೆದಿರಬಹುದಾದ್ದರಿಂದ, ಈ ಕೃತಿಗಳಲ್ಲಿ ಅವನು ಈ ವರ್ಣಗಳನ್ನು ಏಕೆ ಬಳಸಿರಬಾರದೆಂಬ ಪ್ರಶ್ನೆ ಉಂಟಾಗಬಹುದು. ಆದರೆ, ಇದರ ನಿರ್ಣಯವೇನೂ ಅಷ್ಟು ತೊಡಕಾದುದಲ್ಲ. ರಕ್ಷಾಶತಕದಲ್ಲಿ ಪದ್ಯ ೩೪ ಮತ್ತು ೪೯ ರಲ್ಲಿಯೂ, ಪಂಪಾಶತಕದಲ್ಲಿ ಪದ್ಯ ೨, ೪೧ ಮತ್ತು ೯೭ ರಲ್ಲಿಯೂ "ೞ" ಕಾರವು ಪ್ರಾಸಸ್ಥಾನದಲ್ಲಿ ಬರುತ್ತದೆ. ಈ ಎಡೆಗಳಲ್ಲಿ ಎಲ್ಲಿಯೂ ಅದು ಶುದ್ಧವಾಗಿಲ್ಲ. ಕುಳ ಮತ್ತು ಕ್ಷಳಾಕ್ಷರಗಳೊಂದಿಗೆ ಬೆರೆತು ಬರುತ್ತವೆ. ಈ ಒಂದು ವಿಲಕ್ಷಣದ ಆಧಾರದ ಮೇಲೆಯೇ ಇದು ಕವಿ ಪ್ರಯೋಗವಲ್ಲವೆಂದೂ, ಪ್ರತಿಕಾರರ ಕೈವಾಡವೆಂದೂ ಗೊತ್ತಾಗುತ್ತದೆ.

ಶಕಟರೇಫಪ್ರಾಸ ಘಟಿತವಾದ ಪದ್ಯಗಳಲ್ಲಿ ಸಂದೇಹಕ್ಕೆ ಅವಕಾಶವಿಲ್ಲದಿದ್ದರೂ, ಪ್ರಕೃತ ಮುದ್ರಣದಲ್ಲಿ ಒಂದೆರಡು ಪಾಠಗಳು ಶಂಕಾಸ್ಪದವಾಗಿವೆ.

ರಕ್ಷಾಶತಕದ ೩೨ ನೆಯ ಪದ್ಯ ಹೀಗಿದೆ:—

> ಎರವೀ ದೇಹಂ ಹಿರಣ್ಯಂ ಪುದು ಸತಿ ಪಗೆ ವಾಳಿಷ್ಟಶೌಪಾಧಿಕರ್
> ಪೆಱರೆಲ್ಲರ್ ವೈರಿಗಳ್.....

ಧಾರವಾಡದ ಮುದ್ರಣದ ಪ್ರತಿಯಲ್ಲಿ ಈ ಸಾಲುಗಳು ಹೀಗಿವೆ:—

> ಎರವೀ ದೇಹಂ ಹಿರಣ್ಯಂ ಪುದು ಸತಿಪಗೆಯಾತ್ಮೇಷ್ಟಶೌಪಾಧಿಕರ್ ಸೋ
> ದರರೆಲ್ಲಂ ವೈರಿಗಳ್..,..

ಮೇಲ್ಕಂಡ ಸಂದರ್ಭದಲ್ಲಿ ಶಕಟರೇಫಕ್ಕಿಂತಲೂ ಸಾಮಾನ್ಯ ರೇಫವೇ ಸಾಧು ವಾದುದು. ಇಂತೆಯೇ ಸಂಪಾದಕರು ರಕ್ಷಾಶತಕದ ೩೯ ನೆಯ ಪದ್ಯದಲ್ಲಿ "ಮಱೆ ವೊಕ್ಕೆಂ" ಎಂಬುದನ್ನು "ಮರೆ ವೊಕ್ಕೆಂ" ಎಂದು ತಿದ್ದಿರುತ್ತಾರೆ. (ಮರೆಗೊಳ್= ಆಶ್ರಯಿಸು ಎಂದು ಶಬ್ದಕೋಶದಲ್ಲಿಯೂ ಒಂದೆಡೆ ಇದೆ. ಪು. ೯೭) ಅದು ಆಶ್ರಯ ಎಂಬ ಅರ್ಥದಲ್ಲಿ "ಮಱೆ ವೊಕ್ಕೆಂ" ಎಂದೇ ಇರಬೇಕು. ರಕ್ಷಾಶತಕದ ೮೩ ನೆಯ ಪದ್ಯದ ಪ್ರಾಸಸ್ಥಾನದಲ್ಲಿ "ಒಱೆ" ಎಂಬ ಶಬ್ದ ಪ್ರಯೋಗವು ವ್ಯಾಕರಣದ ದೃಷ್ಟಿಯಿಂದ ಅಸಾಧುವಾಗುವುದಲ್ಲದೆ, ಅರ್ಥದ ದೃಷ್ಟಿಯಿಂದಲೂ ಉಚಿತ ವಾಗುವುದಿಲ್ಲ. ಅದು "ಒರೆ=ಹೇಳು" ಎಂದು ಇರಬೇಕು. (ಧಾರವಾಡದ ಮುದ್ರಣದಲ್ಲಿ ಸರಿಯಾಗಿದೆ.)

ಪಂಪಾಶತಕದ ೮೬ ನೆಯ ಪದ್ಯದ ಕಡೆಯ ಎರಡು ಸಾಲುಗಳಲ್ಲಿ ಶಕಟರೇಫದ ಒಂದು ಸಮಸ್ಯೆ ಹೀಗಿದೆ:—

> ....ಪುರಾತನರ್ |
> ಪರಿದುದೆ ಗಂಗೆ ನಿಂದುದೆ ಸುತೀರ್ಥಮೊಡರ್ಚಿದುದೇ ಸುಕಾರ್ಯ ಮಿಂ |
> ನ್ನಱಿಯಪಱಿರ್ದುದೇ ಸಭೆ ನಿರೀಕ್ಷಣೆಗೆಯ್ದುದೆ ಲೋಕ ಪಾವನಂ॥

ಇದೇ ಪಾಠವನ್ನು ಶ್ರೀ. ರಾಮಾನುಜ್ಯಯಂಗಾರ್ಯರೂ ಸ್ವೀಕರಿಸಿರುತ್ತಾರೆ. ಧಾರವಾಡದ ಮುದ್ರಣದಲ್ಲಿ ಈ ಪಂಕ್ತಿಗಳು ಹೀಗಿವೆ:—

> ....ಪುರಾತನರ್
> ಪರಿದುದೆ ಗಂಗೆ ನಿಂದೊಡದು ತೀರ್ಥಮೊಡರ್ಚಿತೆ ಕಾರ್ಯ ಮೆಂದುದೇ
> ಹರವರಿಯಿರ್ದುದೇ ಸಭೆ ನಿರೀಕ್ಷಣೆಗೆಯ್ದುದೇ ಲೋಕಪಾವನಂ ॥

ಎರಡನೆಯ ಪಾಠವನ್ನು ಸ್ವೀಕರಿಸಿದರೆ ಶಕಟರೇಫದ ದೋಷ ಪರಿಹಾರವೇನೋ ಆಗುವುದು. "ಹರವರಿ" ಎಂಬುದರ ಅರ್ಥವನ್ನು ಕಿಟ್ಟೆಲ್ ಅವರು ಹೇಳುವ ಪ್ರಕಟ ಎಂದು ಇಟ್ಟುಕೊಂಡು ಪ್ರಯಾಸದಿಂದ ಅನ್ವಯಿಸಕೊಳ್ಳಬೇಕಾಗುತ್ತದೆ. (ಧಾರವಾಡದ ಮುದ್ರಣದಲ್ಲಿ ಇದಕ್ಕೆ ಅರ್ಥವನ್ನು ಸೂಚಿಸಿಲ್ಲ.) (ಇದು ಅರಿದು= ಅಸಾಧ್ಯ ಎಂಬ ಅರ್ಥದಲ್ಲಿ ಅರಿದವರ್ ಎಂದು ಇರಬಹುದೆ?)

ಪಂಪಾಶತಕದ ೭೩ ನೆಯ ಪದ್ಯದ ಪ್ರಾಸಸ್ಥಾನದಲ್ಲಿ ಸಂಪಾದಕರು ಮತ್ತೆ "ಅಱ" ಎಂಬುದನ್ನು ಸ್ವೀಕರಿಸಿರುತ್ತಾರೆ. (ರಾಮಾನುಜ್ಯಯಂಗಾರ್ಯರ ಮುದ್ರಣ ದಲ್ಲಿಯೂ ಹೀಗೆಯೇ ಇದೆ.) ಧಾರವಾಡದ ಮುದ್ರಣದಲ್ಲಿ "ಇರದಿರದೆ" ಎಂದು ಕಂಡುಬರುತ್ತದೆ. ೭೬ ನೆಯ ಪದ್ಯವೊಂದು ಈ ದೃಷ್ಟಿಯಿಂದ ಗಮನಾರ್ಹವಾಗಿದೆ.

> ಆರುತುಮರ್ಚಿಸುಬ್ಬರಿಸುತರ್ಚಿಸು ಮತ್ತೊಲೆಯುತ್ತು ಮರ್ಚಿಸಿಂ
> ಪೇಱುತುಮರ್ಚಿಸುನ್ನತಿಯೊಳರ್ಚಿಸು ಕೊರ್ವುತುಮರ್ಚಿಸೆಲ್ಲರೊಳ್
> ಸೇರುತುಮರ್ಚಿಸೀ ಜನನಮಂ ಪಡೆದಲ್ಲಿ ಮನುಷ್ಯ ಏನುಮಂ
> ಥಾರದರ್ಚಿಸೆಮ್ಮ ಕಡುಸೊಂಪಿನ ಪೆಂಪಿನ ಹಂಪೆಯಾಳ್ದನಂ.

ಶ್ರೀ. ರಾಮಾನುಜಯ್ಯಂಗಾರ್ ಮತ್ತು ಧಾರವಾಡದ ಮುದ್ರಣಗಳಲ್ಲಿ ನಾಲ್ಕು ಪಾದಗಳಲ್ಲಿಯೂ 'ಱ' ಕಾರವನ್ನೇ ಬಳಸಲಾಗಿದೆ. (ಧಾರವಾಡದ ಮುದ್ರಣದಲ್ಲಿ ೩ ನೆಯ ಪಾದದಲ್ಲಿ "ಸೇರು" ಎನ್ನುವುದಕ್ಕೆ ಬದಲಾಗಿ "ಪೋಱು" ಎಂದಿದೆ.) ಪ್ರಕೃತದಲ್ಲಿ ಅರ್ಥದ ದೃಷ್ಟಿಯಿಂದ ನೋಡಿದ್ದೇ ಆದರೆ, "ಆರು=ಗರ್ಜಿಸು", "ಸೇರು=ಕೂಡು", "ಪಾರು=ನೋಡು" ಎಂಬುವುಗಳು ಸೂಕ್ತವಾಗಿ ತೋರುತ್ತದೆ. ಇಲ್ಲದಿದ್ದಲ್ಲಿ "ಸೇಱು" ಮತ್ತು "ಪಾಱು" ಎಂಬ ಶಬ್ದಗಳಿಗೆ ಸಮಯೋಚಿತವಾಗಿ ಅರ್ಥವನ್ನು ಅನ್ವಯಿಸುವುದು ಕಷ್ಟವಾದೀತು. ಈ ಪದ್ಯವು ರೇಫ ಪ್ರಾಸವನ್ನು ಒಳಗೊಂಡಿದ್ದೇ ಆದರೆ "ಇಂಪೇಱು" ಎಂಬ ಪ್ರಯೋಗಕ್ಕೆ ಸಮಾಧಾನ ಹೇಳುವುದು ಹೇಗೆ? ಈ ಪದ್ಯದ ಕ್ಲೇಷವು ಬೇರಾವುದಾದರೂ ಒಂದು ಪ್ರತಿ ಸಿಗುವವರೆಗೆ ಅಪರಿಹಾರ್ಯವಾಗಿ ಉಳಿಯುತ್ತದೆ.

ಸಂಪಾದಕರು ಪ್ರತಿ ಪದಾರ್ಥವನ್ನು ನಿಶ್ಚಯಿಸಿರುವಲ್ಲಿ ಅನೇಕ ಎಡೆಗಳಲ್ಲಿ ಭಿನ್ನಾಭಿಪ್ರಾಯಕ್ಕೆ ಅವಕಾಶವಿದೆ. ಒಂದೆರಡು ಉದಾಹರಣೆಗಳನ್ನು ಮಾತ್ರ ಇಲ್ಲಿ ಗಮನಿಸಬಹುದು. "ಅಱಿಯಟ್ಟು" ಎಂಬ ಸಮಸ್ತ ಪದವನ್ನು ಅಱಿ=ಸ್ವರೂಪವನ್ನು ನೀಗು, ಅಟ್ಟು=ಹಿಂಬಾಲಿಸು ಎಂದು ಬಿಡಿಸಿ ಹೇಳುವುದಕ್ಕಿಂತಲೂ (ಪು. ೫೧), ಕಿಟ್ಟೆಲ್ ಸೂಚಿಸಿರುವಂತೆ ಅಱಿಯಟ್ಟು=ಬಡಿದಟ್ಟು, ಹಿಂದಟ್ಟು ಎಂದು ಇಡಿಯಾಗಿ ತೆಗೆದುಕೊಳ್ಳುವುದೇ ಲೇಸು. "ಬೇಳಾಗಿ=ಸಮೃದ್ಧಿ ಆಗದಿರಲಾಗಿ (ಪು. ೫೨)" ಎಂಬ ಅರ್ಥಕ್ಕಿಂತಲೂ ಪ್ರಕೃತದಲ್ಲಿ ದಿಗ್ಭ್ರಾಂತ ಎಂಬುದೇ ಸೂಕ್ತವಾಗಿದೆ. "ಎಟ್ಟಿ=ಉಂಟಾಗಿ (ಪು. ೬೭)" ಎಂದು ಹೇಳುವುದಕ್ಕಿಂತಲೂ, "ಎದ್ದು" ಎಂಬ ನೇರವಾದ ಅರ್ಥವೇ ಇಲ್ಲಿ ಒಪ್ಪುವಂತಿದೆ. "ಸಾಲ್ವುದು (ಪು. ೯೩)" ಎಂಬುದಕ್ಕೆ "ಸಾಲರೂಪದ ಹಣ" ಎಂಬ ಅರ್ಥ ಇಲ್ಲಿ ಸಮ್ಮತವಾಗಲಾರದು. "ಇದೊಂದೆ ಸಾಲ್ವುದು ದಿಟಂ ನಾಮಂ ವಿರೂಪಾಕ್ಷನಾ" ಎಂಬ ವಾಕ್ಯದಲ್ಲಿ "ಸತ್ಯವಾಗಿಯೂ ವಿರೂಪಾಕ್ಷನ ಹೆಸರೊಂದೇ ಸಾಕು" ಎಂದು ಹೇಳಿದರೆ ಕವಿಯ ಉದ್ದೇಶಕ್ಕೆ ಏನೂ ಭಂಗಬರಲಾರದು. ಈ ರೀತಿ, ಅರ್ಥ ನಿರ್ಣಯದಲ್ಲಿ ದೂರಾನ್ವಯದ ಉದಾಹರಣೆಗಳು ಕೆಲವು ಕಂಡು ಬರುತ್ತವೆ.

ಈ ಮೇಲ್ಕಂಡ ಭಿನ್ನಾಭಿಪ್ರಾಯಗಳು ಹೇಗೇ ಇರಲಿ, ಸಂಪಾದಕರು ತುಂಬ ಶ್ರಮವಹಿಸಿ, ಹರಿಹರನ ಮೂರು ಕೃತಿಗಳನ್ನು ಒಂದು ಕಡೆ ಕೂಡಿಸಿ ಕೊಟ್ಟಿರುತ್ತಾರೆ. ಎಲ್ಲಿಯೋ ಹುದುಗಿದ್ದ ಓಲೆಯ ಪ್ರತಿಯೊಂದನ್ನು ಬೆಳಕಿಗೆ ತಂದಿರುತ್ತಾರೆ. ವಿದ್ವತ್ಪೂರ್ಣವಾದ ಅವರ ಪೀಠಿಕೆ ವಿದ್ವಾಂಸರ ವಿಚಾರವನ್ನು ಕೆರಳಿಸುವುದಲ್ಲದೆ, ಇತರರಿಗೆ ಹರಿಹರನ ಹಿರಿಮೆಯನ್ನೂ ಚೆನ್ನಾಗಿ ಪರಿಚಯ ಮಾಡಿಕೊಡುವಂತಿದೆ. ಈ ಶ್ರದ್ಧೆ ಶ್ರಮಗಳಿಗಾಗಿ ಸಂಪಾದಕರಿಗೆ ನಮ್ಮ ಅಭಿನಂದನೆಗಳು.

—ಜಿ. ವ. ರಾ.

ಇಂದಿನ ವಿಜ್ಞಾನ ಮತ್ತು ನೀವು : ಮೂಲ ಲೇಖಕರು-ಲಿನ್ ಪೂಲ್, ಅನುವಾದಕರು-ಶ್ರಿ. ಜಿ. ಆರ್. ಲಕ್ಷ್ಮಣರಾವ್ ; ಪ್ರಕಾಶಕರು–ಎಂ. ಗೋವಿಂದರಾವ್, ಸಾಹಿತ್ಯ ಭಂಡಾರ, ಹುಬ್ಬಳ್ಳಿ ; ಕ್ರೌನ್ ಪುಟ—೧೩೯ ; ಬೆಲೆ ೧–೫೦.

ದಕ್ಷಿಣ ಭಾಷಾ ಸಂಸ್ಥೆಯ ಸಹಕಾರದಿಂದ ಶ್ರೀಮಾನ್. ಎಂ. ಗೋವಿಂದ ರಾಯರಿಂದ ಪ್ರಕಟಿತವಾದ ಈ ಪುಸ್ತಕವು ಶ್ರೀ|| ಲಿನ್ ಪೂಲ್ ರವರ 'Today's Science and you' ಎಂಬ ಪುಸ್ತಕದ ಅನುವಾದ. ಈ ಗ್ರಂಥವು ವಿಜ್ಞಾನದ ಅತ್ಯಾಧುನಿಕ ಬೆಳೆವಣಿಗೆ, ವೈಜ್ಞಾನಿಕ ಸಮಸ್ಯೆಗಳು, ವೈಜ್ಞಾನಿಕ ಸಂಶೋಧನೆಯಲ್ಲಿ ವಿಜ್ಞಾನಿಯು ಎದುರಿಸಬೇಕಾದ ಎಡರುಗಳು, ಅವುಗಳನ್ನು ವಿಜ್ಞಾನಿಯು ಬಗೆಹರಿಸಿ ಕೊಳ್ಳುವ ರೀತಿ, ಸಂಶೋಧನೆಯು ಸಫಲವಾದಾಗ ವಿಜ್ಞಾನಿಗೆ ಆಗುವ ಆನಂದ, ವಿಜ್ಞಾನದ ಭವಿಷ್ಯ ಇವೇ ಮೊದಲಾದುವನ್ನು ಜನಸಾಮಾನ್ಯರಿಗೆ ಸುಲಭವಾಗಿ ವಿವರಿಸುವ ಚಿತ್ರವಾಗಿದೆ. ಈ ಉತ್ತಮವಾದ ಪುಸ್ತಕವನ್ನು ಸಹಜ ರೀತಿಯಲ್ಲಿ ಸರಳ ಕನ್ನಡದಲ್ಲಿ ವಿವರಿಸುವ ವಿಷಯದಲ್ಲಿ ಅನುವಾದಕರು ಪೂರ್ಣಯಶಸ್ವಿ ಯಾಗಿದ್ದಾರೆಂದು ನಿಸ್ಸಂಶಯವಾಗಿ ಹೇಳಬಹುದು. ಇದರಲ್ಲಿ ವಿವರಿಸಿರುವ ಭೌತಶಾಸ್ತ್ರ, ರಸಾಯನಶಾಸ್ತ್ರ, ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಚೀನ ಶೋಧನ ಶಾಸ್ತ್ರ, ಶಿಲ್ಪಶಾಸ್ತ್ರ ಮೊದಲಾದ ವಿವಿಧ ವೈಜ್ಞಾನಿಕ ವಿಷಯಗಳನ್ನು ಓದುತ್ತಿರು ವಾಗ, ವೈಜ್ಞಾನಿಕ ಪ್ರಯೋಗಗಳು ನಮ್ಮ ಕಣ್ಣೆದುರಿಗೆ ನಡೆಯುತ್ತಿರುವಂತೆ ತೋರುವುದು. '**ಪತ್ತೆದಾರ್ ಎಕ್ಸ್ ಕಿರಣ**' ಮತ್ತು 'ಟೆಲಿವಿಷನ್‌ಗಳ' ಸಹಾಯ ದಿಂದ, ಬಾಲ್ಟಿಮೋರ್, ಚಿಕಾಗೋ ಮತ್ತು ನ್ಯೂಯಾರ್ಕ್‌ಗಳಲ್ಲಿರುವ ಮೂವರು ವೈದ್ಯರು ಪರಸ್ಪರ ಸಮಾಲೋಚಿಸುತ್ತಾ ಏಕಕಾಲದಲ್ಲಿ ಒಬ್ಬ ರೋಗಿಯನ್ನು ಪರೀಕ್ಷಿಸುವುದು ನಮ್ಮನ್ನು ಚಕಿತಗೊಳಿಸುವುದು. '**ಏರೋಬಿ**' ಕ್ಷಿಪಣಿಯು ಅಂತರಿಕ್ಷಕ್ಕೆ ಹಾರುವದು, ಅದರಲ್ಲಿರುವ ಕ್ಯಾಮೆರವು ಭೂಮಿಯ ಚಿತ್ರವನ್ನು ತೆಗೆಯುವುದು, ಕ್ಷಿಪಣಿಯು ಭೂಮಿಗೆ ಇಳಿಯುವದು, ಹತ್ತೊಂಬತ್ತು ದಿನಗಳು ಕ್ಯಾಮೆರವನ್ನು ಮರುಭೂಮಿಯಲ್ಲಿ ಅರಸುವದು, ಅನಂತರ ಅದರಲ್ಲಿದ್ದ ಫಿಲಮನ್ನು ಸ್ಫುಟಗೊಳಿಸುವುದು ಮೊದಲಾದುವನ್ನು ಓದುತ್ತಿರುವಾಗ ಸಂಶೋಧಕರಲ್ಲಿ ಉಂಟಾದ ಕುತೂಹಲವು ನಮ್ಮ ಹೃದಯದಲ್ಲಿಯೂ ಕೆರಳುವುದು. '**ನೊಣಗಳು ಯಾರಿಗೂ ಬೇಡ**' ಎಂಬ ವಿಷಯವನ್ನು ಓದಿದಾಗ, ನೊಣಗಳನ್ನು ನಾಶ ಮಾಡುವ ರಾಸಾಯನಿಕ ವಸ್ತುವಿನ ಸಂಶೋಧನೆಯಂತಹ ಸಮಸ್ಯೆಯಲ್ಲಿಯೂ ಸಹ ಅವಶ್ಯವಾದ ಪ್ರಯೋಗಕೌಶಲ್ಯವು ನಮ್ಮನ್ನು ಆಶ್ಚರ್ಯ ಮುಗ್ಧರನ್ನಾಗಿ ಮಾಡುವದು. '**ಯಾರು ಬಲ್ಲರು**' ಎಂಬ ಅಧ್ಯಾಯವು ನಮ್ಮ ಜೀವನವನ್ನು ವೈಜ್ಞಾನಿಕ ಸಂಶೋಧನೆಗಳಿಂದ ಯಾವ ಯಾವ ವಿಧದಲ್ಲಿ ಅಭಿವೃದ್ಧಿ ಪಡಿಸಬಹುದು ಮತ್ತು ಇದರ ಸಾಧನೆಗೆ ಪರಿಸ್ಥಿತಿಯು ಯಾವ ರೀತಿಯದಿರಬೇಕೆಂದು ವಿವರಿಸುವುದು.

ವೈಜ್ಞಾನಿಕ ಸಂಶೋಧನೆಯ ಫಲವನ್ನು ಎಲ್ಲರೂ ಭೋಗಿಸುವರಾದರೂ,

ಸಂಶೋಧನಾ ವಿಷಯಕವಾದ ವೈಜ್ಞಾನಿಕ ಜ್ಞಾನವು ಜನಸಾಮಾನ್ಯರಿಂದ ಗ್ರಹಿಸಲು ಅಸಾಧ್ಯವೆಂಬ ಭಾವನೆ ಜನರಲ್ಲಿರುವುದು. ಈ ವಿಧವಾದ ಭಾವನೆಯನ್ನು ಅಳಿಸಿ, ವೈಜ್ಞಾನಿಕ ವಿಷಯಗಳ ಯಥಾರ್ಥ ಜ್ಞಾನವನ್ನು ಹೊಂದಬೇಕೆಂಬ ಕುತೂಹಲವನ್ನು ಜನರಲ್ಲಿ ಕೆರಳಿಸಲು ಇಂತಹ ಪುಸ್ತಕಗಳು ಅತ್ಯವಶ್ಯ. ಅನುವಾದಕರು ಹೇಳಿರುವಂತೆ ಕನ್ನಡದಲ್ಲಿ ವಿಜ್ಞಾನ ಸಾಹಿತ್ಯವು ಇನ್ನು ಶೈಶವಾವಸ್ಥೆಯಲ್ಲಿದೆ. ವಿಜ್ಞಾನ ವಿಷಯಕವಾದ ಪುಸ್ತಕಗಳೇ ವಿರಳವಾಗಿರುವಾಗ ಕನ್ನಡದಲ್ಲಿ ಇಂತಹ ಉತ್ತಮ ಗ್ರಂಥದ ಪ್ರಕಟಣೆಯು ಅಭಿನಂದನೀಯವಾದುದು.

ಪಾರಿಭಾಷಿಕ ಪದಗಳನ್ನು ಕನ್ನಡಕ್ಕೆ ಅನುವಾದ ಮಾಡುವ ವಿಷಯದಲ್ಲಿ ನನ್ನದೊಂದು ಮಾತು. ಯಾವ ಪದಗಳು ಕನ್ನಡದಲ್ಲಿ ಬಹುದಿನದಿಂದ ರೂಢಿಯಲ್ಲಿರುವುವೋ, ಯಾವ ಅನುವಾದ ಪದಗಳ ಅರ್ಥವು ಸುಲಭಗ್ರಾಹ್ಯವೋ ಅಂತಹ ಶಬ್ದಗಳನ್ನು ಮಾತ್ರ ಕನ್ನಡಕ್ಕೆ ಅನುವಾದಿಸಿ, ಉಳಿದುವನ್ನು ಹಾಗೆಯೇ ಕನ್ನಡ ಲಿಪಿಯಲ್ಲಿ ಬರೆಯುವುದು ಉಚಿತವೆಂದು ಕಾಣುವುದು. ಅನುವಾದಕರೂ ಸಹ ಕೆಲವೆಡೆಗಳಲ್ಲಿ-ಉದಾ 'ಟೆಲಿವಿಷನ್', 'ರೇಡಿಯೋ', 'ಫಿಲಮ್' ಇತ್ಯಾದಿ— ಈ ಪದ್ಧತಿಯನ್ನು ಅನುಸರಿಸಿರುವರು. ಇದರಂತೆಯೇ 'ಸಕ್ಷೇತ್ರ'ಕ್ಕೆ ಬದಲು 'ಐಸೊಟೋಪ್' 'ಸ್ವಯಂಪ್ರಭೆ'ಗೆ ಬದಲು 'ರೇಡಿಯೋ ಆ್ಯಕ್ಟಿವಿಟಿ' ಇತ್ಯಾದಿ ಶಬ್ದಗಳನ್ನೇ ಉಪಯೋಗಿಸಬಹುದಾಗಿತ್ತು. ಅನುಮಾನ ಬರುವೆಡೆಗಳಲ್ಲಿ ಇಂಗ್ಲಿಷ್ ಪದಗಳನ್ನು ಪಕ್ಕದಲ್ಲಿಯೇ ಬರೆದಿದ್ದಾರೆ. ಕೊನೆಯಲ್ಲಿ ಶಬ್ದಾರ್ಥಕೋಶವಿದೆ. ಆದ್ದರಿಂದ ಸ್ಪಷ್ಟತೆಗೆ ಇದರಿಂದ ಕುಂದಾಗಿಲ್ಲ, ನಿಜ. ಕನ್ನಡದಲ್ಲಿ ವೈಜ್ಞಾನಿಕ ಶಬ್ದಕೋಶವು ಹೆಚ್ಚು ಹೆಚ್ಚು ಬೆಳೆಯುವ ಆವಶ್ಯಕತೆಯಿರುವ ಈ ಸನ್ನಿವೇಶದಲ್ಲಿ, ಪಾರಿಭಾಷಿಕ ಶಬ್ದಗಳನ್ನು ಅವಶ್ಯ ಬಿದ್ದೆಡೆಗಳಲ್ಲಿ ಕನ್ನಡದ್ದನ್ನಾಗಿ ಮಾಡಿಕೊಳ್ಳುವುದು ಕನ್ನಡದಲ್ಲಿ ವೈಜ್ಞಾನಿಕ ಶಬ್ದಭಂಡಾರವನ್ನು ಹೆಚ್ಚಿಸಲು ಸಹಕಾರಿಯಾಗುವುದು. ಮುದ್ರಣವು ಅಂದವಾಗಿದ್ದು ಮುದ್ರಾರಾಕ್ಷಸನ ಹಸ್ತಕ್ಷೇಪ ಹೆಚ್ಚಾಗಿಲ್ಲದಿರುವುದು ಈ ಪುಸ್ತಕದ ಇನ್ನೊಂದು ಹೆಚ್ಚಳಿಕೆ. ಒಟ್ಟಿನಲ್ಲಿ ಅತ್ಯಾಧುನಿಕ ವೈಜ್ಞಾನಿಕ ವಿಷಯಗಳಲ್ಲಿ ಸ್ಪಷ್ಟವಾದ, ಸರಳವಾದ ವಿವರಣೆಯನ್ನೊಳಗೊಂಡ ಈ ಗ್ರಂಥವು ಸರ್ವಜನಾದರಣೀಯವಾಗುವುದರಲ್ಲಿ ಸಂದೇಹವಿಲ್ಲ.

ಕೆ. ಸುಬ್ಬಾಭಟ್ಟ

* * * *

ನೆರಳು (ಕಥಾಸಂಕಲನ) : ಲೇಖಕರು : ಶ್ರೀ ಸು. ರಂ. ಎಕ್ಕುಂಡಿ ; ಪ್ರಕಾಶಕರು : ವೈಜಯಂತೀ ಗ್ರಂಥ ಪ್ರಕಾಶನ ಸಂಸ್ಥೆ, ಸಾಗರ-ಶಿವಮೊಗ್ಗ ; ಪುಟಗಳು : ಕ್ರಾ. ಅ. ಪ. ೧೦೦ ; ಬೆಲೆ : ೧ ರೂ.

ಶ್ರೀ ಕೆ. ವಿ. ಸುಬ್ಬಣ್ಣನವರ ಮುನ್ನುಡಿಯ 'ವಿದ್ವದ್ರಕ್ಷೆ' ಯನ್ನು ಕಟ್ಟಿಕೊಂಡು ಹೊರಬಂದಿರುವ 'ನೆರಳು' ಒಂದು ಗಮನಾರ್ಹವಾದ ಕಥಾಸಂಕಲನ.

ಮುನ್ನುಡಿಕಾರರು ಶ್ರೀ ಎಕ್ಕುಂಡಿಯವರ ಕಾವ್ಯ ಮತ್ತು ಕತೆಗಳ ಪ್ರಧಾನ ಲಕ್ಷಣವಾದ 'ವಿಸ್ಮಯ'ದ ಅನುಸಂಧಾನವನ್ನು ಕುರಿತು ಪ್ರಸ್ತಾಪಿಸಿದ್ದಾರೆ; ರಸ ಸಿದ್ಧಾಂತವನ್ನು ಸಂಗ್ರಹವಾಗಿ ನಿರೂಪಿಸಿದ್ದಾರೆ. ಆದರೆ ಇಲ್ಲಿನ ಕತೆಗಳ ಬಗ್ಗೆ ನೇರವಾಗಿ ಒಂದು ಮಾತನ್ನೂ ಆಡದಿರುವುದು ಸೋಜಿಗ. ವಿದ್ವತ್ಪೂರ್ಣವಾದ ಈ ಮುನ್ನುಡಿಯ ಭಾರವನ್ನು ಹೊರುವಷ್ಟು ಸತ್ವ ಈ ಸಂಗ್ರಹದ ಕತೆಗಳಿಗೆ ಇದೆಯೇ ಎಂಬುದು ಸಂದೇಹಾಸ್ಪದ.

ಇಲ್ಲಿ ಹನ್ನೊಂದು ಕತೆಗಳಿವೆ; ಐದು ಸ್ವಂತ ಕತೆಗಳು, ಆರು ಅನುವಾದಿತ. ಎರಡನೇ ಗುಂಪಿನ ಕತೆಗಳದೇ ಮೇಲುಗೈ—ಸಂಖ್ಯೆಯಲ್ಲಿ ಹಾಗೂ ಗುಣದಲ್ಲಿ. ಇವೆಲ್ಲ ಬಹುಮಟ್ಟಿಗೆ ಚಿಂತನಾಪ್ರಧಾನವಾದ ಕತೆಗಳು; ಓದಿ ಮೆಲುಕು ಹಾಕಬೇಕಾದಂಥವು.

ಲೇಖಕರ ಸ್ವಂತ ಕತೆಗಳನ್ನು ಮೊದಲು ನೋಡಬಹುದು: 'ಬೆಳಕಿಗೊಯ್ದ ದಾರಿ', 'ಆಚಾರ್ಯರ ಎತ್ತು', 'ನದಿಗೆ ಬಂದ ಕುದುರೆ'—ಇವು ಒಂದು ಜಾಡಿನಲ್ಲಿ ಬರೆದ ಪರಸ್ಪರ ಪೂರಕವಾದ ಕತೆಗಳು. ಮಾಧ್ವಮತದಲ್ಲಿ ಕತೆಗಾರರಿಗಿರುವ ಶ್ರದ್ಧೆ, ಭಕ್ತಿಗಳು ಈ ಕತೆಗಳಿಗೆ ವಸ್ತುವನ್ನೊದಗಿಸಿವೆ. ಆನಂದ ತೀರ್ಥರ ಬಾಲ್ಯಜೀವನದ ಚಿತ್ರಣ 'ಬೆಳಕಿಗೊಯ್ದ ದಾರಿ'ಯಲ್ಲಿದೆ. ಪಾಜಕದ ವಾಸುದೇವ ಸನ್ಯಾಸ ಸ್ವೀಕರಿಸಿ 'ಪ್ರಪಂಚದ ಪೂರ್ಣಪ್ರಜ್ಞ' ನಾದ ಪರಿ ಇಲ್ಲಿ ಮೂಡಿದೆ. ಈ ಕತೆಯ ಆರಂಭದಲ್ಲಿ ಬರುವ ಪ್ರಕೃತಿ ವರ್ಣನೆಯನ್ನು ಅಂತ್ಯದಲ್ಲೂ ಪುನರಾವರ್ತನೆ ಮಾಡಿರುವುದು ಅರ್ಥಪೂರ್ಣವಾಗಿದೆ. ಇದೇ ಕತೆಯ ಮತ್ತೊಂದು ಮುಖ 'ಆಚಾರ್ಯರ ಎತ್ತು'. ಆನಂದ ತೀರ್ಥರಿಗೂ ಬಾಲ್ಯದಿಂದಲೂ ಅವರ ಒಡನಾಡಿಯಾಗಿದ್ದ ಒಂದು ಎತ್ತಿಗೂ ಇದ್ದ ಆತ್ಮೀಯ ಬಾಂಧವ್ಯ, ಗುರು ಶಿಷ್ಯ ಸಂಬಂಧ ಈ ಕತೆಯಲ್ಲಿ ಚಿತ್ರಿತವಾಗಿದೆ. ಮುಂದೆ ಈ ಎತ್ತು ದಳಪತಿ ಧೋಂಡು ರಘುನಾಥನಾಗಿ ಹುಟ್ಟಿ, ಸನ್ಯಾಸ ಸ್ವೀಕರಿಸಿ ಜಯತೀರ್ಥಮುನಿಯಾದ ಕತೆ 'ನದಿಗೆ ಬಂದ ಕುದುರೆ' ಯಲ್ಲಿ ಮುಂದುವರಿದಿದೆ.

ಈ ಕಥೆಗಳಲ್ಲಿ ಲೇಖಕರ ಧಾರ್ಮಿಕನಿಷ್ಠೆ ಚೆನ್ನಾಗಿ ವ್ಯಕ್ತವಾಗಿದ್ದರೂ ಉತ್ತಮವಾದ ಕಥನಕಲೆ ಇಲ್ಲವೆನಿಸುತ್ತದೆ. 'ಪರಮ ಕರುಣಾಶಾಲಿಗಳಲ್ಲವೇ ನಮ್ಮ ಆನಂದ ತೀರ್ಥರು'—ಇಂತಹ ವ್ಯಾಖ್ಯಾನಗಳ ಅಗತ್ಯವಿರಲಿಲ್ಲ.

'ಹೊಲಕ್ಕೆ ಬಂದ ಕುದುರೆ'—ಕುತೂಹಲಕಾರಿಯಾದ ಕತೆ. ಪರಮಾತ್ಮನೇ ವಾದಿರಾಜರ ಕುದುರೆಯ ರೂಪದಲ್ಲಿ ಬಂದು ಹೊಲದಲ್ಲಿ ಕಡಲೆ ಗಿಡ ತಿನ್ನುತ್ತಿದ್ದನೆಂದು ಇಲ್ಲಿಯ ಕಲ್ಪನೆ. ಈ ಕತೆಯಲ್ಲಿ ವಾತಾವರಣಸೃಷ್ಟಿ ತುಂಬಾ ಮನೋಹರವಾಗಿದೆ. ಸಹಾನುಭೂತಿಪರವಾದ ಒಂದು ಕುಟುಂಬದ ಉಪಕಾರ ಮತ್ತೊಂದು ಬಡ ಕುಟುಂಬವನ್ನು ಉದ್ಧರಿಸಿದ ಚಿತ್ರ ಹೃದಯಸ್ಪರ್ಶಿಯಾಗಿ 'ಊರಿಗೆ ಬಂದವರು' ಕತೆಯಲ್ಲಿ ಮೂಡಿದೆ. ಆದರೆ ಕಡೆಯಲ್ಲಿ ಕುಲಕರ್ಣಿಯಿಂದಾದ

ತೊಂದರೆ ಹಾಗೂ ಭಾಗಣ್ಣನ ಶಾಪದ ಸಂಗತಿಯಿಂದ ಕತೆಯ ಏಕಮುಖ ಪರಿಣಾಮಕ್ಕೆ ಸ್ವಲ್ಪಮಟ್ಟಿಗೆ ಧಕ್ಕೆ ಬಂದಿದೆ. ಈ ಸ್ವತಂತ್ರ ಕತೆಗಳಲ್ಲಿ ಶೈಲಿ, ನಿರೂಪಣೆ—ಎಲ್ಲ ಸ್ವಚ್ಛ, ಆಕರ್ಷಕ; ವರ್ಣನೆ ಬಹುಮಟ್ಟಿಗೆ ಸಾಂಪ್ರದಾಯಿಕ, ಅಲ್ಲಲ್ಲಿ ನವೀನ ಹಾಗೂ ಸಾಂಕೇತಿಕ.

ಇನ್ನು ಭಾಷಾಂತರಿತ ಕಥೆಗಳು: 'ಆನಂದನ ಧ್ಯಾನ', 'ಅನುಭಾವಿ', 'ನೆರಳು'—ಇವು ಒಂದು ಗುಂಪಿನವು. ತತ್ತ್ವ, ದರ್ಶನಗಳಿಗೆ ಇವು ಮಾಧ್ಯಮವಾಗಿರುವದರಿಂದ ನೆರಳಿನಂತೆ ಅಸ್ಪಷ್ಟವಾಗಿ ತೋರಬಹುದು; ತಾಳ್ಮೆಯಿಂದ ಓದಬೇಕಷ್ಟೆ.

'ನೆರಳು' (ಮೂಲ: ಕ್ವಿಲರ್ ಕೋಚ್) ಬಹುಶಃ ಈ ಸಂಕಲನದ ಅತ್ಯುತ್ತಮ ಕತೆ. ವ್ಯಕ್ತಿ ಮತ್ತು ಕಾವ್ಯದ ಸಂಬಂಧವನ್ನು ಸಾಂಕೇತಿಕ ರೀತಿಯಲ್ಲಿ ಇದು ಪ್ರತಿಪಾದಿಸುತ್ತದೆ: ಒಬ್ಬ ತರುಣ, ಅವನ ನೆರಳು ಹೆಣ್ಣಿನದು—ಹೀಗೆ. ಅಂತ್ಯದಲ್ಲಿ ಬರುವ ವಾಕ್ಯಗಳು ಧ್ವನಿಯನ್ನು ವಾಚ್ಯಕ್ಕಿಳಿಸಿವೆ ಎನಿಸುತ್ತದೆ. 'ತೀರಿದ ಋಣ'ದಲ್ಲಿ ಮುಗ್ಧ ಮಾತೃಹೃದಯದ ಪರಿಣಾಮಕಾರಿ ಚಿತ್ರವಿದೆ. 'ಲಿಲಾವು' ಶೋಷಣೆಯ ಒಂದು ದಾರುಣ ಚಿತ್ರ; ತಮ್ಮ ಪ್ರೀತಿಯ ವಸ್ತುಗಳು ಒಂದೊಂದಾಗಿ ಲಿಲಾವಾಗುವಾಗ ದಂಪತಿಗಳಿಗುಂಟಾದ ವೇದನೆಯ ಚಿತ್ರ ಯಥಾವತ್ತಾಗಿದ್ದು ಕರುಳಿರಿಯುತ್ತದೆ. ಸಾವು ಬದುಕಿನ ನಿಯಮವೆಂಬುದನ್ನು ಮನಗಾಣಿಸುವ ಯಶಸ್ವಿಯಾದ ಕತೆ 'ಬದುಕಿನ ನಿಯಮ'. ಈ ಕತೆಯಲ್ಲಿ ಹಿಮ ಪ್ರದೇಶದ ಒಬ್ಬ ಮುದುಕನ ಸ್ಮೃತಿಗಳು, ಅವುಗಳಲ್ಲಿ ಅವನು ಕಂಡ ಬದುಕಿನ ನಿಯಮ, ಕಡೆಯಲ್ಲಿ ತಾನೇ ಆ ನಿಯಮಕ್ಕೆ ಮೌನವಾಗಿ ಶರಣಾದುದು—ಇವೆಲ್ಲ ಮನಮುಟ್ಟುವಂತೆ ನಿರೂಪಿತವಾಗಿವೆ. ಮಾನವೀಯ ಸಹಾನುಭೂತಿಯ ಸೇಚನೆಯಿಂದ ಉಂಟಾಗಬಹುದಾದ ಹೃದಯಪರಿವರ್ತನೆಯ ನಾಲ್ಕು ಚಿತ್ರಗಳು 'ಆನಂದನ ಧ್ಯಾನ'ದಲ್ಲಿ ರೂಪುಗೊಂಡಿವೆ. 'ಅನುಭಾವಿ' ಒಬ್ಬ ದಾರ್ಶನಿಕನ ಸೂಕ್ಷ್ಮ ವ್ಯಕ್ತಿ ಚಿತ್ರ. ಶಕ್ತರೀತಿಯ ಅನುವಾದ ಈ ಎಲ್ಲ ಕಥೆಗಳಲ್ಲಿಯೂ ಕಂಡು ಬರುತ್ತದೆ.

ಈ ಪ್ರಕೃತ ಸಂಗ್ರಹದ ಕತೆಗಳೆಲ್ಲ ಶ್ರೀ ಎಕ್ಕುಂಡಿಯವರ ಕವಿಮನೋಧರ್ಮಕ್ಕೆ ಒಪ್ಪುವಂಥವು: ಇವುಗಳ ವೈ, ರೀತಿ ನೀತಿ ಬಹುಮಟ್ಟಿಗೆ ಕಾವ್ಯಾತ್ಮಕ; ಅದೇ ಈ ಕತೆಗಳ ಸೊಗಸು. ಒಟ್ಟಿನಲ್ಲಿ 'ನೆರಳು' ಮಧ್ಯಮ ಗುಣವುಳ್ಳ ಒಂದು ಸಂಕಲನ; ಒಮ್ಮೆ ಓದಲೇಬೇಕಾದಂಥ ಕೆಲವು ಕತೆಗಳಿವೆ.

ಮುನ್ನುಡಿಕಾರರು "....ಪ್ರಸ್ತುತ ಕವಿಯಂತಹ ಕವಿಗಳ ಪ್ರಾಮಾಣಿಕತೆಯನ್ನು ಅಳೆಯಹೊರಡುವ ರಸಿಕರು ತಮ್ಮ ಪ್ರಾಮಾಣಿಕತೆಯನ್ನು ಕೊಂಚ ಪರೀಕ್ಷಿಸಿಕೊಳ್ಳಲಿ; ಇಂಥ ಕಾವ್ಯರಾಶಿಯೆಲ್ಲ ಬರಿಯ ನೆರಳು ಎಂದು ದೂರುವ ಮೊದಲು ಕಾವ್ಯವೆಲ್ಲ ನೆರಳೇ ಅಲ್ಲವೇ ಎಂಬುದನ್ನು ಚಿಂತಿಸಿಕೊಳ್ಳಲಿ. ಅನಂತರ

ಯೋಗ್ಯ ವಿಮರ್ಶೆ ನಡೆಯಲಿ". ಎಂದಿದ್ದಾರೆ. ಈ ಮಾತುಗಳ ಹಿಂದಿರುವ ಪ್ರೇರಣೆಯೇನೋ ಅರ್ಥವಾಗದು; ಅದೇನೇ ಇರಲಿ, ಈ ದೊಡ್ಡ ಸವಾಲು ಪ್ರಕೃತ ಸಂಕಲನದ ವಿಚಾರದಲ್ಲಿ ಅಪ್ರಸ್ತುತ.

ಸಿ. ಪಿ. ಕೆ.

* * * *

ಸಿರಿಗನ್ನಡ ಗ್ರಂಥಕರ್ತರ ಚರಿತ್ರಕೋಶ: (ಪ್ರಥಮ ಸಂಪುಟ) ಲೇಖಕರು: ವೆಂಕಟೇಶ ಸಾಂಗಲಿ; ಪ್ರಕಾಶಕರು: ಉಷಾಸಾಹಿತ್ಯಮಾಲೆ, ಮೈಸೂರು; ಪುಟಗಳು: lxiv + ೩೩೮; ಬೆಲೆ: ಐದು ರೂಪಾಯಿ.

ಯಾವುದೇ ಭಾಷೆಯ ಸಾಹಿತ್ಯವು ತಕ್ಕಮಟ್ಟಿಗೆ ವೈವಿಧ್ಯಪೂರ್ಣವಾಗಿ, ಸರ್ವಾಂಗ ಪರಿಪುಷ್ಟವಾಗಿ ಬೆಳೆದಾಗ ಆ ಸಾಹಿತ್ಯದ ಕೃತಿಗಳ ಮತ್ತು ಕರ್ತೃಗಳ ಪರಿಚಯವನ್ನು ಮಾಡಿಕೊಡುವ ಚರಿತ್ರಗ್ರಂಥಗಳು ಆವಶ್ಯಕವಾಗುತ್ತವೆ. ಇಂಗ್ಲಿಷ್‌ನಂಥ ಭಾಷೆಗಳಲ್ಲಿ ಈ ಬಗೆಯ ಗ್ರಂಥಗಳು ಹಲವಾರಿರುತ್ತವೆ. ಕನ್ನಡದಲ್ಲಾದರೆ ರಾ. ನರಸಿಂಹಾಚಾರ್ಯರ 'ಕವಿಚರಿತೆ' ಯೊಂದೇ ಇದುವರೆಗೆ ಇದ್ದುದು. ಅದರಲ್ಲಿ ಹಳಗನ್ನಡ ಹಾಗೂ ನಡುಗನ್ನಡ ಸಾಹಿತ್ಯದ ಗ್ರಂಥಗಳ ಮತ್ತು ಗ್ರಂಥಕರ್ತರ ನಿರ್ದೇಶವಿದೆ; ಹತ್ತೊಂಬತ್ತನೆ ಶತಮಾನದ ಕವಿ ಪರಿಚಯ ಸ್ವಲ್ಪಮಟ್ಟಿಗಿದೆ. ಶ್ರೀ ವೆಂಕಟೇಶ ಸಾಂಗಲಿಯವರ ಪ್ರಕೃತ ಪುಸ್ತಕ 'ಕವಿಚರಿತೆಗೆ'ಗೆ ಪೂರಕವಾಗಿ, ಹೊಸಗನ್ನಡ ಸಾಹಿತ್ಯದ ಪ್ರಾರಂಭದಿಂದ ಬೇರೆ ಬೇರೆ ಪ್ರಕಾರಗಳಲ್ಲಿ ಕೃತಿರಚನೆ ಮಾಡಿದವರ ಪರಿಚಯವನ್ನು ಒದಗಿಸುತ್ತದೆ. ಇದು ಮೊದಲನೆಯ ಸಂಪುಟ ಮಾತ್ರ. ಇದರ ಹರಹು ೧೮೫೦-೧೯೨೦ ರ ಕಾಲಾವಧಿಯನ್ನು ಒಳಕೊಂಡಿದೆ. ಆ ಎಪ್ಪತ್ತು ವರುಷಗಳಲ್ಲಿ ಸಾಹಿತ್ಯ ರಚನೆಮಾಡಿದ ಗ್ರಂಥಕರ್ತರ ಹಾಗೂ ಅವರ ಕೃತಿಗಳ ಹೆಸರು ಈ ಕೋಶದಲ್ಲಿ ಸಿಕ್ಕುತ್ತವೆ. ಹೊಸಗನ್ನಡ ನವೋದಯ ಕಾಲದಲ್ಲಿ ನಡೆದ ಸಾಹಿತ್ಯ ಸೃಷ್ಟಿಯ ಒಂದು ವಿಹಂಗಮ ನೋಟವೇ ಇಲ್ಲಿದೆ. ಈ ಕೋಶವನ್ನೊಮ್ಮೆ ತಿರುವಿಹಾಕಿದಾಗ ವಿಸ್ಮಯವಾಗದಿರದು: ನಾವು ಇದುವರೆಗೆ ಹೆಸರನ್ನೇ ಕೇಳದಿರುವ ಅಸಂಖ್ಯಾತ ಲೇಖಕರ ಹಾಗೂ ಪುಸ್ತಕಗಳ ಉಲ್ಲೇಖ ಇಲ್ಲಿದೆ. ಈ ಗ್ರಂಥಗಳಲ್ಲಿ ಬಹುಪಾಲು ಈಗ ಔಷಧಿಗೆ ಬೇಕೆಂದರೂ ಸಿಕ್ಕುವುದಿಲ್ಲ. ಆದುದರಿಂದ ಈ ಚರಿತ್ರಕೋಶ ಹೊಸಗನ್ನಡ ಸಾಹಿತ್ಯದ ವಿಪುಲತೆ, ವೈವಿಧ್ಯಗಳಿಗೊಂದು ತೋರುಬೆರಳೂ ಹೌದು. ಈ ದೃಷ್ಟಿಯಿಂದಲೂ ಈ ಗ್ರಂಥ ಸ್ವಾಗತಾರ್ಹ; ಇದನ್ನೇ ಹೊರತಂದು ಸಾಂಗಲಿಯವರು ಕನ್ನಡದ ಮುಖ್ಯವಾದ ಕೊರತೆಯೊಂದನ್ನು ನೀಗಿದ್ದಾರೆ.

ಈ ಚರಿತ್ರಕೋಶದಲ್ಲಿ ಶಾಸ್ತ್ರೀಯವಾದ; ಸೂತ್ರಬದ್ಧವಾದ ಒಂದು ಕ್ರಮವನ್ನು ಅನುಸರಿಸಲಾಗಿದೆ. ಕೋಶವಿಭಾಗ, ಗ್ರಂಥವರ್ಣನ ವಿಭಾಗ ಹಾಗೂ ಪರಿಶಿಷ್ಟ-ಎಂಬ ಮೂರು ವಿಭಾಗಗಳು ಇಲ್ಲಿವೆ. ಗ್ರಂಥದ ಆರಂಭದಲ್ಲೇ

ಕೊಟ್ಟಿರುವ 'ಪರಿವಿಡಿ' ಯಲ್ಲಿ ಮೊದಲು ಎಲ್ಲ ಗ್ರಂಥ ಕರ್ತರ ಹೆಸರನ್ನೂ ಅನಂತರ ಎಲ್ಲ ಗ್ರಂಥಗಳ ಹೆಸರನ್ನೂ ಅಕಾರಾದಿಯಾಗಿ ಉಲ್ಲೇಖಿಸಿದ್ದಾರೆ. ಕೋಶವಿಭಾಗದ ಕ್ರಮ ಹೀಗಿದೆ: ಮೊದಲು ಅಕಾರಾದಿಯಾಗಿ ಗ್ರಂಥಕರ್ತನ ಪೂರ್ತಿ ಹೆಸರು, ತಿಳಿದ ಮಟ್ಟಿಗೆ ಅವನ ಜನನ ಮರಣಗಳ ಕಾಲ, ಸಂಕ್ಷಿಪ್ತ ಜೀವನ ಚರಿತ್ರೆ, ಅನಂತರ ಅವನು ರಚಿಸಿದ ಗ್ರಂಥಗಳ ಹೆಸರು, ಆಯಾ ಗ್ರಂಥದ ಪ್ರಕಾರ ಹಾಗೂ ಅದು ಪ್ರಕಟವಾದ ವರ್ಷ-ಇಷ್ಟನ್ನೂ ನಿರ್ದೇಶಿಸಿದ್ದಾರೆ. ಕೃತಿಗಳನ್ನು ಹೆಸರಿಸುವಾಗ ಸ್ವತಂತ್ರ, ಪರಿಷ್ಕೃತ, ಕನ್ನಡೇತರ, ಪ್ರಕಟಿತ ಹಾಗೂ ಅಪ್ರಕಟಿತ ಎಂದು ಬೇರೆ ಬೇರೆಯಾಗಿ ಸೂಚಿಸಲಾಗಿದೆ. ಒಂದು ಗ್ರಂಥ ಯಾವ ಪ್ರಕಾರಕ್ಕೆ ಸೇರಿದ್ದೆಂಬುದನ್ನು ಸೂಚಿಸಲು ಕ, ಖ, ಗ ಇತ್ಯಾದಿ ಸಂಕೇತಗಳನ್ನು ಬಳಸಲಾಗಿದೆ. ಗ್ರಂಥವರ್ಣನ ವಿಭಾಗದಲ್ಲಿ ಕೆಲವರು ಗ್ರಂಥಕರ್ತರ ಹೆಸರನ್ನು ಮಾತ್ರ ಅಕಾರಾದಿ ಕ್ರಮದಲ್ಲಿ ಕೊಟ್ಟು ಅವರು ರಚಿಸಿದ ಕೃತಿಗಳು, ಪ್ರಕಾಶಕರು, ಪ್ರಕಟಣೆಯ ವರ್ಷ, ಬೆಲೆ, ಪುಟ ಸಂಖ್ಯೆ ಇಷ್ಟನ್ನೂ ನಿರ್ದೇಶಿಸಿದ್ದಾರೆ. ಕೆಲವೆಡೆ ಆಯಾ ಗ್ರಂಥದ ವಸ್ತುವನ್ನೂ ಸೂಚಿಸಿದೆ. ಜೀವನ ಚರಿತ್ರೆಯ ಬಗ್ಗೆ ಏನೂ ತಿಳಿಯದ ಗ್ರಂಥಕರ್ತರ ಹೆಸರು ಮತ್ತು ಕೃತಿಗಳ ಅಕಾರಾದಿ ಪಟ್ಟಿಯೊಂದು 'ಪರಿಶಿಷ್ಟ' ವಿಭಾಗದಲ್ಲಿ ಪ್ರಕಟವಾಗಿದೆ.

ಈ ಕೋಶದ ವ್ಯಾಪ್ತಿಯಲ್ಲಿ ಶುದ್ಧಸಾಹಿತ್ಯಜಾತಿಗೆ ಸೇರುವ ಗ್ರಂಥಗಳಲ್ಲದೆ ಕಾಯಿದೆ, ಭೂಗೋಲ, ಜ್ಯೋತಿಷ ಇತ್ಯಾದಿ ಅನೇಕ ಪ್ರಕಾರಗಳಿಗೆ ಸೇರಿದ ಸಂಕೀರ್ಣ ವಿಷಯಗಳನ್ನೊಳಗೊಂಡ ಗ್ರಂಥರಾಶಿಯೆಲ್ಲ ಸಮಾವೇಶವಾಗಿದೆ. ಇದರಿಂದ ಸಾಹಿತ್ಯಾಭ್ಯಾಸಿಗೆ ಹೆಚ್ಚು ಪ್ರಯೋಜನವಿಲ್ಲದಿದ್ದರೂ ಬೇರೆ ದೃಷ್ಟಿಯಿಂದ ಇದಕ್ಕೆ ಔಚಿತ್ಯವುಂಟು. ಅಲ್ಲದೆ, ಇದು ಕವಿಗಳ ಅಥವಾ ಸಾಹಿತಿಗಳ ಚರಿತ್ರಕೋಶ ಮಾತ್ರವಾಗದೆ 'ಗ್ರಂಥಕರ್ತರ ಚರಿತ್ರಕೋಶ' ವಾಗಿದೆ.

ಈ ಸಂಪುಟದಲ್ಲಿ ನ್ಯೂನತೆಗಳಿವೆಯೆಂದು ಲೇಖಕರೇ ಒಪ್ಪಿಕೊಂಡಿದ್ದಾರೆ. ವ್ಯಕ್ತಿಶಕ್ತಿಯ ಪರಿಮಿತಿಯಲ್ಲಿ ನಿರ್ಮಿತವಾಗುವ ಇಂಥ ಚರಿತ್ರೆಯ ಗ್ರಂಥಗಳಲ್ಲಿ ಪರಿಪೂರ್ಣತೆಯನ್ನು ನಿರೀಕ್ಷಿಸುವುದು ತಪ್ಪಾದೀತು. ಮುಕ್ಕಾಲುಶತಮಾನದ ವ್ಯಾಪ್ತಿಯುಳ್ಳ ಸಾಹಿತ್ಯ ಕ್ಷೇತ್ರವನ್ನು ಅವಲೋಕಿಸುವಾಗ ಒಬ್ಬಿಬ್ಬರು ಲೇಖಕರೋ ಕೃತಿಗಳೋ ಚರಿತ್ರಕಾರನ ಕಣ್ಣಿಗೆ ಬೀಳದಿರುವುದು ಸಾಧ್ಯ. 'ಮುನ್ನುಡಿ' ಯಲ್ಲಿ ರಂ. ಶ್ರೀ. ಮುಗಳಿಯವರಾಡಿರುವಂತೆ..... "ಬೇಲೂರು ಕೇಶವದಾಸರ ಗ್ರಂಥಗಳ ಪಟ್ಟಿಯಲ್ಲಿ ಅವರ 'ಹರಿದಾಸ ಸಾಹಿತ್ಯ' ಎಂಬ ವಿಮರ್ಶಾತ್ಮಕ ಗ್ರಂಥದ ಉಲ್ಲೇಖ ಈ ಕೋಶದಲ್ಲಿಲ್ಲ." ಶ್ರೀನಿವಾಸರ 'ಚಿಕ್ಕ ವೀರರಾಜೇಂದ್ರ'ದ ನಿರ್ದೇಶವೂ ಇಲ್ಲ. ಸಂಪಾದಕರು "ಈ ಸಂಪುಟದ ಕಾಲಖಂಡವು (೧೮೫೦-೧೯೨೦) ಕೇವಲ ಸ್ಥೂಲ ವಿಭಜನೆ. ಇದಕ್ಕೆ ಅಪವಾದವೆನಿಸುವ ಕೆಲವು ದೃಷ್ಟಾಂತಗಳೂ ಇವೆ. . . . ಇಂದಿನ ಹಲವು ಪ್ರಮುಖ ಲೇಖಕರ ಸಾಹಿತ್ಯಿಕ ಜೀವನ ೧೯೨೦ ರ ಮುನ್ನವೇ

ಪ್ರಾರಂಭವಾಗಿದ್ದರೂ, ಕನ್ನಡ ಸಾಹಿತ್ಯ ಚರಿತ್ರೆಯ ಹೊಸಯುಗದ ಅಧ್ವರ್ಯ ರಾದ ಅಂಥವರ ಚರಿತ್ರೆಗಳು ದ್ವಿತೀಯ ಸಂಪುಟಕ್ಕಾಗಿ ಮೀಸಲಾಗಿವೆ" ಎಂದಿದ್ದಾರೆ. ಕೈಲಾಸಂ ಮುಂತಾದವರ ಹೆಸರುಗಳನ್ನು ದ್ವಿತೀಯ ಸಂಪುಟಕ್ಕೆ ಉಳಿಸಿಕೊಂಡಿದ್ದಾರೆ. ಅಂತೆಯೇ, ಬಿ. ಎಂ. ಶ್ರೀ, ಡಿ. ವಿ.ಜಿ., ಶ್ರೀನಿವಾಸ, ಎ. ಆರ್. ಕೃ— ಇವರ ಉಲ್ಲೇಖನವನ್ನೂ ಈ ಸಂಪುಟದಲ್ಲಿ ಮಾಡದೆ ಮುಂದಿನ ಸಂಪುಟದಲ್ಲಿ ಅಳವಡಿಸಬಹುದಾಗಿತ್ತಲ್ಲವೆ? ಇನ್ನೊಂದು ಗಮನಾರ್ಹವಾದ ಅಂಶ, ಮುಗಳಿಯವರೇ ಹೇಳಿದಂತೆ. 'ಸಾಹಿತ್ಯ ಪ್ರಕಾರಗಳನ್ನು ಸೂಚಿಸುವಾಗ ಕೆಲವು ಸಲ ತಪ್ಪಿದಂತಿದೆ. ಥಾ, ಥಿ, ಥು, ಥೂ ದಂತಹ ಸಂಕೇತಗಳು ಕಿವಿಗೆ ಅಷ್ಟು ಹಿತವಾಗಿಲ್ಲ. . . .' ಗ್ರಂಥವರ್ಣನ ವಿಭಾಗವು ಸಂಪಾದಕರೇ ನುಡಿದಿರುವಂತೆ ಅಪೂರ್ಣವಾಗಿದೆ, ಅದು ಇಂಥ ಚರಿತ್ರಕೋಶಕ್ಕೆ ಆನುಷಂಗಿಕವೂ ಹೌದು. ಆದುದರಿಂದ ಅದನ್ನು ಕೈಬಿಡಬಹುದಾಗಿತ್ತು. ಗ್ರಂಥಕರ್ತರ ಕನ್ನಡೇತರ (ಎಂದರೆ ಇಂಗ್ಲಿಷ್, ಸಂಸ್ಕೃತ) ಗ್ರಂಥಗಳ ಉಲ್ಲೇಖದ ಅಗತ್ಯವಿರಲಿಲ್ಲ ಎನಿಸುತ್ತದೆ.

ಸುಮಾರು ೩೫೦ ಮಂದಿ ಗ್ರಂಥಕರ್ತರ ಚರಿತ್ರೆಯನ್ನೂ, ಸುಮಾರು ೨೫೦೦ ಗ್ರಂಥಗಳ ಹೆಸರನ್ನೂ—ಇಲ್ಲಿ ಪರಿಶಿಷ್ಟವರ್ಗದ ಕೃತಿಸಂಖ್ಯೆಯನ್ನು ಪರಿಗಣಿಸಿಲ್ಲ— ನಿರೂಪಿಸುವ ಈ ಕೋಶವು ವೆಂಕಟೇಶ ಸಾಂಗಲಿಯವರ ವಿಶೇಷ ಪರಿಶ್ರಮ, ತಾಳ್ಮೆ, ಸಾಹಸಗಳ ಉತ್ತಮ ಫಲ. ಒಂದು ಸಂಸ್ಥೆ ಮಾಡಬೇಕಾದ ಕಾರ್ಯವನ್ನು ವ್ಯಕ್ತಿಯೊಬ್ಬರು ಕೈಗೊಂಡಿದ್ದಾರೆ. 'ಗಂಥಕರ್ತರ ಚರಿತ್ರಕೋಶ'ದ ಈ ಪ್ರಥಮ ಸಂಪುಟದಲ್ಲಿ ಅವರು ತಮ್ಮ ಕೆಲಸವನ್ನು ಬಹುಮಟ್ಟಿಗೆ ಸಮರ್ಪಕವಾಗಿ, ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ಮುದ್ರಣವಿನ್ಯಾಸ ಅಂದವಾಗಿದೆ, ಪುಸ್ತಕದ ಹೊರಮೈ ಆಕರ್ಷಕವಾಗಿದೆ. ಬೆಲೆ ಹೆಚ್ಚೇನಲ್ಲ. ಪ್ರತಿಯೊಬ್ಬರೂ ಅವಶ್ಯವಾಗಿ ಸಂಗ್ರಹಿಸಬೇಕಾದ ಉಪಯುಕ್ತ ಹೊತ್ತಿಗೆಯಿದು.

ಸಾಂಗಲಿಯವರು ಮುಂದೆ ಪ್ರಕಟಿಸಲಿರುವ ದ್ವಿತೀಯ ಸಂಪುಟವನ್ನು ಉತ್ಸುಕತೆಯಿಂದ ಎದುರು ನೋಡುತ್ತೇವೆ. ಏಕೆಂದರೆ, ಪ್ರಸ್ತುತ ಸಂಪುಟಕ್ಕಿಂತ ಆ ಎರಡನೆಯ ಭಾಗದ ಆವಶ್ಯಕತೆ ಹೆಚ್ಚಾಗಿದೆ. ಅದು ಹೆಚ್ಚು ನಿರ್ದುಷ್ಟವೂ, ಸರ್ವಗ್ರಾಹ್ಯವೂ ಆಗಿ ಹೊರಬರಲೆಂದು ಹಾರೈಸಬಹುದು. ಒಟ್ಟಿನಲ್ಲಿ ಶ್ರೀಯುತರ ಈ ಪ್ರಯತ್ನ ಸ್ತುತ್ಯ; ಪ್ರೋತ್ಸಾಹಯೋಗ್ಯ.

* * * *

ಒಕ್ಕಲತನ ಹುಟ್ಟುವಳಿ ಮಾರಾಟ (Agricultural Marketing) ಲೇಖಕರು: ಪ್ರೊ. ಸಚ್ಚಿದಾನಂದ ಶಿರೋಡಕರ, ಎಂ.ಎ., ಪ್ರಕಾಶಕರು: ಕರ್ನಾಟಕ ಕ್ರಮಪಡಿಸಿದ ಪೇಟೆಗಳ ಸಲಹಾ ಸಮಿತಿ, ಹುಬ್ಬಳ್ಳಿ. (ಜುಲೈ ೧೯೬೦, ಪುಟಗಳು—೧೨೪; ಬೆಲೆ–ರೂ. ೧–೫೦.)

ಕರ್ನಾಟಕ ಕ್ರಮಪಡಿಸಿದ ಪೇಟೆಗಳ ಸಲಹಾ ಸಮಿತಿಯ ಪ್ರಾರ್ಥನೆಯನ್ನು ಮನ್ನಿಸಿ ಪ್ರೊ॥ ಶಿರೋಡಕರ ಅವರು 'ಒಕ್ಕಲತನ ಹುಟ್ಟುವಳಿ ಮಾರಾಟ' ಎಂಬ

ಕಿರುಹೊತ್ತಿಗೆಯನ್ನು ಬರೆದಿರುತ್ತಾರೆ. ಲೇಖಕರ ಮಾತಿನಲ್ಲಿ, "ಮಾರ್ಕೆಟಿಂಗ್ ಟ್ರೇನಿಂಗ ಕ್ಲಾಸಿನ ಮತ್ತು ಸಹಕಾರಿ ಟ್ರೇನಿಂಗ ಕ್ಲಾಸಿನ ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವಂತೆ ಈ ಪುಸ್ತಕವನ್ನು ಬರೆಯಲಾಗಿದೆ." ಇದು ಮುಖ್ಯ ಉದ್ದೇಶವಾಗಿದ್ದರೂ ಪುಸ್ತಕದ ವಿಷಯ ಅನೇಕ ಸಾರ್ವಜನಿಕರ ಗಮನ ಸೆಳೆಯುವಂತಹುದು; ಹಾಗು ಈ ವಿಷಯವಾಗಿ ಪುಸ್ತಕದಲ್ಲಿ ಸಂಗ್ರಹಿಸಿರುವ ವಿವರಗಳು ಮತ್ತು ಅವುಗಳನ್ನು ಹೇಳಿರುವ ಸುಲಭಕನ್ನಡ ಓದುಗರಿಗೆ ಆದರಣೀಯವಾಗುವುದೆಂದು ಹೇಳಬಹುದು.

ಕೃಷಿ ಪ್ರಧಾನವಾದ ನಮ್ಮ ದೇಶದಲ್ಲಿ ಆಧುನಿಕ ರೀತ್ಯಾ ಮಾರ್ಪಾಡುಗಳು ವ್ಯವಸಾಯ ಪದ್ಧತಿಯಲ್ಲಿ ಈಚೆಗೆ ಸಂಭವಿಸ ಹತ್ತಿವೆ. ವ್ಯವಸಾಯ ಉತ್ಪನ್ನದ ಮಾರಾಟ ಮತ್ತು ಇದಕ್ಕೆ ಸಂಬಂಧಪಟ್ಟ ವ್ಯವಸ್ಥೆಯು ಈ ವ್ಯವಸಾಯ ಆರ್ಥಿಕ ಮಾರ್ಪಾಡಿನ ಬಹು ಮುಖ್ಯಭಾಗವಾಗಿದೆ. ರಾಷ್ಟ್ರವು ಆರ್ಥಿಕಾಭಿವೃದ್ಧಿಯಲ್ಲಿ ಮುಂದುವರಿದಂತೆ ಮಾರಾಟಕ್ಕೋಸ್ಕರ ಬೆಳೆಯುವ ವ್ಯವಸಾಯೋತ್ಪನ್ನಭಾಗ ಹೆಚ್ಚಾಗುವುದು ಸಹಜ. ಅಮೆರಿಕದಲ್ಲಿ ಒಟ್ಟು ವ್ಯವಸಾಯೋತ್ಪನ್ನದಲ್ಲಿ ಬೆಳೆಯುವವರು ಸ್ವಂತ ಸಂಸಾರಕ್ಕಾಗಿ ಸುಮಾರು ಶೇ|| ೯ ರಷ್ಟು ಇಟ್ಟುಕೊಂಡು ಉಳಿದುದನ್ನೆಲ್ಲ ಮಾರಾಟ ಮಾಡುತ್ತಾರೆಂದು ಅಂದಾಜಿಸಲಾಗಿದೆ. ಇಂಗ್ಲೆಂಡಿನಲ್ಲಿ ಸಣ್ಣ ರೈತರು ಬೆಳೆಯುವ ಉತ್ಪನ್ನ ತೆಗೆದುಕೊಂಡರೆ ಸುಮಾರು ಶೇ|| ೬ ರಷ್ಟು ಮಾತ್ರ ರೈತರು ಸ್ವಂತಕ್ಕೆ ಉಳಿಸಿಕೊಂಡು ಮಿಕ್ಕ ಭಾಗವನ್ನು ಮಾರ್ಕೆಟ್ಟಿಗೆ ಕೊಂಡೊಯ್ಯುತ್ತಾರೆ. ಇಂಡಿಯದಲ್ಲಿ ಈ ಬಗ್ಯೆ ಅಂದಾಜು ಸಿಕ್ಕಿಲ್ಲ. ಆದರೆ ಸಾಮಾನ್ಯವಾಗಿ ಆಧುನಿಕ ವ್ಯವಸಾಯವು ಹಿಂದಿನಂತೆ ಸ್ವಂತ ಸಂಸಾರಕ್ಕೆ ಬೇಕಾಗುವಷ್ಟು ಮಾತ್ರ ಬೆಳೆಯುವ ದೃಷ್ಟಿಯಿಂದ ವ್ಯವಸ್ಥಿತವಾಗಿಲ್ಲ; ಪ್ರಧಾನವಾಗಿ ಮಾರಾಟಕ್ಕೋಸ್ಕರ ಬೆಳೆಯುವ ಉದ್ದೇಶದಿಂದ ವ್ಯವಸ್ಥಿತವಾಗಿದೆ. ಆದ್ದರಿಂದ ಆರ್ಥಿಕಾಭಿವೃದ್ಧಿಯ ಜೊತೆಗೆ ವ್ಯವಸಾಯ ಉತ್ಪನ್ನ ಮಾರಾಟದ ಪ್ರಾಮುಖ್ಯತೆಯೂ ಹೆಚ್ಚಾಗಲೇ ಬೇಕು. ಈ ಮಾರಾಟ ವ್ಯವಸ್ಥೆ ಸುಷ್ಟುರೀತಿಯಲ್ಲಿ ರೂಪುಗೊಳ್ಳುವಂತೆ ನೋಡಿಕೊಳ್ಳುವುದು ಅತಿ ಮುಖ್ಯವಾದ ಕಾರ್ಯವಾಗಿದೆ. ಈ ಕಾರ್ಯ ವ್ಯವಸಾಯಗಾರರು, ದಲ್ಲಾಳಿಗಳು, ಸಾಹುಕಾರರು, ಸಹಕಾರಿ ಪ್ರೇಮಿಗಳು, ಕೇಂದ್ರ ಹಾಗು ಸಂಸ್ಥಾನ ಸರ್ಕಾರಗಳು ಮತ್ತು ಅನೇಕ ಸಾರ್ವಜನಿಕರಿಗೆ ಸೇರಿದುದಾಗಿದೆ. ಸಂಬಂಧಪಟ್ಟ ಎಲ್ಲರೂ ಅವರವರ ಕರ್ತವ್ಯವನ್ನು ಕೈಗೊಳ್ಳಬೇಕಾದರೆ ಪರಿಸ್ಥಿತಿಯ ಹಾಗು ಸಮಸ್ಯೆಗಳ, ನೈಜ ಸ್ವರೂಪದ ಅರಿವು ಆವಶ್ಯಕ. ಇಂತಹ ತಿಳಿವಳಿಕೆ ಪಡೆಯಲು ತಜ್ಞರಿಂದ ಬರೆಯಲ್ಪಟ್ಟ ಗ್ರಂಥಗಳು ಉಪಯುಕ್ತವಾದ ಸಾಧನವಾಗಿದೆ. ಅಂತೆಯೇ ಪ್ರೊ|| ಶಿರೋಡಕರ ಅವರ ಪ್ರಕೃತ ಗ್ರಂಥವು ಸ್ವಾಗತಾರ್ಹವಾಗಿದೆ.

ನಮ್ಮ ದೇಶದಲ್ಲಿ ವ್ಯವಸಾಯದ ಉತ್ಪನ್ನವನ್ನು ಹೆಚ್ಚಿಸುವುದು ಒಂದು

ವನ್ನು ಮುಂದುವರಿಸಿ ೧೩ ನೆ ಅಧ್ಯಾಯವಾಗಿ ಮಾಡಿರುವ 'ಭಾರತದಲ್ಲಿ ಕ್ರಮ ಪಡಿಸಿದ ಪೇಟೆಗಳ ಪ್ರಗತಿ' ಎಂಬ ಅಷ್ಟನ್ನೂ ಅಲ್ಲಿಯೇ ಹೇಳಬಹುದು. (2) ೩೨ ನೆ ಪುಟದಲ್ಲಿ ಕೊಟ್ಟಿರುವ "ಉಗ್ರಾಣ ವ್ಯವಸ್ಥೆ" ಎಂಬ ಪ್ಯಾರಾ ಜೊತೆಗೆ ೧೨ ನೆ ಅಧ್ಯಾಯವಾದ "ಉಗ್ರಾಣ—ಸಂಗ್ರಹ ಯೋಜನೆ" ಎಂಬುದನ್ನು ಜೋಡಿಸಬಹುದು. (3) ೧೦ ನೆ ಅಧ್ಯಾಯವಾದ "ಪಂಚವಾರ್ಷಿಕ ಯೋಜನೆಗಳಲ್ಲಿ ಒಕ್ಕಲತನ ಹುಟ್ಟುವಳಿಯ ಮಾರಾಟದ ಸುಧಾರಣೆಯ ಮಹತ್ವದ ಸ್ಥಾನ" ಎಂಬುದು ೪ ನೆ ಅಧ್ಯಾಯ "ಒಕ್ಕಲತನ ಹುಟ್ಟುವಳಿ ಮಾರಾಟದ ಸುಧಾರಣೆ" ಎಂಬ ಕಡೆಗೆ ಹೊಂದಿಕೊಳ್ಳುತ್ತದೆ. ಹೀಗೆ ಪುಸ್ತಕದ ಅಧ್ಯಾಯಗಳು ಒಂದು ರೀತಿಯ ಬಿಡಿ ಬಿಡಿ ಪ್ರಬಂಧಗಳಂತೆ ಇದ್ದು ಸಹಜವಾಗಿಯೂ ಅಧ್ಯಾಯಗಳ ಕ್ರಮಗೊಳಿಸಿದ ಜೋಡಣೆಯಾಗಿಲ್ಲವೆಂಬ ಅಂಶವನ್ನು ರಚನಾತ್ಮಕ ದೃಷ್ಟಿಯಿಂದ ಸೂಚಿಸಲಾಗಿದೆ.

ಹೇಳಿರುವ ವಿಷಯ, ಭಾಷೆಯ ಸರಳತೆ ಇವುಗಳು ಮೇಲೆ ಹೇಳಿದಂತೆ ಆದರಣೀಯವಾಗಿವೆ. ಆರ್ಥಿಕ ಯೋಜನೆಯ ಸಫಲತೆಗೆ ಆವಶ್ಯಕವಾಗಿರುವ ಜನ ಬೆಂಬಲ ಸಂಪಾದಿಸುವುದರಲ್ಲಿ, ವಿಷಯ ವ್ಯಾಪ್ತಿಗನುಗುಣವಾಗಿ ಈ ಪುಸ್ತಕವು ಪ್ರಚಾರ ಕಾರ್ಯಕ್ಕೆ ನೆರವಾಗುವುದರ ಮೂಲಕ ಪ್ರಯೋಜನಕಾರಿಯಾಗಬಹುದು ಎಂದು ಹೇಳಬಹುದು.

ಮೊದಲ ಮುದ್ರಣವಾಗಿ ಹಾಕಿಸಿರುವ ಕೇವಲ ೧೦೦೦ ಪ್ರತಿಗಳು ಶೀಘ್ರವಾಗಿ ಓದುಗರ ಕೈಸೇರಿ, ಎರಡನೆಯ ಮುದ್ರಣದ ಮೂಲಕ ಹೆಚ್ಚು ಪ್ರತಿಗಳು ಇನ್ನೂ ಕಡಮೆ ಬೆಲೆಗೆ ಜನರಿಗೆ ದೊರಕುವಂತಾಗಲೆಂದು ಆಶಿಸುತ್ತೇನೆ.

ಅ. ಪು. ಶ್ರೀ.

ಸಂಪಾದಕೀಯ

ಈ ಸಂಚಿಕೆ ತನ್ನ ನಿಯತಕಾಲದಲ್ಲಿ ಬರಲು ನಾವು ಮಾಡಿದ ಪ್ರಯತ್ನಗಳೆಲ್ಲ ವಿಫಲವಾದವು. ಮತ್ತೆ, ಅತ್ಯಗತ್ಯವಾಗಿ ಈ ಸಂಚಿಕೆಗೇ ಬರೆಯಬೇಕಾದ ಸಂಪಾದಕೀಯವನ್ನು ಕಾಲಾವಕಾಶವಿಲ್ಲದೆ ಅಚ್ಚು ಹಾಕಿಸಲಿಲ್ಲ. ಔಚಿತ್ಯ ಭಂಗವಾಗುವುದೆಂಬ ಭೀತಿ ಪ್ರಬಲವಾಗಿದ್ದರೂ ಅನಿವಾರ್ಯತೆಗೆ ಮಣಿದು ಹಾಗೆ ಮಾಡಲೇಬೇಕಾಗಿದೆ. ಅದಕ್ಕಾಗಿ ತಮ್ಮ ಕ್ಷಮೆ ಕೇಳುತ್ತೇವೆ. ಮುಂದಿನ ಸಂಚಿಕೆಯಾದರೂ ತನ್ನ ನಿಯತಕಾಲಕ್ಕೆ ಬಹುದೂರವಾಗದಂತೆ ಬರುವಂತೆ ಶ್ರಮಿಸುತ್ತೇವೆ. ಜನವರಿ ತಿಂಗಳ ಕೊನೆಯಲ್ಲಿ ಬರಲಿರುವ ಪುಷ್ಯ ಸಂಚಿಕೆಯೊಡನೆ ವಿಜ್ಞಾನ ವಿಶೇಷಾಂಕವೂ ಬರುತ್ತದೆ. ಮುಂದಿನ ವರ್ಷದ ಮೊದಲ ಚೈತ್ರ ಸಂಚಿಕೆಯನ್ನು 'ಕವಿ ರವೀಂದ್ರನಾಥ ಠಾಕೂರ' ಸಂಚಿಕೆಯಾಗಿ ಪ್ರಕಟಿಸಬೇಕೆಂಬ ಹೆಬ್ಬಯಕೆಯಿದೆ. ಕಾಳಿದಾಸ ಸಂಚಿಕೆಯಾಗಬೇಕಿದ್ದ ಈ ಸಂಚಿಕೆಯು ಪೂರ್ವ ಸಿದ್ಧತೆಯಿಲ್ಲದ ಕಾರಣದಿಂದ ಒಂದಿನಿತೂ ಸಮರ್ಪಕವಾಗಿ ನಮ್ಮ ನಿರೀಕ್ಷೆಗೆ ಹಾಗೂ ಸಹೃದಯ ವರ್ಗದ ತೃಪ್ತಿಗೆ ತಕ್ಕನಾಗಿ ಮೈತುಂಬಿಕೊಂಡು ಬರಲಾಗಲಿಲ್ಲ. ಈ ಪಾಠ ಮುಂದಿನ ಘನೋದ್ಯಮಕ್ಕೆ ಅವಶ್ಯವಿದ್ದಂತೆ ಕಾಣುತ್ತದೆ. ಅಂತೂ ಸಾಧ್ಯವಾದ ಮಟ್ಟಿಗೂ ಆ ಸಂಚಿಕೆಯನ್ನು ಠಾಕೂರರ ಜೀವನ-ವ್ಯಕ್ತಿ-ಕಾವ್ಯ-ಕಲೆ-ಸಾಧನೆಗಳಿಗೆ ಸಂಬಂಧಪಟ್ಟ ಕವಿತೆ ಲೇಖನಗಳಿಗೆ ಮಾತ್ರ ಮೀಸಲಿಡುವ ಆಕಾಂಕ್ಷೆಯಿದೆ. ಆ ಬಯಕೆ ಕೈಗೂಡಬೇಕಾದರೆ ಕನ್ನಡನಾಡಿನ ಲೇಖಕ ವಿದ್ವನ್ಮಹಾಜನತೆಯ ಸಹಕಾರ ಸಹಾಯ ಅಗತ್ಯ. ಪ್ರತ್ಯೇಕ ಪ್ರತ್ಯೇಕವಾಗಿಯೆ ಕವಿ ಲೇಖಕರಿಗೆ ಬರೆದು ಸಂಬಂಧಪಟ್ಟ ಲೇಖನಗಳನ್ನು ತರಿಸಿಕೊಳ್ಳುವುದು ಸೂಕ್ತವಾದರೂ ಹಾಗೆ ಮಾಡುವಲ್ಲಿ ಕೆಲವು ಅನಾನುಕೂಲ್ಯಗಳು ತಲೆದೋರುವುದರಿಂದ ಆ ಕ್ರಮವನ್ನನುಸರಿಸಲು ಕಷ್ಟವಾಗುತ್ತದೆ. ಹಾಗಿರುವುದರಿಂದ ಲೇಖಕ ಮಹನೀಯರಲ್ಲಿ ಈ ಮೂಲಕ ವಿಜ್ಞಾಪನೆ ಮಾಡಿಕೊಳ್ಳುವುದಿಷ್ಟೆ : ತಮಗೆ ಸುಪರಿಚಿತವಾದ ಠಾಕೂರರ ಕೃತಿಯನ್ನು ಕುರಿತ ಪ್ರೌಢ ವಿಮರ್ಶಾತ್ಮಕ ಲೇಖನಗಳನ್ನಾಗಲಿ, ಅವರ ಕಾವ್ಯಗಳ, ವಿಮರ್ಶಾತ್ಮಕ ಲೇಖನಗಳ ಯುಕ್ತ ಅನುವಾದಗಳನ್ನಾಗಲಿ, ದಯವಿಟ್ಟು ಕಳಿಸಿಕೊಡಿ. ಕೃತಜ್ಞತಾಪೂರ್ವಕವಾಗಿ ಅವುಗಳನ್ನು ಪ್ರಕಟಿಸುತ್ತೇವೆ. ತಮ್ಮ ಸಹಕಾರವಿದ್ದಂತೆ ನಮ್ಮ ಕಾರ್ಯಸಾಧನೆ.

ಅಭಿನಂದನೆ

ಪ್ರಬುದ್ಧ ಕರ್ಣಾಟಕದ ಜನಕರೂ ಕನ್ನಡ ನವೋದಯದ ಮಹಾ ಸಾಧಕರಲ್ಲಿ ಒಬ್ಬರೂ ಆದ ಆಚಾರ್ಯ ಪ್ರಾಧ್ಯಾಪಕ ಶ್ರೀ ಎ. ಆರ್. ಕೃಷ್ಣಶಾಸ್ತ್ರಿಗಳವರಿಗೆ ಮೈಸೂರು ವಿಶ್ವವಿದ್ಯಾನಿಲಯವು ಗೌರವ ಡಿ.ಲಿಟ್. ಪದವಿಯನ್ನಿತ್ತು ಗೌರವಿಸಿದೆ.

ಈ ಸುಮುಹೂರ್ತದಲ್ಲಿ ನಾವಿಂದು ಉಭಯರನ್ನೂ ಅಭಿವಂದಿಸುತ್ತೇವೆ. ಆ ಸಂಬಂಧವಾಗಿ ಮುಂದಿನ ಸಂಚಿಕೆಯಲ್ಲಿ ಪ್ರತ್ಯೇಕವಾಗಿ ಬರೆಯಲಿರುವುದರಿಂದ ಇಲ್ಲಿ ಆಚಾರ್ಯರಿಗೆ ನಮ್ಮ ಗೌರವಾಭಿನಂದನೆಗಳಷ್ಟನ್ನು ಮಾತ್ರ ಸಲ್ಲಿಸುತ್ತೇವೆ.

ಆಧುನಿಕ ಮೈಸೂರಿನ ಶಿಲ್ಪಿವರ್ಯರಾದ ಶತಾಯು ಸರ್. ಎಂ. ವಿಶ್ವೇಶ್ವರಯ್ಯನವರು ಕರ್ಮ ಮಾಡುತ್ತಲೆ ನೂರು ವರ್ಷ ಬದುಕಿ ಬಾಳಿದ್ದಾರೆ; ನಮ್ಮನ್ನು ಹರಸುತ್ತ ಆದರ್ಶವಾಗಿದ್ದಾರೆ. ಭಗವಂತನು, ಅವರಿಗೆ ಆಯುರಾರೋಗ್ಯವನ್ನು ನೀಡಲಿ; ಅವರಿಂದ ಮತ್ತೂ ಅತಿಶಯವಾದ ಶಕ್ತಿ ಸ್ಫೂರ್ತಿ ದೊರೆಯುವಂತೆ ಮಾಡಲಿ. ನಮ್ಮ ಗೌರವ ಪ್ರಾರ್ಥನೆಗಳನ್ನೂ ಸದ್ಭಾವಗಳನ್ನೂ ಶ್ರೀ ವಿಶ್ವೇಶ್ವರಯ್ಯನವರಲ್ಲಿ ಅರ್ಪಿಸುತ್ತೇವೆ.

ಉಡುಪಿಯಲ್ಲಿ ನಡೆಯಲಿರುವ ೪೨ ನೆಯ ಕನ್ನಡ ಸಾಹಿತ್ಯ ಸಮ್ಮೇಲನದ ಅಧ್ಯಕ್ಷರಾಗಿರುವ ಶ್ರೀ ಅ. ನ. ಕೃಷ್ಣರಾಯರಿಗೆ ನಮ್ಮ ಹೃತ್ಪೂರ್ವಕ ಅಭಿನಂದನೆ ವಂದನೆಗಳನ್ನು ಸಲ್ಲಿಸುತ್ತೇವೆ. ಕನ್ನಡ ನಾಡು ನುಡಿಯ ಬೆಳವಣಿಗೆಗೆ ಸ್ಫೂರ್ತಿ ಪ್ರಚೋದಕ ಶಕ್ತಿಯಾಗಿ ಜನಪ್ರಿಯ ಕಾದಂಬರಿಕಾರ, ಕಥೆಗಾರ, ನಾಟಕಕಾರ, ವಿಮರ್ಶಕ, ಭಾಷಣಕಾರ, ವಿದ್ವಾಂಸರಾಗಿ, ಮೇಲಾಗಿ ಕನ್ನಡದ ಅನನ್ಯ ಭಕ್ತರಾಗಿ ದುಡಿಯುತ್ತಿರುವ ಶ್ರೀ ಅ. ನ. ಕೃ ಅವರಿಗೆ ಈಗಲಾದರೂ ಸನ್ಮಾನ ದೊರೆತುದಕ್ಕೆ ನಾವು ಪರಿಷತ್ತಿನ ಅಧಿಕಾರಿಗಳನ್ನು ಅಭಿನಂದಿಸಿ ಶ್ರೀಯುತರಿಗೆ ನಮ್ಮ ಗೌರವಾದರಗಳನ್ನು ಸಲ್ಲಿಸುತ್ತೇವೆ. ಅವರಿಂದ ಮತ್ತೂ ಶಕ್ತಿವತ್ತಾದ ಸ್ಫೂರ್ತಿದಾಯಕವಾದ ಸೃಷ್ಟಿ ಕಾರ್ಯ ನಡೆಯಲೆಂದು ಹಾರೈಸುತ್ತೇವೆ.

ಸ್ವಾಗತ-ಬೀಳ್ಕೊಡುಗೆ

ಮೈಸೂರು ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್ ಅವರಾಗಿ ಸುಮಾರು ನಾಲ್ಕು ವರ್ಷಗಳ ತನಕ ದಕ್ಷ ಸೇವೆಸಲ್ಲಿಸಿದ ಶ್ರೀ ಪಿ. ಮಲ್ಲಿಕಾರ್ಜುನಪ್ಪ, ಎಂ.ಎಸ್‌ಸಿ., ಅವರು ಇಂದು ಪ್ರಸಾರಾಂಗದ ಡೈರೆಕ್ಟರ್ ಆಗಿ ಅಧಿಕಾರ ಸ್ವೀಕರಿಸಿಕೊಂಡಿದ್ದಾರೆ. ಡಾ|| ಕೆ. ವಿ. ಪುಟ್ಟಪ್ಪನವರು ಉಪಕುಲಪತಿಗಳಾಗಿರುವಾಗ ಅವರ ವಿಶ್ವಾಸಾರ್ಹ ಕಾರ್ಯದಕ್ಷ ಸೇನಾನಿಯಾಗಿ ಶ್ರೇಷ್ಠವಾಗಿ ಕಾರ್ಯ ನಿರ್ವಹಿಸಿದ ಶ್ರೀಯುತರಿಂದು ಪ್ರಸಾರಾಂಗದ ಪ್ರಧಾನಾಧಿಕಾರಿ ಆಗಿದ್ದಾರೆ. ಅವರಿಗೆ ನಮ್ಮ ಹಾರ್ದಿಕ ಸ್ವಾಗತ. ಇನ್ನೂ ವರ್ಧಿಷ್ಣು ಶಾಖೆಯಾದ ಈ ಪ್ರಸಾರಾಂಗ ತನ್ನ ಸ್ಥಾಪಕರು ಕಂಡುಕೊಂಡ ಸ್ವರೂಪ ಪ್ರಮಾಣಗಳಲ್ಲಿ ಬೆಳೆದು ನಾಡಿನ ಹಿರಿಯ ಜ್ಞಾನಪ್ರಸಾರಾಂಗ ಶಕ್ತಿಯಾಗಿ ಬಾಳುವಂತೆ ಆಗಲು, ಆಗಲೆ ಕಾರ್ಯದಕ್ಷರೆಂದು ಯಶಸ್ವಿಗಳಾಗಿರುವ ಶ್ರೀ. ಪಿ. ಮಲ್ಲಿಕಾರ್ಜುನಪ್ಪನವರು ಸಾಧಿಸುತ್ತಾರೆಂದು ಹಾರೈಸುತ್ತೇವೆ. ಇದು ತನಕ ಪ್ರಸಾರಾಂಗದ ಡೆಪ್ಯೂಟಿ ಡೈರೆಕ್ಟರ್ ಹಾಗೂ ಇನ್‌ಚಾರ್ಜ್ ಡೈರೆಕ್ಟರ್ ಆಗಿದ್ದ

ಸೇವೆ ಸಲ್ಲಿಸಿ ಈಗ ವಿಶ್ವವಿದ್ಯಾನಿಲಯ ಪುಸ್ತಕಭಂಡಾರದ ಪ್ರಧಾನಾಧಿಕಾರಿಯಾಗಿ ತೆರಳಿರುವ ಶ್ರೀ ಟಿ. ಎಸ್. ಶಾಮರಾವ್, ಎಂ.ಎ. ಅವರಿಗೆ ನಮ್ಮ ಹೃತ್ಪೂರ್ವಕವಾದ ಬೀಳ್ಕೊಡಿಗೆಯ ಶುಭಾಶಯಗಳನ್ನು ಸಲ್ಲಿಸುತ್ತೇವೆ. ಪ್ರಸಾರಾಂಗದ ಸಾಧನೆ ಬೆಳವಣಿಗೆಗಳಿಗೆ ಹಾಗೂ ಪ್ರಬುದ್ಧ ಕರ್ಣಾಟಕದ ಬೆಳವಣಿಗೆಗೆ ಉತ್ಸಾಹದಿಂದ ದುಡಿದ ನೆರವು ನೀಡಿದ ಶ್ರೀಯುತರು ಪುಸ್ತಕ ಭಂಡಾರದಲ್ಲಿ ಮತ್ತೂ ಯಶಸ್ವಿಗಳಾಗಿ ಕಾರ್ಯ ನಿರ್ವಹಿಸಲೆಂದು ಹಾರೈಸಿ ಅವರಿಗೆ ನಮ್ಮ ಅಭಿನಂದನೆಯನ್ನು ಸಲ್ಲಿಸುತ್ತೇವೆ.

ಕಂಬನಿ

ಜನಪದ ಸಾಹಿತ್ಯವನ್ನೆ ತಮ್ಮ ಜೀವನದ ಏಕೈಕ ಸಾಧನೆಯಾಗಿ ಮಾಡಿಕೊಂಡು ಉನ್ನತ ವಿದ್ವತ್ಪದವಿಯನ್ನೂ ಗಳಿಸಿದ್ದ ಡಾ|| ಬಿ. ಎಸ್. ಗದ್ದಗಿಮಠರವರು ಮೊನ್ನೆ ದಿವಂಗತರಾದರೆಂದು ತಿಳಿಯಲು ಬಹಳ ದುಃಖವಾಗುತ್ತದೆ. ನಲವತ್ತರ ವಯಸ್ಸಿನ ಈ ಕಿರಿಯ ನಿಷ್ಠಾವಂತ ಜನಪದ ಸಾಹಿತ್ಯ ವಿದ್ವಾಂಸರ ಮರಣ ಕನ್ನಡಕ್ಕೆ ಆದ ನಷ್ಟ. ಪ್ರಬುದ್ಧ ಕರ್ಣಾಟಕದಲ್ಲಿ ಪ್ರಕಟವಾಗಲೆಂದು ಅವರು 'ಅನುಭವಸಾಹಿತ್ಯ' ಎಂಬ ತಮ್ಮ ಲೇಖನವನ್ನು ಮೊನ್ನೆ ಕಳಿಸಿದರು; ಆದರೆ ಅದು ಪ್ರಕಟವಾಗುವ ವೇಳೆಗೆ ಅವರಿಗೆ ದುರ್ಮೃತ್ಯು ಬದಗಿತ್ತು. ಅದಕ್ಕಾಗಿ ಮತ್ತೂ ವಿಷಾದವಾಗುತ್ತದೆ. ಶ್ರೀಯುತರ ಸಂಸಾರದ ದುಃಖ ದುರ್ದಮ್ಯವಾದುದು. ಅವರ ದುಃಖ ಶಮನವಾಗಿ ಮೃತರ ಆತ್ಮ ಶಿವೈಕ್ಯವಾಗಲೆಂದು ದೇವರನ್ನು ಪ್ರಾರ್ಥಿಸುತ್ತೇವೆ.

ಪ್ರಬುದ್ಧ ಕರ್ಣಾಟಕಕ್ಕೆ ಚಂದಾದಾರರಾಗಿರಿ

		ರೂ.	ನ.ಪೈ.
ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ	....	೨	೫೦
ಖಾಸಗಿ ವ್ಯಕ್ತಿಗಳಿಗೆ	....	೩	೫೦
ಸಂಸ್ಥೆ ಮತ್ತಿತರ ವಾಚನಾಲಯಗಳಿಗೆ	....	೪	೫೦

WO 1223—MUPM—1000+25—10-12-60

ಪ್ರಬುದ್ಧ ಕರ್ಣಾಟಕಕ್ಕೆ ವಿನಿಮಯವಾಗಿ ಬರುವ ಪತ್ರಿಕೆಗಳು

ಇಂಗ್ಲಿಷ್ ಪತ್ರಿಕೆಗಳು

Annals of the Oriental Research Institute University, Madras; *Bramhavidya*, Adyar, Madras; *Bulletin of the School of Oriental Studies*, London; *Journal of the Andhra Historical Research Society*, Rajahmundry; *Journal of the Karnataka Historical Research Society*, Dharwar; *Quarterly Journal of the Mythic Society*, Bangalore; *The Indian P.E.N.* Bombay; *Annals of the Venkateswara Oriental Institute*, Tirupati; *The Jaina Siddhanta Bhaskara and the Jaina Gazette*, Arrah; *Bulletin of the Deccan College Research Institute*, Poona; *Publication of the Kannada Research Office*, Dharwar; *The Journal of the Literary Committee of the L.E. Association*, Dharwar; *Annals of Bhandarkar Oriental Research Institute*, Poona.

ವಾರಪತ್ರಿಕೆಗಳು

'ಕಂಠೀರವ', ಮಂಗಳೂರು; 'ಚೇತನಾ', ಬೆಂಗಳೂರು; 'ಪ್ರಭಾತ', ಮಂಗಳೂರು; ಪ್ರಪಂಚ', ಹುಬ್ಬಳ್ಳಿ.

ಮಾಸಪತ್ರಿಕೆಗಳು

'ಆಂಧ್ರ ಸಾಹಿತ್ಯ ಪರಿಷತ್ಪತ್ರಿಕೆ' (ತೆಲುಗು), ಕಾಕಿನಾಡ; 'ಕತೆಗಾರ', ಬೆಂಗಳೂರು; ಕನ್ನಡ ಸಹಕಾರಿ', ಮಂಗಳೂರು; 'ಜಯಕರ್ನಾಟಕ', ಧಾರವಾಡ; 'ಜಯಂತಿ', ಧಾರವಾಡ; 'ಮಕ್ಕಳ ಪುಸ್ತಕ', ಬೆಂಗಳೂರು; 'ಮೈಸೂರು ಸಹಕಾರ ಪತ್ರಿಕೆ', ಬೆಂಗಳೂರು; 'ವಿದ್ಯಾದಾಯಿನಿ', ಮೈಸೂರು; 'ವಿವೇಕಾಭ್ಯುದಯ', ಮೈಸೂರು; 'ಶರಣಸಾಹಿತ್ಯ', ಬೆಂಗಳೂರು; 'ಶಿವಾನುಭವ', ಬಿಜಾಪುರ; 'ಸರಸ್ವತಿ', ಬೆಂಗಳೂರು; 'ಸುಬೋಧ', ಬೆಂಗಳೂರು; 'ಜೀವನ', ಬೆಂಗಳೂರು; 'ಕಥಾವಳಿ', ಬೆಂಗಳೂರು; 'ಪುಸ್ತಕ ಪ್ರಪಂಚ', ಮೈಸೂರು; 'ಕನ್ನಡ ನುಡಿ' ಬೆಂಗಳೂರು.

ತ್ರೈಮಾಸಿಕಪತ್ರಿಕೆಗಳು

'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ', ಬೆಂಗಳೂರು.

ಗ್ರಂಥಮಾಲೆ

'ಮನೋಹರ ಗ್ರಂಥಮಾಲೆ', ಧಾರವಾಡ; 'ಮಿಂಚಿನಬಳ್ಳಿ' ಧಾರವಾಡ.

ಮೈಸೂರು ಮಹಾರಾಜರವರ ಕಾಲೇಜಿನ

ಕರ್ಣಾಟಕ ಸಂಘದ ಪ್ರಕಟಣೆಗಳು

೧. **ನಾಗಾನಂದ ನಾಟಕ**—ಅನಂತನಾರಾಯಣ ಶಾಸ್ತ್ರಿ ; ಬೆಲೆ, ರೂ. ೧-೦-೦.
೨. **ಕರ್ಣಾಟಕ ಮೃಚ್ಛಕಟಿಕಪ್ರಕರಣಂ**—ಆಸ್ಥಾನ ಕವಿ ನಂಜನಗೂಡು ಸುಬ್ಬಾಶಾಸ್ತ್ರಿಗಳವರಿಂದ; ರೂ. ೧-೧೨-೦.

ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಪ್ರಕಟಣೆಗಳು

೧. **ಶ್ರೀ ಕೈಲಾಸಂ ಅವರ ಸ್ಮರಣೆ**—ಕೆ. ವಿ. ಅಯ್ಯರ್ ; ರೂ. ೨-೪-೦.
೨. **ಕರ್ಣಾಟಕ ಮಾಲವಿಕಾಗ್ನಿಮಿತ್ರ ನಾಟಕಂ**—ಮೋಟಗಾನಹಳ್ಳಿ ಶಂ. ಸುಬ್ರಹ್ಮಣ್ಯಶಾಸ್ತ್ರೀ ; ರೂ. ೧-೧೨-೦.
೩. **ಮೊನ್ನ ವನ್ನ** (ಮಾರಿಸ್ ಮ್ಯಾಟರ್‌ಲಿಂಕನ ಮೂರಂಕದ ನಾಟಕ)— ಎಸ್. ಜಿ. ಶಾಸ್ತ್ರಿ ; ರೂ. ೨-೦-೦.
೪. **ನಾಗನ ಪದಗಳು**—ಜಿ. ಪಿ. ರಾಜರತ್ನಂ ; ರೂ. ೧-೪-೦.
೫. **ಶಕ್ತಿ** (ಸಚಿತ್ರ)—ಆರ್. ಎಲ್. ನರಸಿಂಹಯ್ಯ ; ರೂ. ೩-೦-೦.
೬. **ಸುಪ್ರಭಾತಮ್**-(ದೈವಭಕ್ತಿಯನ್ನು ಕುರಿತ ಪ್ರಬಂಧಗಳು) ; ರೂ. ೩-೦-೦.
೭. **ಸೋಕ್ರಟೀಸನ ಮರಣ**—ಎಸ್. ಜಿ. ಶಾಸ್ತ್ರಿ ; ರೂ. ೧-೪-೦.
೮. **ಬಾಹುಬಲಿ ವಿಜಯಂ**—(ಎರಡು ನಾಟಕಗಳು) ; ರೂ. ೧-೮-೦.
೯. **ಕಾರ್ಕಳದ ಗೊಮ್ಮಟಸ್ವಾಮಿ**—(ಲೇಖನ, ಕವನ) ; ರೂ. ೧-೦-೦.
೧೦. **ನಮ್ಮ ನಮ್ಮವರು**—(೬೬ ಬೇರೆ ಬೇರೆ ಕೃತಿಗಳು) ; ರೂ. ೨-೮-೦.
೧೧. **ಬಾಲಸರಸ್ವತಿ**—(೩೯ ಬೇರೆ ಬೇರೆ ಕೃತಿಗಳು) ; ರೂ. ೨-೮-೦.
೧೨. **ಚಿನ್ನದ ದೋಸೆ ಮತ್ತು ಇತರ ಕಥೆಗಳು**—ರೂ. ೦-೧೨-೦.
೧೩. **ಮಕ್ಕಳ ಮಾತು**—(ಎಸ್ಸೆಗಳು) ; ರೂ. ೧-೦-೦.
೧೪. **ಪಚ್ಚೆಯ ತೆನೆ**—(ಎಸ್ಸೆಗಳು) ; ರೂ. ೧-೦-೦.
೧೫. **ಗಂಧದ ಹುಡಿ**—(ಎಸ್ಸೆಗಳು) ; ರೂ. ೧-೦-೦.
೧೬. **ದುರಾಸೆಯ ದಂಡ**—ಐದು ಏಕಾಂಕ ನಾಟಕಗಳು ; ರೂ. ೧-೪-೦.
೧೭. **ಜನಪ್ರಿಯ ವಿಜ್ಞಾನ**—(ವಿಜ್ಞಾನ ಪ್ರಬಂಧಗಳು) ; ರೂ. ೧-೦-೦.

ಸಂಪಾದಕ : ಶ್ರೀ ಎಸ್. ನಾರಾಯಣಶೆಟ್ಟಿ, ಎಂ.ಎ.
ಪ್ರಕಾಶಕರು : ಶ್ರೀ ಪಿ. ಮಲ್ಲಿಕಾರ್ಜುನಪ್ಪ, ಎಂ.ಎಸ್‌ಸಿ.,
ಡೈರೆಕ್ಟರ್, ‘ ಪ್ರಸಾರಾಂಗ ’, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.